ಶುಕ್ರವಾರ, ಫೆಬ್ರುವರಿ 14, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಮಾವೇಶದಲ್ಲಿ 'ಸ್ತ್ರೀ' ಶಕ್ತಿ
ಬೆಂಗಳೂರು ಅರಮನೆ ಮೈದಾನದಲ್ಲಿ ನಡೆಯುತ್ತಿರುವ 'ಇನ್ವೆಸ್ಟ್ ಕರ್ನಾಟಕ' ಸಮಾವೇಶದಲ್ಲಿ ವಿದ್ಯಾರ್ಥಿನಿಯರು ಉತ್ಸಾಹದಿಂದ ಪಾಲ್ಗೊಂಡಿದ್ದರು



2024–25ನೇ ಸಾಲಿನ ವಿವಿಧ ಪ್ರಶಸ್ತಿ ಪ್ರಕಟ • ನಾಲ್ಕು ರಾಷ್ಟ್ರೀಯ ಪ್ರಶಸ್ತಿ ಸೇರಿ 20 ಸಾಧಕರಿಗೆ ಗೌರವ

ಗುಂಜಾಳಗೆ 'ಬಸವ', ಬಸಪ್ಪಗೆ 'ಟಿ.ಚೌಡಯ್ಯ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2024-25ನೇ ಸಾಲಿನ ಗಾನಯೋಗಿ ಪಂಡಿತ್ ಪಂಚಾಕ್ಷರಿ ಗವಾಯಿ ರಾಷ್ಟ್ರೀಯ ಪ್ರಶಸ್ತಿಗೆ ಅಸ್ಸಾಂ ಮೂಲದ ಪಟಿಯಾಲ ಘರಾನಾದ ಹಿಂದೂಸ್ತಾನಿ ಶಾಸ್ತ್ರೀಯ ಗಾಯಕಿ ಮುಂಬೈಯಲ್ಲಿ ನೆಲಸಿರುವ ಬೇಗಂ ಪರ್ವೀನ್ ಸುಲ್ತಾನಾ, ಬಸವ ರಾಷ್ಟ್ರೀಯ ಪುರಸ್ಕಾರಕ್ಕೆ ವಚನಕಾರರು ಮತ್ತು ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮಹತ್ವದ ಕೃತಿಗಳನ್ನು ರಚಿಸಿರುವ ಗುಲ್ಬರ್ಗಾ ವಿ.ವಿ.ಯ ಗ್ರಂಥಾಲಯ ವಿಭಾಗದ ಮುಖ್ಯಸ್ಥರಾಗಿದ್ದ ಎಸ್.ಆರ್. ಗುಂಜಾಳ ಅವರು ಭಾಜನರಾಗಿದ್ದಾರೆ.

ನಾಲ್ಕು ರಾಷ್ಟ್ರೀಯ ಪ್ರಶಸ್ತಿಗಳ ಸಹಿತ ಐದು ವಿಭಾಗಗಳಲ್ಲಿ 19 ವಿವಿಧ ಪ್ರಶಸ್ತಿಗಳಿಗೆ ಆಯ್ಕೆಯಾಗಿರುವ 20 ಸಾಧಕರ ಹೆಸರುಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಪ್ರಕಟಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರವೀಂದ್ರ ಕಲಾಕ್ಷೇತ್ರದಲ್ಲಿ ಮಾರ್ಚ್ 3ರಂದು ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. ರಾಷ್ಟ್ರೀಯ ಪ್ರಶಸ್ತಿಗಳಿಗೆ ತಲಾ ₹10 ಲಕ್ಷ, ಇತರ ವಿಭಾಗಗಳ ಪ್ರಶಸ್ತಿಗೆ ತಲಾ ₹5 ಲಕ್ಷ ನಗದು ನೀಡಲಾಗುವುದು' ಎಂದು ತಿಳಿಸಿದರು.

ಶ್ರೀ ಭಗವಾನ್ ಮಹಾವೀರ ರಾಷ್ಟ್ರೀಯ ಶಾಂತಿ ಪ್ರಶಸ್ತಿಗೆ ಬೆಂಗಳೂರಿನ ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್, ಟಿ. ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿಗೆ ಬಾಗಲಕೋಟೆಯ ಬಸಪ್ಪ ಎಚ್. ಭಜಂತ್ರಿ ಆಯ್ಕೆಯಾಗಿದ್ದಾರೆ.

'ರಾಷ್ಟ್ರೀಯ ಪ್ರಶಸ್ತಿ ವಿಭಾಗಕ್ಕೆ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್, ಸಾಮಾಜಿಕ–ಸಾಂಸ್ಕೃತಿಕ ಪ್ರಶಸ್ತಿಗಳ ವಿಭಾಗಕ್ಕೆ ಮಲ್ಲಿಕಾ ಘಂಟಿ, ಸಾಹಿತ್ಯ–ನಾಟಕಗಳ ಪ್ರಶಸ್ತಿ ವಿಭಾಗಕ್ಕೆ ಕುಂ.ವೀರಭದ್ರಪ್ಪ, ಕಲಾ ಪ್ರಶಸ್ತಿಗಳ ವಿಭಾಗಕ್ಕೆ ಎಂ.ಎಸ್. ಮೂರ್ತಿ, ಸಂಗೀತ– ನೃತ್ಯ ಪ್ರಶಸ್ತಿಗಳ ವಿಭಾಗಕ್ಕೆ ಪಂಡಿತ್ ವೆಂಕಟೇಶ್ ಕುಮಾರ್ ನೇತೃತ್ವದಲ್ಲಿ ಆಯ್ಕೆ ಸಮಿತಿ ರಚಿಸಲಾಗಿತ್ತು. ಈ ಸಮಿತಿ ಶಿಫಾರಸು ಮಾಡಿದವರನ್ನು ಪ್ರಶಸ್ತಿಗೆ ಪರಿಗಣಿಸಲಾಗಿದೆ' ಎಂದು ತಂಗಡಗಿ ಸ್ಪಷ್ಟಪಡಿಸಿದರು.

ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು


ಎಸ್.ಆರ್. ಗುಂಜಾಳ


ಎಸ್.ಜಿತೇಂದ್ರ ಕುಮಾರ್, ಅಧ್ಯಕ್ಷರು ಪಂಡಿತರತ್ನ ಎ.ಶಾಂತಿರಾಜ ಶಾಸ್ತ್ರಿ ಟ್ರಸ್ಟ್


ಬಸಪ್ಪ ಎಚ್. ಭಜಂತ್ರಿ



ಬೇಗಂ ಪರ್ವೀನ್ ಸುಲ್ತಾನಾ

ಸಾಹಿತ್ಯ-ನಾಟಕ ಪ್ರಶಸ್ತಿಗಳ ವಿಭಾಗ


ಪಂಪ ಪ್ರಶಸ್ತಿ ಬಿ.ಎ.ವಿವೇಕ ರೈ ದಕ್ಷಿಣ ಕನ್ನಡ


ಪ್ರೊ.ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ ಸ.ರಘುನಾಥ ಕೋಲಾರ


ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ; ವೈ.ಸಿ. ಭಾನುಮತಿ ಹಾಸನ


ಬಿ.ವಿ. ಕಾರಂತ ಪ್ರಶಸ್ತಿ; ಜೆ. ಲೋಕೇಶ್ ಬೆಂಗಳೂರು


ಗುಬ್ಬಿ ವೀರಣ್ಣ ಪ್ರಶಸ್ತಿ; ಕೆ.ನಾಗರತ್ನಮ್ಮ ವಿಜಯನಗರ



ಡಾ ಸಿದ್ದಲಿಂಗಯ್ಯ ಸಾಹಿತ್ಯ ಪ್ರಶಸ್ತಿ ಹನುಮಂತಯ್ಯ ಎಲ್. ಬೆಂಗಳೂರು

ಸಂಗೀತ– ನೃತ್ಯ ಪ್ರಶಸ್ತಿಗಳ ವಿಭಾಗ


ಶ್ರೀ ನಿಜಗುಣ-ಪುರಂದರ ಪ್ರಶಸ್ತಿ; ಅನಂತ ತೇರದಾಳ, ಬೆಳಗಾವಿ


ಕುಮಾರವ್ಯಾಸ ಪ್ರಶಸ್ತಿ: ಎ.ವಿ. ಪ್ರಸನ್ನ, ಹಾಸನ (ಗಮಕ ವ್ಯಾಖ್ಯಾನ)


ಶಾಂತಲಾ ನಾಟ್ಯ ಪ್ರಶಸ್ತಿ: ಪದ್ಮಿನಿ ರವಿ, ಬೆಂಗಳೂರು (ಭರತನಾಟ್ಯ)


ಸಂತ ಶಿಶುನಾಳ ಷರೀಫ ಪ್ರಶಸ್ತಿ: ಎಸ್. ಮಲ್ಲಣ್ಣ, ಚಾಮರಾಜನಗರ (ಸುಗಮ ಸಂಗೀತ)


ಸಾಮಾಜಿಕ–ಸಾಂಸ್ಕೃತಿಕ ವಿಭಾಗ



ಸಂಗೊಳ್ಳಿ ರಾಯಣ್ಣ ಪ್ರಶಸ್ತಿ; ಕೆ. ರಾಜಕುಮಾರ್, ಕೋಲಾರ


ಅಕ್ಕಮಹಾದೇವಿ ಪ್ರಶಸ್ತಿ; ಹೇಮಾ ಪಟ್ಟಣಶೆಟ್ಟಿ, ಧಾರವಾಡ

ಕಲಾ ಪ್ರಶಸ್ತಿಗಳ ವಿಭಾಗ


ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ; ಎಂ.ಜೆ. ಕಮಲಾಕ್ಷಿ, ಬೆಂಗಳೂರು


ಜಕಣಾಚಾರಿ ಪ್ರಶಸ್ತಿ: ರಾಮಮೂರ್ತಿ, ಬೆಂಗಳೂರು


ಜಾನಪದ ಶ್ರೀ ಪ್ರಶಸ್ತಿ ನಿಂಗಪ್ಪ ಭಜಂತ್ರಿ, ಕಲಬುರಗಿ (ವಾದನ)


ಜಾನಪದ ಶ್ರೀ ಪ್ರಶಸ್ತಿ ದೊಡ್ಡ ಗವಿಬಸಪ್ಪ, ಚಾಮರಾಜನಗರ (ಗಾಯನ)

ಮಾಸಾಶನ ಹೆಚ್ಚಳ

'ಮುಖ್ಯಮಂತ್ರಿ ಘೋಷಿಸಿದಂತೆ ಪ್ರಸಕ್ತ ಸಾಲಿನಿಂದ ಕಲಾವಿದರ ಮಾಸಾಶನವನ್ನು ₹3 ಸಾವಿರಕ್ಕೆ ಹೆಚ್ಚಿಸಲಾಗುವುದು. ಅರ್ಹ ಸಂಸ್ಥೆಗಳಿಗೆ ಧನ ಸಹಾಯ ನೀಡುವ ಪದ್ಧತಿಯನ್ನು ಮತ್ತೆ ಆರಂಭಿಸಲಾಗುವುದು. ಈ ವರ್ಷ ವಿಶ್ವ ಕನ್ನಡ ಸಮ್ಮೇಳನ ಆಯೋಜಿಸಲು ನಿರ್ಧರಿಸಿದ್ದು, ಅಧಿಕಾರಿಗಳ ಜೊತೆ ಈಗಾಗಲೇ ಚರ್ಚೆ ನಡೆಸಿದ್ದೇನೆ. ಮುಖ್ಯಮಂತ್ರಿ ಜೊತೆಯಲ್ಲೂ ಚರ್ಚಿಸಿ ಸಮ್ಮೇಳನ ಆಯೋಜಿಸುವ ಬಗ್ಗೆ ಅಂತಿಮಗೊಳಿಸಲಾಗುವುದು' ಎಂದು ಅವರು ತಿಳಿಸಿದರು.

ಸುದ್ದಿ 2 ನಿಮಿಷ

ಗೋದಾವರಿ - ಕಾವೇರಿ ನದಿ ಜೋಡಣೆ: ದೇವೇಗೌಡ ಆಗ್ರಹ

ನವದೆಹಲಿ: 'ನದಿ ಜಲ ಸಂಪನ್ಮೂಲ ಸದ್ವಿನಿಯೋಗಕ್ಕೆ ಎಲ್ಲಾ ಪರಿಣಾಮಕಾರಿ ಕ್ರಮಗಳ ಅಗತ್ಯವಿದೆ. ಅದಕ್ಕೆ ದೀರ್ಘಾವಧಿ ಕಾರ್ಯಕ್ರಮಗಳ ಅನುಷ್ಠಾನ ಅಗತ್ಯವಿದೆ. ಆದ್ದರಿಂದ ಗೋದಾವರಿ-ಕಾವೇರಿ ನದಿ ಜೋಡಣೆ ಯೋಜನೆಗೆ ಆದ್ಯತೆ ನೀಡಬೇಕು ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಆಗ್ರಹಿಸಿದರು.

ರಾಜ್ಯಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಗುರುವಾರ ಪಾಲ್ಗೊಂಡು ಮಾತನಾಡಿದ ಅವರು, ಬೆಂಗಳೂರಿನ ಕುಡಿಯುವ ನೀರಿನ ಬವಣೆಯ ಬಗ್ಗೆ ಮತ್ತೊಮ್ಮೆ ಗಮನ ಸೆಳೆದರು.

ಬೆಂಗಳೂರಿನಲ್ಲಿ ನೀರಿನ ಟ್ಯಾಂಕರ್‌ಗಳು ಬಡ ನಿವಾಸಿಗಳನ್ನು ಶೋಷಿಸುತ್ತಿವೆ ಎಂಬ ಅಂಶವನ್ನು ಸದನದ ಗಮನಕ್ಕೆ ತಂದ ಅವರು, ಹಣಕಾಸು ಸಚಿವರು ಕುಡಿಯುವ ನೀರಿನ ಯೋಜನೆಗಳಿಗೆ ₹1,400 ಕೋಟಿ ಮಂಜೂರು ಮಾಡಿದ್ದಾರೆ. ಆದರೆ, ದೀರ್ಘಾವಧಿಯ ನೀರಿನ ಭದ್ರತೆಯನ್ನು ಖಚಿತಪಡಿಸಿ ಕೊಳ್ಳಲು ಗೋದಾವರಿ-ಕಾವೇರಿ ಜೋಡಣೆಗೆ ಆದ್ಯತೆ ನೀಡಬೇಕು' ಎಂದು ಸಲಹೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಭಾಗದಿಂದ ಯುವಜನರು ನಗರಗಳಿಗೆ ವಲಸೆ ಬರುವ ಪ್ರಮಾಣ ಹೆಚ್ಚುತ್ತಲೇ ಇದೆ ಎಂದು ಕಳವಳ ವ್ಯಕ್ತಪಡಿಸಿದರು.

ಬೆಂಗಳೂರಿನ ಜನಸಂಖ್ಯೆ ಈಗ 1.40 ಕೋಟಿಗೆ ಮುಟ್ಟಿದೆ. ಎಲ್ಲ ಯುವಕರು ತಮ್ಮ ವಿದ್ಯಾಭ್ಯಾಸ ಮುಗಿದ ತಕ್ಷಣ ಹಳ್ಳಿಗಳನ್ನು ತೊರೆದು ನಗರಗಳಿಗೆ ಬಂದು ಸೇರುತ್ತಿದ್ದಾರೆ. ಇದು ಜೀವನೋಪಾಯದ ಸಮತೋಲನವನ್ನು ತಪ್ಪಿಸುತ್ತಿದೆ. ಯುವಕರಿಗೆ ತಮ್ಮ ಪ್ರದೇಶಗಳಿಗಳಲ್ಲಿಯೇ ಹೆಚ್ಚೆಚ್ಚು ಉದ್ಯೋಗಾವಕಾಶ ಕಲ್ಪಿಸುವ ಅಗತ್ಯವಿದೆ ಎಂದು ಹೇಳಿದರು.

ಕೃಷಿ ಉತ್ಪನ್ನಗಳಿಗೆ ಹೆಚ್ಚು ಬೆಂಬಲ ನೀಡುವುದನ್ನು ನಾವು ಮುಂದುವರಿಸಬೇಕು. ಬಿಹಾರದಲ್ಲಿ ಮಖಾನಾ ಮಂಡಳಿ ರಚನೆ ಮಾಡಿರುವುದನ್ನು ಸ್ವಾಗತಿಸುತ್ತೇನೆ.ಅದೇ ರೀತಿ ಹಲಸಿನ ಹಣ್ಣು, ನೇರಳೆ, ಹುಣಸೆಹಣ್ಣು ಮಂಡಳಿ ರಚಿಸಬೇಕು ಎಂದು ಒತ್ತಾಯಿಸಿದರು.



ಹೈಕೋರ್ಟ್ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನದಾಫ್

ನವದೆಹಲಿ: ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ವಕೀಲ ತಾಜ್ ಅಲಿ ಮೌಲಾಸಾಬ್ ನದಾಫ್ ಅವರನ್ನು ನೇಮಿಸಲಾಗಿದೆ.

ನದಾಫ್ ಅವರನ್ನು ಹೆಚ್ಚುವರಿ ನ್ಯಾಯಮೂರ್ತಿಯನ್ನಾಗಿ ನೇಮಿಸಲು ಸುಪ್ರೀಂ ಕೋರ್ಟ್ ಕೊಲಿಜಿಯಂ 2023ರ ಜನವರಿ 19ರಂದು ಶಿಫಾರಸು ಮಾಡಿತ್ತು. ಅವರನ್ನು ನೇಮಿಸಲು ಕೇಂದ್ರ ಸರ್ಕಾರ ಬುಧವಾರ ಅನುಮೋದನೆ ನೀಡಿತ್ತು. ಅವರ ಅಧಿಕಾರಾವಧಿ ಎರಡು ವರ್ಷಗಳು. ಹೈಕೋರ್ಟ್‌ನಲ್ಲಿ 62 ನ್ಯಾಯಮೂರ್ತಿ ಹುದ್ದೆಗಳಿದ್ದು, 49 ಹುದ್ದೆಗಳು ಭರ್ತಿಯಾಗಿವೆ.

ಕಾರವಾರದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ನದಾಫ್ ಅವರು ಬೆಂಗಳೂರಿನಲ್ಲಿ ಉನ್ನತ ಶಿಕ್ಷಣ ಪಡೆದರು. ಅವರು 25 ವರ್ಷಗಳಿಂದ ವಕೀಲರಾಗಿದ್ದಾರೆ.

ಗುಂಡು ತಗುಲಿ ಯೋಧ ಸಾವು

ಮೂಡಲಗಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಕಲ್ಲೋಳಿಯ ಯೋಧ ಪ್ರವೀಣ ಸುಭಾಷ ಖಾನಗೌಡ್ರ (24) ಬುಧವಾರ ಚೆನ್ನೈನ ಭಾರತೀಯ ನೌಕಾ ಪಡೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ತಲೆಗೆ ಗುಂಡು ತಗುಲಿ ಮರಣ ಹೊಂದಿದ್ದಾರೆ.

ಪ್ರವೀಣ 2020ರ ಫೆ.12ರಂದು ಭಾರತೀಯ ನೌಕಾಪಡೆಗೆ ಸೇರಿದ್ದರು. ಕೊಚ್ಚಿ, ಅಂಡಮಾನ್‌ದಲ್ಲಿ ಸೇವೆ ಸಲ್ಲಿಸಿ ಈಚೆಗೆ ಚೆನ್ನೈಗೆ ವರ್ಗವಾಗಿದ್ದರು. ಕಾಕತಾಳೀಯ ಎಂಬಂತೆ ಫೆ.12ರಂದೇ ನಿಧನರಾಗಿದ್ದಾರೆ. ಅವರ ತಂದೆ ಸುಭಾಷ, ತಾಯಿ ಮಹಾದೇವಿ ಕೃಷಿಕರು.

'ಸಾಯುವುದಕ್ಕೆ ಒಂದು ತಾಸಿಗೆ ಮುನ್ನ ಅವರು ತಾಯಿ ಹಾಗೂ ಅಣ್ಣನೊಂದಿಗೆ ಮೊಬೈಲ್‌ನಲ್ಲಿ ಮಾತನಾಡಿದ್ದರು. ಆರೋಗ್ಯವಾಗಿ ಇರುವುದಾಗಿ ಹೇಳಿದ್ದರು.


ಪ್ರವೀಣ ಖಾನಗೌಡ್ರ

ಬಳಿಕ ಅವರ ಬಂದೂಕಿನಿಂದಲೇ ಅವರ ತಲೆಗೆ ಗುಂಡು ತಾಗಿ ಸತ್ತಿದ್ದಾರೆ ಎಂಬ ಸುದ್ದಿ ಬಂತು. ಇದು 'ಮಿಸ್ ಫೈರ್' ಎಂದು ಸೇನಾಧಿಕಾರಿಗಳು ತಿಳಿಸಿದ್ದು, ತನಿಖೆ ನಡೆದಿದೆ.' ಎಂದು ಕುಟುಂಬದವರು ತಿಳಿಸಿದ್ದಾರೆ. ಫೆ.14ರಂದು ಬೆಳಿಗ್ಗೆ ಪಾರ್ಥಿವ ಶರೀರವನ್ನು ಸಂಗನಕೇರಿ ಗ್ರಾಮದಿಂದ ಕಲ್ಲೋಳಿಯವರೆಗೆ ಮೆರವಣಿಗೆ ಮೂಲಕ ತರಲಾಗುವುದು. ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ಬೆಳಿಗ್ಗೆ 11ಕ್ಕೆ ಕಲ್ಲೋಳಿಯಲ್ಲಿ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಯಲಿದೆ.



ರಥೋತ್ಸವ ಸಕಲೇಶಪುರದಲ್ಲಿ ಗುರುವಾರ ಸಕಲೇಶ್ವರಸ್ವಾಮಿ ಬ್ರಹ್ಮ ರಥೋತ್ಸವ ರಾಜಬೀದಿಯಲ್ಲಿ ಅದ್ದೂರಿಯಾಗಿ ನಡೆಯಿತು ಪ್ರಜಾವಾಣಿ ಚಿತ್ರ/ಜಾನೇಕೆರೆ ಆರ್. ಪರಮೇಶ್

ವಸತಿ ಶಾಲೆಗೆ ನೇರ ಪ್ರವೇಶ

ಬೆಂಗಳೂರು: ತಂದೆ–ತಾಯಿ ಮತ್ತು ಬಂಧು ಬಳಗ ಇಲ್ಲದ ಮಕ್ಕಳಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿರುವ ವಸತಿ ಶಾಲೆಗಳಿಗೆ 6ನೇ ತರಗತಿಗೆ ನೇರ ಪ್ರವೇಶ ಕಲ್ಪಿಸುವ ಸಂಬಂಧ ಸಮಾಜ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ.

ಇಂತಹ ಮಕ್ಕಳನ್ನು ಭಿಕ್ಷಾಟನೆ ಮತ್ತು ಇತರ ಚಟುವಟಿಕೆಗಳಿಗೆ ಬಳಸಿಕೊಳ್ಳುವ ಸಾಧ್ಯತೆ ಇದ್ದು, ಅದನ್ನು ತಪ್ಪಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ವಸತಿ ಶಾಲೆಗೆ ಸೇರುವುದರಿಂದ ಮಕ್ಕಳ ಭವಿಷ್ಯ ರೂಪಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದೆ.

ಒಂದು ಸಾವಿರ ಜನರ ವಿರುದ್ಧ ಎಫ್‌ಐಆರ್

ಉದಯಗಿರಿ ಪ್ರಕರಣ: ಮತ್ತೆ 8 ಮಂದಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಉದಯಗಿರಿ ಠಾಣೆ ಮತ್ತು ಪೊಲೀಸರ ಮೇಲೆ ಕಲ್ಲೆಸೆತ ಪ್ರಕರಣಕ್ಕೆ ಸಂಬಂಧಿಸಿ ನಗರ ಅಪರಾಧ ವಿಭಾಗದ ಪೊಲೀಸರು ಗುರುವಾರ ಎಂಟು ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ. ಈಗ ಆರೋಪಿಗಳ ಸಂಖ್ಯೆ 16ಕ್ಕೆ ಏರಿದೆ. ಒಟ್ಟು ಸಾವಿರ ಜನರ ಮೇಲೆ ಎಫ್‌ಐಆರ್ ದಾಖಲಾಗಿದೆ.

ಮಹದೇವಪುರ ಮುಖ್ಯರಸ್ತೆ ಹಾಗೂ ಸುತ್ತಲಿನ ಪ್ರದೇಶಗಳ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಿರುವ ಪೊಲೀಸರು, ಕೃತ್ಯದಲ್ಲಿ ಪಾಲ್ಗೊಂಡಿದ್ದ ನೂರಕ್ಕೂ ಹೆಚ್ಚು ಮಂದಿಯ ಗುರುತು ಪತ್ತೆ ಮಾಡಿದ್ದಾರೆ.

ಸಚಿವ ಭೇಟಿ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಠಾಣೆಗೆ ಭೇಟಿ ನೀಡಿ ಪೊಲೀಸರಿಂದ ಮಾಹಿತಿ ಪಡೆದುಕೊಂಡರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ಅವಹೇಳನಕಾರಿ ಪೋಸ್ಟ್‌ಗೆ ಸಂಬಂಧಿಸಿ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಎರಡು ಗುಂಪು ಠಾಣೆ ಮೇಲೆ ಕಲ್ಲು ತೂರಾಟ ನಡೆಸಿದೆ. ಪರಿಸ್ಥಿತಿಯನ್ನು ಹತೋಟಿಗೆ ತರಲು ಅಶ್ರುವಾಯು ಸಿಡಿಸಲಾಗಿದೆ. ಪೊಲೀಸರ ಕ್ರಮಕ್ಕೆ ಸಹಮತವಿದೆ' ಎಂದರು.

ನಮ್ಮ ಪಾತ್ರ ಇಲ್ಲ: 'ಪ್ರಕರಣದಲ್ಲಿ ಎಸ್‌ಡಿಪಿಐ ಪಕ್ಷದ ಪಾತ್ರವಿಲ್ಲ' ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಅಬ್ದುಲ್ ಮಜೀದ್ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

'ಅವಹೇಳನಕಾರಿ ಪೋಸ್ಟ್ ಹಾಕಿದವನ ವಿರುದ್ಧ ಕ್ರಮಕ್ಕೆ ವಿಳಂಬ ಮಾಡಿದ್ದೇ ಗಲಾಟೆಗೆ ಕಾರಣ. ಯಾವುದೇ ವಿಡಿಯೊದಲ್ಲಿ ನಮ್ಮ ಕಾರ್ಯಕರ್ತರಿದ್ದರೆ, ನಾವೇ ಪೊಲೀಸರಿಗೆ ಒಪ್ಪಿಸುತ್ತೇವೆ. ಶಾಂತಿ ಕದಡುವ ಹೇಳಿಕೆ ನೀಡಿರುವ ಬಿಜೆಪಿ ಮುಖಂಡ ಪ್ರತಾಪಸಿಂಹ ವಿರುದ್ಧವೂ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ವಿಚಾರಣೆ ಮುಂದೂಡಿಕೆ: ಬಂಧಿತರಾಗಿರುವ ಸತೀಶ್ ಪರ ಇಲ್ಲಿನ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಸಲ್ಲಿಸಲಾಗಿದ್ದು, ಕೋರ್ಟ್ ವಿಚಾರಣೆಯನ್ನು ಶುಕ್ರವಾರಕ್ಕೆ ಮುಂದೂಡಿದೆ.

'ಪ್ರವಾದಿ ಅವಹೇಳನವೇ ಕಾರಣ'

'ರಾಹುಲ್ ಗಾಂಧಿ, ಅಖಿಲೇಶ್ ಯಾದವ್ ಹಾಗೂ ಅರವಿಂದ ಕೇಜ್ರಿವಾಲ್ ಅವರನ್ನು ಕೆಟ್ಟದಾಗಿ ಚಿತ್ರಿಸಿದ್ದಕ್ಕೆ ಉದಯಗಿರಿ ಘಟನೆ ನಡೆದಿಲ್ಲ. ಪ್ರವಾದಿ ಮಹಮ್ಮದ್‌ರ ಬಗ್ಗೆ ಅವಹೇಳನ ಮಾಡಿದ್ದಕ್ಕೆ ನಡೆದಿದೆ' ಎಂದು ಶಾಸಕ ತನ್ವೀರ್ ಸೇಠ್ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಪ್ರಕರಣ ದಾಖಲಿಸಿಕೊಳ್ಳಲು ಪೊಲೀಸರು ವಿಳಂಬ ಮಾಡಿದ್ದಾರೆ. ಬೆಳಿಗ್ಗೆ ದೂರು ಕೊಟ್ಟರೆ, ಸಂಜೆ ಪ್ರಕರಣ ದಾಖಲಾಗುತ್ತದೆ. ಈ ಎಲ್ಲದರ ಬಗ್ಗೆ ಪರಾಮರ್ಶೆ ಮಾಡಬೇಕು. ಅಮಾಯಕರಿಗೆ ತೊಂದರೆ ಕೊಡಬೇಡಿ ಎಂಬುದೇ ಪೊಲೀಸರಿಗೆ ಮನವಿ' ಎಂದರು.

'ಸಾಲಗಾರರಿಗೆ ಕಿರುಕುಳದಿಂದ ಮುಕ್ತಿ'

ಮೈಕ್ರೊ ಫೈನಾನ್ಸ್ ಸುಗ್ರೀವಾಜ್ಞೆ: ನೋಂದಾಯಿತವಲ್ಲದ ಸಂಸ್ಥೆಗಳಿಗೆ ಅನ್ವಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದುರ್ಬಲರು, ಮಹಿಳೆಯರು, ರೈತರು, ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರು ಸಾಲದಾತರ ಕಿರುಕುಳದಿಂದ ಪಾರಾಗಲು ಸುಗ್ರೀವಾಜ್ಞೆ ನೆರವಾಗಲಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದ್ದಾರೆ.

'ಕರ್ನಾಟಕ ಕಿರು ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ತಡೆ) ಸುಗ್ರೀವಾಜ್ಞೆ 2025' ಕುರಿತ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮೈಕ್ರೊ ಫೈನಾನ್ಸ್ ಸಂಸ್ಥೆಗಳು ಸಾಲಗಾರರಿಂದ ಯಾವುದೇ ಭದ್ರತೆ ಪಡೆಯುವಂತಿಲ್ಲ. ಗ್ರಾಹಕರಿಗೆ ವಿಧಿಸುವ ಬಡ್ಡಿ ದರದ ಬಗ್ಗೆ ಪಾರದರ್ಶಕವಾಗಿ ಸಾಲಗಾರರಿಗೆ ಲಿಖಿತ ರೂಪದಲ್ಲಿ ತಿಳಿಸಬೇಕು ಎಂಬ ಅಂಶವನ್ನು ಸುಗ್ರೀವಾಜ್ಞೆ ಒಳಗೊಂಡಿದೆ ಎಂದಿದ್ದಾರೆ.

ಸಾಲ ನೀಡಿಕೆ ಏಜೆನ್ಸಿಗಳು ಅಥವಾ ಲೇವಾದೇವಿದಾರರು ನೀಡುವ ಹೆಚ್ಚಿನ ಬಡ್ಡಿ ದರಗಳಿಂದ ಸಾಲಗಾರರಿಗೆ ಆಗುವ ಹೊರೆ ಮತ್ತು ಬಲವಂತದ ವಸೂಲಾತಿ ಕ್ರಮಗಳಿಂದ ಆಗುವ ಕಿರುಕುಳಗಳನ್ನು ನಿಯಂತ್ರಿಸಬಹುದಾಗಿದೆ ಎಂದು ಹೇಳಿದ್ದಾರೆ.

ಆರ್‌ಬಿಐ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನೋಂದಾಯಿತ ಮೈಕ್ರೊ ಫೈನಾನ್ಸ್ ಸಂಸ್ಥೆಗಳಿಂದ ಸುಮಾರು 1.9 ಕೋಟಿ ಜನ ಅಂದಾಜು ₹60 ಸಾವಿರ ಕೋಟಿ ಸಾಲ ಪಡೆದಿದ್ದಾರೆ. ನೋಂದಣಿಯಾಗದ ಸಂಸ್ಥೆಗಳಿಂದ ಸಾಲ ಪಡೆದವರ ನಿಖರ ಮಾಹಿತಿ ಇಲ್ಲದಿದ್ದರೂ ಸುಮಾರು ₹40 ಸಾವಿರ ಕೋಟಿ ಸಾಲ ಪಡೆದಿರಬಹುದು ಎಂದು ಅಂದಾಜಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಆಯಾ ಜಿಲ್ಲೆಗಳಲ್ಲಿ ವ್ಯವಹರಿಸುತ್ತಿರುವ ಮೈಕ್ರೊ ಫೈನಾನ್ಸ್ ಸಂಸ್ಥೆಗಳು ಜಿಲ್ಲಾಧಿಕಾರಿಗಳಲ್ಲಿ ನೋಂದಣಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದೆ. ಸದರಿ ಸಂಸ್ಥೆಗಳು ತಾವು ವಿಧಿಸುವ ಬಡ್ಡಿದರ, ಸಾಲಗಾರರ ಮಾಹಿತಿ, ಸುಸ್ತಿ ಸಾಲಗಳ ಮಾಹಿತಿಯನ್ನು ಜಿಲ್ಲಾಧಿಕಾರಿಗಳಿಗೆ ನೀಡಬೇಕು. ಅಲ್ಲದೇ, ಮೂರು ತಿಂಗಳಿಗೊಮ್ಮೆ ಮತ್ತು ವರ್ಷದ ವ್ಯವಹಾರ ವಿವರಗಳನ್ನೂ ಸಲ್ಲಿಸಬೇಕು. ಈ ಮಾಹಿತಿ ಸಲ್ಲಿಸದಿದ್ದರೆ, ಆರು ತಿಂಗಳು ಜೈಲು ಅಥವಾ ₹10 ಸಾವಿರದವರೆಗೆ ದಂಡ ವಿಧಿಸಲಾಗುತ್ತದೆ ಎಂದೂ ಹೇಳಿದ್ದಾರೆ.

ಫೈನಾನ್ಸ್ ಕಂಪನಿಗಳಿಗೆ ಮುತ್ತಿಗೆ, ಬೀಗ

ಚಾಮರಾಜನಗರ: 'ಫೈನಾನ್ಸ್ ಕಂಪನಿಗಳು ಆರ್‌ಬಿಐ ನಿಯಮಾವಳಿಯ ಪ್ರಕಾರ ಬಡ್ಡಿ ವಿಧಿಸುತ್ತಿಲ್ಲ' ಎಂದು ಆರೋಪಿಸಿ ಕರ್ನಾಟಕ ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಕಾರ್ಯಕರ್ತರು ಗುರುವಾರ ನಗರದ ಈಕ್ವಿಟಾಸ್ ಫೈನಾನ್ಸ್ ಸಂಸ್ಥೆಗೆ ಬೀಗ ಹಾಕಿ, 'ಎಚ್ಚರಿಕೆ'ಯ ದಿನವನ್ನು ಆಚರಿಸಿದರು.

ರೈತ ನಾಯಕರಾದ ಚುಕ್ಕಿ ನಂಜುಂಡಸ್ವಾಮಿ ಹಾಗೂ ಹೊನ್ನೂರು ಪ್ರಕಾಶ್ ನೇತೃತ್ವದಲ್ಲಿ ನೂರಾರು ರೈತರು ಈಕ್ವಿಟಾಸ್ ಸಂಸ್ಥೆಗೆ ಬೀಗ ಹಾಕಿ ಘೋಷಣೆ ಕೂಗಿದರು. 'ಆರ್‌ಬಿಐ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಬಡ್ಡಿದರ ವಿಧಿಸುತ್ತಿದ್ದೀರಿ. ಕಚೇರಿಗಳಲ್ಲಿ ಪಾರದರ್ಶಕವಾಗಿ ಬಡ್ಡಿದರ ಪ್ರದರ್ಶಿಸುತ್ತಿಲ್ಲ. ಸಾಲ ಕೊಡುವಾಗ ಕನ್ನಡದಲ್ಲಿ ಮಾಹಿತಿ ನೀಡುತ್ತಿಲ್ಲ' ಎಂದು ಫೈನಾನ್ಸ್ ಕಂಪನಿಗಳ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

'ಸಾಲ ವಸೂಲಾತಿ ಮಾಡುವಾಗ ಅವಾಚ್ಯ ಪದಗಳಿಂದ ನಿಂದಿಸಿದರೆ, ಮಾನಸಿಕ ಕಿರುಕುಳ ನೀಡಿದರೆ ವಸೂಲಾತಿ ಏಜೆಂಟರನ್ನು ಕಂಬಕ್ಕೆ ಕಟ್ಟಿಹಾಕಲಾಗುವುದು' ಎಂದು ಎಚ್ಚರಿಕೆಯ ನೋಟಿಸ್‌ಗಳನ್ನು ಜನ ಸ್ಮಾಲ್ ಫೈನಾನ್ಸ್ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಗಳ ಬಾಗಿಲಿಗೆ ಅಂಟಿಸಿದರು. ಬಳಿಕ ಸಿಸಿಎಫ್ ಕಚೇರಿಗೆ ಮುಂದೆ ಪ್ರತಿಭಟನೆ ನಡೆಸಿದ ರೈತರು, 'ಕಾಡುಪ್ರಾಣಿಗಳ ಹಾವಳಿಗೆ ವೈಜ್ಞಾನಿಕ ಬೆಳೆ ಪರಿಹಾರ ವಿತರಿಸಬೇಕು, ರೈತರಿಗೆ ಅನಗತ್ಯ ಕಿರುಕುಳ ನೀಡಬಾರದು' ಎಂದು ಒತ್ತಾಯಿಸಿದರು.


'ಆರ್‌ಬಿಐ ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಿನ ಬಡ್ಡಿದರ ವಿಧಿಸಲಾಗುತ್ತಿದೆ' ಎಂದು ಆರೋಪಿಸಿ ರೈತರು ಗುರುವಾರ ಚಾಮರಾಜನಗರ ಜನ ಸ್ಮಾಲ್ ಫೈನಾನ್ಸ್ ಕಚೇರಿಗೆ ಎಚ್ಚರಿಕೆಯ ಕರಪತ್ರ ಅಂಟಿಸಿ ಪ್ರತಿಭಟಿಸಿದರು. ರೈತ ನಾಯಕರಾದ ಚುಕ್ಕಿ ನಂಜುಂಡಸ್ವಾಮಿ, ಹೊನ್ನೂರು ಪ್ರಕಾಶ್ ಭಾಗವಹಿಸಿದ್ದರು

ಇಸ್ರೇಲ್ ಜತೆ ವಹಿವಾಟಿಗೆ ವಿರೋಧ

ಬೆಂಗಳೂರು: ಗಾಜಾ ಪಟ್ಟಿ ಮೇಲೆ ದಾಳಿ ನಡೆಸಿ ಶಾಂತಿ ಕದಡುತ್ತಿರುವ ಇಸ್ರೇಲ್ ಜತೆ ವ್ಯಾಪಾರ ಸಂಬಂಧ ಮುಂದುವರೆಸಬಾರದು ಎಂದು ಆಗ್ರಹಿಸಿ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಯುತ್ತಿರುವ ಸ್ಥಳದ ಹೊರಗೆ ಸುದ್ದಿಗೋಷ್ಠಿ ನಡೆಸಿದ ವಿವಿಧ ವಿದ್ಯಾರ್ಥಿ ಮತ್ತು ಮಾನವ ಹಕ್ಕುಗಳ ಸಂಘಟನೆಗಳ 11 ಸದಸ್ಯರನ್ನು ಸದಾಶಿವನಗರ ಪೊಲೀಸರು ವಶಕ್ಕೆ ಪಡೆದು, ಐದು ತಾಸಿನ ಬಳಿಕ ಬಿಡುಗಡೆ ಮಾಡಿದ್ದಾರೆ.

ಪಿಯುಸಿಎಲ್, ಅಖಿಲ ಭಾರತ ವಿದ್ಯಾರ್ಥಿಗಳ ಒಕ್ಕೂಟ, ಮಹಿಳಾ ಸಂಘಟನೆ, ಎಐಸಿಸಿಟಿಯು ಮತ್ತು ಎಸ್‌ಎಫ್‌ಪಿಡಿ ಸಂಘಟನೆಗಳ ಸದಸ್ಯರನ್ನು ಪೊಲೀಸರು ಮಧ್ಯಾಹ್ನ 12.30ಕ್ಕೆ ವಶಕ್ಕೆ ಪಡೆದು, ಸಂಜೆ 5.30ಕ್ಕೆ ಬಿಡುಗಡೆ ಮಾಡಿದರು.

ಸಮಾವೇಶದಲ್ಲಿ ಕೃಷಿ ತಂತ್ರಜ್ಞಾನ, ರಕ್ಷಣಾ ಕ್ಷೇತ್ರ ಕುರಿತು ಚರ್ಚೆ ನಡೆಯುತ್ತಿದೆ. ಈ ವೇಳೆ ಸುದ್ದಿಗೋಷ್ಠಿ ಕರೆದಿದ್ದ ಸಂಘಟನೆಗಳ ಸದಸ್ಯರು, 'ಪ್ಯಾಲೆಸ್ಟೀನ್ ಪರ ಭಾರತ ನಿಲ್ಲಲಿದೆ', 'ಗಾಜಾ ಪರ ಭಾರತ ನಿಲ್ಲಲಿದೆ ' ಎಂಬ ಪೋಸ್ಟರ್‌ಗಳನ್ನು ಪ್ರದರ್ಶಿಸಿದರು. 'ಇಸ್ರೇಲ್ ಜತೆಗೆ ಭಾರತ ಯಾವುದೇ ಕಾರಣಕ್ಕೂ ವ್ಯಾಪಾರ ಸಂಬಂಧ ಹೊಂದಬಾರದು. ಕದನ ವಿರಾಮ ಘೋಷಣೆ ಬಳಿಕವೂ ಗಾಜಾ ಮೇಲೆ ಇಸ್ರೇಲ್ ದಾಳಿ ಮುಂದುವರೆಸಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಲಕುಂದಿ ಪ್ರೌಢಶಾಲೆಗೆ ಕೊಠಡಿಗಳ ಸಮಸ್ಯೆ

ವಿದ್ಯಾರ್ಥಿಗಳಿಗೆ ಬಯಲಲ್ಲೇ ಪಾಠ

• ಚಾಂದ್ ಬಾಷ

ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): ಇಲ್ಲಿನ ಬಲಕುಂದಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳ ಉತ್ತಮ ದಾಖಲಾತಿ ಇದೆ. ಆದರೆ, ಮೂಲಸೌಲಭ್ಯಗಳಿಲ್ಲ. ವಿದ್ಯಾರ್ಥಿಗಳು ನಿತ್ಯವೂ ಗಿಡಮರಗಳ ನೆರಳಲ್ಲಿ, ಬಯಲಲ್ಲಿ ಕೂತು ಪಾಠ ಆಲಿಸಬೇಕಿದೆ. ಅಲ್ಲಿಯೇ ಊಟ ಮಾಡಬೇಕಿದೆ.

ಇಲ್ಲಿ 8 ರಿಂದ 10ನೇ ತರಗತಿಯವರೆಗೆ ಒಟ್ಟು 316 ವಿದ್ಯಾರ್ಥಿಗಳು ಇದ್ದಾರೆ. 8ನೇ ತರಗತಿಯಲ್ಲಿ 68 ವಿದ್ಯಾರ್ಥಿಗಳು ದಾಖಲಾಗಿದ್ದು, 9 ಮತ್ತು 10ನೇ ತರಗತಿಯಲ್ಲಿ ಕ್ರಮವಾಗಿ 114 ವಿದ್ಯಾರ್ಥಿಗಳು ಇದ್ದಾರೆ. ಶಾಲೆಯಲ್ಲಿ 7 ಕೊಠಡಿಗಳಿವೆ. ವಿಜ್ಞಾನ ಪ್ರಯೋಗಾಲಯ, ಕಚೇರಿ, ವಾಚನಾಲಯ, ಕ್ರೀಡಾ ಕೊಠಡಿ ಮತ್ತು ಕಂಪ್ಯೂಟರ್ ಪ್ರಯೋಗಾಲಯಕ್ಕೆ ಒಂದೊಂದು ಕೊಠಡಿ ಮೀಸಲಿಡಲಾಗಿದೆ. ಮೂರು ಕೊಠಡಿಗಳು ಮಾತ್ರ.

'9 ಮತ್ತು 10ನೇ ತರಗತಿಗಳನ್ನು ಎರಡು ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ಒಟ್ಟಾರೆ ವಿದ್ಯಾರ್ಥಿಗಳಿಗೆ 5 ತರಗತಿ ಕೋಣೆ ಬೇಕು. ಪ್ರತಿದಿನ 9ನೇ ಮತ್ತು 10ನೇ ತರಗತಿಯ ಒಂದು ವಿಭಾಗಕ್ಕೆ ಶಾಲೆಯ ವರಾಂಡ, ಗಿಡಗಳ ನೆರಳಲ್ಲಿ ಮತ್ತು ಮೈದಾನದಲ್ಲಿ ಕೂರಿಸಿ ಪಾಠ ಮಾಡುವುದು ಅನಿವಾರ್ಯ' ಎಂದು ಶಿಕ್ಷಕರು ತಿಳಿಸಿದರು.

'ಮಳೆಗಾಲದಲ್ಲಿ ಸಮಸ್ಯೆ ಹೇಳತೀರದು. ಒಂದೇ ಕೊಠಡಿಯಲ್ಲಿ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕೂರಬೇಕಾಗುತ್ತದೆ. ಶಾಲೆಗೆ ದಾಖಲಾತಿ ಕೊರತೆ ಇದ್ದಾಗ ಮನೆಮನೆಗೆ ತಿರುಗಿ, ದಾಖಲಾತಿ ಹೆಚ್ಚಿಸಿದ್ದೇವೆ. ಆದರೆ, ಸೌಲಭ್ಯ ಕೊರತೆ ಇರುವ ಬಗ್ಗೆ ಜನ ನಮ್ಮನ್ನು ಪ್ರಶ್ನಿಸುತ್ತಿದ್ದಾರೆ' ಎಂದು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಲೋಕೇಶ್ ತಿಳಿಸಿದರು.


ತೆಕ್ಕಲಕೋಟೆ ಹೋಬಳಿಯ ಬಲಕುಂದಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಹೊರ ಆವರಣದಲ್ಲಿ ತರಗತಿ ನಡೆಯುತ್ತಿರುವುದು

ಕೊಠಡಿಗಳ ಕೊರತೆಯಿಂದ ಬಯಲಲ್ಲಿ ಪಾಠ ಮಾಡುವುದು ಅನಿವಾರ್ಯವಾಗಿದೆ. ಈ ಸಮಸ್ಯೆಯನ್ನು ಶಿಕ್ಷಣ ಇಲಾಖೆ ಅಧಿಕಾರಿಗಳ ಗಮನಕ್ಕೆ ತರಲಾಗಿದೆ
ಸಾಲಿ ಚಂದ್ರಮೌಳಿ, ಮುಖ್ಯಶಿಕ್ಷಕ

ಅಕ್ಷರ ಆವಿಷ್ಕಾರ ಯೋಜನೆಯಡಿ ಪ್ರೌಢಶಾಲೆಗಳಿಗೆ ಅನುದಾನ ಸಿಕ್ಕಿಲ್ಲ. ಹೀಗಾಗಿ ಶಾಸಕರ ಅನುದಾನದಡಿ ಕಟ್ಟಡ ನಿರ್ಮಿಸುವಂತೆ ಅವರಿಗೆ ಮನವಿ ಮಾಡಲಾಗುವುದು.
ಎಚ್.ಗುರಪ್ಪ
ಕ್ಷೇತ್ರ ಶಿಕ್ಷಣಾಧಿಕಾರಿ, ಸಿರುಗುಪ್ಪ

ಸಂಕ್ಷಿಪ್ತ ಸುದ್ದಿ

ಅಪಘಾತ: ಇಬ್ಬರ ಸಜೀವ ದಹನ

ತಾವರಗೇರಾ (ಕೊಪ್ಪಳ ಜಿಲ್ಲೆ): ಕುಷ್ಟಗಿ ತಾಲ್ಲೂಕಿನ ತಾವರಗೇರಾ ಸಮೀಪದ ನಂದಾಪೂರ ಕ್ರಾಸ್ ಹತ್ತಿರ ಎರಡು ವಾಹನಗಳು ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ವಾಹನದಲ್ಲಿಯೇ ಸಜೀವ ದಹನವಾಗಿದ್ದಾರೆ.

ಗುರುವಾರ ಬೆಳಗಿನ ಜಾವ ಲಾರಿ ಮತ್ತು ಸರಕು ಸಾಗಣೆ ವಾಹನಗಳ (ಟ್ರಕ್) ನಡುವೆ ಅವಘಡ ನಡೆದಿದೆ. ವಾಹನಗಳು ಪರಸ್ಪರ ಡಿಕ್ಕಿ ಹೊಡೆದ ರಭಸಕ್ಕೆ ಟ್ರಕ್‌ಗೆ ಬೆಂಕಿ ಹೊತ್ತಿಕೊಂಡು ಅದರಲ್ಲಿದ್ದ ಸಿದ್ದಪ್ಪ ಛತ್ರಪ್ಪ ಪೊಲೀಸ್ ಪಾಟೀಲ (25) ಹಾಗೂ ಅಂಜನಪ್ಪ ಸೋಮಪ್ಪ ಪೊಲೀಸ್ ಪಾಟೀಲ (30) ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಅವರು ಲಿಂಗಸಗೂರು ತಾಲ್ಲೂಕಿನ ತೊಡಕಿ ಗ್ರಾಮದವರು. ಲಾರಿ ಚಾಲಕ ಪರಾರಿಯಾಗಿದ್ದಾನೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ಧಿ, ಡಿವೈಎಸ್‌ಪಿ ಸಿದ್ದನಗೌಡ ಪಾಟೀಲ ಭೇಟಿ ನೀಡಿ ಪರಿಶೀಲಿಸಿದರು. ತಾವರಗೇರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಸಿದ್ದಪ್ಪ ಛತ್ರಪ್ಪ


ಅಂಜನಪ್ಪ ಸೋಮಪ್ಪ

ಮಾಜಿ ಸ್ಪೀಕರ್ ರಮೇಶ್ ಕುಮಾರ್‌ಗೆ ನೋಟಿಸ್

ಕೋಲಾರ: ಶ್ರೀನಿವಾಸಪುರ ತಾಲ್ಲೂಕಿನ ಹೊಸಹುಡ್ಯ ಗ್ರಾಮದ ಸರ್ವೆ ನಂಬರ್ 1 ಮತ್ತು 2ರ ಅರಣ್ಯ ಜಮೀನಿನಲ್ಲಿ 60.23 ಎಕರೆ ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡು ಸ್ವಾಧೀನದಲ್ಲಿರುವುದನ್ನು ಜಂಟಿ ಸಮೀಕ್ಷೆ ತಂಡ ವರದಿಯಲ್ಲಿ ಉಲ್ಲೇಖಿಸಿದ ಬೆನ್ನಲ್ಲೇ ಮುಂದಿನ ಕ್ರಮಕ್ಕಾಗಿ ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಆರ್.ರಮೇಶ್ ಕುಮಾರ್ ಹಾಗೂ ಶ್ರೀನಿವಾಸಪುರ ವಲಯದ ಅರಣ್ಯಾಧಿಕಾರಿಗೆ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ) ನೋಟಿಸ್ ನೀಡಿದ್ದಾರೆ.

ಫೆ.20ರ ಮಧ್ಯಾಹ್ನ 3ಕ್ಕೆ ಮೇಲ್ಮನವಿ ಪ್ರಾಧಿಕಾರದಿಂದ ಮೇಲ್ಮನವಿ ವಿಚಾರಣೆ ನಿಗದಿಪಡಿಸಿದ್ದು, ತಪ್ಪದೇ ಹಾಜರಾಗುವಂತೆ ನೋಟಿಸ್‌ನಲ್ಲಿ ಉಲ್ಲೇಖಿಸಿದ್ದಾರೆ.

ರಿಟ್ ಅರ್ಜಿ ಪ್ರಕರಣದಲ್ಲಿ ಹೈಕೋರ್ಟ್ ಆದೇಶದಂತೆ ಮೇಲ್ಮನವಿ ಪ್ರಕರಣಕ್ಕೆ ಸಂಬಂಧಿಸಿದಂತೆ ಜಂಟಿ ಮೋಜಣಿ ಕಾರ್ಯ ಮುಕ್ತಾಯಗೊಂಡು ವರದಿ ಹಾಗೂ ನಕಾಶೆಯು ಸ್ವೀಕೃತವಾಗಿರುವುದರಿಂದ ಮೇಲ್ಮನವಿ ವಿಚಾರಣೆ ನಿಗದಿಪಡಿಸಲಾಗಿದೆ ಎಂಬ ಅಂಶ ನೋಟಿಸ್‌ನಲ್ಲಿದೆ. ರಮೇಶ್ ಕುಮಾರ್ ಹೈಕೋರ್ಟ್‌ನಲ್ಲಿ ದಾಖಲಿಸಿದ್ದ 2010 ಮತ್ತು 2012ರ ರಿಟ್ ಅರ್ಜಿ ಸಂಬಂಧ 2013ರಲ್ಲಿ ಹೈಕೋರ್ಟ್ ತೀರ್ಪು ನೀಡಿತ್ತು.

ಜಂಟಿ ಸಮೀಕ್ಷೆ ವರದಿ ಈಗಾಗಲೇ ಅರಣ್ಯ ಸಂರಕ್ಷಣಾಧಿಕಾರಿಯು ಹೈಕೋರ್ಟ್‌ಗೆ ಸಲ್ಲಿಸಿದ್ದಾರೆ. ಸರ್ವೆ ನಂಬರ್ 1ರಲ್ಲಿ 6 ಎಕರೆ ಹಾಗೂ ಸರ್ವೆ ನಂಬರ್ 2ರಲ್ಲಿ 54.23 ಎಕರೆ ಒತ್ತುವರಿ ಆಗಿದೆ ಎಂಬ ವಿಚಾರ ವರದಿಯಲ್ಲಿದೆ. ಹೈಕೋರ್ಟ್ ಸೂಚನೆ ಮೇರೆಗೆ ರಮೇಶ್ ಕುಮಾರ್ ಉಪಸ್ಥಿತಿಯಲ್ಲೇ ಜಂಟಿ ಸಮೀಕ್ಷೆ ನಡೆದಿತ್ತು.



ಕರ್ತವ್ಯ ಲೋಪ ಪಿಎಸ್‌ಐ ಅಮಾನತು

ಚಿಕ್ಕಮಗಳೂರು: ಅಶಿಸ್ತು ಮತ್ತು ಕರ್ತವ್ಯ ಲೋಪ ಆರೋಪದಲ್ಲಿ ಶೃಂಗೇರಿ ಸಬ್ ಇನ್‌ಸ್ಪೆಕ್ಟರ್ ನಿಂಗಪ್ಪ ಜಕ್ಕಣ್ಣನವರ ಅವರನ್ನು ಕರ್ತವ್ಯದಿಂದ ಅಮಾನತು ಮಾಡಲಾಗಿದೆ.

ಶೃಂಗೇರಿಯಲ್ಲಿ ಅಕ್ರಮ ಮರಳು ದಂಧೆ ನಡೆಯುತ್ತಿದ್ದರೂ ತಡೆಯುವಲ್ಲಿ ವಿಫಲವಾಗಿದ್ದರು. ಜೂಜಾಟ ನಿಯಂತ್ರಣ ಮಾಡಿರಲಿಲ್ಲ. ಅಕ್ರಮ ಚಟುವಟಿಕೆಗಳು ನಡೆಯುತ್ತಿರುವ ಮಾಹಿತಿ ನೀಡಿದರೂ ಕ್ರಮ ಕೈಗೊಂಡಿರಲಿಲ್ಲ ಎಂಬ ಆರೋಪ ಅವರ ಮೇಲಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ ಅವರು ಅಮಾನತು ಆದೇಶ ಹೊರಡಿಸಿದ್ದಾರೆ.

ಭಾನುವಾರ ಕಾರು ಅಡ್ಡಗಟ್ಟಿ ಮುಸ್ಲಿಂ ಯುವಕರ ಮೇಲೆ ಬಜರಂಗದಳದ ಕಾರ್ಯಕರ್ತರು ಹಲ್ಲೆ ನಡೆಸಿದ್ದ ಪ್ರಕರಣದಲ್ಲೂ ಮೊಕದ್ದಮೆ ದಾಖಲಿಸುವಲ್ಲಿ ನಿರ್ಲಕ್ಷ್ಯ ತೋರಿದ್ದರು. ಬಳಿಕ ಬೇರೆ ಅಧಿಕಾರಿಗಳನ್ನು ನಿಯೋಜಿಸಿ ಪ್ರಕರಣ ದಾಖಲಿಸಬೇಕಾಯಿತು ಎಂದು ಪೊಲೀಸ್ ಹಿರಿಯ ಅಧಿಕಾರಿಗಳು ತಿಳಿಸಿದರು.


ಜಕ್ಕಪ್ಪನವರ

ಶುಕ್ರವಾರ, ಫೆಬ್ರುವರಿ 14, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 45 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
ಯಶಸ್ಸಿನ ನಿರೀಕ್ಷೆಯಲ್ಲಿ 'ರತ್ನನ್ ಪ್ರಪಂಚ' ಖ್ಯಾತಿಯ ನಟ ಪ್ರಮೋದ್ ಹೆಜ್ಜೆ

ಆಳ-ಅಗಲ
ಅನಪೇಕ್ಷಿತ ಕರೆ: ಟ್ರಾಯ್ ಬಿಗಿ ನಿಯಮ

ವಕ್ಫ್ ಮಸೂದೆ ವರದಿ ರಾಜ್ಯಸಭೆಯಲ್ಲಿ ಮಂಡನೆ 6

ನಕಲಿ ಅಂಕಪಟ್ಟಿ: ಎಫ್‌ಐಆರ್ ದಾಖಲು 4B

ಸೆನ್ಸೆಕ್ಸ್	ನಿಫ್ಟಿ	₹/$
76,138	23,031	86.93

ಗ್ರಾಮ ಆಡಳಿತ ಅಧಿಕಾರಿಗಳ ಮುಷ್ಕರ: ಸಿಇಟಿ ಅಭ್ಯರ್ಥಿಗಳಿಗೆ ತಟ್ಟಿದ ಬಿಸಿ

ಪ್ರಮಾಣಪತ್ರ ತಾಪತ್ರಯ

● ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಅರ್ಜಿ ಸಲ್ಲಿಸಲು ಸಿದ್ಧತೆ ಮಾಡಿಕೊಳ್ಳುತ್ತಿರುವ ಪಿಯು ವಿದ್ಯಾರ್ಥಿಗಳಿಗೆ ಗ್ರಾಮ ಆಡಳಿತ ಅಧಿಕಾರಿಗಳು ರಾಜ್ಯದಾದ್ಯಂತ ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರದಿಂದ ಬಿಸಿ ತಟ್ಟಿದೆ.

ಸಿಇಟಿಯ ಪಿಸಿಎಂಬಿ ಪರೀಕ್ಷೆ ಏಪ್ರಿಲ್ 16 ಮತ್ತು 17ರಂದು ಹಾಗೂ ಹೊರನಾಡು ಕನ್ನಡಿಗರಿಗೆ ಕನ್ನಡ ಪರೀಕ್ಷೆ ಏ.18ರಂದು ನಡೆಯಲಿದೆ. ಅರ್ಜಿ ಸಲ್ಲಿಕೆಗೆ ಫೆ. 18 ಕೊನೆಯ ದಿನ. ಈ ಅವಧಿಯೊಳಗೆ ಮೀಸಲಾತಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ತೆಗೆದುಕೊಂಡು ಅರ್ಜಿ ಸಲ್ಲಿಸುವಾಗ ವೆಬ್‌ಸೈಟ್‌ನಲ್ಲಿ ಅವುಗಳನ್ನು ಅಪ್‌ಲೋಡ್ ಮಾಡಬೇಕಿದೆ. ಆದರೆ, ಗ್ರಾಮ ಆಡಳಿತ ಅಧಿಕಾರಿಗಳು ಫೆ. 10ರಿಂದ ಮುಷ್ಕರ ನಡೆಸುತ್ತಿರುವುದರಿಂದ ಪ್ರಮಾಣ ಪತ್ರಗಳನ್ನು ಪಡೆಯಲು ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತಿಲ್ಲ.

ಮುಖ್ಯಾಂಶಗಳು
- ಅಭ್ಯರ್ಥಿಗಳು ಫೆ. 18ರೊಳಗೆ ದಾಖಲೆ ಅಪ್‌ಲೋಡ್ ಮಾಡಬೇಕಿದೆ
- ಕಂದಾಯ ನಿರೀಕ್ಷಕರಿಂದಲೂ ಸಿಗದ ಪ್ರಮಾಣಪತ್ರ
- ಪರೀಕ್ಷೆ ಕೈ ತಪ್ಪದಂತೆ ನೋಡಿಕೊಳ್ಳಲು ಅಭ್ಯರ್ಥಿಗಳ ಹರಸಾಹಸ

ಮೀಸಲಾತಿ, ಜಾತಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ಆಯಾ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ನೀಡುತ್ತಾರೆ. ಆದರೆ, ಇವರು ಮುಷ್ಕರ ನಡೆಸುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ತುರ್ತಾಗಿ ಪ್ರಮಾಣ ಪತ್ರ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಸಮಸ್ಯೆ ಗಮನಕ್ಕೆ ಬರುತ್ತಿದ್ದಂತೆ ಸರ್ಕಾರ, ಕಂದಾಯ ನಿರೀಕ್ಷಕರಿಗೆ ಇದರ ಜವಾಬ್ದಾರಿ ವಹಿಸಿದೆ. 25ರಿಂದ 30 ಹಳ್ಳಿಗಳಿಗೆ ಒಬ್ಬ ಕಂದಾಯ ನಿರೀಕ್ಷಕರು ಇರುವುದರಿಂದ ಅವರಿಗೂ ಪರಿಸ್ಥಿತಿ ನಿಭಾಯಿಸಲು ಆಗುತ್ತಿಲ್ಲ.

ಅರ್ಹತೆ ಪರಿಶೀಲನೆ ನಡೆಯುತ್ತಿಲ್ಲ

ಮೀಸಲು ಪ್ರಮಾಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವಂಶಾವಳಿ, ವೃದ್ಧಾಪ್ಯ ವೇತನ ಸೇರಿದಂತೆ ಒಟ್ಟು 25 ರೀತಿಯ ಪ್ರಮಾಣ ಪತ್ರಗಳಿಗೆ ಅರ್ಜಿ ಸಲ್ಲಿಸಿದಾಗ ಗ್ರಾಮ ಆಡಳಿತ ಅಧಿಕಾರಿಗಳು ಅರ್ಹತೆಯನ್ನು ಪರಿಶೀಲಿಸುತ್ತಾರೆ. ಸರ್ಕಾರದ ವಿವಿಧ ಸೇವೆಗಳನ್ನು 20 ಆ್ಯಪ್‌ಗಳ ಮೂಲಕ ಅವರು ನೀಡುತ್ತಾರೆ. ಮುಷ್ಕರದಿಂದ ಆ ಸೇವೆಗಳಲ್ಲೂ ವ್ಯತ್ಯಯ ಉಂಟಾಗಿದೆ.

> **ಕಂದಾಯ ಇಲಾಖೆಯ ಆಯುಕ್ತರ ಸೂಚನೆಯಂತೆ ಕಂದಾಯ ನಿರೀಕ್ಷಕರಿಗೆ ತಾತ್ಕಾಲಿಕವಾಗಿ ಲಾಗಿನ್ ನೀಡಿ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಲಾಗುತ್ತಿದೆ**
> **ಶಿವಕುಮಾರ ಶೀಲವಂತ**
> ಹೆಚ್ಚುವರಿ ಜಿಲ್ಲಾಧಿಕಾರಿ, ಬೀದರ್

'ದೀರ್ಘಕಾಲೀನ ಬೇಡಿಕೆ ಈಡೇರಿಸುವವರೆಗೆ ಮುಷ್ಕರದಿಂದ ಹಿಂದೆ ಸರಿಯುವುದಿಲ್ಲ. ನಾಲ್ಕು ದಿನಗಳಿಂದ ಮುಷ್ಕರ ನಡೆಯುತ್ತಿದ್ದು, ಈಗಾಗಲೇ ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ಸಮಸ್ಯೆ ಆಗುತ್ತಿದೆ. ಸರ್ಕಾರ ಕೂಡಲೇ ಸ್ಪಂದಿಸಿದರೆ ಎಲ್ಲರಿಗೂ ಒಳ್ಳೆಯದಾಗುತ್ತದೆ' ಎಂದು ಕಂದಾಯ ನೌಕರರ ಸಂಘದ ಜಿಲ್ಲಾಧ್ಯಕ್ಷ ಪ್ರದೀಪ ಅಂಗಡಿ, ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ ಬಬ್ರುವಾಹನ ಬೆಳಮಗಿ ತಿಳಿಸಿದ್ದಾರೆ.

'ಮೀಸಲಾತಿ ಪ್ರಮಾಣ ಪತ್ರ, 371(ಜೆ) ಪ್ರಮಾಣ ಪತ್ರ ತೆಗೆಸಬೇಕಿದೆ. ಮುಷ್ಕರದಿಂದ ಪ್ರಮಾಣ ಪತ್ರ ತೆಗೆಸಲು ಸಾಧ್ಯವಾಗಿಲ್ಲ. ಸಿಇಟಿ ಪರೀಕ್ಷೆ ಕೈತಪ್ಪಿ ಹೋಗುವ ಆತಂಕವಾಗುತ್ತಿದೆ' ಎಂದು ಪಿಯು ದ್ವಿತೀಯ ವಿದ್ಯಾರ್ಥಿಗಳು ಗೋಳು ತೋಡಿಕೊಂಡಿದ್ದಾರೆ.

ಉಳಿದ ಕಡೆಗಳಲ್ಲಿ ಯಾವುದೇ ಬದಲಾವಣೆ ಇಲ್ಲ: ಬಿಎಂಆರ್‌ಸಿಎಲ್ ಎಂ.ಡಿ

ಗರಿಷ್ಠ ಹೆಚ್ಚಳದಲ್ಲಿ ಶೇ 30ರಷ್ಟು ಇಳಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಮ್ಮ ಮೆಟ್ರೊ ಪ್ರಯಾಣ ದರವನ್ನು ಇಳಿಸುವಂತೆ ಸ್ವತಃ ಮುಖ್ಯಮಂತ್ರಿ ಸೂಚನೆ ನೀಡಿದ್ದರೂ ಕಡಿಮೆ ಮಾಡಲು ಬಿಎಂಆರ್‌ಸಿಎಲ್ ಮುಂದಾಗಿಲ್ಲ. ತಾಂತ್ರಿಕ ಕಾರಣಗಳಿಂದ ತೀರಾ ಹೆಚ್ಚಳವಾದ ಕಡೆಗಳಲ್ಲಿ ಶೇಕಡ 30ರವರೆಗೆ ದರ ಇಳಿಕೆ ಮಾಡಲು ನಿರ್ಧರಿಸಿದೆ.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ದರ ಏರಿಕೆಯನ್ನು ಸಮರ್ಥಿಸಿಕೊಂಡರು.

ಮೆಟ್ರೊ ಪ್ರಯಾಣ ದರ ಏರಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲ. ಒಟ್ಟು ಹೆಚ್ಚಳದಲ್ಲಿ ಇಳಿಕೆಯೂ ಇರುವುದಿಲ್ಲ. ಕನಿಷ್ಠದರ ₹ 10, ಗರಿಷ್ಠ ದರ ₹ 90 ನಿಗದಿ ಮಾಡಲಾಗಿದ್ದು, ಅದೇ ದರ ಮುಂದುವರಿಯಲಿದೆ ಎಂದು ತಿಳಿಸಿದರು.

ಒಟ್ಟು 70 ಮೆಟ್ರೊ ನಿಲ್ದಾಣಗಳಿವೆ. ದರ ಹೆಚ್ಚಳದ ವೇಳೆ ಕೆಲವು ಸ್ಟೇಜ್‌ಗಳ ದರದಲ್ಲಿ ವ್ಯತ್ಯಾಸವಾಗಿದೆ. ಈ ವ್ಯತ್ಯಾಸವನ್ನು ಮಾತ್ರ ಸರಿಪಡಿಸಲಾಗುವುದು. ಇದರಿಂದ 2.5 ಲಕ್ಷ ಪ್ರಯಾಣಿಕರಿಗೆ ಇಳಿಕೆಯ ಅನುಕೂಲ ಸಿಗಲಿದೆ ಎಂದು ಸ್ಪಷ್ಟಪಡಿಸಿದರು.

ಕೆಲವು ಕಡೆಗಳಲ್ಲಿ ಶೇಕಡ 70ರಿಂದ ಶೇ 100ರವರೆಗೆ ಹೆಚ್ಚಳ ಆಗಿರುವ ಬಗ್ಗೆ ಮಾಧ್ಯಮಗಳಲ್ಲಿ ಜನರು ಹೇಳಿಕೊಂಡಿದ್ದರು. ಜನಪ್ರತಿನಿಧಿಗಳು, ಸಚಿವರು, ಮುಖ್ಯಮಂತ್ರಿಯವರೂ ಪ್ರತಿಕ್ರಿಯಿಸಿದ್ದರು. ಅದರ ಬಗ್ಗೆ ಬಿಎಂಆರ್‌ಸಿಎಲ್ ಮತ್ತು ಸಮಿತಿ ಎರಡು ದಿನಗಳಿಂದ ಪರಿಶೀಲನೆ ನಡೆಸಿತ್ತು. ಶೇ 70ರಿಂದ ಶೇ 100ರಷ್ಟು ಹೆಚ್ಚಳವಾಗಿರುವಲ್ಲಿ ಶೇ 30ರವರೆಗೆ ಕಡಿಮೆಮಾಡಿ ಸರಿಪಡಿಸಿ ಫೆಬ್ರುವರಿ 14ರಿಂದ ಅನುಷ್ಠಾನಗೊಳಿಸಲಾಗುವುದು. ಇದು ದರ ಪರಿಷ್ಕರಣೆಯಲ್ಲ ಎಂದು ತಿಳಿಸಿದರು.

ದರ ಏರಿಕೆ ಮಾಡಿದ್ದು ಕೇಂದ್ರ ಸರ್ಕಾರವೇ? ರಾಜ್ಯ ಸರ್ಕಾರವೇ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಬಿಎಂಆರ್‌ಸಿಎಲ್‌ನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ತಲಾ ಶೇ 50ರಷ್ಟು ಪಾಲುದಾರಿಕೆಯನ್ನು ಹೊಂದಿವೆ. ದರ ನಿಗದಿಗಾಗಿ ರಚಿಸಿದ ಸಮಿತಿಯ ಶಿಫಾರಸಿನಂತೆ ದರ ಪರಿಷ್ಕರಿಸಲಾಗಿದೆ' ಎಂದು ಸಮಜಾಯಿಷಿ ನೀಡಿದರು.

ಇನ್ನಷ್ಟು ಸುದ್ದಿಗಳು 4C



ಸುಕ್ರಿ ಗೌಡ ನಿಧನ

ಕಾರವಾರ: ಹಾಲಕ್ಕಿ ಸಮುದಾಯದ ಜಾನಪದ ಗೀತೆಗಳನ್ನು ಹಾಡುವುದರ ಜೊತೆಗೆ ಮದ್ಯಪಾನ ವಿರೋಧಿ ಹೋರಾಟದಲ್ಲಿ ತೊಡಗಿದ್ದ ಅಂಕೋಲಾ ತಾಲ್ಲೂಕು ಬಡಗೇರಿಯ ಸುಕ್ರಿ ಬೊಮ್ಮ ಗೌಡ (88) ಗುರುವಾರ ನಸುಕಿನಲ್ಲಿ ನಿಧನರಾದರು. 4B

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿ

ನವದೆಹಲಿ (ಪಿಟಿಐ): ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ನಾಲ್ಕು ದಿನಗಳ ನಂತರ ರಾಜ್ಯದಲ್ಲಿ ಗುರುವಾರ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಲಾಗಿದೆ.

ಅಲ್ಲದೆ, ರಾಜ್ಯದ ವಿಧಾನಸಭೆಯನ್ನು ತಾತ್ಕಾಲಿಕವಾಗಿ ಅಮಾನತಿನಲ್ಲಿರಿಸಲಾಗಿದೆ. ಸಂವಿಧಾನದ ನಿಬಂಧನೆಗಳಿಗೆ ಅನುಗುಣವಾಗಿ ಮಣಿಪುರದಲ್ಲಿ ರಾಜ್ಯ ಸರ್ಕಾರವನ್ನು ನಡೆಸಲಾಗದ ಪರಿಸ್ಥಿತಿ ಉದ್ಭವಿಸಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಭಿಪ್ರಾಯಪಟ್ಟಿರುವುದಾಗಿ ಗೃಹ ಸಚಿವಾಲಯವು ಹೊರಡಿಸಿದ ಅಧಿಸೂಚನೆಯಲ್ಲಿ ಹೇಳಿದೆ.

ಸಂವಿಧಾನದ 356ನೇ ವಿಧಿಯಡಿ ದತ್ತವಾಗಿರುವ ಅಧಿಕಾರವನ್ನು ಬಳಸಿ ಆ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರಲಾಗಿದೆ. ರಾಜ್ಯದ ಆಡಳಿತವನ್ನು ರಾಜ್ಯಪಾಲರು ನಿರ್ವಹಿಸಲಿದ್ದಾರೆ ಎಂದು ಅಧಿಸೂಚನೆಯಲ್ಲಿ ಹೇಳಿದೆ.

9 ವಿ.ವಿ ಮುಚ್ಚಲು ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ಆರಂಭಿಸಿದ್ದ 10 ಹೊಸ ವಿಶ್ವವಿದ್ಯಾಲಯಗಳ ಪೈಕಿ 9 ವಿಶ್ವವಿದ್ಯಾಲಯಗಳನ್ನು ಮುಚ್ಚಲು ಸಚಿವ ಸಂಪುಟ ಉಪ ಸಮಿತಿ ತೀರ್ಮಾನಿಸಿದೆ ಎಂದು ಗೊತ್ತಾಗಿದೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯ ಈ ಉಪಸಮಿತಿಯು, ವಿಶ್ವವಿದ್ಯಾಲಯಗಳ ಆರ್ಥಿಕ ಸ್ಥಿತಿಗತಿಯ ಪರಿಶೀಲನೆ ಕುರಿತು ಗುರುವಾರ ಮೊದಲ ಸಭೆ ನಡೆಸಿತು.

ಬೀದರ್ ವಿಶ್ವವಿದ್ಯಾಲಯ ಹೊರತುಪಡಿಸಿ, ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ಮತ್ತು ನೃಪತುಂಗ ವಿಶ್ವವಿದ್ಯಾಲಯವೂ ಸೇರಿ ಎಲ್ಲ ವಿಶ್ವವಿದ್ಯಾಲಯಗಳನ್ನು ಮುಚ್ಚಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಇತರ ವಿಶ್ವವಿದ್ಯಾಲಯಗಳಿಗೆ ಹೋಲಿಸಿದರೆ, ಬೀದರ್ ವಿಶ್ವವಿದ್ಯಾಲಯ 150 ಸಂಯೋಜಿತ ಕಾಲೇಜುಗಳನ್ನು ಹೊಂದಿದ್ದು, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಯಾವುದೇ ವಿಶ್ವವಿದ್ಯಾಲಯ ಸುಗಮವಾಗಿ ನಡೆಯಲು ಸಂಯೋಜಿತ ಕಾಲೇಜುಗಳ ಶುಲ್ಕ ಮುಖ್ಯ. ಆದ್ದರಿಂದ ಈ ವಿಶ್ವವಿದ್ಯಾಲಯ ಉಳಿಸಿಕೊಳ್ಳಲು ತೀರ್ಮಾನಿಸಲಾಯಿತು ಎಂದು ಮೂಲಗಳು ಹೇಳಿವೆ.

ಯಾವ ವಿ.ವಿಗಳಿಗೆ ತೂಗುಗತ್ತಿ?
●ಹಾಸನ ● ಚಾಮರಾಜನಗರ, ●ಹಾವೇರಿ ●ಕೊಡಗು ●ಕೊಪ್ಪಳ ●ಬಾಗಲಕೋಟೆ ●ಮಹಾರಾಣಿ ಕ್ಲಸ್ಟರ್ ● ಮಂಡ್ಯ ●ನೃಪತುಂಗ ವಿಶ್ವವಿದ್ಯಾಲಯ

ಮಂಡ್ಯ ವಿಶ್ವವಿದ್ಯಾಲಯವನ್ನು ಮುಚ್ಚಬೇಕು ಎಂದು ಮಂಡ್ಯ ಮೂಲದ ವಿಧಾನಪರಿಷತ್ ಸದಸ್ಯರೊಬ್ಬರು ಮನವಿ ಪತ್ರ ನೀಡಿರುವುದನ್ನು ಸಭೆಯಲ್ಲಿ ಅಧ್ಯಕ್ಷರ ಗಮನಕ್ಕೆ ತರಲಾಯಿತು. ಬಹುತೇಕ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ವಾಹನ ಖರೀದಿಸಲು ಸಾಧ್ಯವಾಗದ ಅಸಹಾಯಕ ಸ್ಥಿತಿಯೂ ನಿರ್ಮಾಣವಾಗಿದೆ ಎಂಬ ವಿಷಯವೂ ಪ್ರಸ್ತಾಪವಾಯಿತು.

ಹೊಸ ವಿಶ್ವವಿದ್ಯಾಲಯಗಳನ್ನು ನಡೆಸಲು ಮೊದಲ ಐದು ವರ್ಷಗಳಿಗೆ ಅಗತ್ಯವಿರುವ ಹಣಕಾಸಿನ ಮೊತ್ತದ ಬಗ್ಗೆ ಪರಿಶೀಲನೆ ನಡೆಸಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ವರದಿ ಸಲ್ಲಿಸಿದ ಕಾರಣ ಸಂಪುಟ ಉಪ ಸಮಿತಿ ರಚಿಸಲಾಯಿತು. ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆ ಮತ್ತು ಕಾರ್ಯಾಚರಣೆಗೆ ₹342 ಕೋಟಿ ಅಗತ್ಯವಿದೆ ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿತ್ತು.

ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಜಮೀನಿನ ವೆಚ್ಚ ಬಿಟ್ಟು (100ರಿಂದ 200 ಎಕರೆ ಅಗತ್ಯ) ₹342 ಕೋಟಿ ಮೊತ್ತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ವೇತನ, ಮೂಲ ಸೌಕರ್ಯ, ಸಲಕರಣೆಗಳು, ವಾಹನಗಳು, ಪೀಠೋಪಕರಣ ಮತ್ತು ಇತರೆ ವಸ್ತುಗಳ ಖರೀದಿಸಲು ಅಗತ್ಯವಿದೆ ಎಂದು ವರದಿಯಲ್ಲಿ ಹೇಳಿತ್ತು.

ಸಭೆಯಲ್ಲಿ ಸಚಿವರಾದ ಡಾ.ಎಂ.ಸಿ.ಸುಧಾಕರ್, ಡಾ.ಶರಣ್ ಪ್ರಕಾಶ್ ಪಾಟೀಲ, ಡಾ.ಎಚ್.ಸಿ.ಮಹದೇವಪ್ಪ, ಎಚ್.ಕೆ.ಪಾಟೀಲ ಅವರು ಇದ್ದರು.

ಬೆಂಗಳೂರಿಗೆ ಇಂದು ರಾಷ್ಟ್ರಪತಿ

ಪ್ರಜಾವಾಣಿ ವಾರ್ತೆ



ರಾಮನಗರ: ಮೂರು ದಿನಗಳ 10ನೇ ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲಿ ಭಾಗ ವಹಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಶುಕ್ರವಾರ ಬೆಂಗಳೂರಿಗೆ ಆಗಮಿಸಲಿದ್ದಾರೆ.

ಬೆಂಗಳೂರು–ಕನಕಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರದಲ್ಲಿ ಶುಕ್ರವಾರದಿಂದ ಆರಂಭವಾಗಲಿರುವ ಸಮ್ಮೇಳನವನ್ನು ದ್ರೌಪದಿ ಮುರ್ಮು ಉದ್ಘಾಟಿಸಲಿದ್ದಾರೆ.

ಶ್ರೀ ಶ್ರೀ ರವಿಶಂಕರ ಗುರೂಜಿ ನೇತೃತ್ವದಲ್ಲಿ ಫೆ. 16ರವರೆಗೆ ಸಮ್ಮೇಳನ ನಡೆಯಲಿದ್ದು, ವಿವಿಧ ರಾಜ್ಯಗಳ ಗಣ್ಯರು ಭಾಗವಹಿಸಲಿದ್ದಾರೆ. ವಿವಿಧ ಕ್ಷೇತ್ರಗಳ ತಜ್ಞರು ಹಾಗೂ ಸಾಧಕರು ವಿಷಯ ಮಂಡಿಸಲಿದ್ದಾರೆ.

ಅಮೆರಿಕದ ಪತನ ಸನ್ನಿಹಿತ:ಅಯ್ಯರ್

ಪ್ರಜಾವಾಣಿ ವಾರ್ತೆ

ಆನೇಕಲ್: ಜಾಗತಿಕ ಶಕ್ತಿಯಾಗಿ ಉತ್ತುಂಗದಲ್ಲಿರುವ ಅಮೆರಿಕದ ಅವನತಿಯ ಹಂತ ತಲುಪಿಯಾಗಿದೆ. ಪಾಶ್ಚಾತ್ಯ ಸಾಮ್ರಾಜ್ಯದ ಅವನತಿಯ ನಂತರ ಏಷ್ಯಾ ಆ ಸ್ಥಾನ ತುಂಬುವ ಎಲ್ಲ ಸಾಮರ್ಥ್ಯ ಹೊಂದಿದೆ ಎಂದು ಕೇಂದ್ರ ಮಾಜಿ ಸಚಿವ, ಕಾಂಗ್ರೆಸ್ ಮುಖಂಡ ಮಣಿಶಂಕರ್ ಅಯ್ಯರ್ ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರಿನ ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ಗುರುವಾರ ಆರಂಭವಾದ ಮೂರು ದಿನಗಳ ಸಾಹಿತ್ಯ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಇ.ವಿ ವಾಹನಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ವತಿಯಿಂದ ಶಬ್ದ ಮತ್ತು ವಾಯುಮಾಲಿನ್ಯ ಗಣನೀಯವಾಗಿ ಕಡಿಮೆ ಮಾಡುವಂತಹ ಪರಿಸರ ಸ್ನೇಹಿ ವಿದ್ಯುತ್ ಚಾಲಿತ ವಾಹನಗಳ (ಇವಿ) ಪ್ರದರ್ಶನ ಮತ್ತು ಸಾಲ ಮೇಳವನ್ನು ಫೆಬ್ರುವರಿ 16ರಂದು ಶಂಕರ್ ನಾಗ್ ಸರ್ಕಲ್‌ನಲ್ಲಿರುವ ಬಿಬಿಎಂಪಿ ಆಟದ ಮೈದಾನ (ಡೊಂಕೊಳ)ದಲ್ಲಿ ಆಯೋಜಿಸಲಾಗಿದೆ.

'ನಿರುದ್ಯೋಗಿ ಯುವಕರು, ಸ್ವಉದ್ಯೋಗ ಮಾಡಲಿಚ್ಛಿಸುವ ಮಹಿಳೆಯರಿಗೆ ಸದುಪಯೋಗವಾಗಲೆಂದು ವಾಹನಗಳ ಪ್ರದರ್ಶನ ಹಾಗೂ ಸಾಲ ಮೇಳ ಆಯೋಜಿಸಿದ್ದು, ಎಲ್ಲಾ ವಾಹನಗಳಿಗೆ ಆಕರ್ಷಕ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸಲಾಗುವುದು' ಎಂದು ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಂ.ಆರ್.ವೆಂಕಟೇಶ್ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಲಿದ್ದು, ಸಾರಿಗೆ ಸಚಿವ ರಾಮಲಿಂಗರೆಡ್ಡಿ, ಸಂಸದ ತೇಜಸ್ವಿಸೂರ್ಯ, ಶಾಸಕ ರವಿಸುಬ್ರಮಣ್ಯ ಭಾಗವಹಿಸಲಿದ್ದಾರೆ ಎಂದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ವಿರೋಧಿಸಿ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು' ಪ್ರಾಧಿಕಾರದ ರಚನೆಯನ್ನು ವಿರೋಧಿಸಿ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಬಿಜೆಪಿ ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಹರೀಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಬಿಎಂಪಿಗೆ ಕೂಡಲೇ ಚುನಾವಣೆ ನಡೆಸಬೇಕು' ಎಂದು ಒತ್ತಾಯಿಸಿದರು.

'ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮೂಲಕ ಬೆಂಗಳೂರಿನ ಉದ್ಧಾರ ಸಾಧ್ಯವಿಲ್ಲ. 'ನಿಮ್ಮ ಬೆಂಗಳೂರು ನಮ್ಮ ಕೊಡುಗೆ' ಎಂದು ಜಾಹೀರಾತಿನಲ್ಲಿ ಹಾಕುತ್ತಾರೆ. ಅವರಿಗೆ 'ನಮ್ಮ ಬೆಂಗಳೂರು' ಎನ್ನಲು ಇಷ್ಟವಿಲ್ಲ; ಬೆಂಗಳೂರಿನಿಂದ ಬರುವ ಆದಾಯ ಮಾತ್ರ ಬೇಕು' ಎಂದು ಅವರು ಟೀಕಿಸಿದರು.

ಬಿಬಿಎಂಪಿ ಚುನಾವಣೆ ಮುಂದೂಡಲು ರಾಜ್ಯ ಸರ್ಕಾರ ನ್ಯಾಯಾಲಯದಲ್ಲಿ ಪ್ರಮಾಣಪತ್ರ ಸಲ್ಲಿಸಲು ಮುಂದಾಗಿದೆ. ಗ್ರೇಟರ್ ಬೆಂಗಳೂರು ರಚನೆಗೆ ಮಸೂದೆ ಮಾಡಿ ಅದನ್ನು ಮಂಜೂರು ಮಾಡಲು ಚರ್ಚೆ ಆರಂಭಿಸಿದ್ದಾರೆ. ನಾಡಪ್ರಭು ಕೆಂಪೇಗೌಡರು ಕಟ್ಟಿದ ಬೆಂಗಳೂರು ವಿಶೇಷ ಇತಿಹಾಸ ಹೊಂದಿದೆ. 1949ರಲ್ಲಿ ಬಿಸಿಸಿ ಅಸ್ತಿತ್ವಕ್ಕೆ ಬಂದಿತು. ಅದಾದ ಬಳಿಕ 1996 ರಲ್ಲಿ 87 ವಿಭಾಗ ಇದ್ದ ಬಿಸಿಸಿಯನ್ನು ಮೇಲ್ದರ್ಜೆಗೆ ಏರಿಸಿದ ಎಚ್.ಡಿ.ದೇವೇಗೌಡರು, 100 ವಾರ್ಡ್‌ಗಳನ್ನು ಮಾಡಿದ್ದರು ಎಂದರು.

2007ರಲ್ಲಿ ಸಮ್ಮಿಶ್ರ ಸರ್ಕಾರ ಇದ್ದಾಗ ಆಗಿನ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ 7 ಸಿಎಂಸಿ, 1 ಟಿಎಂಸಿ, 110 ಹಳ್ಳಿಗಳನ್ನು ಸೇರಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾಡಿ 198 ವಾರ್ಡ್ ರಚಿಸಿದ್ದರು. ಆ ಬಳಿಕ ಎರಡು ಚುನಾವಣೆಗಳು ನಡೆದವು ಎಂದು ಹೇಳಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ (ಗುಭ/ಗುನಿ) ವಿಭಾಗ, ಬೊಮ್ಮನಹಳ್ಳಿ ವಲಯ, ರೂಂ.ಸಂ.101, ಅನೆಕ್ಸ್–3 ಕಟ್ಟಡ, ಬೃಬೆಂಮಪಾ, ಎನ್.ಆರ್.ವೃತ್ತ, ಬೆಂಗಳೂರು–02.

ಸಂ: ಕಾಪಾಅ(ಗುಭ/ಗುನಿ)/ಬೊಹವ/ಟೆಂಡರ್/85/24–25 ದಿನಾಂಕ: 13.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ದ್ವಿ–ಲಕೋಟೆ ಪದ್ಧತಿ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗುಣಮಟ್ಟ ಭರವಸೆ/ಗುಣಮಟ್ಟ ನಿಯಂತ್ರಣ ವಿಭಾಗ, ಬೊಮ್ಮನಹಳ್ಳಿ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬೃಬೆಂಮಪಾ), ಇವರು, ಯೋಜನಾ ನಿರ್ವಹಣೆಗಾಗಿ **ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ** (ಪಿಎಂಸಿ) **ಸೇರಿದಂತೆ ಕನ್ಸಲ್ಟೆನ್ಸಿ ಸೇವೆಗಳಿಗಾಗಿ ಇದೇ ರೀತಿಯ ಕೆಲಸವನ್ನು ಮಾಡಿರುವ ಆಸಕ್ತ ವ್ಯಕ್ತಿಗಳು/ಸಂಸ್ಥೆಗಳಿಂದ** ಈ ಕೆಳಗೆ ತಿಳಿಸಲಾದ ಸೇವೆಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	"ಅಂಜನಾಪುರ ಉಪ ವಿಭಾಗದ ವಾರ್ಡ್ ಸಂಖ್ಯೆ: 206, 207, 208 ಮತ್ತು 209ರ ಪಿಳ್ಳಗನಹಳ್ಳಿ, ಆರ್‌ಬಿಐ ಬಡಾವಣೆ, ನವೋದಯ ನಗರ, ಎನ್‌ಆರ್ ನಗರ, ಹರಿಹರ ನಗರ ಮುಖ್ಯರಸ್ತೆಯಲ್ಲಿ ರಸ್ತೆಗಳು ಹಾಗೂ ಒಳಚರಂಡಿಗಳ ಸುಧಾರಣೆಗಳು" ಕಾಮಗಾರಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನೆಯ ಕನ್ಸಲ್ಟೆನ್ಸಿ ಸೇವೆಗಳನ್ನು ಒದಗಿಸುವುದು. **ಯೋಜನಾ ವೆಚ್ಚ: ರೂ. 300.00 ಲಕ್ಷಗಳು. ಇಎಂಡಿ: ರೂ.7,500/–. ಕಾಲಾವಧಿ:** ಯೋಜನೆ ಪೂರ್ಣಗೊಳ್ಳುವವರೆಗೆ.
2	"ಉತ್ತರಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ: 202, 203, 204 ಮತ್ತು 205ರ ಉತ್ತರಹಳ್ಳಿಯಲ್ಲಿರುವ ಸ್ಮಶಾನದ ಅಭಿವೃದ್ಧಿ ಹಾಗೂ ರಾಮಾಂಜನೇಯ ನಗರ, ಚಿಕ್ಕಲಸಂದ್ರ, ಜೆಹೆಚ್‌ಸಿಎಸ್ ಗುಬ್ಬಲಾಳ, ತುರಹಳ್ಳಿ, ಕುವೆಂಪುನಗರ, ರಾಜ್ಯೋತ್ಸವ ನಗರ ಹಾಗೂ ಯಲಚೇನಹಳ್ಳಿಯಲ್ಲಿ ರಸ್ತೆಗಳು, ಒಳಚರಂಡಿ ಸುಧಾರಣೆಗಳು" ಕಾಮಗಾರಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನೆಯ ಕನ್ಸಲ್ಟೆನ್ಸಿ ಸೇವೆಗಳನ್ನು ಒದಗಿಸುವುದು. **ಯೋಜನಾ ವೆಚ್ಚ: ರೂ. 400.00 ಲಕ್ಷಗಳು. ಇಎಂಡಿ: ರೂ.10,000/–. ಕಾಲಾವಧಿ:** ಯೋಜನೆ ಪೂರ್ಣಗೊಳ್ಳುವವರೆಗೆ.
3	"ಬೇಗೂರು ಉಪ ವಿಭಾಗದ ವಾರ್ಡ್ ಸಂಖ್ಯೆ: 210, 211 ಮತ್ತು 212ರಲ್ಲಿನ ಲಕ್ಷ್ಮೀ ಬಡಾವಣೆ, ಮುನೇಶ್ವರ ಬಡಾವಣೆ ಮತ್ತು ಸುಭಾಷ್ ಚಂದ್ರ ಬೋಸ್ ಬಡಾವಣೆ, ರಾಯಲ್ ಕಾಂಟಿ ಮುಖ್ಯ ರಸ್ತೆ ಹಾಗೂ ವೆಂಕಟೇಶ್ವರ ಬಡಾವಣೆಯಲ್ಲಿ ರಸ್ತೆಗಳು, ಒಳಚರಂಡಿಗಳ ಸುಧಾರಣೆಗಳು" ಕಾಮಗಾರಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನೆಯ ಕನ್ಸಲ್ಟೆನ್ಸಿ ಸೇವೆಗಳನ್ನು ಒದಗಿಸುವುದು. **ಯೋಜನಾ ವೆಚ್ಚ: ರೂ. 300.00 ಲಕ್ಷಗಳು. ಇಎಂಡಿ: ರೂ.7,500/–. ಕಾಲಾವಧಿ:** ಯೋಜನೆ ಪೂರ್ಣಗೊಳ್ಳುವವರೆಗೆ.
4	"ಕೂಡ್ಲು ವಾರ್ಡ್ ಸಂಖ್ಯೆ 225ರಲ್ಲಿನ ಟ್ರಾಪಿಕಲ್ ಪ್ಯಾರಡೈಸ್ ಬಡಾವಣೆ, ಮಾರುತಿ ಬಡಾವಣೆ, ಪ್ರಭು ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತಗಳು ಹಾಗೂ ಒಳಚರಂಡಿಗಳ ಸುಧಾರಣೆ" ಕಾಮಗಾರಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನೆಯ ಕನ್ಸಲ್ಟೆನ್ಸಿ ಸೇವೆಗಳನ್ನು ಒದಗಿಸುವುದು. **ಯೋಜನಾ ವೆಚ್ಚ: ರೂ. 500.00 ಲಕ್ಷಗಳು. ಇಎಂಡಿ: ರೂ.12,500/–. ಕಾಲಾವಧಿ:** ಯೋಜನೆ ಪೂರ್ಣಗೊಳ್ಳುವವರೆಗೆ.

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ದಾಖಲೆಗಳನ್ನು ಇ–ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **15.02.2025ರಿಂದ**. 2) ಪೂರ್ವಭಾವಿ ಸಭೆಯನ್ನು ದಿನಾಂಕ: **18.02.2025 ಬೆಳಿಗ್ಗೆ 11:30 ಗಂಟೆಗೆ** ಕಾರ್ಯಪಾಲಕ ಅಭಿಯಂತರರ (ಗುಭ/ಗುನಿ) ಕಚೇರಿ, ರೂಂ.ಸಂ. 101, ಅನೆಕ್ಸ್–3 ಕಟ್ಟಡ, ಬೃಬೆಂಮಪಾ, ಎನ್.ಆರ್.ಚೌಕ, ಬೆಂಗಳೂರು–560002, ಇಲ್ಲಿ ನಡೆಸಲಾಗುವುದು. 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **25.02.2025 ರ ಸಂಜೆ 4:00 ಗಂಟೆವರೆಗೆ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **27.02.2025ರ ಬೆಳಿಗ್ಗೆ 11:30 ಗಂಟೆಗೆ.** 5) ಟೆಂಡರ್‌ನ ಮಾನ್ಯತೆ: ಟೆಂಡರ್‌ಗಳನ್ನು ಸ್ವೀಕರಿಸಿದ ದಿನಾಂಕದಿಂದ 90 ದಿವಸಗಳು.

ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಗುಭ/ಗುನಿ–ಬೊಮ್ಮನಹಳ್ಳಿ ವಲಯ, ಬೃಬೆಂಮಪಾ

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂ.ಮ.ಪ್ರಾ
ಎಲ್.ಆರ್.ಡಿ.ಇ ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 2226 3479

ಸಂಖ್ಯೆ : STRRPA/TP/CLU/166/2024-25 ದಿನಾಂಕ: 13.02.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು "ಕೈಗಾರಿಕೆ" ವಲಯದಿಂದ "ವಸತಿ" ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಜಿ. ಸರ್ವೇಶ್ ಬಿನ್ ಗೋವಿಂದಾಚಾರ್ ಇವರ ಪರವಾಗಿ ಜಿಪಿ ಎದಾರರಾದ ಮೆ॥ ಚಾಣಕ್ಯ ವೆಂಚರ್ಸ್ ಇದರ ಪಾರ್ಟ್‌ನರ್ ಆದ ಶ್ರೀ ಮುರಳಿರೆಡ್ಡಿ ಅಂಕಿರೆಡ್ಡಿ, ನಂ.785/10, 1ನೇ ಮಹಡಿ, 14ನೇ ಅಡ್ಡರಸ್ತೆ, ಕೆ.ಆರ್. ರಸ್ತೆ, ಜಯನಗರ್ 7ನೇ ಬ್ಲಾಕ್, ಬೆಂಗಳೂರು–560 082.	ಆನೇಕಲ್	ಅತ್ತಿಬೆಲೆ	ಮಂಚನಹಳ್ಳಿ	40/5	3-04	ಕೈಗಾರಿಕೆ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ ಬರುತ್ತಿದ್ದು, ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತೇವೆ ಆದ್ದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ಕೈಗಾರಿಕೆ ವಲಯ' ದಿಂದ 'ವಸತಿ' ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಇರುವುದಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು (ಅ.ಪ್ರ)
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ, ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

DIPR/CP/RO5030/AAPL/2024-25

ರಾಷ್ಟ್ರೀಯ ಕಂಪನಿ ಕಾನೂನು ಗೌರವಾನ್ವಿತ ನ್ಯಾಯಾಧಿಕರಣದ ಮುಂದೆ
ಬೆಂಗಳೂರು ಪೀಠ, ಬೆಂಗಳೂರು
C.A.(CAA) ನಂ. 47/BB/2024
(ಕಂಪನಿ ಕಾಯಿದೆ, 2013 ರ ಸೆಕ್ಷನ್ 230-232 ಅಡಿಯಲ್ಲಿ)
ಕಂಪನಿಗಳ ಕಾಯಿದೆ, 2013 ರ ವಿಷಯದಲ್ಲಿ
ಮತ್ತು
ಅಮೆಜಾನ್ ಟ್ರಾನ್ಸ್ಫರ್ಮೇಶನ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಅಮೆಜಾನ್ ಸೆಲ್ಲರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಅವರ ಸಂಬಂಧಿತ ಷೇರುದಾರರು ಮತ್ತು ಕ್ರೆಡಿಟ್ ನಡುವಿನ ಸಂಯೋಜನೆಯ ಯೋಜನೆಯ ವಿಷಯದಲ್ಲಿ
ಮತ್ತು

ಈ ವಿಷಯದಲ್ಲಿ:
ಅಮೆಜಾನ್ ಟ್ರಾನ್ಸ್ಫರ್ಮೇಶನ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್, ಕಂಪನಿಗಳ ಕಾಯಿದೆ, 1956 ರ ನಿಬಂಧನೆಗಳ ಅಡಿಯಲ್ಲಿ ಸಂಘಟಿತವಾದ ಖಾಸಗಿ ಲಿಮಿಟೆಡ್ ಕಂಪನಿ, ಅದರ ನೋಂದಾಯಿತ ಕಚೇರಿ ನಂ. 26/1, ಬ್ರಿಗೇಡ್ ಗೇಟ್‌ವೇ, ವರ್ಲ್ಡ್ ಟ್ರೇಡ್ ಸೆಂಟರ್, 8 ನೇ ಮತ್ತು 10 ನೇ ಮಹಡಿ, ಡಾ. ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಂ (W), ಬೆಂಗಳೂರು, ಕರ್ನಾಟಕ- 560 055
...ವರ್ಗಾವಣೆದಾರ ಕಂಪನಿ/ಅರ್ಜಿದಾರ ಕಂಪನಿ 1
ಮತ್ತು
ಅಮೆಜಾನ್ ಸೆಲ್ಲರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್, ಕಂಪನಿಗಳ ಕಾಯಿದೆ, 1956 ರ ಅಡಿಯಲ್ಲಿ ಸಂಘಟಿತವಾದ ಕಂಪನಿ, 8ನೇ ಮಹಡಿ, ಬ್ರಿಗೇಡ್ ಗೇಟ್‌ವೇ 26/1 ಡಾ. ರಾಜ್‌ಕುಮಾರ್ ರಸ್ತೆ, ಬೆಂಗಳೂರು, ಕರ್ನಾಟಕ - 560055 ನಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿದೆ.
...ವರ್ಗಾವಣೆಗೊಂಡ ಕಂಪನಿ/ಅರ್ಜಿದಾರ ಕಂಪನಿ 2

ಈಕ್ವಿಟಿ ಶೇರ್‌ಹೋಲ್ಡರ್‌ಗಳ ವಿತರಣೆಯ ಸಭಾ ಸೂಚನೆ
ಅಮೆಜಾನ್ ಟ್ರಾನ್ಸ್ಫರ್ಮೇಶನ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್

ಅಮೆಜಾನ್ ಟ್ರಾನ್ಸ್ಫರ್ಮೇಶನ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ("ವರ್ಗಾವಣೆದಾರ ಕಂಪನಿ") ನ ಈಕ್ವಿಟಿ ಷೇರುದಾರರ ವಿತರಣಾ ಸಭೆಗೆ ಕಂಪನಿ ಕಾಯ್ದೆ, 2013 ರ ಸೆಕ್ಷನ್ 230 ರಿಂದ 232 ರ ಅಡಿಯಲ್ಲಿ **C.A.(CAA) No. 47/BB/2024 ರಲ್ಲಿ ಫೆಬ್ರವರಿ 5, 2025** ರ ಆದೇಶದ ಅನುಸಾರವಾಗಿ ಮತ್ತು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣದ ಗೌರವಾನ್ವಿತ ಬೆಂಗಳೂರು ಪೀಠದ ಆದೇಶದಂತೆ ಈ ಮೂಲಕ ಸೂಚನೆ ನೀಡಲಾಗಿದೆ.

ವರ್ಗಾವಣೆದಾರ ಕಂಪನಿಯಲ್ಲಿ ಯಾವುದೇ ಸುರಕ್ಷಿತ ಸಾಲಗಾರ / creditors ಇಲ್ಲದ ಕಾರಣ, ಗೌರವಾನ್ವಿತ ನ್ಯಾಯಮಂಡಳಿಯು ವರ್ಗಾವಣೆದಾರ ಕಂಪನಿಯ ಸುರಕ್ಷಿತ ಸಾಲಗಾರರ / creditors ಸಭೆಯನ್ನು ಕರೆಯಲು ಯಾವುದೇ ಅವಕಾಶವಿಲ್ಲ ಎಂದು ಹೇಳಿದೆ.

ದಿನಾಂಕ : ಫೆಬ್ರವರಿ 14, 2025
ಸ್ಥಳ : ಬೆಂಗಳೂರು
ಗೆ, **ಅಮೆಜಾನ್ ಟ್ರಾನ್ಸ್ಫರ್ಮೇಶನ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್**
ಸಹಿ/- ಪ್ರತಿನಿಧಿಸುವವರು ಅವರ ವಕೀಲರುಗಳು,
ಎಝುಡ್‌ಬಿ & ಪಾರ್ಟನರ್ಸ್
37 ಕನ್ನಿಂಗ್‌ಹ್ಯಾಂ, 5ನೇ ಮಹಡಿ
ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು - 560052

ರಾಷ್ಟ್ರೀಯ ಕಂಪನಿ ಕಾನೂನು ಗೌರವಾನ್ವಿತ ನ್ಯಾಯಾಧಿಕರಣದ ಮುಂದೆ
ಬೆಂಗಳೂರು ಪೀಠ, ಬೆಂಗಳೂರಿನಲ್ಲಿ
C.A.(CAA) ನಂ. 47/BB/2024
(ಕಂಪನಿ ಕಾಯಿದೆ, 2013 ರ ಸೆಕ್ಷನ್ 230-232 ಅಡಿಯಲ್ಲಿ)
ಕಂಪನಿಗಳ ಕಾಯಿದೆ, 2013 ರ ವಿಷಯದಲ್ಲಿ
ಮತ್ತು
ಅಮೆಜಾನ್ ಟ್ರಾನ್ಸ್ಫರ್ಮೇಶನ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಅಮೆಜಾನ್ ಸೆಲ್ಲರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಅವರ ಸಂಬಂಧಿತ ಷೇರುದಾರರು ಮತ್ತು ಕ್ರೆಡಿಟ್ ನಡುವಿನ ಸಂಯೋಜನೆಯ ಯೋಜನೆಯ ವಿಷಯದಲ್ಲಿ
ಮತ್ತು

ಈ ವಿಷಯದಲ್ಲಿ:
ಅಮೆಜಾನ್ ಟ್ರಾನ್ಸ್ಫರ್ಮೇಶನ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್, ಕಂಪನಿಗಳ ಕಾಯಿದೆ, 1956 ರ ನಿಬಂಧನೆಗಳ ಅಡಿಯಲ್ಲಿ ಸಂಘಟಿತವಾದ ಖಾಸಗಿ ಲಿಮಿಟೆಡ್ ಕಂಪನಿ, ಅದರ ನೋಂದಾಯಿತ ಕಚೇರಿಯನ್ನು ನಂ. 26/1, ಬ್ರಿಗೇಡ್ ಗೇಟ್‌ವೇ, ವರ್ಲ್ಡ್ ಟ್ರೇಡ್ ಸೆಂಟರ್, 8 ನೇ ಮತ್ತು 10 ನೇ ಮಹಡಿ, ಡಾ. ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಂ (W), ಬೆಂಗಳೂರು, ಕರ್ನಾಟಕ- 560055
...ವರ್ಗಾವಣೆದಾರ ಕಂಪನಿ / ಅರ್ಜಿದಾರ ಕಂಪನಿ 1
ಮತ್ತು
ಅಮೆಜಾನ್ ಸೆಲ್ಲರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್, ಕಂಪನಿಗಳ ಕಾಯಿದೆ, 1956 ರ ಅಡಿಯಲ್ಲಿ ಸಂಘಟಿತವಾದ ಕಂಪನಿ, 8ನೇ ಮಹಡಿ, ಬ್ರಿಗೇಡ್ ಗೇಟ್‌ವೇ 26/1 ಡಾ. ರಾಜ್‌ಕುಮಾರ್ ರಸ್ತೆ, ಬೆಂಗಳೂರು, ಕರ್ನಾಟಕ - 560055 ನಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿದೆ.
...ವರ್ಗಾವಣೆಗೊಂಡ ಕಂಪನಿ/ಅರ್ಜಿದಾರ ಕಂಪನಿ 2

ಅಮೆಜಾನ್ ಸೆಲ್ಲರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್‌ನ ಈಕ್ವಿಟಿ ಶೇರ್‌ಹೋಲ್ಡರ್‌ಗಳ ಸಭೆಗಳ ವಿತರಣೆಯ ಸೂಚನೆ

ಅಮೆಜಾನ್ ಸೆಲ್ಲರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ("ವರ್ಗಾವಣೆಗೊಂಡ") ನ ಈಕ್ವಿಟಿ ಷೇರುದಾರರ ವಿತರಣ ಸಭೆಗೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ ಗೌರವಾನ್ವಿತ ಬೆಂಗಳೂರು ಪೀಠವು ನಿರ್ದೇಶಿಸಿದಂತೆ, ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 230 ರಿಂದ 232 ರ ಅಡಿಯಲ್ಲಿ **C.A.(CAA) ಸಂಖ್ಯೆ 47/BB/2024 ರಲ್ಲಿ ಫೆಬ್ರವರಿ 5, 2025** ರ ಆದೇಶದ ಅನುಸಾರವಾಗಿ ಈ ಮೂಲಕ ಸೂಚನೆ ನೀಡಲಾಗಿದೆ.

ವರ್ಗಾವಣೆಗೊಂಡ ಕಂಪನಿಯಲ್ಲಿ ಯಾವುದೇ ಸುರಕ್ಷಿತ ಸಾಲಗಾರರಿಲ್ಲದ ಕಾರಣ, ಗೌರವಾನ್ವಿತ ನ್ಯಾಯ ಮಂಡಳಿಯು ವರ್ಗಾವಣೆಗೊಂಡ ಕಂಪನಿಯ ಸುರಕ್ಷಿತ ಸಾಲಗಾರರ ಸಭೆಯನ್ನು ಕರೆಯಲು ಯಾವುದೇ ಅವಕಾಶವಿಲ್ಲ ಎಂದು ಹೇಳಿದೆ.

ದಿನಾಂಕ : ಫೆಬ್ರವರಿ 14, 2025
ಸ್ಥಳ : ಬೆಂಗಳೂರು
ಗೆ, **ಅಮೆಜಾನ್ ಸೆಲ್ಲರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್**
ಸಹಿ/- ಪ್ರತಿನಿಧಿಸುವವರು ಅವರ ವಕೀಲರುಗಳು,
ಎಝುಡ್‌ಬಿ & ಪಾರ್ಟನರ್ಸ್
37 ಕನ್ನಿಂಗ್‌ಹ್ಯಾಂ, 5ನೇ ಮಹಡಿ
ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು - 560052

ಪುರಸಭಾ ಕಾರ್ಯಾಲಯ
ಬಂಗಾರಪೇಟೆ

ಸಂಖ್ಯೆ:ಪುಸಬಂ/ತಾಂತ್ರಿಕ/ಟೆಂಡರ್08/2024–25 ದಿನಾಂಕ:11.02.2025

ಟೆಂಡರ್ ಪ್ರಕಟಣೆ

ಬಂಗಾರಪೇಟೆ ಪುರಸಭೆಯ ಕಛೇರಿ ಉಪಯೋಗಕ್ಕಾಗಿ ಬಾಡಿಗೆ ಆಧಾರದ ಮೇಲೆ ವಾಹನವನ್ನು ಒದಗಿಸಲು ಟೆಂಡರ್‌ಗಳನ್ನು ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳ ವಿವರಗಳನ್ನು **https://www.kppp.karnataka.gov.in** ವೆಬ್‌ಸೈಟ್‌ನಿಂದ ಪಡೆಯಬಹುದಾಗಿರುತ್ತದೆ.

ಕ್ರ. ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ)
1	DMA/2024-25/SE4595	4.80	12000/-

(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ **ದಿನಾಂಕ: 17.02.2025ರ ಸಂಜೆ 17:30 ಘಂಟೆಯವರೆಗೆ ಸಲ್ಲಿಸುವುದು. (2)** ಟೆಂಡರ್ ದಾಖಲೆಗಳನ್ನು **https://www.kppp.karnataka.gov.in** ನಲ್ಲಿ ತೆರೆಯುವ **ದಿನಾಂಕ: 19.02.2025ರಂದು ಬೆಳಿಗ್ಗೆ 11.00 ಗಂಟೆಗೆ. (3)** ಹೆಚ್ಚಿನ ಮಾಹಿತಿಗಾಗಿ **https://www.kppp.karnataka.gov.in** ನಲ್ಲಿ ನೋಡಿಕೊಳ್ಳುವುದು.

ಸಹಿ/–	ಸಹಿ/–	ಸಹಿ/–
(ಶ್ರೀ ಎಂ.ಗೋವಿಂದ)	(ಶ್ರೀಮತಿ ಚಂದ್ರವೇಣಿ)	(ಶ್ರೀ ವಿ. ಸತ್ಯನಾರಾಯಣ)
ಅಧ್ಯಕ್ಷರು	ಉಪಾಧ್ಯಕ್ಷರು	ಮುಖ್ಯಾಧಿಕಾರಿ
ಪುರಸಭೆ, ಬಂಗಾರಪೇಟೆ	ಪುರಸಭೆ, ಬಂಗಾರಪೇಟೆ	ಪುರಸಭೆ, ಬಂಗಾರಪೇಟೆ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:468/ಕೆಎಸ್‌ಎಂಸಿಎ/2024–25

ನೈರುತ್ಯ ರೈಲ್ವೆ

ಮಾರುಕಟ್ಟೆ ಅಧ್ಯಯನ ಸಲಹೆಗಾರರನ್ನು ತೊಡಗಿಸಿಕೊಳ್ಳಲು ಆಸಕ್ತಿ ವ್ಯಕ್ತಪಡಿಸುವಿಕೆಗೆ ಸೂಚನೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿದವರು ಈ ಕೆಳಗಿನ ಕೆಲಸಕ್ಕಾಗಿ ಟೆಂಡರ್ ಅನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಮಾರುಕಟ್ಟೆ ಅಧ್ಯಯನಕ್ಕಾಗಿ ಸಲಹೆಗಾರ ನೇಮಕ	ಅನ್ವಯಿಸುವುದಿಲ್ಲ

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:
28–02–2025 ರಂದು 17:00 ಗಂಟೆಗಳವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ ಲಾಗಿನ್ ಮಾಡಿ www.swr.indianrailways.gov.in

ಮುಖ್ಯ ವಾಣಿಜ್ಯ ವ್ಯವಸ್ಥಾಪಕರು/ಪ್ರಯಾಣಿಕ ಸೇವೆಗಳು, ಹುಬ್ಬಳ್ಳಿ
ಪಿಯುಬಿ/778 /ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2024–25

South Western Railway - SWR SWRRLY SWRRLY

ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂಖ್ಯೆ: ಬಿ–ಎಸ್‌ಜಿ–ಪ್ರಾಜೆಕ್ಟ್–ಡಿಡಿ–ಬಿಎಡಬ್ಲ್ಯೂ–ಹೆಚ್‌ಎಎಸ್ ದಿನಾಂಕ: 07.02.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿದವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಅನ್ನು ಆಹ್ವಾನಿಸುತ್ತಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದ ಚಿಕ್ಕ ಬಾಣಾವರ–ನೆಲಮಂಗಲ–ಹಾಸನ ಸೆಕ್ಷನ್‌ನಲ್ಲಿ 130 ಕೆಎಂಪಿಎಚ್‌ಗೆ ವೇಗವನ್ನು ಹೆಚ್ಚಿಸಲು ಡಬಲ್ ಡಿಸ್ಟೆಂಟ್ ಸಿಗ್ನಲ್‌ಗಳನ್ನು ಒದಗಿಸುವುದು.	ರೂ. 3,74,43,371.48/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:
24–02–2025 ರಂದು 11:00 ಗಂಟೆಗಳವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ ಲಾಗಿನ್ ಮಾಡಿ www.swr.indianrailways.gov.in

ಉಪ ಮುಖ್ಯ ಸಿಗ್ನಲ್ ಮತ್ತು ದೂರಸಂಪರ್ಕ ಇಂಜಿನಿಯರ್/ಪ್ರಾಜೆಕ್ಟ್/ಬೆಂಗಳೂರು
ಪಿಯುಬಿ/783/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2024–25

South Western Railway - SWR SWRRLY SWRRLY

COFFEE DAY ENTERPRISES LTD.

Coffee Day — Brewing new possibilities.

Registered Office: 165, R.V. Road, Near Minerva Circle, Bengaluru - 560 004, Karnataka, India.
Tel: + 91 80 4001 2345; **Fax:** + 91 80 4001 2650;
Website: www.coffeeday.com
Corporate Identification Number: L55101KA2008PLC046866

Financial Results for the quarter and nine-months ended 31st December, 2024

Unaudited financial results of Coffee Day Enterprises Limited (Consolidated Information)

(₹ in Crores except per share data)

Particulars	Quarter ended 31st December, 2024 (Unaudited)	Nine-months ended 31st December, 2024 (Unaudited)	Quarter ended 31st December, 2023 (Unaudited)
Total income from operations (net)	285.53	846.41	334.28
Net Profit/(loss) from ordinary activities after tax	(11.46)	(29.04)	75.63
Net Profit/(loss) for the period after tax (after Extraordinary items)	(11.46)	(29.04)	75.63
Equity Share Capital	211.25	211.25	211.25
Reserves (excluding Revaluation Reserve as shown in the Balance Sheet of previous year)			
Earnings Per Share (before extraordinary items) (of ₹ 10/- each)			
Basic :	(0.49)	(1.18)	3.28
Diluted :	(0.49)	(1.18)	3.28
Earnings Per Share (after extraordinary items) (of ₹ 10/- each)			
Basic :	(0.49)	(1.18)	3.28
Diluted :	(0.49)	(1.18)	3.28

Notes:

1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results were reviewed by the Audit Committee and thereafter approved by the Board of Directors in their meeting held on 13th February, 2025 and have been subjected to the Limited review by the Statutory Auditors of the Company.
3. **Unaudited financial results of Coffee Day Enterprises Limited (Standalone Information)**

(₹ in Crores)

Particulars	Quarter ended 31st December, 2024 (Unaudited)	Nine-months ended 31st December, 2024 (Unaudited)	Quarter ended 31st December, 2023 (Unaudited)
Total income from operations (net)	5.54	15.24	5.12
Profit/(loss) before tax and exceptional items	0.74	4.93	(0.08)
Profit/(loss) after tax and exceptional items	0.74	4.93	(0.08)

Place : Bengaluru
Date : 13th February, 2025

For and Behalf of Board of Directors
Malavika Hegde
CEO and Whole Time Director

ಕೆಐಒಸಿಎಲ್ ಲಿಮಿಟೆಡ್
KIOCL LIMITED

(A Government of India Enterprises)
KUDREMUKH

CIN-L13100KA1976GO1002974
Tel. & Fax No. 080-25531525
E-mail: cs@kioclltd.in, www.kioclltd.in

ಡಿಸೆಂಬರ್ 31, 2024 ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು 9 ತಿಂಗಳುಗಳ ಲೆಕ್ಕಪರಿಶೋಧನೆಯಾಗದ ಹಣಕಾಸು ಫಲಿತಾಂಶಗಳ ವರದಿ

13.02.2025 ರಂದು ನಡೆದ ಸಭೆಯಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯು ಡಿಸೆಂಬರ್ 31, 2024 ಕ್ಕೆ ಕೊನೆಗೊಂಡ 3ನೇ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳುಗಳ ಸ್ವತಂತ್ರ ಲೆಕ್ಕಪರಿಶೋಧನೆಯಾಗದ ಹಣಕಾಸು ಫಲಿತಾಂಶಗಳನ್ನು ಅನುಮೋದಿಸಿದೆ.

ಸೀಮಿತ ವರದಿಯ ವಿಮರ್ಶೆಯೊಂದಿಗೆ ಫಲಿತಾಂಶಗಳನ್ನು ಕಂಪನಿಯ ವೆಬ್‌ಸೈಟ್ **https://www.kioclltd.in/table.php?id=267** ನಲ್ಲಿ ಪ್ರಕಟಿಸಲಾಗಿದೆ.

ಕ್ವಿಕ್ ರೆಸ್ಪಾನ್ಸ್ (QR) ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಇದನ್ನು ಪ್ರವೇಶಿಸಬಹುದು.

KIOCL ಲಿಮಿಟೆಡ್ ಮಂಡಳಿಯ ಆದೇಶದ ಮೇರೆಗೆ
ಸಹಿ/–
ಬಿನಯ್ ಕೃಷ್ಣ ಮಹಾಪಾತ್ರ
ನಿರ್ದೇಶಕರು (ಹಣಕಾಸು–ಹೆಚ್ಚುವರಿ ಶುಲ್ಕ)
DIN: 09613777

ಸ್ಥಳ: ಬೆಂಗಳೂರು, ಭಾರತ
ದಿನಾಂಕ: 13.02.2025

ಗಮನಿಸಿ: ಮೇಲಿನ ಬಹಿರಂಗಪಡಿಸುವಿಕೆಯು SEBI (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆ) ನಿಬಂಧನೆಗಳು, 2015ರ ನಿಬಂಧನೆ 47(1) ರೊಂದಿಗೆ ಓದಲಾದ ನಿಯಮ 33 ರ ಪ್ರಕಾರ ಇದೆ.

ಶುಕ್ರವಾರ, ಫೆಬ್ರುವರಿ 14, 2025
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಏರೊ ಇಂಡಿಯಾ

ಬೆಂಗಳೂರಿನ ಯಲಹಂಕದ ವಾಯುನೆಲೆಯಲ್ಲಿ ಗುರುವಾರ ನಡೆದ ಏರೊ ಇಂಡಿಯಾ–2025 ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಬಾಲಕ ಕಂಡಿದ್ದು ಹೀಗೆ...



ಅಧಿಕಾರಿಗಳ ಮಧ್ಯೆ ಆತ್ಮೀಯತೆ: ಪತ್ನಿಗೆ ಕೊಲೆ ಬೆದರಿಕೆ 4B
ರಾಷ್ಟ್ರೀಯ ಕ್ರೀಡಾಕೂಟ: ಹರಿಯಾಣ ವನಿತೆಯರಿಗೆ ಚಿನ್ನ
ಟೋಲ್ ಪ್ಲಾಜಾ ಅವ್ಯವಸ್ಥೆ–ಕಿಡಿ 6
ಹಾಕಿ: ಕರ್ನಾಟಕದ ಪುರುಷರಿಗೆ ಪ್ರಶಸ್ತಿ 11

ಅಮೆರಿಕ ಪ್ರವಾಸದಲ್ಲಿ ಪ್ರಧಾನಿ ಮೋದಿ • ಗಬಾರ್ಡ್ ಸೇರಿ ಪ್ರಮುಖ ನಾಯಕರೊಂದಿಗೆ ಚರ್ಚೆ

ಭಯೋತ್ಪಾದನೆ ನಿಗ್ರಹಕ್ಕೆ ಪಣ

ವಾಷಿಂಗ್ಟನ್ (ಪಿಟಿಐ): ಭಯೋತ್ಪಾದನೆ ವಿರುದ್ಧದ ಹೋರಾಟ, ರಕ್ಷಣಾ ಸಹಕಾರ ವೃದ್ಧಿ ಸೇರಿದಂತೆ ವಿವಿಧ ವಿಚಾರಗಳಲ್ಲಿ ಅಮೆರಿಕ ಮತ್ತು ಭಾರತ ನಡುವಿನ ಪಾಲುದಾರಿಕೆ ಹೆಚ್ಚಿಸುವ ಕುರಿತು ಪ್ರಧಾನಿ ನರೇಂದ್ರ ಮೋದಿ ಅಮೆರಿಕದ ಪ್ರಮುಖ ನಾಯಕರೊಂದಿಗೆ ಚರ್ಚೆ ನಡೆಸಿದರು.

ಫ್ರಾನ್ಸ್ ಪ್ರವಾಸದ ಬಳಿಕ ಅಮೆರಿಕಕ್ಕೆ ಎರಡು ದಿನಗಳ ಪ್ರವಾಸ ಕೈಗೊಂಡಿರುವ ಮೋದಿ ಅವರು, ಮೊದಲಿಗೆ ಅಮೆರಿಕದ ರಾಷ್ಟ್ರೀಯ ಗುಪ್ತಚರದ ನಿರ್ದೇಶಕಿ ತುಳಸಿ ಗಬಾರ್ಡ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಭಾರತ ಮೂಲದ ತುಳಸಿ ಅವರು ಅಮೆರಿಕದ ರಾಷ್ಟ್ರೀಯ ಗುಪ್ತಚರ ಸಂಸ್ಥೆಯ ನಿರ್ದೇಶಕರಾಗಿ ಬುಧವಾರವಷ್ಟೇ ಅಧಿಕಾರ ಸ್ವೀಕರಿಸಿದ್ದರು. ಅತ್ಯುನ್ನತ ಹುದ್ದೆ ಅಲಂಕರಿಸಿದ ತುಳಸಿ ಅವರನ್ನು ಮೋದಿ ಇದೇ ವೇಳೆ ಅಭಿನಂದಿಸಿದರು.

'ಭಯೋತ್ಪಾದನೆ ನಿಗ್ರಹ ಮತ್ತು ಹೊಸ ಬಗೆಯ ಬೆದರಿಕೆಗಳ ವಿರುದ್ಧ ಉಭಯ ದೇಶಗಳ ನಡುವೆ ಗುಪ್ತಚರ



ಅಮೆರಿಕದ ರಾಷ್ಟ್ರೀಯ ಗುಪ್ತಚರ ನಿರ್ದೇಶಕರಾದ ತುಳಸಿ ಗಬಾರ್ಡ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ವಾಷಿಂಗ್ಟನ್‌ನಲ್ಲಿ ಮಾತುಕತೆ ನಡೆಸಿದರು – ಪಿಟಿಐ ಚಿತ್ರ

ಸಹಕಾರ ವೃದ್ಧಿ, ಸೈಬರ್ ಭದ್ರತೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಉಭಯ ನಾಯಕರು ಚರ್ಚಿಸಿದರು' ಎಂದು ಭಾರತ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಮೈಕೆಲ್ ವಾಲ್ಟ್ಜ ಅವರೊಂದಿಗೆ ನಡೆಸಿದ ಸಭೆ ಫಲಪ್ರದಲಾಯಿತು. ಅವರು ಭಾರತದ ಉತ್ತಮ ಸ್ನೇಹಿತರಾಗಿದ್ದಾರೆ' ಎಂದು ಮೋದಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

4D ಪುಟ ನೋಡಿ

ಮೋದಿಗೆ ಭವ್ಯ ಸ್ವಾಗತ.. ಜೈಕಾರ

ಫ್ರಾನ್ಸ್ ಪ್ರವಾಸದ ಬಳಿಕ ಅಮೆರಿಕಕ್ಕೆ ಎರಡು ದಿನಗಳ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ವಾಷಿಂಗ್ಟನ್‌ಗೆ ಬಂದಿಳಿದಾಗ, ಅವರಿಗೆ ಭಾರತೀಯ ಸಮುದಾಯದವರಿಂದ ಭವ್ಯ ಸ್ವಾಗತ ದೊರೆಯಿತು.

ಅಮೆರಿಕದ ರಾಷ್ಟ್ರೀಯ ಗುಪ್ತಚರ ನಿರ್ದೇಶಕಿ ತುಳಸಿ ಗಬಾರ್ಡ್ ಅವರು ಭಾರತ– ಅಮೆರಿಕ ಬಾಂಧವ್ಯದ ಪರ ಗಟ್ಟಿ ಧ್ವನಿಯಾಗಿದ್ದಾರೆ
ನರೇಂದ್ರ ಮೋದಿ, ಪ್ರಧಾನಿ

ಅಮೆರಿಕ ಅಧ್ಯಕ್ಷರ ಅತಿಥಿ ಗೃಹ 'ಬ್ಲೇರ್ ಹೌಸ್'ನಲ್ಲಿ ಪ್ರಧಾನಿ ಮೋದಿ ಅವರಿಗೆ ತಂಗಲು ವ್ಯವಸ್ಥೆ ಕಲ್ಪಿಸಲಾಗಿದೆ.

ಕೊರೆಯುವ ಚಳಿ ನಡುವೆಯೂ ಭಾರತೀಯ ಸಮುದಾಯದ ಹಲವರು ಅತಿಥಿ ಗೃಹದ ಬಳಿ ಜಮಾಯಿಸಿ, ಮೋದಿ ಅವರಿಗೆ ಭವ್ಯ ಸ್ವಾಗತ ನೀಡಿದರು. ಭಾರತ ಮತ್ತು ಅಮೆರಿಕದ ಧ್ವಜಗಳನ್ನು ಹಿಡಿದು, 'ಭಾರತ್ ಮಾತಾ ಕಿ ಜೈ', 'ವಂದೇ ಮಾತರಂ' ಮತ್ತು 'ಮೋದಿ ಮೋದಿ' ಎಂದು ಘೋಷಣೆಗಳನ್ನು ಕೂಗಿದರು. ಬಳಿಕ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಮೋದಿ ಅವರು, ಭಾರತೀಯ ಸಮುದಾಯದವರು ನನ್ನನ್ನು ಅತ್ಯಂತ ವಿಶೇಷವಾಗಿ ಬರಮಾಡಿಕೊಂಡಿದ್ದಾರೆ. ಅವರಿಗೆ ಕೃತಜ್ಞತೆಗಳು' ಎಂದು ಹೇಳಿದ್ದಾರೆ.

ಟ್ರಂಪ್ ಅವರು ಕಳೆದ ತಿಂಗಳು ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಅಮೆರಿಕಕ್ಕೆ ಭೇಟಿ ನೀಡಿದ ಜಾಗತಿಕ ನಾಯಕರ ಪೈಕಿ ನರೇಂದ್ರ ಮೋದಿ ನಾಲ್ಕನೆಯವರು. ಇದಕ್ಕೂ ಮುನ್ನ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಜಪಾನ್ ಪ್ರಧಾನಿ ಶಿಗೆರು ಇಶಿಬಾ ಮತ್ತು ಜೋರ್ಡನ್ ದೊರೆ ಎರಡನೇ ಅಬ್ದುಲ್ಲಾ ಅವರು ಭೇಟಿ ನೀಡಿದ್ದರು.

ಮೊದಲು ಆದೇಶ ಜಾರಿ ತನ್ನಿ

ಟಿಡಿಆರ್ ಪಾವತಿ: ರಾಜ್ಯ ಸರ್ಕಾರಕ್ಕೆ 'ಸುಪ್ರೀಂ' ತಾಕೀತು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಆದೇಶ ಪಾಲಿಸದಿದ್ದರೆ ನಿಮ್ಮ ಅಧಿಕಾರಿಗಳು ತೊಂದರೆಗೆ ಸಿಲುಕಲಿದ್ದಾರೆ: ಸುಪ್ರೀಂ ಎಚ್ಚರಿಕೆ
- ಸುಗ್ರೀವಾಜ್ಞೆ ಜಾರಿಗೆ ಬಂದು ಕಾನೂನು ಆಗಿದೆ. ಹೀಗಾಗಿ, ಟಿಡಿಆರ್ ನೀಡಲು ಸಾಧ್ಯವಿಲ್ಲ: ರಾಜ್ಯ ಸರ್ಕಾರದ ಪ್ರತಿಪಾದನೆ



ನವದೆಹಲಿ: ಬೆಂಗಳೂರಿನ ಜಯಮಹಲ್ ಹಾಗೂ ಬಳ್ಳಾರಿ ರಸ್ತೆ ವಿಸ್ತರಣೆಗಾಗಿ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಅರಮನೆ ಮೈದಾನದ ಭೂಮಿಗೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಕಾನೂನುಬದ್ಧ ಉತ್ತರಾಧಿಕಾರಿಗೆ ಕರ್ನಾಟಕ ಮುದ್ರಾಂಕ ಕಾಯ್ದೆ ಪ್ರಕಾರ ಅಭಿವೃದ್ಧಿ ಹಕ್ಕುಗಳ ವರ್ಗಾವಣೆ (ಟಿಡಿಆರ್) ಮಾಡುವ ಹಿಂದಿನ ಆದೇಶವು ರಾಜಿ ಸಂಧಾನಕ್ಕೆ ಒಳಪಡುವುದಿಲ್ಲ ಹಾಗೂ ಅದನ್ನು ಜಾರಿಗೆ ತರಬೇಕು ಎಂದು ಸುಪ್ರೀಂ ಕೋರ್ಟ್ ನ್ಯಾಯಪೀಠವು ಕರ್ನಾಟಕ ಸರ್ಕಾರಕ್ಕೆ ಗುರುವಾರ ಸೂಚಿಸಿತು.

'ನಾವು ಈ ಹಿಂದೆ ಆದೇಶ ಹೊರಡಿಸಿದ್ದೇವೆ. ಈ ಆದೇಶವು ರಾಜಿ ಸಂಧಾನಕ್ಕೆ ಒಳಪಡುವುದಿಲ್ಲ. ಆದೇಶ ಜಾರಿಗೊಳಿಸದಿದ್ದರೆ ನಿಮ್ಮ ಅಧಿಕಾರಿಗಳು ತೊಂದರೆಗೆ ಸಿಲುಕಲಿದ್ದಾರೆ' ಎಂದು ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಹಾಗೂ ಅರವಿಂದ್ ಕುಮಾರ್ ಅವರ ಪೀಠವು ಹಿರಿಯ ವಕೀಲ ಕಪಿಲ್ ಸಿಬಲ್ ಮತ್ತು ಕರ್ನಾಟಕದ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರಿಗೆ ಮೌಖಿಕವಾಗಿ ತಿಳಿಸಿತು. 'ರಾಜ್ಯ ಸರ್ಕಾರವು ಸುಗ್ರೀವಾಜ್ಞೆ ಹೊರಡಿಸಿದೆ ಮತ್ತು ವಿವಾದಿತ ಜಾಗವನ್ನು ಬಳಸದಿರಲು ನಿರ್ಧರಿಸಿದೆ' ಎಂದು ರಾಜ್ಯ ಸರ್ಕಾರದ ಪರ ವಕೀಲರು ವಾದಿಸಿದರು.

'ನಾವು ಭೂಸ್ವಾಧೀನ ಪ್ರಕ್ರಿಯೆ ಕೈಬಿಡಲು ತೀರ್ಮಾನಿಸಿದ್ದೇವೆ. ಆ ಜಾಗವನ್ನು ಸ್ವಾಧೀನಪಡಿಸಲು ಸರ್ಕಾರ ಬಯಸುತ್ತಿಲ್ಲ. ಸುಗ್ರೀವಾಜ್ಞೆ ಜಾರಿಗೆ ಬಂದು ಕಾನೂನು ಆಗಿದೆ. ಹೀಗಾಗಿ, ಟಿಡಿಆರ್ ನೀಡಲು ಸಾಧ್ಯವಿಲ್ಲ' ಎಂದು ಸಿಬಲ್ ವಾದಿಸಿದರು.

ಅರ್ಜಿದಾರರ ಪರವಾಗಿ ಹಾಜರಿದ್ದ ಹಿರಿಯ ವಕೀಲರಾದ ಎ.ಕೆ. ಗಂಗೂಲಿ, ಮಾಧವಿ ದಿವಾನ್ ಮತ್ತು ಗೋಪಾಲ್ ಶಂಕರ ನಾರಾಯಣನ್, 'ರಾಜ್ಯ ಸರ್ಕಾರವು ಸುಗ್ರೀವಾಜ್ಞೆ ಹೊರಡಿಸಿರುವುದು ಸುಪ್ರೀಂ ಕೋರ್ಟ್ ಆದೇಶದ ಉಲ್ಲಂಘನೆ. ರಾಜವಂಶಸ್ಥರಿಗೆ ಆರು ವಾರಗಳಲ್ಲಿ ಟಿಡಿಆರ್ ಪಾವತಿಸುವಂತೆ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿತ್ತು. ಆ ಬಳಿಕವಷ್ಟೇ ಸುಗ್ರೀವಾಜ್ಞೆ ಹೊರಡಿಸಲಾಗಿದೆ' ಎಂದು ಗಮನ ಸೆಳೆದರು.

'ರಾಜ್ಯ ಸರ್ಕಾರವು ಈ ಹಿಂದೆಯೇ ಹೈಕೋರ್ಟ್‌ನಲ್ಲಿ ಮೂಲ ಮೇಲ್ಮನವಿ ಸಲ್ಲಿಸಿತ್ತು. ಮುಖ್ಯ ವಿಷಯ ಇನ್ನೂ ನ್ಯಾಯಾಲಯದ ಮುಂದೆ ಇತ್ಯರ್ಥಕ್ಕೆ ಬಾಕಿ ಇದೆ' ಎಂದು ಸಿಬಲ್ ಹೇಳಿದರು.

ವಿಚಾರಣೆ ಸಂದರ್ಭದಲ್ಲಿ ಈ ಎಲ್ಲ ವಿಷಯಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಾಗಿ ಪೀಠ ತಿಳಿಸಿತು. ವಿಚಾರಣೆಯನ್ನು ಎರಡು ವಾರ ಮುಂದೂಡಿತು. ವೈಯಕ್ತಿಕವಾಗಿ ಹಾಜರಿದ್ದ ಬಿಬಿಎಂಪಿ ಮತ್ತು ಬಿಡಿಎ ಆಯುಕ್ತರಿಗೆ ಮುಂದಿನ ವಿಚಾರಣೆಯ ದಿನಾಂಕದಂದು ಮತ್ತೆ ಹಾಜರಾಗುವಂತೆ ಪೀಠ ಸೂಚಿಸಿತು.

ಸುಗ್ರೀವಾಜ್ಞೆ ಹೊರಡಿಸಿದ್ದ ಸರ್ಕಾರ

ಅರಮನೆ ಮೈದಾನ ಪ್ರದೇಶದ ಬಳಕೆ ಮತ್ತು ನಿಯಂತ್ರಣದ ಅಧಿಕಾರವನ್ನು ರಾಜ್ಯ ಸರ್ಕಾರದ ಬಳಿಯೇ ಇಟ್ಟುಕೊಳ್ಳುವ ಉದ್ದೇಶಕ್ಕಾಗಿ ಸುಗ್ರೀವಾಜ್ಞೆ ಹೊರಡಿಸಲು ಸಚಿವ ಸಂಪುಟವು ಇತ್ತೀಚೆಗೆ ತೀರ್ಮಾನಿಸಿತ್ತು.

ಅರಮನೆ ಮೈದಾನ ಒಟ್ಟು 472 ಎಕರೆ 16 ಗುಂಟೆ ಜಾಗ ಹೊಂದಿದೆ. ನ್ಯಾಯಾಂಗ ನಿಂದನೆ ಮತ್ತು ಇತರ ಪ್ರಕರಣಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಡಿಸೆಂಬರ್‌ನಲ್ಲಿ ಆದೇಶ ಹೊರಡಿಸಿತ್ತು. ಆ ಆದೇಶದ ಪ್ರಕಾರ ಕರ್ನಾಟಕ ಸ್ಟ್ಯಾಂಪ್ ಕಾಯ್ದೆಯ ಸೆಕ್ಷನ್ 45 ಬಿ ಗೆ ಅನುಗುಣವಾಗಿ ಅರಮನೆ ಮೈದಾನಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿ ಮೌಲ್ಯಕ್ಕೆ ಅನುಗುಣವಾಗಿ ರಸ್ತೆ ವಿಸ್ತರಣೆ ಉದ್ದೇಶಕ್ಕಾಗಿ ಅರಮನೆ ಜಾಗವನ್ನು ಮೌಲ್ಯೀಕರಿಸಿ, ವರ್ಗಾವಣೆ ಮಾಡಬಹುದಾದ ಟಿಡಿಆರ್ ನೀಡುವಂತೆ ನಿರ್ದೇಶನ ನೀಡಿತ್ತು.

ರಸ್ತೆ ವಿಸ್ತರಣೆ ಉದ್ದೇಶಕ್ಕಾಗಿ ಬಳಕೆಯಾಗುವ 15.36 ಎಕರೆ ಭೂಮಿಗೆ ಪರಿಹಾರವಾಗಿ ₹3,014 ಟಿಡಿಆರ್ ಕೋಟಿ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ನೀಡಿತ್ತು. ಸಣ್ಣ ಜಾಗಕ್ಕೆ ಭಾರಿ ಮೊತ್ತವನ್ನು ಪಾವತಿಸಬೇಕಾದ ಹೊರೆಯಿಂದ ತಪ್ಪಿಸಿಕೊಳ್ಳಲು ಸುಗ್ರೀವಾಜ್ಞೆಯ ಆಸರೆ ಪಡೆಯಲು ಸರ್ಕಾರ ತೀರ್ಮಾನಿಸಿತ್ತು. ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ–1996 ಕ್ಕೆ ಸಂಬಂಧಪಟ್ಟ ಸಿವಿಲ್ ಮೇಲ್ಮನವಿಯನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ಸರ್ಕಾರವು ಇತ್ತೀಚೆಗೆ ಮೇಲ್ಮನವಿ ಸಲ್ಲಿಸಿತ್ತು.



ಕಲ್ಯಾಣ ಮಂಟಪಕ್ಕೆ ನುಗ್ಗಿದ ಚಿರತೆ

ಲಖನೌ (ಪಿಟಿಐ): ಉತ್ತರ ಪ್ರದೇಶದ ಲಖನೌನಲ್ಲಿ ಕಲ್ಯಾಣ ಮಂಟಪಕ್ಕೆ 'ಅಪರೂಪದ ಅತಿಥಿ'ಯಾಗಿ ಚಿರತೆಯೊಂದು ಅನಿರೀಕ್ಷಿತವಾಗಿ ನುಗ್ಗಿದೆ. ಇದರಿಂದಾಗಿ ಮದುವೆಗೆ ಬಂದಿದ್ದ ಸಂಬಂಧಿಕರು ಗಾಬರಿಗೊಂಡು, ಪ್ರಾಣ ಉಳಿಸಿಕೊಳ್ಳಲು ದಿಕ್ಕಾಪಾಲಾಗಿ ಓಡಿಹೋದರು. ಈ ಸಂದರ್ಭದಲ್ಲಿ ವಧು–ವರ ತಾಸುಗಟ್ಟಲೆ ಕಾರಿನೊಳಗೆ ಸೇರಿಕೊಂಡರು.

ಲಖನೌನ ಬುದ್ಧೇಶ್ವರ ರಸ್ತೆಯಲ್ಲಿರುವ ಕಲ್ಯಾಣ ಮಂಟಪದಲ್ಲಿ ಬುಧವಾರ ರಾತ್ರಿ ಮದುವೆ ಸಮಾರಂಭ ನಡೆಯುತ್ತಿತ್ತು. ಆಗ ಮಂಟಪದ ಬ್ಯಾಂಕ್ವೆಟ್ ಹಾಲ್‌ಗೆ ಚಿರತೆ ನುಗ್ಗಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.



ಈ ಕುರಿತು ಮಾಹಿತಿ ಪಡೆದು ಸ್ಥಳಕ್ಕೆ ದೌಡಾಯಿಸಿದ ಅರಣ್ಯ ಇಲಾಖೆ ಮತ್ತು ಪೊಲೀಸ್ ಸಿಬ್ಬಂದಿ, ಮಧ್ಯರಾತ್ರಿ ಸುಮಾರು 2 ಗಂಟೆಯವರೆಗೆ ಕಾರ್ಯಾಚರಣೆ ನಡೆಸಿ, ಚಿರತೆಯನ್ನು ಸೆರೆಹಿಡಿದರು. ಕಾರ್ಯಾಚರಣೆ ವೇಳೆ ಅರಣ್ಯ ಇಲಾಖೆ ಅಧಿಕಾರಿಯೊಬ್ಬರಿಗೆ ಗಾಯವಾಯಿತು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಅರಣ್ಯ ಒತ್ತುವರಿಯಿಂದಾಗಿ ಕಾಡು ಪ್ರಾಣಿಗಳು ಆಹಾರ ಹುಡುಕಿಕೊಂಡು ನಗರ ಪ್ರದೇಶಗಳಿಗೆ ಲಗ್ಗೆ ಇಡುತ್ತಿವೆ. ಇದು ಸಾಮಾನ್ಯ ಜನರ ಜೀವವನ್ನು ಅಪಾಯಕ್ಕೆ ದೂಡಿದೆ
ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ

ಚಿರತೆ ಹಿಡಿಯುವವರೆಗೆ ಬಹುತೇಕರು ಕಾರುಗಳಲ್ಲೇ ಇದ್ದರು ಎಂದು ಅತಿಥಿಯೊಬ್ಬರು ತಿಳಿಸಿದ್ದಾರೆ.

ಪೂರ್ಣಾವಧಿ ಸಿ.ಎಂ: ಮುನ್ನೆಲೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಪಟ್ಟದಲ್ಲಿ ಸಿದ್ದರಾಮಯ್ಯ ಪೂರ್ಣಾವಧಿ ಮುಗಿಸಲಿದ್ದಾರೆ' ಎಂಬ ಕೆಲವು ಸಚಿವರ ಹೇಳಿಕೆಯು ಆಡಳಿತಾರೂಢ ಕಾಂಗ್ರೆಸ್‌ನಲ್ಲಿ 'ಅಧಿಕಾರ ಹಂಚಿಕೆ' ಕುರಿತ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿದೆ.

ಚುನಾವಣಾ ರಾಜಕೀಯದಲ್ಲಿ ಮುಂದುವರಿಯುವ ಸಿದ್ದರಾಮಯ್ಯ ಅವರ ಇಂಗಿತ ಕಾಂಗ್ರೆಸ್‌ನ ಆಂತರಿಕ ರಾಜಕಾರಣದಲ್ಲಿ ಹೊಸ ಚರ್ಚೆಗಳಿಗೆ ಎಡೆ ಮಾಡಿಕೊಟ್ಟಿದೆ. ದೇವರಾಜ ಅರಸು ಅವರ 'ಸುದೀರ್ಘ ಅವಧಿಯ ಮುಖ್ಯಮಂತ್ರಿ' ದಾಖಲೆಯನ್ನು ಅಳಿಸಿ ಹಾಕುವ ನಂಬಿಕೆಯ ಅವರ ಮಾತು ಹೊಸ ಕಿಚ್ಚು ಹಚ್ಚಿದೆ. ಜೊತೆಗೆ, ಅಧಿಕಾರ ಹಂಚಿಕೆ ಅಷ್ಟು ಸುಲಭದ ವಿಷಯವಲ್ಲ ಎಂಬ ಪರೋಕ್ಷ ಸಂದೇಶವನ್ನೂ ರವಾನಿಸಿದೆ.

ಐದು ವರ್ಷ ಮುಖ್ಯಮಂತ್ರಿ: 'ಸಿದ್ದರಾಮಯ್ಯ ಅವರು ದೀರ್ಘಾವಧಿ ಮುಖ್ಯಮಂತ್ರಿಯಾಗಿ ದಾಖಲೆ ಮಾಡಲಿ ಎಂದು ನಾನೂ ಹಾರೈಸುತ್ತೇನೆ. ಅವರು ಈ ಐದು ವರ್ಷ ಆಡಳಿತ ಪೂರ್ಣಗೊಳಿಸಿದರೆ ಸಹಜವಾಗಿ ದಾಖಲೆ ಆಗಲಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಸಿದ್ದರಾಮಯ್ಯ ಅವರನ್ನು ಶಾಸಕರು ಆಯ್ಕೆ ಮಾಡಿದ್ದರು' ಎಂದರು.

4Bನೇ ಪುಟ ನೋಡಿ

‘ಲಾಲ್‌ಬಾಗ್‌ನಲ್ಲಿ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಿ’

ಬೆಂಗಳೂರು: ನಗರದ ಲಾಲ್‌ಬಾಗ್‌ನಲ್ಲಿ ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರ 250 ಅಡಿ ಎತ್ತರದ ಪ್ರತಿಮೆ ಸ್ಥಾಪಿಸಬೇಕು ಎಂದು ಕರ್ನಾಟಕ ಭೀಮ್ ಸೇನೆ ಅಧ್ಯಕ್ಷ ಶಂಕರ್ ರಾಮಲಿಂಗಯ್ಯ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

‘ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದರಲ್ಲಿ ಹಿಂದುಳಿದ ಸಮುದಾಯಗಳು ಮಹತ್ವದ ಪಾತ್ರ ವಹಿಸಿವೆ. ಇದೆಲ್ಲಾ ಗಮನದಲ್ಲಿರಿಸಿಕೊಂಡು ರಾಜ್ಯದ ಬಜೆಟ್‌ನಲ್ಲಿ ಅಂಬೇಡ್ಕರ್ ಅವರ ಪತ್ರಿಮೆ ಸ್ಥಾಪನೆ ಬಗ್ಗೆ ಘೋಷಿಸಬೇಕು. 245 ಎಕರೆ ವಿಸ್ತೀರ್ಣ ಹೊಂದಿರುವ ಪ್ರವಾಸಿ ತಾಣ ಲಾಲ್‌ಬಾಗ್ ಉದ್ಯಾನ ಪ್ರತಿಮೆ ಸ್ಥಾಪನೆಗೆ ಸೂಕ್ತ’ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ಮಾವಳ್ಳಿ ಶಂಕರ್‌ಗೆ ಪ್ರಶಸ್ತಿ



ಬೆಂಗಳೂರು: ಲಂಡನ್‌ನ ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ ನೀಡುವ ‘ಡಾ.ಎಂ.ಎಂ. ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ’ಗೆ ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹25 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. ಫೆಬ್ರುವರಿ 24ರಂದು ಸಂಜೆ 5.30ಕ್ಕೆ ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಜೆಡಿಎಸ್, ಬಿಜೆಪಿಯ 9 ಸದಸ್ಯರಿಂದ ಅಡ್ಡ ಮತದಾನ

ನೆಲಮಂಗಲ ನಗರಸಭೆ ‘ಕೈ’ ತೆಕ್ಕೆಗೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ನಗರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಗೆ ಗುರುವಾರ ನಡೆದ ಚುನಾವಣೆಯಲ್ಲಿ ಜೆಡಿಎಸ್ ಮತ್ತು ಬಿಜೆಪಿಯ ಒಂಬತ್ತು ಸದಸ್ಯರು ಅಡ್ಡ ಮತದಾನ ಮಾಡಿದ ಪರಿಣಾಮವಾಗಿ ಕಾಂಗ್ರೆಸ್‌ನ ಎನ್.ಗಣೇಶ್ ಅಧ್ಯಕ್ಷರಾಗಿ, ಜಿ.ಆನಂದ್ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ಎನ್.ಗಣೇಶ್ 18 ಮತ, ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಆಂಜನಮೂರ್ತಿ 10 ಮತಗಳನ್ನು ಪಡೆದರು. ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ಆನಂದ್ 18, ಮೈತ್ರಿ ಅಭ್ಯರ್ಥಿ ಆಂಜನಪ್ಪ 10 ಮತಗಳನ್ನು ಪಡೆದರು.

ಶಾಸಕ ಎನ್.ಶ್ರೀನಿವಾಸ್ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ಬಿ.ಎಂ.ಎಲ್. ಕಾಂತರಾಜು ಅವರ ತಂತ್ರಗಾರಿಕೆಯ ಫಲವಾಗಿ ನೆಲಮಂಗಲ ನಗರಸಭೆ ಕಾಂಗ್ರೆಸ್ ವಶವಾಗಿದೆ. ಬಿಜೆಪಿ–ಜೆಡಿಎಸ್ ಮೈತ್ರಿಕೂಟಕ್ಕೆ ಸೋಲಾಗಿದೆ.



ಎನ್.ಗಣೇಶ್



ಜಿ.ಆನಂದ್

ಚುನಾವಣೆಯಲ್ಲಿ ಗೆಲುವು ಸಾಧಿಸಲೇಬೇಕು ಎಂದು ಮೈತ್ರಿ ಪಕ್ಷಗಳು ತಮ್ಮ ಚಿನ್ಹೆಯಡಿ ಗೆದ್ದಿದ್ದ ಜೆಡಿಎಸ್‌ನ 13, ಬಿಜೆಪಿಯ ಇಬ್ಬರು ಸದಸ್ಯರಿಗೆ ವಿಪ್ ಜಾರಿ ಮಾಡಿದ್ದರು. ಜೆಡಿಎಸ್‌ನಿಂದ ಗೆದ್ದಿದ್ದ 7, ಬಿಜೆಪಿಯ 2 ಸದಸ್ಯರು ವಿಪ್ ಉಲ್ಲಂಘಿಸಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸಿದರು. ಶಾಸಕ ಶ್ರೀನಿವಾಸ್ ಅವರ ಮತ ಸೇರಿ ಕಾಂಗ್ರೆಸ್‌ಗೆ ಒಟ್ಟು 18 ಮತಗಳು ಚಲಾವಣೆಯಾದವು. ಚಿಕ್ಕಬಳ್ಳಾಪುರ ಸಂಸದ ಡಾ.ಕೆ.ಸುಧಾಕರ್ ಗೈರಾಗಿದ್ದರು.

ನಗರಸಭೆ ಚುನಾವಣೆ ಹಿನ್ನೆಲೆ: ಈ ಹಿಂದೆ ನೆಲಮಂಗಲ ಪುರಸಭೆಯಾಗಿತ್ತು. ನಂತರ ನಗರಸಭೆಯಾಗಿ ಮೇಲ್ದರ್ಜೆಗೇರಿತು. ಆಗ ಅರಿಶಿನಕುಂಟೆ, ವಾಜರಹಳ್ಳಿ, ವಿಶ್ವೇಶ್ವರಪುರ, ಬಸವನಹಳ್ಳಿ ಗ್ರಾಮ ಪಂಚಾಯಿತಿಗಳು ನಗರಸಭೆ ವ್ಯಾಪ್ತಿಗೆ ಒಳಪಟ್ಟವು. ನ್ಯಾಯಾಲಯದ ಆದೇಶದಂತೆ ಪುರಸಭೆ ಸದಸ್ಯರನ್ನೇ ನಗರಸಭೆ ಸದಸ್ಯರನ್ನಾಗಿ ಮುಂದುವರಿಸಿ, ನಗರಸಭೆಗೆ ಸೇರ್ಪಡೆಯಾಗಿದ್ದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಿಂದ ಹೆಚ್ಚುವರಿ ನಾಮನಿರ್ದೇಶಿತ ನಾಲ್ವರು ಸದಸ್ಯರನ್ನು ಆಯ್ಕೆಮಾಡಲಾಗಿತ್ತು. ಇದರಿಂದ ನಗರಸಭೆಯ ಸದಸ್ಯಬಲ 27 ಇದೆ.

ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನ ಎನ್.ಶ್ರೀನಿವಾಸ್ ಶಾಸಕರಾಗಿ ಆಯ್ಕೆಯಾದರು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಜೆಡಿಎಸ್‌ನ 7 ಮತ್ತು ಬಿಜೆಪಿಯ 2 ಹಾಗೂ ಪಕ್ಷೇತರ ಒಬ್ಬರು ಸದಸ್ಯರು ಕಾಂಗ್ರೆಸ್ ಸೇರ್ಪಡೆಯಾಗಿದ್ದರು. ಜೆಡಿಎಸ್ ವಶವಾಗಿದ್ದ ನಗರಸಭೆಯನ್ನು ಕಾಂಗ್ರೆಸ್ ವಶಪಡಿಸಿಕೊಂಡಿತು. ಅಧ್ಯಕ್ಷ, ಉಪಾಧ್ಯಕ್ಷರ ಅವಧಿ ಮುಗಿದು ಎರಡು ತಿಂಗಳಾದರೂ ಚುನಾವಣೆ ನಡೆದಿರಲಿಲ್ಲ. ಚುನಾವಣೆ ನಡೆಸುವಂತೆ ಹೆಚ್ಚುವರಿ ನಾಲ್ವರು ಸದಸ್ಯರು ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯಾಲಯವು ಚುನಾವಣೆ ನಡೆಸುವಂತೆ ಈಚೆಗೆ ಆದೇಶಿಸಿತ್ತು.

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, ‘ಡಿ’ ಕ್ರಾಸ್, ದೊಡ್ಡಬಳ್ಳಾಪುರ–561203. ದೂರವಾಣಿ: 080–29562046

ಸಂಖ್ಯೆ: DPA/TP/CLU/55/2024-25 ದಿನಾಂಕ: 13.02.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **‘ವ್ಯವಸಾಯ’** ವಲಯದಿಂದ **‘ವಾಣಿಜ್ಯ’** ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **15 ದಿನಗಳ ಅವಧಿಯೊಳಗೆ** ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ (ಎ–ಗು)	ಸರ್ಕಾರದ ಅಧಿಸೂಚನೆಯಂತೆ ಪರಿಗಣಿಸಲಾದ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಲಕ್ಷ್ಮೀದೇವಮ್ಮ. ಹೆಚ್ ಕೋಂ ನಾಗರಾಜು. ಪಿ ಮತ್ತು ಶ್ರೀ ಯುಗೇಶ್. ಎನ್ ಪಟೇಲ್ ಬಿನ್ ನಾಗರಾಜು. ಪಿ	ದೊಡ್ಡ ಬಳ್ಳಾಪುರ	ತೂಬಗೆರೆ	ತಿರುಮ ಗೊಂಡನ ಹಳ್ಳಿ	26/23	0–13 + 0–0.5ಗು ‘ಎ’ ಖರಾಬು	ವ್ಯವಸಾಯ	ವಾಣಿಜ್ಯ
2		ದೊಡ್ಡ ಬಳ್ಳಾಪುರ	ತೂಬಗೆರೆ	ತಿರುಮ ಗೊಂಡನ ಹಳ್ಳಿ	26/30	0–15	ವ್ಯವಸಾಯ	ವಾಣಿಜ್ಯ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ಭೂ ಉಪಯೋಗ ಬದಲಾವಣೆ ಮಾಡಿಸಿ ಅಭಿವೃದ್ಧಿಪಡಿಸಲು ಸ್ವಯಂ ಇಚ್ಛಿಸಿದ್ದು, ಪ್ರಶ್ನಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ವಾಣಿಜ್ಯ ಚಟುವಟಿಕೆಯ ಅಭಿವೃದ್ಧಿ ಕಾರ್ಯ ಕೈಗೊಂಡಲ್ಲಿ ಮೂಲಭೂತ ಸೌಕರ್ಯ ಚಟುವಟಿಕೆಯಿಂದಾಗಿ ಸಾರ್ವಜನಿಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **‘ವ್ಯವಸಾಯ’** ವಲಯದಿಂದ **‘ವಾಣಿಜ್ಯ’** ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಕೆನರಾ ಬ್ಯಾಂಕ್ Canara Bank

ಭಾರತ ಸರ್ಕಾರದ ಒಂದು ಉದ್ಯಮ | A Government of India Undertaking | ಸಿಂಡಿಕೇಟ್ Syndicate

ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310038

ಗುತ್ತಿಗೆಯ ಮೇಲೆ ಸ್ಥಳಾವಕಾಶ ಬೇಕಾಗಿದೆ

ಕೆಳಕಂಡ ಸ್ಥಳಗಳಲ್ಲಿ ಹಾಲಿ ಇರುವ ಶಾಖೆಗಳನ್ನು ಸ್ಥಳಾಂತರಿಸುವುದಕ್ಕಾಗಿ, **ಮುಖ್ಯ ರಸ್ತೆಯಲ್ಲಿ** ಆದ್ಯತೆಯಾಗಿ **ನೆಲಮಹಡಿಯಲ್ಲಿ** ಸ್ವತಂತ್ರ ಪ್ರವೇಶ, ಉತ್ತಮ ಮುಂಭಾಗ, ಪಾರ್ಕಿಂಗ್ ಸ್ಥಳವಿರುವ, ಆರ್‌ಬಿಐ ನಿರ್ದಿಷ್ಟತೆಗೆ ಅನುಸಾರವಾಗಿ ಸ್ಟ್ರಾಂಗ್ ರೂಮ್‌ನ್ನು ನಿರ್ಮಿಸಲು ಸಿದ್ಧವಿರುವ ಮತ್ತು ಅಗತ್ಯವಾದ ವಿದ್ಯುತ್ ಲೋಡ್‌ನೊಂದಿಗೆ ಬಳಕೆಗೆ ಸಿದ್ಧವಿರುವ ವಾಣಿಜ್ಯ ಸ್ಥಳವನ್ನು ಹೊಂದಿದ ಮಾಲೀಕರಿಂದ **ಎರಡು–ಬಿಡ್ ವ್ಯವಸ್ಥೆಯ ಅಡಿಯಲ್ಲಿ** ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಸ್ಥಳ	ಜಿಲ್ಲೆಯ ಹೆಸರು	ಜನ ಸಮುದಾಯ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
ಅಶೋಕ ಪಿಲ್ಲರ್	ಬೆಂಗಳೂರು ನಗರ	ಮಹಾನಗರ	2500
ಸಮಂದೂರು	ಬೆಂಗಳೂರು ಗ್ರಾಮೀಣ	ಗ್ರಾಮೀಣ	1500
ಕಮ್ಮಸಂದ್ರ	ಬೆಂಗಳೂರು ಗ್ರಾಮೀಣ	ಗ್ರಾಮೀಣ	1500
ಕತ್ರಿಗುಪ್ಪೆ	ಬೆಂಗಳೂರು ನಗರ	ಮಹಾನಗರ	2500

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ **http://www.canarabank.com** ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ **Announcement → Tenders** ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : **21–02–2025 ರಂದು ಸಂಜೆ 3.00 ಗಂಟೆಯವರೆಗೆ.** ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. “ಮಧ್ಯವರ್ತಿಗಳಿಗೆ ಅವಕಾಶವಿಲ್ಲ”

ಸ್ಥಳ : ಬೆಂಗಳೂರು **ಸಹಿ/–**
ದಿನಾಂಕ : 14–02–2025 **ಸಹಾಯಕ ಮಹಾ ಪ್ರಬಂಧಕರು**

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

JOB OPPORTUNITIES

Office Boys/ Peon

WANTED HELPER & PACKER (Male) Bommanahalli (Bangalore) Ph: 9980140661/ 08025631755 Mail: starsilks@gmail.com

Multiple Vacancy

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Farm House/ Land/ Resorts

Out-Station

SALE 5 ACRES 20 minutes from CHIKMAGLUR CITY road side about 200 meters with good scenic view of Giri mountain range with clear documents no encroachment, no encumbrance of the property 3 CRORE lum-sum, Contact genuine buyer's only- 97400 28280.

General

WANTED Experienced DRIVER Kaadubeesanahalli, Bhoganhalli/ Bommanahalli (Bangalore) Mob: 9980140661 Email: starsilks@gmail.com

TELECALLERS (FEMALE) Wanted with any Graduation and Good Speaking Skills For Banking Sector, Basaveswarnagar 9742277166

WANTED OFFICE ASSISTANTS at Textile Export Company Bomannahalli (Bangalore) Email: starsilks@gmail.com

REAL ESTATE BUYING

Industrial & Factory

General

WANTED 5000SFT to 20000sft and upto 10Acres in private industrial land and KIADB allotted land at Bengaluru Urban and Rural district call Verna Developers, MG-Road,Blr. 9916310226/ 9353128035.

PUBLIC NOTICE

PUBLIC NOTICE

This is to inform the general public that my client intends to purchase the immovable property mentioned and described in the schedule here below from its owners; **(i) Smt. Gangamma N.V.**, wife of Late Shivanna K.; **(ii) Smt. Prema M.S.**, daughter of Late Shivanna K., **(iii) Sri. Sadashivaiah M.S.,** son of Late Shivanna K., and **(iv) Smt. Basavarajeshwari**, daughter of Late Shivanna K., (hereafter referred to as "Owners"). The Owners represent that the Schedule Property is free from any encumbrance, mortgage, charge, lien or litigation and they have not entered into any sort of agreement/MOU/Deeds etc., for sale/transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All that piece and parcel of the agricultural land bearing Survey No. 123/2, measuring 1 acre 10 guntas, situated at **Kethohalli Village, Kasaba Hobli, Ramanagara Taluk** and is bounded on the:

East by : Property bearing Survey No. 124;
West by : Property bearing Survey No. 126;
North by : Property bearing Survey No. 123/1; and
South by : Property bearing Survey No. 123/3.

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49, Edward Road, Bengaluru-560001 Ph.: 080 22863885
email: vinay@vinaykademane.in

Place : Bengaluru
Date: 13-02-25

PERSONAL

Change of Name

I, MONIKA. M, W/o Ashish Jain, Residing at #87, 2nd cross Kalathur Layout Gangamma Circle Jalahalli East, Bengaluru-13 have changed my name as MONIKA JAIN, vide affidavit dated 13/02/2025 before Notary V.Anjanappa, Bengaluru

I,MANJUNATHA KRISHNA Residing`at Flat`No.101,Sri Tulasi Classic Building, Garden Road, 2nd Stage, J.P.Nagar 8th-Phase, Pllaganahalli Village, Gottigere`Post, Bengaluru South-560083 have`changed my`Name`to MANJUNATH KRISHNA vide`Affidavit Dtd:12.02.2025 Sworn`before Notary G.R.Rajanna, Bangalore

I, NASEENA Banu have changed my name to Nasreen Banu notarised by C.N Balasubramanyam

CHANGE OF NAME

I, **MOHSEEN** Residing at # 366, 7th Main, 8th Cross, Vivekanagar further Extension Bangalore- 560047 have changed my name to **MOHSEEN AHMED** vide affidavit dated 12.02.2025 before notary Chandrakala, Bangalore. Henceforth I shall be known as **MOHSEEN AHMED** only.

I, YELLAPPA H DABAGONDI have changed my son name from MURALIKRISHNA DABAGONDI to MURALIKRISHNA Y DABAGONDI vide affidavit dated: 13/2/2025 Before Notary Shreeshail B.Gobbani Bangalore.

I KRISHNAMURTHY A.N. R/a, #10, Sri Gandha nilaya, Rudrappa Layout, Immadihalli, Whitefield, Bangalore-560066 Have Changed My Minor Son's Name From PREETHAM GOWDA To PREETHAM KRISHNAMURTHY GOWDA Vide Affidavit Dated 12/02/2025 before Notary Mohammed Hussain K Bangalore

ಬೆಂಗಳೂರು ಪ್ರೀತಿ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಫೆಬ್ರುವರಿ 14 ರಿಂದ 16ರವರೆಗೆ 'ಬೆಂಗಳೂರು ಪ್ರೀತಿ ಉತ್ಸವ 2025' ಆಯೋಜಿಸಲಾಗಿದೆ ಎಂದು ಲಿಂಗತ್ವ ಅಲ್ಪಸಂಖ್ಯಾತರ ಪರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ತಿಳಿಸಿದರು.

ಈ ವಿಶೇಷ ಉತ್ಸವವು ಸಂಗೀತ, ಕವನ, ಪ್ರದರ್ಶನ ಮತ್ತು ಸಂವಾದದ ಮೂಲಕ ಪ್ರೀತಿ ಹಾಗೂ ಪ್ರತಿರೋಧವನ್ನು ಆಚರಿಸುತ್ತದೆ. ಕಂಟೋನ್ಮೆಂಟ್ ರೈಲ್ವೆ ನಿಲ್ದಾಣ ಹಿಂಭಾಗದಲ್ಲಿರುವ ಯುನೈಟೆಡ್ ಥಿಯಾಲಜಿಕಲ್ ಕಾಲೇಜಿನಲ್ಲಿ ಸಂಜೆ 5ರಿಂದ ಕಾರ್ಯಕ್ರಮ ನಡೆಯಲಿದೆ. ಫೆ. 15ರಂದು ಸಂಜೆ 4 ರಿಂದ ಜಯನಗರದಲ್ಲಿರುವ ನಿರಾಲಿಯಲ್ಲಿ ಚರ್ಚಾಗೋಷ್ಠಿ ಮತ್ತು ಕಾಶ್ಮೀರಿ ಸೂಫಿ ಸಂಗೀತ ಕಾರ್ಯಕ್ರಮ ನಡೆಯಲಿವೆ ಎಂದು ಸುದ್ದಿಗೋಷ್ಠಿಯಲ್ಲಿ ಗುರುವಾರ ಹೇಳಿದರು.

16 ರಂದು ಸಂಜೆ 4ರಿಂದ ವಸಂತನಗರದ ಅಲಯನ್ಸ್ ಫ್ರಾನ್ಸೆಯಲ್ಲಿ ಕಾವ್ಯ ವಾಚನ ಮತ್ತು ನಾಟಕ ಪ್ರದರ್ಶನ ಇದೆ. ಗಣ್ಯರಾದ ಮೆಹರೋಷ್ ಖಾನ್, ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ, ಚಿಂತಕರು, ಕವಿಗಳು ಭಾಗವಹಿಸುತ್ತಾರೆ ಎಂದರು.

ದಾದಾಪೀರ್ ಜೈಮನ್, ರೂಮಿ ಹರೀಶ್ ಹಾಗೂ ಎ. ಸೌಮ್ಯಾ ಇದ್ದರು.

ಡಿವೈಎಸ್‌ಪಿ, ಇನ್‌ಸ್ಪೆಕ್ಟರ್‌ಗಳ ವರ್ಗ

ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆಯು ಮೂವರು ಡಿವೈಎಸ್ಪಿ ಹಾಗೂ 26 ಪೊಲೀಸ್ ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿ ಗುರುವಾರ ಆದೇಶ ಹೊರಡಿಸಿದೆ.

ರಾಜ್ಯ ಪೊಲೀಸ್ ಸಿಬ್ಬಂದಿ ಮಂಡಳಿಯ ಸಭೆಯ ನಿರ್ಣಯದಂತೆ ವಿವಿಧ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ಅವರಿಗೆ ಸ್ಥಳವನ್ನೂ ತೋರಿಸಲಾಗಿದೆ ಎಂದು ಎಡಿಜಿಪಿ(ಆಡಳಿತ) ಸೌಮೇಂದು ಮುಖರ್ಜಿ ತಿಳಿಸಿದ್ದಾರೆ.

ಹಿಟ್ ನಿರೀಕ್ಷೆಯಲ್ಲಿ ಪ್ರಮೋದ್


ಪ್ರಮೋದ್

ಕಿರುತೆರೆ ಮೂಲಕ ಬೆಳ್ಳಿತೆರೆಗೆ ಹೆಜ್ಜೆ ಇಟ್ಟು, 'ಗೀತಾ ಬ್ಯಾಂಗಲ್ ಸ್ಟೋರ್' ಮೂಲಕ ಚಂದನವನದ ಪಯಣ ಆರಂಭಿಸಿದ್ದ ನಟ ಪ್ರಮೋದ್ 'ಸಲಾರ್' ಬಳಿಕ ತೆಲುಗು ಚಿತ್ರರಂಗದಲ್ಲೂ ಗುರುತಿಸಿಕೊಂಡಿದ್ದಾರೆ. ಅವರು ನಟಿಸಿರುವ 'ಭುವನಂ ಗಗನಂ' ಸಿನಿಮಾ ಇಂದು(ಫೆ.14) ತೆರೆಕಾಣುತ್ತಿದ್ದು, ಎರಡು ಕನ್ನಡ ಹಾಗೂ ಒಂದು ತೆಲುಗು ಪ್ರಾಜೆಕ್ಟ್ ಅವರ ಕೈಯಲ್ಲಿವೆ.

ಅಭಿಲಾಷ್ ಪಿ.ಎಸ್.

● 'ರತ್ನನ್ ಪ್ರಪಂಚ' ಬಳಿಕ ನೀವು ನಿರೀಕ್ಷಿಸಿದಂತೆ ನಿಮ್ಮ ಸಿನಿಮಾಗಳು ಹಿಟ್ ಆಗಿಲ್ಲವಲ್ಲಾ?

ಹೌದು. ಒಂದು ಹಿಟ್ ಆಗುವಂತಹ ಸಿನಿಮಾ ಬರಲಿಲ್ಲ ಎನ್ನುವುದಕ್ಕಿಂತ ಮಾಡಲಿಲ್ಲ ಎನ್ನಬಹುದು. ಬಿಡುಗಡೆಯಾದ 'ಇಂಗ್ಲಿಷ್ ಮಂಜ' ಸಿನಿಮಾವನ್ನು 'ರತ್ನನ್ ಪ್ರಪಂಚ'ಕ್ಕಿಂತಲೂ ಮೊದಲೇ ಒಪ್ಪಿಕೊಂಡಿದ್ದೆ. 'ಬಾಂಡ್ ರವಿ' ಕಥೆ ಮೇಲೆ ನನಗೆ ನಂಬಿಕೆ ಇತ್ತು. ಆದರೆ ಇದು ಕಾರಣಾಂತರಗಳಿಂದ ನಿರೀಕ್ಷಿತ ಮಟ್ಟ ಮುಟ್ಟಲಿಲ್ಲ. ಎಲ್ಲಾ ನಟರಂತೆ ನಾನೂ ಒಂದು ಹಿಟ್ ನಿರೀಕ್ಷೆಯಲ್ಲಿದ್ದೇನೆ. ಹಿಂದಿನ ಸಿನಿಮಾಗಳಲ್ಲಿ ಸಮಸ್ಯೆಗಳು ಇದ್ದವು, ಅದು ನನಗೆ ತಿಳಿಯುತ್ತಿತ್ತು. 'ಭುವನಂ ಗಗನಂ' ಸಿನಿಮಾದ ಕಥೆ, ಹಾಡು, ಗುಣಮಟ್ಟ, ಕಲಾವಿದರು, ಮೇಕಿಂಗ್ ಎಲ್ಲವೂ ಒಂದು ಹಿಟ್ ಆಗುವ ಮುನ್ಸೂಚನೆ ನೀಡಿದೆ. ಶೇಕಡ ನೂರಕ್ಕೆ ನೂರು 'ಭುವನಂ ಗಗನಂ' ಸಿನಿಮಾ ನನ್ನ ನಿರೀಕ್ಷೆಯನ್ನು ತಲುಪಲಿದೆ ಎನ್ನುವ ಸೂಚನೆ ಕಾಣುತ್ತಿದೆ. ಇದನ್ನು ಕೈಗೆತ್ತಿಕೊಂಡಾಗಿನಿಂದ ಈ ಭಾವನಾತ್ಮಕ ಸಿನಿಮಾ ಜನರ ಮನಸ್ಸು ತಟ್ಟುತ್ತದೆ ಎನ್ನುವ ನಂಬಿಕೆ ನನ್ನಲ್ಲಿತ್ತು. ಕಥೆ ಕೇಳಿದಾಗಲೇ ಕಲಾವಿದರಿಗೆ ಆ ಸಿನಿಮಾದ ಭವಿಷ್ಯ ಒಂದು ಹಂತಕ್ಕೆ ತಿಳಿಯುತ್ತದೆ. ಕೆಲವೊಮ್ಮೆ ಸಿನಿಮಾಗಳನ್ನು ಹಿಟ್ ಮಾಡಲು ಸಾಧ್ಯವಿಲ್ಲ, ಅದು ತಾನಾಗಿಯೇ ಆಗುತ್ತವೆ. 'ಮುಂಗಾರು ಮಳೆ', 'ಲವ್ ಮಾಕ್ಟೇಲ್', 'ದಿಯಾ' ಸಿನಿಮಾಗಳ ಸಾಲಿಗೆ ಸೇರುವ ಸಿನಿಮಾ ಇದಾಗಿರಲಿದೆ.

● 'ಭುವನಂ ಗಗನಂ' ಇಬ್ಬರು ಹೀರೊಗಳ ಸಿನಿಮಾ. ನಿಮ್ಮ ತೆರೆ ಅವಧಿ ಹಾಗೂ ಪಾತ್ರದ ಬಗ್ಗೆ...

ಸಿನಿಮಾದ ಮೊದಲಾರ್ಧ ಪೂರ್ತಿ ನನ್ನ ಪಾತ್ರಕ್ಕೆ ಹೆಚ್ಚಿನ ತೆರೆ ಅವಧಿ ಇದೆ. ದ್ವಿತೀಯಾರ್ಧದಲ್ಲಿ ನಾನೂ ಪೃಥ್ವಿ ಜೊತೆಯಾಗಿ ಪಯಣ ಮಾಡುತ್ತೇವೆ. 'ಅಭಿ' ನನ್ನ ಪಾತ್ರದ ಹೆಸರು. ಈತನಿಗೆ ಕೋಪ ಜಾಸ್ತಿ. ವಾಲಿಬಾಲ್ ಆಟಗಾರ. ಅನಿಸಿದ್ದನ್ನು ಹೇಳುವ, ಮಾಡುವ ಹುಡುಗ. ಪ್ರೀತಿ ಮಾಡುತ್ತೀಯಾ ಎಂದು ಕೇಳದೆ ನೇರವಾಗಿ ಮದುವೆ ಆಗುತ್ತೀಯಾ ಎಂದೇ ಹುಡುಗಿಯನ್ನು ಕೇಳುವಾತ. ಇಂತಹ ವ್ಯಕ್ತಿತ್ವ ಇರುವ ಹುಡುಗ, ಯಾವುದೇ ಪರಿಸ್ಥಿತಿಯನ್ನು ಎದುರಿಸುವ ರೀತಿ ಬೇರೆಯದೇ ಮಾದರಿಯಲ್ಲಿ ಇರುತ್ತದೆ. ಪ್ರೀತಿ ಎಂದ ಮೇಲೆ ಸವಾಲುಗಳು ಇದ್ದೇ ಇರುತ್ತವೆ. ಅದನ್ನು ಆತ ಎದುರಿಸುವ ರೀತಿಯೇ ಸಿನಿಮಾದ ಕಥೆ.

● ಪೃಥ್ವಿ ಅವರ ನಟನೆಯ ಸಾಮರ್ಥ್ಯದ ಬಗ್ಗೆ...

ನಾನು ಫಸ್ಟ್‌ಕಾಪಿ ಸೇರಿಸಿ ಏಳೆಂಟು ಬಾರಿ ಈ ಸಿನಿಮಾವನ್ನು ಪ್ರೀಮಿಯರ್ ಸಂದರ್ಭದಲ್ಲಿ ನೋಡಿದ್ದೇನೆ. ಪ್ರತಿ ಬಾರಿಯೂ ಈ ಸಿನಿಮಾ ನನಗೆ ಕಣ್ಣೀರು ತರಿಸಿದೆ. ಇದಕ್ಕೆ ಮುಖ್ಯ ಕಾರಣ ಪೃಥ್ವಿ ಅಂಬಾರ್ ನಟನೆ. ಪ್ರೀತಿ ಎಂಬ ವಿಷಯ ಬಂದಾಗ ಅವರನ್ನು ಮೀರಿಸುವುದು ಕಷ್ಟವಿದೆ. ಭಾವನಾತ್ಮಕ ದೃಶ್ಯಗಳಲ್ಲಿ ಅವರು ಪಳಗಿರುವ ರೀತಿಯೇ ಬೇರೆ. ಈ ಸಿನಿಮಾದಲ್ಲಿ ಪೃಥ್ವಿ ಅವರ ಪಾತ್ರಕ್ಕೆ ಇರುವ ಮುಗ್ಧತೆಯು, ನನ್ನ ಪಾತ್ರಕ್ಕೂ ಅವರ ಪಾತ್ರಕ್ಕೂ ಪ್ರೀತಿ ಹುಟ್ಟಿಸಿದೆ. ಸ್ನೇಹಿತರಾಗಿ ಸಿಗುವ ನಾವಿಬ್ಬರು ಒಂದು ಪಯಣದಲ್ಲಿ ಭಾವನಾತ್ಮಕವಾಗಿ ಎಷ್ಟು ಹತ್ತಿರವಾಗುತ್ತೇವೆ ಎನ್ನುವುದನ್ನು ಸಿನಿಮಾದಲ್ಲೇ ನೋಡಬೇಕು. ಸಿನಿಮಾದ ಕ್ಲೈಮ್ಯಾಕ್ಸ್‌ನ ಹದಿನೈದು ನಿಮಿಷ ಪ್ರೇಕ್ಷಕರನ್ನು ಬೇರೊಂದು ಭಾವನಾ ಲೋಕಕ್ಕೆ ಕರೆದೊಯ್ಯುವ ಸಾಮರ್ಥ್ಯ ಹೊಂದಿದೆ. ಇದು ಪ್ರೇಕ್ಷಕರನ್ನು ಖಂಡಿತವಾಗಿಯೂ ಕಾಡಲಿದೆ.

● ವಾರಕ್ಕೆ ಏಳೆಂಟು ಸಿನಿಮಾಗಳ ನಡುವೆ ಗೆಲುವು ಹೇಗೆ ಸಾಧ್ಯ?

ಇದು ಪ್ರತಿ ಜನವರಿ–ಫೆಬ್ರುವರಿಯಲ್ಲಿ ಆಗುವ ಸಮಸ್ಯೆ. ಹಿಂದೆ ಇದ್ದ ಹಾಗೆ ಸಿನಿಮಾ ಕ್ಷೇತ್ರ ಈಗಿಲ್ಲ. ಡಿಜಿಟಲ್ ಕ್ಯಾಮೆರಾದಲ್ಲೂ ಚಿತ್ರೀಕರಣ ನಡೆಯುತ್ತಿದೆ. ಎಲ್ಲರ ಬಳಿಯೂ ಕಥೆಗಳಿವೆ, ನಾವೂ ಒಂದು ಪ್ರಯತ್ನ ಮಾಡುತ್ತೇವೆ ಎಂದು ಹೇಳುವವರ ಸಂಖ್ಯೆಯೂ ಹೆಚ್ಚಾಗಿದೆ. ಒಬ್ಬ ನಿರ್ದೇಶಕನ ಬಳಿ ಮೂರ್ನಾಲ್ಕು ಸಹ ನಿರ್ದೇಶಕರು ಕೆಲಸ ಮಾಡುತ್ತಿದ್ದಾರೆ. ಆ ಸಹ ನಿರ್ದೇಶಕರು ಸಿನಿಮಾ ಮಾಡುತ್ತಾರೆ. ಸಿನಿಮಾಗಳು ಬಿಡುಗಡೆಯಾದರೂ ಚಿತ್ರಮಂದಿರವೊಂದರಲ್ಲಿ ಅವುಗಳಿಗೆ ಒಂದು ಪ್ರದರ್ಶನವಷ್ಟೇ ಸಿಗುತ್ತದೆ. ಇಷ್ಟು ಸಿನಿಮಾಗಳು ಬಿಡುಗಡೆಯಾದರೂ ಯಾವ ಸಿನಿಮಾದಲ್ಲಿ ವಿಶೇಷತೆ ಇದೆಯೋ ಆ ಸಿನಿಮಾ ಚಿತ್ರಮಂದಿರಗಳಲ್ಲಿ ಉಳಿದುಕೊಳ್ಳುತ್ತದೆ. ಜನಕ್ಕೆ ಯಾವ ರೀತಿ ಸಿನಿಮಾ ಬೇಕು ಎಂದು ಅರಿತುಕೊಂಡವರು ಹಾಗೂ ಆ ಸಿನಿಮಾವನ್ನು ಪ್ರಚಾರದ ಮೂಲಕ ಚಿತ್ರಮಂದಿರಗಳಲ್ಲಿ ಉಳಿಸಿಕೊಳ್ಳುವ ಸಾಮರ್ಥ್ಯ ಹೊಂದಿದ ನಿರ್ಮಾಪಕರು ಗೆಲ್ಲುತ್ತಾರೆ. ಎಲ್ಲವುದಕ್ಕಿಂತ ಮಿಗಿಲಾಗಿ ಆ ಸಿನಿಮಾದ ಕಥೆ ಚೆನ್ನಾಗಿರಬೇಕು. ಜನರು ಸಿನಿಮಾ ಚೆನ್ನಾಗಿದೆ ಎಂದು ಮಾತನಾಡಿಕೊಳ್ಳುವ ಹೊತ್ತಿಗೆ ಚಿತ್ರಮಂದಿರಗಳಲ್ಲಿ ಆ ಸಿನಿಮಾ ಉಳಿದುಕೊಳ್ಳುವಂತಾಗಬೇಕು.

● ಹೊಸ ಹೀರೊಗಳು ತಮ್ಮನ್ನು ಪ್ರಯೋಗಗಳಿಗೆ ಒಡ್ಡಿಕೊಳ್ಳುತ್ತಿರುವ ಬಗ್ಗೆ...

ಇದು ಒಳ್ಳೆಯ ಬೆಳವಣಿಗೆ. ಏಕೆಂದರೆ ನಮಗೆ ಯಾವ ಇಮೇಜ್ ಇಲ್ಲ. ಈ ರೀತಿ ಪ್ರಯೋಗಗಳಿಗೆ ತೆರೆದುಕೊಂಡಿರುವವರೇ ಹೊಸಬರು. ಜನ ನಮ್ಮನ್ನು ಹೊಸದಾಗಿಯೇ ನೋಡುತ್ತಿರುತ್ತಾರೆ. ಇಲ್ಲಿ ಕಮರ್ಷಿಯಲ್ ರಿಸ್ಕ್ ಇದೆಯಷ್ಟೇ. ಈ ರಿಸ್ಕ್ ತೆಗೆದುಕೊಳ್ಳುವ ಧೈರ್ಯ ಹೊಸ ಹುಡುಗರಿಗಷ್ಟೇ ಇದೆ. ಒಂದು ಪ್ರಯೋಗ ಗೆದ್ದರೆ ಸಾಲು ಸಾಲು ಸಿನಿಮಾಗಳು ಗೆಲ್ಲುತ್ತವೆ. ❖

ಹೊಸ ಪ್ರಾಜೆಕ್ಟ್‌ಗಳು...

'ಪ್ರೀಮಿಯರ್ ಪದ್ಮಿನಿ' ಸಿನಿಮಾ ನಿರ್ಮಾಣ ಮಾಡಿದ್ದ ನಿರ್ದೇಶಕಿ ಶ್ರುತಿ ನಾಯ್ಡು ಅವರ ಹೊಸ ಚಿತ್ರದಲ್ಲಿ ನಟಿಸುತ್ತಿದ್ದೇನೆ. ಇದರಲ್ಲಿ ನನ್ನ ಪಾತ್ರದ ಟೆಸ್ಟ್ ಶೂಟ್ ನಡೆದಿದೆ. ಇದು 1980ರಲ್ಲಿ ನಡೆಯುವ ಕಥೆ. ತೆಲುಗಿನ ನಾಗಾರ್ಜುನ ಅವರ ನಿರ್ಮಾಣ ಸಂಸ್ಥೆಯ ಸಿನಿಮಾವೊಂದರಲ್ಲಿ ಅವಕಾಶ ಸಿಕ್ಕಿದೆ. ಇದರಲ್ಲಿ ಮುಖ್ಯಭೂಮಿಕೆಯಲ್ಲಿದ್ದೇನೆ. 'ರತ್ನನ್ ಪ್ರಪಂಚ' ಸಿನಿಮಾದಲ್ಲಿನ ನನ್ನ ನಟನೆಯನ್ನು ನೋಡಿ ಅವರು ಈ ಅವಕಾಶ ನೀಡಿದ್ದಾರೆ. ನಮ್ಮವರೇ ನಮ್ಮನ್ನು ಗುರುತಿಸಲು ಒದ್ದಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಬೇರೆ ಚಿತ್ರರಂಗದವರು ಪಾತ್ರವೊಂದಕ್ಕೆ ನೀವೇ ಬೇಕು ಎಂದು ಕೇಳಿದಾಗ ಒಪ್ಪಿಕೊಳ್ಳಬೇಕಾಗುತ್ತದೆ. 'ಪುಷ್ಪ–2' ಸಿನಿಮಾದಲ್ಲಿ ಖಳನಟನಾಗಿ ನಟಿಸಲು ಅವಕಾಶವಿತ್ತು. ಆದರೆ ಆ ಪಾತ್ರ ನನಗೆ ಹಿಡಿಸದ ಕಾರಣ ಬೇಡ ಎಂದಿದ್ದೆ. ಕನ್ನಡದಲ್ಲೂ ಒಂದು ದೊಡ್ಡ ನಿರ್ಮಾಣ ಸಂಸ್ಥೆಯ ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಯುಗಾದಿ ಸಂದರ್ಭದಲ್ಲಿ ಇದು ಘೋಷಣೆಯಾಗಲಿದೆ. 'ಸಲಾರ್–2' ಮುಂದಿನ ವರ್ಷ ಸೆಟ್ಟೇರಲಿದೆ.

'ಸೂಪರ್ ಸ್ಟಾರ್ ವಿದ್ಯಾ'ಳಾದ ಮಲೈಕಾ


ಮಲೈಕಾ

ನಟ ಧನಂಜಯ ಅವರ ಡಾಲಿ ಪಿಕ್ಚರ್ಸ್ ನಿರ್ಮಾಣ ಮಾಡಿರುವ 'ವಿದ್ಯಾಪತಿ' ಸಿನಿಮಾ ಏ.10ಕ್ಕೆ ಬಿಡುಗಡೆಯಾಗಲಿದೆ. ಸಿನಿಮಾದಲ್ಲಿ ನಾಗಭೂಷಣ್‌ಗೆ ಜೋಡಿಯಾಗಿ ಮಲೈಕಾ ವಸುಪಾಲ್ ನಟಿಸುತ್ತಿದ್ದು, ಅವರು ಈ ಸಿನಿಮಾದಲ್ಲಿ 'ಸೂಪರ್ ಸ್ಟಾರ್ ವಿದ್ಯಾ' ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಮಲೈಕಾ ಜನ್ಮದಿನದಂದು 'ಸೂಪರ್ ಸ್ಟಾರ್ ವಿದ್ಯಾ'ಳ ಗ್ಲಿಮ್ಸ್ ಬಿಡುಗಡೆಯಾಗಿದೆ. ಸಿನಿಮಾದೊಳಗೆ ಸಿನಿಮಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ ಮಲೈಕಾ. ಕಿರುತೆರೆಯಲ್ಲಿ 'ಹಿಟ್ಲರ್ ಕಲ್ಯಾಣ' ಧಾರಾವಾಹಿ ಮೂಲಕ ಮನೆಮಾತಾಗಿದ್ದ ಮಲೈಕಾ, 'ಉಪಾಧ್ಯಕ್ಷ' ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟವರು. ಸಿನಿಮಾದಲ್ಲಿ ಕರಾಟೆ ಕಿಂಗ್ ಆಗಿ ನಾಗಭೂಷಣ್ ನಟಿಸುತ್ತಿದ್ದು, ಗರುಡ ರಾಮ್ ಖಳನಾಯಕನಾಗಿ ಅಬ್ಬರಿಸಲಿದ್ದಾರೆ. ಕರಾಟೆ ಮಾಸ್ಟರ್ ಅವತಾರದಲ್ಲಿ ರಂಗಾಯಣ ರಘು ನಟಿಸುತ್ತಿದ್ದಾರೆ. ಆ್ಯಕ್ಷನ್, ಕಾಮಿಡಿ ಕಥೆ ಹೊಂದಿರುವ ಈ ಚಿತ್ರವನ್ನು ಇಶಾಂ ಹಾಗೂ ಹಸೀಂ ಖಾನ್ ನಿರ್ದೇಶನ ಮಾಡುತ್ತಿದ್ದಾರೆ. ಲವಿತ್ ಛಾಯಾಚಿತ್ರಗ್ರಹಣ, ಮುರುಳಿ ನೃತ್ಯ ನಿರ್ದೇಶನ, ಅರ್ಜುನ್ ಮಾಸ್ಟರ್ ಸಾಹಸ ನಿರ್ದೇಶನ ಚಿತ್ರಕ್ಕಿದೆ. ❖

ವಿಷ್ಣು ಪ್ರಿಯಾ ಟ್ರೇಲರ್ ರಿಲೀಸ್


ಪ್ರಿಯಾ, ಶ್ರೇಯಸ್

ಕೆ.ಮಂಜು ನಿರ್ಮಾಣದ, ಶ್ರೇಯಸ್ ಕೆ. ಮಂಜು ನಟನೆಯ 'ವಿಷ್ಣು ಪ್ರಿಯಾ' ಸಿನಿಮಾದ ಟ್ರೇಲರ್ ಅನ್ನು ಇತ್ತೀಚೆಗೆ ನಟ ಸುದೀಪ್ ಬಿಡುಗಡೆಗೊಳಿಸಿದರು.

ಚಿತ್ರದಲ್ಲಿ ಶ್ರೇಯಸ್‌ಗೆ ಜೋಡಿಯಾಗಿ ಪ್ರಿಯಾ ವಾರಿಯರ್ ನಟಿಸಿದ್ದಾರೆ. ಚಿತ್ರ ಫೆ.21ಕ್ಕೆ ಬಿಡುಗಡೆಯಾಗಲಿದೆ. 'ಪ್ರೇಮಕಥೆಗಳನ್ನು ಎಲ್ಲರೂ ಮಾಡಿದರೂ ಅದನ್ನು ಪ್ರಸ್ತುತಪಡಿಸುವ ರೀತಿಯ ಮೇಲೆ ಅದರ ಸೋಲು, ಗೆಲುವು ನಿಂತಿರುತ್ತದೆ. ಒಬ್ಬನೇ ವ್ಯಕ್ತಿ 50 ಸಿನಿಮಾ ನಿರ್ಮಾಣ ಮಾಡುವುದು ಚಿಕ್ಕ ವಿಷಯವಲ್ಲ. ಮಂಜು ಓರ್ವ ನಿರ್ಮಾಪಕರಾಗಿ ಕನ್ನಡ ಚಿತ್ರರಂಗದಲ್ಲಿ ದೊಡ್ಡ ಸಾಧನೆ ಮಾಡಿದ್ದಾರೆ. ಶ್ರೇಯಸ್‌ನಲ್ಲಿರುವ ಶ್ರದ್ಧೆಯೇ ಆತನನ್ನು ಬೆಳೆಸುತ್ತದೆ' ಎಂದರು ಸುದೀಪ್.

ಸಿನಿಮಾದಲ್ಲಿ ತೊಂಬತ್ತರ ದಶಕದಲ್ಲಿ ನಡೆಯುವ ಅಪರೂಪದ ಪ್ರೇಮಕಥೆಯಿದೆ. ಈಗಾಗಲೇ ಚಿತ್ರದ ಮೂರು ಹಾಡುಗಳು ಬಿಡುಗಡೆಯಾಗಿದೆ. ವಿ.ಕೆ.ಪ್ರಕಾಶ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದು, ಗೋಪಿ ಸುಂದರ್ ಸಂಗೀತ ಸಂಯೋಜನೆ ಮಾಡಿದ್ದಾರೆ. ವಿನೋದ್ ಭಾರತಿ ಛಾಯಾಚಿತ್ರಗ್ರಹಣ, ಸುರೇಶ್ ಅರಸ್ ಸಂಕಲನ ಚಿತ್ರಕ್ಕಿದೆ. ❖



ಐದು ಸಿನಿಮಾಗಳು ತೆರೆಗೆ

ಕಳೆದೆರಡು ಶುಕ್ರವಾರ ಚಂದನವನದ ತೆರೆಗಳಲ್ಲಿ 18ಕ್ಕೂ ಅಧಿಕ ಸಿನಿಮಾಗಳು ತೆರೆಕಂಡಿವೆ. ಇಂದು (ಫೆ.4) ಈ ಪಟ್ಟಿಗೆ ಮತ್ತೈದು ಸಿನಿಮಾಗಳು ಸೇರ್ಪಡೆಯಾಗುತ್ತಿವೆ.

ಸಿದ್ಲಿಂಗು 2

13 ವರ್ಷಗಳ ಹಿಂದೆ ತೆರೆಕಂಡಿದ್ದ ವಿಜಯ್ ಪ್ರಸಾದ್ ನಿರ್ದೇಶನದ 'ಸಿದ್ಲಿಂಗು' ನಟ ಯೋಗಿ ಸಿನಿಪಯಣಕ್ಕೆ ತಿರುವು ನೀಡಿತ್ತು. ಈ ಸಿನಿಮಾದ ಮುಂದುವರಿದ ಭಾಗವೇ ಇದು. ಈ ಚಿತ್ರವನ್ನು ಶ್ರೀಹರಿ ರೆಡ್ಡಿ ಮತ್ತು ರಾಜು ಶೇರಿಗಾರ್ ನಿರ್ಮಿಸಿದ್ದು, ಯೋಗಿ, ಸೋನುಗೌಡ, ಸುಮನ್ ರಂಗನಾಥ್, ಸೀತಾ ಕೋಟೆ, ಮಹಾಂತೇಶ್, ಆ್ಯಂಟೋನಿ ಕಮಲ್, ಮಂಜುನಾಥ ಹೆಗಡೆ ಮುಂತಾದವರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಚಿತ್ರಕ್ಕೆ ಪ್ರಸನ್ನ ಗುರ್ಲಕೆರೆ ಛಾಯಾಚಿತ್ರಗ್ರಹಣ, ಅನೂಪ್ ಸೀಳಿನ್ ಸಂಗೀತ ಮತ್ತು ಅಕ್ಷಯ್ ಪಿ. ರಾವ್ ಅವರ ಸಂಕಲನವಿದೆ.


ಯೋಗಿ, ಸೋನು ಗೌಡ

ಜಸ್ಟಿಸ್

ಸಂಗೀತ ನಿರ್ದೇಶಕರಾಗಿ ಚಿತ್ರರಂಗ ಪ್ರವೇಶಿಸಿದ್ದ ಅರೋನಾ ಕಾರ್ತಿಕ್ ನಿರ್ದೇಶನದ ಚಿತ್ರವಿದು. ನೆಲದ ಕಾನೂನು ಮತ್ತು ಅದರಲ್ಲಿರುವ ಲೋಪಗಳು, ಜೊತೆಗೆ ಕಾನೂನಿನ ಒಳಿತು ಕೆಡುಕುಗಳನ್ನು ಈ ಚಿತ್ರ ಹೇಳಲಿದೆ. ಸರ್ಕಾರ್ ಸಾಹಿಲ್ ಈ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದಾರೆ. ಮುದಾಸಿರ್ ಅಹ್ಮದ್, ಅಹ್ಮದ್ ಅಲಿ ಖಾನ್, ಮೊಹ್ಮದ್ ಜಾವಿದ್, ಹರೀಶ್ ಈ ಚಿತ್ರವನ್ನು ನಿರ್ಮಿಸಿದ್ದಾರೆ.

ನಿಮಿತ್ತ ಮಾತ್ರ


ಪ್ಯಾರಸೈಕಲಾಜಿಕಲ್ ಥ್ರಿಲ್ಲರ್ ಜಾನರ್‌ನ ಈ ಸಿನಿಮಾವನ್ನು ರೋಷನ್ ಡಿಸೋಜಾ ಬರೆದು ನಿರ್ದೇಶಿಸಿ ನಿರ್ಮಿಸಿದ್ದಾರೆ. ಚಿತ್ರವು ಮಂಗಳೂರಿನಲ್ಲಿ 15 ವರ್ಷಗಳ ಹಿಂದೆ ನಡೆದ ಒಂದು ಭಯಾನಕ ಘಟನೆಯ ಮೇಲೆ ಬೆಳಕು ಚೆಲ್ಲುತ್ತದೆ ಎಂದಿದೆ ಚಿತ್ರತಂಡ. ಪ್ರಮುಖ ಪಾತ್ರವನ್ನು ನಟ ಪೂರ್ಣಚಂದ್ರ ಮೈಸೂರು ನಿರ್ವಹಿಸಿದ್ದಾರೆ. ಸಂಗೀತಾ ರಾಜೀವ್, ಅರವಿಂದ್ ಕುಪ್ಲಿಕರ್ ತಾರಾಬಳಗದಲ್ಲಿದ್ದಾರೆ.

ಈ ಸಿನಿಮಾಗಳ ಜೊತೆಗೆ 2003ರಲ್ಲಿ ತೆರೆಕಂಡಿದ್ದ ದರ್ಶನ್ ನಟನೆಯ, ಸಂಜಯ್–ವಿಜಯ್ ನಿರ್ದೇಶನದ **'ನಮ್ಮ ಪ್ರೀತಿಯ ರಾಮು'** ಚಿತ್ರವು ಇಂದು 150ಕ್ಕೂ ಹೆಚ್ಚಿನ ಚಿತ್ರಮಂದಿರಗಳಲ್ಲಿ ಮರುಬಿಡುಗಡೆಯಾಗುತ್ತಿದೆ. ❖

ರಾಜು ಜೇಮ್ಸ್ ಬಾಂಡ್

ಮಂಜುನಾಥ್ ವಿಶ್ವಕರ್ಮ ಹಾಗೂ ಕಿರಣ್ ಭರ್ತೂರ್ ನಿರ್ಮಾಣದ, ದೀಪಕ್ ಮಧುವನಹಳ್ಳಿ ನಿರ್ದೇಶನದ ಈ ಚಿತ್ರದಲ್ಲಿ 'ಫಸ್ಟ್ ರ್‍ಯಾಂಕ್ ರಾಜು' ಖ್ಯಾತಿಯ ಗುರುನಂದನ್ ನಾಯಕನಾಗಿ ನಟಿಸಿದ್ದಾರೆ. ಮೃದುಲ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಚಿತ್ರದಲ್ಲಿ 'ಟಿ.ಆರ್.ಪಿ' ಎಂಬ ಖಾಸಗಿ ವಾಹಿನಿಯ ವರದಿಗಾರನಾಗಿ ನಟ ಚಿಕ್ಕಣ್ಣ ಕಾಣಿಸಿಕೊಂಡಿದ್ದಾರೆ. ಸಾಧು ಕೋಕಿಲ, ಅಚ್ಯುತ್ ಕುಮಾರ್, ರವಿಶಂಕರ್, ಜೈ ಜಗದೀಶ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಮನೋಹರ್ ಜೋಶಿ ಛಾಯಾಚಿತ್ರಗ್ರಹಣ, ಅನೂಪ್ ಸೀಳಿನ್ ಸಂಗೀತ ನಿರ್ದೇಶನ ಹಾಗೂ ಅಮಿತ್ ಚವಳ್ಕರ್ ಸಂಕಲನ ಚಿತ್ರಕ್ಕಿದೆ.



ಗುರುನಂದನ್



ಭುವನಂ ಗಗನಂ

ಪ್ರಮೋದ್ ಹಾಗೂ ಪೃಥ್ವಿ ಅಂಬಾರ್ ನಟನೆಯ ಈ ಚಿತ್ರವನ್ನು ಗಿರೀಶ್ ಮೂಲಿಮನಿ ನಿರ್ದೇಶಿಸಿದ್ದಾರೆ. ಚಿತ್ರಕ್ಕೆ ಅವರೇ ಕಥೆ, ಚಿತ್ರಕಥೆ ಬರೆದಿದ್ದಾರೆ. ಎಂ. ಮುನೇಗೌಡ ಎಸ್‌ವಿಸಿ ಫಿಲ್ಮ್ಸ್ ಪ್ರೊಡಕ್ಷನ್‌ನಡಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಸಿನಿಮಾ ಪ್ರೀತಿ, ಕೌಟುಂಬಿಕ ಕಥಾಹಂದರವನ್ನು ಹೊಂದಿದ್ದು, ನಗರ ಮತ್ತು ಹಳ್ಳಿಯ ಹಿನ್ನೆಲೆಯಲ್ಲಿ ನಡೆಯುತ್ತದೆ. ಪ್ರಮೋದ್‌ಗೆ ಜೋಡಿಯಾಗಿ ರೇಚೆಲ್ ಡೇವಿಡ್, ಪೃಥ್ವಿಗೆ ಜೋಡಿಯಾಗಿ ಅಶ್ವಥಿ ನಟಿಸಿದ್ದಾರೆ. ಅಚ್ಯುತ್ ಕುಮಾರ್, ಶರತ್ ಲೋಹಿತಾಶ್ವ, ಪ್ರಕಾಶ್ ತುಮ್ಮಿನಾಡು, ಸಿದ್ಲಿಂಗು ಶ್ರೀಧರ್, ಹರಿಣಿ, ಸ್ಪರ್ಶ ರೇಖಾ, ಪ್ರಜ್ವಲ್ ಶೆಟ್ಟಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಉದಯ್ ಲೀಲಾ ಛಾಯಾಚಿತ್ರಗ್ರಹಣ, ಗುಮ್ಮಿನೇನಿ ವಿಜಯ್ ಸಂಗೀತ, ಸುನೀಲ್ ಕಶ್ಯಪ್ ಸಂಕಲನ ಚಿತ್ರಕ್ಕಿದೆ.

ಪ್ರೇಮಿಗಳ ದಿನಕ್ಕೆ ಜಸ್ಟ್ ಮ್ಯಾರೀಡ್ ಹಾಡು


ಶೈನ್ ಶೆಟ್ಟಿ, ಅಂಕಿತಾ

'ಬಿಗ್‌ಬಾಸ್' ಖ್ಯಾತಿಯ ನಟ ಶೈನ್ ಶೆಟ್ಟಿ ಹಾಗೂ ಅಂಕಿತಾ ಅಮರ್ ನಟಿಸಿರುವ 'ಜಸ್ಟ್ ಮ್ಯಾರೀಡ್' ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ಶುಕ್ರವಾರ (ಫೆ.14) ಸಿನಿಮಾದ ಹಾಡೊಂದು ಬಿಡುಗಡೆಯಾಗಲಿದೆ.

ಎಬಿಬಿಎಸ್ ಸ್ಟುಡಿಯೊಸ್ ಲಾಂಛನದಲ್ಲಿ ಅಜನೀಶ್ ಲೋಕನಾಥ್ ಹಾಗೂ ಸಿ.ಆರ್ ಬಾಬಿ ಈ ಚಿತ್ರ ನಿರ್ಮಿಸಿದ್ದರೆ. ಸಿ.ಆರ್.ಬಾಬಿ ನಿರ್ದೇಶನದ ಈ ಚಿತ್ರವನ್ನು ಕೆ.ಆರ್.ಜಿ. ಸ್ಟುಡಿಯೊಸ್ ವಿತರಣೆ ಮಾಡುತ್ತಿದೆ. ಚಿತ್ರದ 'ಇದು ಮೊದಲ ಸ್ವಾಗತಾನಾ..' ಎಂಬ ಹಾಡನ್ನು ಕೆ.ಕಲ್ಯಾಣ್ ಬರೆದಿದ್ದು, 'ಸರಿಗಮಪ' ಖ್ಯಾತಿಯ, 'ದ್ವಾಪರ ದಾಟುತ..' ಹಾಡು ಹಾಡಿದ್ದ ಜಸ್ಕರಣ್ ಸಿಂಗ್ ಹಾಡಿದ್ದಾರೆ. ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್ ಅವರು ಈ ಹಾಡನ್ನು ಬಿಡುಗಡೆಗೊಳಿಸಲಿದ್ದಾರೆ. ಆನಂದ್ ಆಡಿಯೊ ಯುಟ್ಯೂಬ್ ಚಾನಲ್‌ನಲ್ಲಿ ಚಿತ್ರದ ಎಲ್ಲಾ ಹಾಡುಗಳು ಬಿಡುಗಡೆಯಾಗಲಿವೆ.

ಅಜನೀಶ್ ಈ ಸಿನಿಮಾ ಮೂಲಕ ನಿರ್ಮಾಪಕರಾಗುತ್ತಿದ್ದು, ಸಿ.ಆರ್. ಬಾಬಿ ಅವರೇ ಚಿತ್ರಕ್ಕೆ ಕಥೆ ಬರೆದಿದ್ದಾರೆ. ದೇವರಾಜ್, ಅಚ್ಯುತ್ ಕುಮಾರ್, ಮಾಳವಿಕ ಅವಿನಾಶ್, ಅನೂಪ್ ಭಂಡಾರಿ, ಶ್ರುತಿ ಹರಿಹರನ್, ಶ್ರುತಿ ಕೃಷ್ಣ, ಸಾಕ್ಷಿ ಅಗರವಾಲ್, ಶ್ರೀಮಾನ್, ರವಿಶಂಕರ್ ಗೌಡ, ರವಿ ಭಟ್, ವಾಣಿ ಹರಿಕೃಷ್ಣ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ಗ್ರಾಮ ಪಂಚಾಯತ್ ಕಾರ್ಯಾಲಯ, ಆದಿವಾಲ.

ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
Mobil No:7760595730 E-mail:adivala.hyr.ctd@gmail.com

ಸಂ:ಗ್ರಾಪಂ/ಆ.ಹಿ.ಚಿ/ಟೆಂಡರ್/02/2024-25 ದಿನಾಂಕ:11/02/2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (ದ್ವಿ-ಲಕೋಟೆ ಪದ್ಧತಿ)

ಹಿರಿಯೂರು ತಾಲ್ಲೂಕು ಆದಿವಾಲ ಗ್ರಾಮ ಪಂಚಾಯಿತಿ 2024-25 ನೇ ಸಾಲಿಗೆ ಗ್ರಾಮಪಂಚಾಯಿತಿ ನಿಧಿ ಮತ್ತು 15ನೇ ಹಣಕಾಸು ಯೋಜನೆಗಳಲ್ಲಿ ಗ್ರಾಮ ಪಂಚಾಯಿತಿ ಗ್ರಾಮಗಳಿಗೆ ಅಗತ್ಯವಾದ ಕುಡಿಯುವ ನೀರಿನ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಆಸಕ್ತ ಸಂಸ್ಥೆಗಳಿಂದ ಈ ಕೆಳಕಂಡ ದ್ವಿ ಲಕೋಟೆ ಪದ್ಧತಿಯಲ್ಲಿ KPPPPORTAL ಮೂಲಕ ಆಸಕ್ತ ಮತ್ತು ಅರ್ಹ ಸರಬರಾಜುದಾರರಿಂದ ಆಹ್ವಾನಿಸಲಾಗಿದೆ.
(1) ಇ-ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ:RDPR/2024-25/IND/7543 Date:11-02-2025 (2) ಟೆಂಡರ್‌ನ ಅಂದಾಜು ಮೊತ್ತ–1974957.00 (3) ಇ-ಟೆಂಡರ್ ಫಾರಂ ಬೆಲೆ :–As Per E-Portal (4) ಇ-ಟೆಂಡರ್ ಫಾರಂ ಗಳನ್ನು ಇ-ಪೋರ್ಟಲ್ ಲಭ್ಯವಾಗುವ ದಿನಾಂಕ: 11/02/2025 (5) ಇ-ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ:–21/02/2025 ಸಂಜೆ–05.00 ಗಂಟೆ (6) ತಾಂತ್ರಿಕ ಲಕೋಟೆಯನ್ನು ತೆರೆಯುವ ದಿನಾಂಕ (ಬದಲಾವಣೆಗೆ ಒಳಪಟ್ಟಿರುತ್ತದೆ) 24/02/2025 ಸಂಜೆ–05.00 ಗಂಟೆ (7) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ(ಬದಲಾವಣೆಗೆ ಒಳಪಟ್ಟಿರುತ್ತದೆ) 25/02/2025 ಸಂಜೆ–05.00 ಗಂಟೆ (8) EMD ಮೊತ್ತ:–49373/– (9) ಬಿಡ್ ತೆರೆಯುವ ಸ್ಥಳ:–ಆದಿವಾಲ ಗ್ರಾಮ ಪಂಚಾಯಿತಿ ಹಿರಿಯೂರು ತಾಲ್ಲೂಕು (10) ಹೆಚ್ಚಿನ ಮಾಹಿತಿಗೆ ವ್ಯವಹರಿಸಬೇಕಾದ ವಿಳಾಸ:– ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಆದಿವಾಲ ಗ್ರಾಮ ಪಂಚಾಯಿತಿ, ಹಿರಿಯೂರು ತಾಲ್ಲೂಕು ಮೊಬೈಲ್ ನಂ.7760595730

ಸಹಿ/ ಅಧ್ಯಕ್ಷರು, ಗ್ರಾಮ ಪಂಚಾಯಿತಿ. ಆದಿವಾಲ.
ಸಹಿ/ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ. ಆದಿವಾಲ.
DIPR/CTA/KSMCA/574/2024-25

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

KSSIDC
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಣಿ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560 010. Email: kssidcho@karnataka.gov.in PH: 23407011-25

No:Eng/ep-96/S.E/ DPR&PMC CONSULTANCY /2024-25 Date: 13-02-2025

ಟೆಂಡರ್ ಸಲ್ಲಿಕೆ ಅವಧಿ ವಿಸ್ತರಣೆ ಪ್ರಕಟಣೆ ತಿದ್ದುಪಡಿ

ಕಾಮಗಾರಿಯ ಹೆಸರು: KSSIDC ಯೋಜನೆಗಳಿಗಾಗಿ ಆರ್ಕಿಟೆಕ್ಚರಲ್, ಇಂಜಿನಿಯರಿಂಗ್ ಮತ್ತು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆನ್ಸಿ ಮತ್ತು ಗುಣಮಟ್ಟ ನಿಯಂತ್ರಣ ಸಂಸ್ಥೆಯನ್ನು/ಕಂಪನಿ (PMC) ಆಯ್ಕೆ.
. Indent No: KSSIDC/2024-25/SE0019.
ಉಲ್ಲೇಖ: ಸಂಖ್ಯೆ: ಇಎನ್‌ಜಿ/ಇಪಿ–96/ಅ.ಅ/DPR&PMC CONSULTANCY/2024–25/ ದಿ: 28–01–2025.
ಬಿಡ್ಡುದಾರರ ಮಾಹಿತಿಗಾಗಿ ಮೇಲಿನ ಉಲ್ಲೇಖದಲ್ಲಿ ಪ್ರಕಟಗೊಂಡಿರುವ ಹಾಗೂ Indent Nos ಕಾಮಗಾರಿಗೆ ಸಂಬಂಧಿಸಿದಂತೆ ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು (Online submission) ನಿಗಧಿಪಡಿಸಿದ ಕೊನೆಯ ದಿನಾಂಕವನ್ನು 20-02-2025 17.00ಗಂಟೆಯವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು **KPP portal ವೆಬ್‌ಸೈಟ್: https://kppp.karnataka.gov.in** ಮುಖಾಂತರ ಪಡೆಯಬಹುದು

ಸಹಿ/–
ಅಧೀಕ್ಷಕ ಅಭಿಯಂತರರು
DIPR/CP/RO5034/AAPL/2024-25

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

'ಜಲಭವನ', ನಂ. 6, 1ನೇ ಹಂತ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು–560029.
ದೂ: 080–41106508 ಇ–ಮೇಲ್: cekwbbng@gmail.com ವೆಬ್‌ಸೈಟ್: https://kppp.karnataka.gov.in

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿಪಿ ಮುಖಾಂತರ ಮಾತ್ರ)

ಸಂಖ್ಯೆ: KWB/TEC/CE(B)/ Chintamani DC works/1156/2024-25 Dtd: 13.02.2025.
ಕಾಮಗಾರಿಯ ಹೆಸರು: ಚಿಂತಾಮಣಿ ನಗರಸಭೆಯ ಠೇವಣಿ ಕೊಡುಗೆ ಕಾಮಗಾರಿಯಡಿಯಲ್ಲಿ ಗೋಪಸಂದ್ರ ಡಿಸ್ಪೋಸಲ್‌ಗೆ ಸಂಪರ್ಕಿಸುವ ಕೆಜಿಎನ್ ಲೇಔಟ್, ಆರ್‌ಕೆ ಲೇಔಟ್, ರಾಜ್ಪುತ್ ಲೇಔಟ್, ತಪತೇಶ್ವರ ಕಾಲೋನಿ, ಮಾಲಪಲ್ಲಿ ಮತ್ತು ಕೋಲಾರ ರಸ್ತೆಯಲ್ಲಿ ಹಾಲಿಯಿರುವ ಒಳಚರಂಡಿ ಕೊಳವೆ ಮಾರ್ಗವನ್ನು ಸ್ಥಳಾಂತರಿಸಿ, ಬದಲಾಯಿಸುವ ಮತ್ತು ಹೊಸ ಒಳಚರಂಡಿ ಕೊಳವೆ ಮಾರ್ಗ ಗೃಹ ಸಂಪರ್ಕದೊಂದಿಗೆ ಒದಗಿಸಿ, ಅಳವಡಿಸಿ, ಡೀಸಿಲ್ಟಿಂಗ್ ಮತ್ತು ದುರಸ್ತಿ ಕಾಮಗಾರಿಗಳು (LUMPSUM-NO VARIATION)". ಇಂಡೆಂಟ್ ನಂ: **KUWSDB/2024-25/WS/WORK_INDENT297/CALL-2.**
ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ : **https://kppp.karnataka.gov.in** ನಲ್ಲಿ ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರರು(ಬೆಂ),
ಕನನೀಸ & ಒಚ ಮಂಡಳಿ, ಬೆಂಗಳೂರು
DIPR/CP/YC/5036/2024-25

ಕರ್ನಾಟಕ ಸರ್ಕಾರ — ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾ.ವ.) ರವರ ಕಛೇರಿ, ಉಡುಪಿ

ಸಂ: ತೋಇ/ಉಡುಪಿ/ಸಿಬ್ಬಂದಿ/ಟೆಂಡರ್/ಸಾಮ:37/2024-25 ದಿನಾಂಕ: 12-02-2025

ಇ-ಟೆಂಡರ್ ಪ್ರಕಟಣೆ

ಇ-ಟೆಂಡರ್ ಪ್ರಕಟಣೆ ವಿವರ: ತೋಟಗಾರರ ಸೇವೆ (Service Estimate no: KSHD/2024-25/ SE0353), ಇ.ಎಂ.ಡಿ. ಮೊತ್ತ: ರೂ. 37500/–, ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **27-02-2025 4.00 PM**
ಉಡುಪಿ ಜಿಲ್ಲೆಯ ವಿವಿಧ ತೋಟಗಾರಿಕೆ ಕ್ಷೇತ್ರಗಳಲ್ಲಿ ತೋಟಗಾರಿಕೆ ಕೆಲಸಗಳನ್ನು ಕೈಗೊಳ್ಳಲು ಅಗತ್ಯವಿರುವ ತೋಟಗಾರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಒದಗಿಸಲು ಅರ್ಹ ಮಾನವ ಸಂಪನ್ಮೂಲ ಏಜೆನ್ಸಿಗಳಿಂದ ಎರಡು ಲಕೋಟೆ ಪದ್ಧತಿಯಲ್ಲಿ KPP Portal ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ದಿ: **27–02–2025 ರ ಸಂಜೆ 4.00 ಗಂಟೆ** ಒಳಗೆ ಟೆಂಡರ್ ಫಾರಂ ಅಪ್ ಲೋಡ್ ಮಾಡಬೇಕು. ತಾಂತ್ರಿಕ ಬಿಡ್ ಹಾಗೂ ಆರ್ಥಿಕ ಬಿಡ್ಡನ್ನು ದಿ: **28–02–2025 ರ ಸಂಜೆ 4.00 ಗಂಟೆ** ಅಥವಾ ಸಮಿತಿ ನಿಗಧಿಪಡಿಸುವ ದಿನಾಂಕದಂದು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ **https://www.kppp.karnataka.gov.in** ವೆಬ್‌ಸೈಟ್ ಅಥವಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯವಲಯ, ಉಡುಪಿ ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/–ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾವ), ಉಡುಪಿ
ವಾಸಾಇ/ಸನಿಉ/ಕೆಎಸ್‌ಎಂಸಿಎ/719/24–25 ದಿ: 13.02.2025

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಪರಿಸರ ಭವನ, ನಂ.49, ಚರ್ಚ್ ರಸ್ತೆ, ಬೆಂಗಳೂರು–560001
ದೂರವಾಣಿ : 080–25581383, ಫ್ಯಾಕ್ಸ್ : 080–25586321

ಸಂಖ್ಯೆ: ಮಾನಿಮಂ/04/ಕ/2024–25/4747 ದಿನಾಂಕ: 11/02/2025

ಟೆಂಡರ್‌ಗಾಗಿ ಆಹ್ವಾನ – ಕರೆ – 2
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ www.kppp.karnataka.gov.in ಮುಖಾಂತರ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಸದಸ್ಯ ಕಾರ್ಯದರ್ಶಿಗಳು ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ http://kppp.karnataka.gov.in ಮುಖಾಂತರ ಕೆಳಕಂಡ ಕೆಲಸಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ

ಕೆಲಸದ ಹೆಸರು: ಬೆಂಗಳೂರು, ಎಸ್.ಜಿ.ಹಳ್ಳಿ, ಕರಾಮಾನಿಮಂಯ ನಿಸರ್ಗ ಭವನದಲ್ಲಿರುವ ಕೇಂದ್ರ ಪರಿಸರ ಪ್ರಯೋಗಾಲಯ–1 ರಲ್ಲಿ ಹಾಲಿಯಿರುವ ಏರ್ ಟೆಸ್ಟಿಂಗ್ ಪ್ರಯೋಗಾಲಯದ ಉನ್ನತೀಕರಣ. ಕೆಲಸದ ಅಂದಾಜು ಮೌಲ್ಯ: **ರೂ.39.79 ಲಕ್ಷಗಳು**. ಟೆಂಡರ್ ಬೆಲೆ, ಇಎಂಡಿ ಇತ್ಯಾದಿ, ಮುಂತಾದ ಪಾವತಿಗಳನ್ನು ಇ–ಪಾವತಿ ವಿಧಾನದಲ್ಲಿ ಮಾತ್ರ ಪಾವತಿಸಬೇಕು.

ಹೆಚ್ಚಿನ ವಿವರಗಳನ್ನು, ದಯವಿಟ್ಟು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನಲ್ಲಿ ವೀಕ್ಷಿಸಿ.

ಸಹಿ/–
ಮುಖ್ಯ ಪರಿಸರ ಅಧಿಕಾರಿ–2
ವಾ.ಸಾ.ಸಂ.ಇ/ವಾಪ್ರ/5024/ಆಕಾರ್/2024–25

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ :
ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಬಿಬಿಎಂಪಿ ಕೇಂದ್ರ ಕಛೇರಿ, ನೆಲ ಮಹಡಿ, ಅನೆಕ್ಸ್–3 ಕಟ್ಟಡ, ಎನ್.ಆರ್. ವೃತ್ತ, ಬೆಂಗಳೂರು–02

ಸಂ: ಉಅಸಂ/ಟೆಂಡರ್/16/2024–25 ದಿನಾಂಕ: 13.02.2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ) (2ನೇ ಕರೆ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳೊಂದಿಗೆ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಕೆಳಕಂಡ ಟೆಂಡರ್‌ಗಾಗಿ ಐಟಂ ದರದ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ
1	ಬಿಬಿಎಂಪಿ ಬೊಮ್ಮನಹಳ್ಳಿ ವಲಯದಲ್ಲಿ 2025–26ನೇ ಸಾಲಿನಲ್ಲಿ Compensatory Afforestation Plantation **KRIDE C-4 Project ಯೋಜನೆಯ** ನಿರ್ವಹಣೆ ಹಾಗೂ 2026–27, 2027–28, 2028–29 ಮತ್ತು 2029–30ನೇ ಸಾಲಿನಲ್ಲಿ ನೆಡುತೋಪುಗಳ ನಿರ್ವಹಣಾ ಕಾಮಗಾರಿ. 4000 ಸಸಿಗಳು. ಮೀಸಲಾತಿ: **ಸಾಮಾನ್ಯ ವರ್ಗ**. ಕಾಮಗಾರಿಯ ವೆಚ್ಚ: **ರೂ. 1,24,32,000/–**. ಇಎಂಡಿ: **ರೂ. 1,86,480/–**

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮುಖಾಂತರ **14.02.2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಬಾವಿ ಸಭೆಯ **ದಿನಾಂಕ: 18.02.2025ರ ಸಂಜೆ 5:00 ಗಂಟೆಗೆ. 3)** ಆನ್‌ಲೈನ್‌ನಲ್ಲಿ ಟೆಂಡರ್ ಬಗ್ಗೆ ವಿಚಾರಣೆಗಾಗಿ: **18.02.2025ರ ಸಂಜೆ 5:00 ಗಂಟೆಯವರಗೆ.** 4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : **24.02.2025 ರ ಸಂಜೆ 4.00 ಗಂಟೆಯವರೆಗೆ** 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **25.02.2025 ರ ಸಂಜೆ 5.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: **www.kppp.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿಬಿಎಂಪಿ.

ಕರ್ನಾಟಕ ಸರ್ಕಾರ — ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ–590–002

ದೂರವಾಣಿ ಸಂಖ್ಯೆ:0831–2407201 E-mail:ceo_zp_bgm@nic.in

ಕ್ರ:ಜಿಪ:ರಾಗ್ರಾಉ:ವಿವ:78/2024–25 ದಿನಾಂಕ: 12–02–2025

: ಇ. ಪ್ರೋಕ್ಯೂರಮೆಂಟ್ ಟೆಂಡರ ಪ್ರಕಟಣೆ :

ಸನ್ 2024–25 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಬೆಳಗಾವಿ ಜಿಲ್ಲೆಯ ಅಥಣಿ, ಕಾಗವಾಡ, ಚಿಕ್ಕೋಡಿ, ಮೂಡಲಗಿ, ಗೋಕಾಕ ಹುಕ್ಕೇರಿ & ರಾಯಬಾಗ ತಾಲೂಕುಗಳಲ್ಲಿ ಸವಳು ಜವಳು ಭಾದಿತ ಹಾಗೂ ಜಲಾವೃತ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಆಧಾರದ ಮೇಲೆ ಟೆಂಡರನ್ನು ಸಾಮಗ್ರಿ ಪೂರೈಸಲು ಇ. ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ KTPP ನಿಯಮ 28 ರಡಿ ಟೆಂಡರ ಆಹ್ವಾನಿಸಲಾಗಿದೆ. ಟೆಂಡರ ಫಾರಂಗಳನ್ನು ಇ. ಪ್ರೋಕ್ಯೂರಮೆಂಟ್ ಮುಖಾಂತರ ಪಡೆಯಬಹುದಾಗಿದೆ.
ಟೆಂಡರ ಅಂದಾಜು ಮೊತ್ತ: ರೂ. 3,50,17,000.00 (ಮೂರು ಕೋಟಿ ಐವತ್ತು ಲಕ್ಷ ಹದಿನೇಳು ಸಾವಿರಗಳು ಮಾತ್ರ))
ಅ.ನಂ:1:ವಿವರಣೆ:ಆನ್‌ಲೈನ್ ಟೆಂಡರ್ ಪ್ರಚಾರ ಪಡಿಸಿದ ದಿನಾಂಕ:14–02–2025, ಅ.ನಂ:2:ವಿವರಣೆ:Pre-Bid Meeting:21–02–2025, ಅ.ನಂ:3:ವಿವರಣೆ:ಆನ್‌ಲೈನ್ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 05–03–2025,ಅ.ನಂ:4:ವಿವರಣೆ:ಆನ್‌ಲೈನ್ ಟೆಂಡರ್ ತೆರೆಯುವ ಸ್ಥಳ: ಜಿಲ್ಲಾ ಪಂಚಾಯತ ಬೆಳಗಾವಿ, ಅ.ನಂ:5:ವಿವರಣೆ:ತಾಂತ್ರಿಕ ಬಿಡ್ ತೆರೆಯುವ ದಿನಾಂಕ:10–03–2025, ಅ.ನಂ:6: ವಿವರಣೆ:ಆರ್ಥಿಕ ಬಿಡ್ ತೆರೆಯುವ ದಿನಾಂಕ: ನಂತರ ತಿಳಿಸಲಾಗುವದು.

ಸಹಿ/–ಯೋಜನಾ ನಿರ್ದೇಶಕರು(ಡಿಆರ್‌ಡಿಎ)
ಜಿಲ್ಲಾ ಪಂಚಾಯತ ಬೆಳಗಾವಿ
DIPR/BGM/RO-NO-1672/KSMCA/2024-25

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001. ಫೋನ್ ಸಂ. 080-22265383 ವೆಬ್‌ಸೈಟ್: www.kiadb.in ಇ–ಮೇಲ್: cdoce1@kiadb.in or jdtp@kiadb.in

ಕ.ಕೈ.ಪ್ರ.ಮಂ/ಜಂ.ನಿ/ಕಗಸಂ.34259/478/2024–25 ದಿ: 13–02–2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಈ ಕೆಳಕಂಡ ಕೈಗಾರಿಕಾ ಪ್ರದೇಶಗಳಿಗೆ ಪರಿಸರ ವಿಮೋಚನ ಪತ್ರಗಳನ್ನು ಪಡೆಯಲಾಗಿರುತ್ತದೆ. ಸದರಿ ಮಾಹಿತಿಗಳು ಸಕ್ಷಮ ಪ್ರಾಧಿಕಾರಗಳ ಅಂತರ್ಜಾಲದಲ್ಲಿ ಲಭ್ಯವಿರುತ್ತದೆ.

ಕ್ರ. ಸಂ.	ಕೈಗಾರಿಕಾ ಪ್ರದೇಶಗಳ ಹೆಸರು	ರಾಜ್ಯಮಟ್ಟದ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ (SEIAA) ದಿಂದ ಪಡೆದಿರುವ ಪರಿಸರ ವಿಮೋಚನಾ ಪತ್ರಗಳು
1	ದಿ:10–02–2025 ರಂದು ಜಕ್ಕಸಂದ್ರ ಕೈಗಾರಿಕಾ ಪ್ರದೇಶ ಹಂತ–2 (ಮಿಂಡಹಳ್ಳಿ), ಒಟ್ಟು ವಿಸ್ತೀರ್ಣ 135.74 ಹೆಕ್ಟೇರ್, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ.	https://parivesh.nic.in
2	ದಿ: 11–02–2025 ರಂದು ಓಬಳಾಪುರ ಕೈಗಾರಿಕಾ ಪ್ರದೇಶ, ಒಟ್ಟು ವಿಸ್ತೀರ್ಣ 170.22 ಹೆಕ್ಟೇರ್, ಓಬಳಾಪುರ, ದೊಡ್ಡಚನ್ನೋಹಳ್ಳಿ, ಆದಿಹೊಸಹಳ್ಳಿ, ಮಾವಿನಕೋಮನಹಳ್ಳಿ, ಕರೇಹಳ್ಳಿ ಮತ್ತು ದೊಡ್ಡಬೆಲೆ ಗ್ರಾಮಗಳು, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.	https://parivesh.nic.in

ಸ್ಥಳ: ಬೆಂಗಳೂರು
ದಿನಾಂಕ: 13–02–2025
ಸಹಿ/– ಮುಖ್ಯ ಅಭಿಯಂತರರು–1, ಕ.ಕೈ.ಪ್ರ.ಮಂ, ಬೆಂಗಳೂರು
DIPR/CP/RO5019/AAPL/2024-25

ಕರ್ನಾಟಕ ಸರ್ಕಾರ (ಕಂದಾಯ ಇಲಾಖೆ) ಆಯುಕ್ತರು ಕೂಡಲಸಂಗಮ ಅಭಿವೃದ್ಧಿ ಮಂಡಳಿ ಕಾರ್ಯಾಲಯ ಕೂಡಲಸಂಗಮ

ತಾ॥ ಹುನಗುಂದ । ಜಿಲ್ಲಾ: ಬಾಗಲಕೋಟ । ದೂರವಾಣಿ: 08351–268060
Email.:commksdbsangam@gmail.com

ಸಂ:ಆ/ಕೂಸಅಮ/ವಿ/ಕೆ.ಪಿ.ಪಿ/ಟೆಂಡರ/ಸಿಆರ್–09/2024–25/268 ದಿನಾಂಕ:– 13–02–2025

ಅಲ್ಪಾವಧಿ ಟೆಂಡರ ಪ್ರಕಟಣೆ

'ಇ' ಪ್ರೊಕ್ಯೂರಮೆಂಟ ಮುಖಾಂತರ (ದ್ವಿಲಕೋಟೆ ಪದ್ಧತಿಯ ಮೇಲೆ)

ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪರವಾಗಿ ಕೆಳಕಾಣಿಸಿದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಂತೆ ನೊಂದಾಯಿತ ಕೆ.ಪಿ.ಡ.ಬ್ಲ್ಯೂಡಿ 2ನೇ ದರ್ಜೆ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರನ್ನು, ಕೆ.ಡಬ್ಲ್ಯೂ.2ರ ಮೂಲಕ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ನಿಯಾಮಾವಳಿಯಂತೆ ಕೆ.ಪಿ.ಪಿ ಪೋರ್ಟಲ್ ಮೂಲಕ ಟೆಂಡರನ್ನು ಕೆಳಗೆ ಸಹಿ ಮಾಡಿದವರಿಂದ ಆಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ ದಾಖಲೆಗಳನ್ನು **https://kppp.karnataka.gov.in** ವೆಬಸೈಟ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರಗಳನ್ನು ಕೆ.ಪಿ.ಪಿ ಪೋರ್ಟಲ್ ಮೂಲಕ ಸಲ್ಲಿಸುವದು.

ಹುನಗುಂದ ತಾಲೂಕಿನ ಕೂಡಲಸಂಗಮದಲ್ಲಿ ಸಣ್ಣ ರಥದ ಹಾಗೂ ದೊಡ್ಡ ರಥದ ಗಾಲಿಗಳಿಗೆ ಅಚ್ಚನ್ನು ಅಳವಡಿಸಿ ರಥಕ್ಕೆ ತಿರುಗುವ ವಿನ್ಯಾಸವನ್ನು ಅಳವಡಿಸಲು ಫೇಬ್ರಿಕೇಶನ ಮಾಡುವ ಕೆಲಸ.
ಒಟ್ಟು ಕಾಮಗಾರಿ ಸಂಖ್ಯೆ– 01.
ಟೆಂಡರಿಗಿಟ್ಟ ಅಂದಾಜು ಮೊತ್ತ. ರೂ. 22.45 ಲಕ್ಷ, ಇ.ಎಂ.ಡಿ ಮೊತ್ತ. ರೂ. 0.45 ಲಕ್ಷ
ವೆಬಸೈಟ್ ಮೂಲಕ ಟೆಂಡರ ಮಾಹಿತಿಯ ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ: 17–02–2025 ಬೆಳಿಗ್ಗೆ: 11.30 ಗಂಟೆಯವರೆಗೆ. ಟೆಂಡರಗಳಿಗೆ ಕೆ.ಪಿ.ಪಿ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸುವುದು ಹಾಗೂ ಟೆಂಡರನ್ನು ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 25–02–2025 ಸಾಯಂಕಾಲ 05:00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 27–02–2025 ಮುಂಜಾನೆ 11:00 ಗಂಟೆಗೆ (ಸಾಧ್ಯವಾದಲ್ಲಿ). ತಾಂತ್ರಿಕ ಬಿಡ್ ಅನುಮೋದನೆ ಆದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.
(The Estimate amount put to Tender is exclusive of GST. The tenderer should quote without GST. GST shall be paid separately @ prevailing rates during billing)
ಹೆಚ್ಚಿನ ಮಾಹಿತಿಯನ್ನು, ಆಯುಕ್ತರು ಕೂಡಲಸಂಗಮ ಅಭಿವೃದ್ಧಿ ಮಂಡಳಿ ಕೂಡಲಸಂಗಮ ತಾ: ಹುನಗುಂದ ಇವರ ಕಛೇರಿಯಲ್ಲಿ ಕೆಲಸದ ಅವಧಿಯಲ್ಲಿ ಅಥವಾ **https://kppp.karnataka.gov.in** ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/– ಆಯುಕ್ತರು
ಕೂಡಲಸಂಗಮ ಅಭಿವೃದ್ಧಿ ಮಂಡಳಿ ಕೂಡಲಸಂಗಮ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ.

(ಜಿಲ್ಲಾ ನಗರಾಭಿವೃದ್ಧಿ ಕೋಶ)
ದೂರವಾಣಿ ಸಂಖ್ಯೆ:08192–251168 e-mail:dudc_dvg@yahoo.co.in

ಸಂ:ಜಿ.ನ.ಕೋ.ದಾ(3)/ಸಿಆರ್/ಎಲ್‌ಇಡಿ/ಇ–10/2023–24 ದಿ: 06–02–2025

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (5ನೇ ಕರೆ)

ದಾವಣಗೆರೆ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ (ದಾವಣಗೆರೆ ಮಹಾನಗರಪಾಲಿಕೆ ಹೊರತುಪಡಿಸಿ) ಸಿ.ಸಿ.ಎಂ.ಎಸ್ ಯೋಜನೆಯಡಿ ಎಲ್‌ಇಡಿ ದೀಪ ಅಳವಡಿಸುವ ಕಾರ್ಯಕ್ರಮಕ್ಕೆ ಪ್ರಾಜೆಕ್ಟ್ ಇಂಜಿನಿಯರ್ ಮತ್ತು ಎನರ್ಜಿ ಆಡಿಟರ್‌ಗಳನ್ನು ಮ್ಯಾನ್ ಪವರ್ ಏಜೆನ್ಸಿ ಮೂಲಕ ನೇಮಕ ಮಾಡಿಕೊಳ್ಳಲು ಈ ಕೆಳಗಿನ ಇಂಡೆಂಟ್ ನಂಬರ್‌ನಂತೆ ದ್ವಿ ಲಕೋಟೆ ಪದ್ಧತಿ (Two Covers System) ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.
ಇಂಡೆಂಟ್‌ಗಳು:– ದಾವಣಗೆರೆ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಿಗೆ (ದಾವಣಗೆರೆ ಮಹಾನಗರ ಪಾಲಿಕೆ ಹೊರತುಪಡಿಸಿ) ಸಿ.ಸಿ.ಎಂ.ಎಸ್ ಯೋಜನೆ ಯಡಿ ಎಲ್‌ಇಡಿ ದೀಪ ಅಳವಡಿಸುವ ಕಾರ್ಯಕ್ರಮಕ್ಕೆ ಪ್ರಾಜೆಕ್ಟ್ ಇಂಜಿನಿಯರ್ ಮತ್ತು ಎನರ್ಜಿ ಆಡಿಟರ್‌ಗಳನ್ನು ಮ್ಯಾನ್ ಪವರ್ ಏಜೆನ್ಸಿ ಮೂಲಕ ನೇಮಕ ಮಾಡಿಕೊಳ್ಳಲು
Indent No.DMA/2024-25/ SE3523 – Call-5
ಅಂದಾಜು ಯೋಜನೆಯ ಮೊತ್ತ (ರೂ.ಲಕ್ಷಗಳಲ್ಲಿ):– 97.80
ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):– 19.56,000.00
ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:–24–02–2025
ತಾಂತ್ರಿಕ ಬಿಡ್ ತೆರೆಯುವ ದಿನಾಂಕ:– 27–02–2025
ಆರ್ಥಿಕ ಬಿಡ್ ತೆರೆಯುವ ದಿನಾಂಕ:– 01–03–2025
ಸದರಿ ಕಾಮಗಾರಿಗಳ ವಿವರ, ಹಾಗೂ ಇತರೆ ಷರತ್ತುಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ http://kppp.karnataka.gov.in ಮೂಲಕ ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ತಾಂತ್ರಿಕ ಶಾಖೆಯಿಂದ ಪಡೆದುಕೊಳ್ಳಬಹುದಾಗಿದೆ. ವೇಳಾಪಟ್ಟಿಯಲ್ಲಾಗುವ ಯಾವುದೇ ಬದಲಾವಣೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸೂಚಿಸಲಾಗುವುದು. ದಿನ ಪತ್ರಿಕೆ ಅಥವಾ ಯಾವುದೇ ಜಾಹೀರಾತು ಪ್ರಕಟಣೆ ನೀಡಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ದಾವಣಗೆರೆ ಜಿಲ್ಲೆ.
ವಾಸಾಇ/ದಾವಣಗೆರೆ/741/ ಕೆಎಸ್‌ಎಂಸಿಎ/2024–25

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ

ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂ. 13/2024–25 ದಿನಾಂಕ: 13–02–2025

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆಪಿಪಿಪಿ) ಮೂಲಕ
ಆಸಕ್ತಿ ವ್ಯಕ್ತಪಡಿಸುವಿಕೆ

ಟೆಂಡರ್ ಸಂಖ್ಯೆ	ವಿವರಣೆ
NWKRTC/2024-25/ SE1551 ದಿನಾಂಕ 13.02.2025	ವಾಕರಸಾ ಸಂಸ್ಥೆಯ ಹಿಂಬಾಕಿ ಮೊಬಲಗು ಪಾವತಿಸಲು ಸರಕಾರದ ಖಾತ್ರಿಯೊಂದಿಗೆ ರೂ. 646.00 ಕೋಟಿ ಸಾಲ ಒದಗಿಸಲು ಆಸಕ್ತ ಅರ್ಹ ಹಣಕಾಸು ಸಂಸ್ಥೆ ಅಥವಾ ವಾಣಿಜ್ಯ ಬ್ಯಾಂಕುಗಳಿಂದ ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರಕಟಣೆ

ಟೆಂಡರ್ ಸಂಖ್ಯೆ	ಟೆಂಡರ್ ವಿವರಣೆ	ಅಂದಾಜು ಮೌಲ್ಯ
NWKRTC/2024-25/SE1552 ದಿನಾಂಕ 13.02.2025	ಹುಬ್ಬಳ್ಳಿ ಹಾಗೂ ಹುಮನಾಬಾದ್‌ಗಳಲ್ಲಿ ಚಾಲನಾ ವೃತ್ತಿ ಪರೀಕ್ಷೆಗೆ ನಿಯೋಜಿತ ಸಂಸ್ಥೆಗಳ ಸಿಬ್ಬಂದಿಗಳಿಗೆ ಪ್ರತ್ಯೇಕವಾಗಿ ಚಹಾ+ಉಪಹಾರ+ಊಟ ಒದಗಿಸುವ ಕುರಿತು	ರೂ. 30.00 ಲಕ್ಷ.

ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಜಾರಿಗೊಳಿಸಲಾದ ಸದರಿ ಆಸಕ್ತಿ ವ್ಯಕ್ತಪಡಿಸುವಿಕೆ/ಟೆಂಡರ್‌ಗಳಿಗೆ ಬಿಡ್ ಸಲ್ಲಿಸಲು ಕೊನೆಯ ದಿನಾಂಕ : **01.03.2025** ಸಮಯ 17.30 ಘಂಟೆ ಆಗಿರುತ್ತದೆ.
ಹೆಚ್ಚಿನ ವಿವರಗಳಿಗಾಗಿ ವೆಬ್ ಸೈಟ್: http://kppp.karnataka.gov.in. ಮತ್ತು ಮೊಬೈಲ್ ಫೋನ್ ಸಂ. **7022009113 / 7760988557** ಗಳಿಗೆ ಸಂಪರ್ಕಿಸಬಹುದಾಗಿದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು.
ಟೆಂಡರ್ ಕರೆಯುವ ಪ್ರಾಧಿಕಾರ
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/963/2024–25

ಕರ್ನಾಟಕ ಸರ್ಕಾರ — ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣ, ಗಾಂಧಿ ಚೌಕ ಹತ್ತಿರ, ವಿಜಯಪುರ – 586 101

ಸಂಖ್ಯೆ: DPUE/E-TENDER/125/2024-25 ದಿನಾಂಕ: 08.02.2025

ಟೆಂಡರ್ ನೋಟಿಫಿಕೇಷನ್ (ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

2024–25 ನೇ ಸಾಲಿನ ಬಜೆಟ್ ಅನುಮೋದಿತ ಕಾರ್ಯಕ್ರಮದನ್ವಯ ಆದರ್ಶ ವಿದ್ಯಾಲಯಗಳನ್ನು ವಾಣಿಜ್ಯ ಮತ್ತು ವಿಜ್ಞಾನ ವಿಷಯಗಳಲ್ಲಿ ಪದವಿ, ಪದವಿ ಪೂರ್ವ ಕಾಲೇಜುಗಳಾಗಿ ಉನ್ನತೀಕರಿಸಿದ ವಿಜಯಪುರ ಜಿಲ್ಲೆಯ 05 ಕಾಲೇಜುಗಳ ಭೌತಾಶಾಸ್ತ್ರ, ರಸಾಯನಶಾಸ್ತ್ರ ಜೀವಶಾಸ್ತ್ರ ಮತ್ತು ಗಣಕಯಂತ್ರ ಪ್ರಯೋಗಾಲಯಗಳಿಗೆ ಕುರ್ಚಿ ಮತ್ತು ರ್‍ಯಾಕ್ಸ್‌ಗಳನ್ನು ಸರಬರಾಜು ಮಾಡಲು ಆಸಕ್ತ ಸಂಸ್ಥೆಗಳಿಂದ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ. ನೀಡುವ ಸಂಬಂಧ ಆಸಕ್ತ ತರಬೇತಿ ಸಂಸ್ಥೆಗಳಿಂದ ಮರು ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ವಿವರ: ಆದರ್ಶ ವಿದ್ಯಾಲಯಗಳನ್ನು ವಾಣಿಜ್ಯ ಮತ್ತು ವಿಜ್ಞಾನ ವಿಷಯಗಳಲ್ಲಿ ಪದವಿ, ಪದವಿ ಪೂರ್ವ ಕಾಲೇಜುಗಳಾಗಿ ಉನ್ನತೀಕರಿಸಿದ ವಿಜಯಪುರ ಜಿಲ್ಲೆಯ 05 ಕಾಲೇಜುಗಳಿಗೆ ಭೌತಾಶಾಸ್ತ್ರ, ರಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ಪ್ರಯೋಗಾಲಯಗಳಿಗೆ ಕುರ್ಚಿ ಮತ್ತು ರ್‍ಯಾಕ್ಸ್‌ಗಳನ್ನು ಸರಬರಾಜು ಮಾಡುವ ಸಂಬಂಧ. **ಟೆಂಡರ್ ಸಂಖ್ಯೆ:** PUED/2024-25/IND0057 **ಟೆಂಡರ್ ಮೊತ್ತ ರೂ. 30.00 ಲಕ್ಷಗಳು.**
ಪೂರ್ಣ ಟೆಂಡರ್ ವಿವರಗಳನ್ನು ಅಂತರ್ಜಾಲ https:// kppp.karnataka.gov.in ನಲ್ಲಿ ವೀಕ್ಷಿಸಬಹುದಾಗಿದ್ದು, ಇ–ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ: 11.02.2025 ಕೊನೆಯ ದಿನಾಂಕ: 22.02.2025 ಸಂಜೆ 5.30 ಗಂಟೆ ಆಗಿದೆ. ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ್ನು ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಉಪನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ, (ಪದವಿ ಪೂರ್ವ), ವಿಜಯಪುರ
ವಾಸಾಸಂಇ/ವಿಜಯಪುರ/687/ಕೆಎಸ್‌ಎಂಸಿಎ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ, (ವಿದ್ಯುತ್) ಪೂರ್ವ ವಲಯ, 16ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಕಟ್ಟಡ, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು–01.

ಸಂಖ್ಯೆ:ಕಾಪಾಅ/ವಿದ್ಯುತ್/ಪೂರ್ವ/ಟೆಂಡರ್/11/2024–25 ದಿನಾಂಕ: 13.02.2025

ತಿದ್ದುಪಡಿ

ವಿಷಯ: ಟೆಂಡರಿನ ವೇಳಾಪಟ್ಟಿ ವಿಸ್ತರಣೆಗೆ ಸಂಬಂಧಿಸಿದಂತೆ ತಿದ್ದುಪಡಿ
ಉಲ್ಲೇಖ: ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ವಿದ್ಯುತ್/ಪೂರ್ವ/ಟೆಂಡರ್/11/2024–25, ದಿನಾಂಕ: 05.02.2025
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಕಚೇರಿಯಿಂದ ಉಲ್ಲೇಖಿತ ಟೆಂಡರನ್ನು ಆಹ್ವಾನಿಸಲಾಗಿದ್ದು, ತಾಂತ್ರಿಕ ಕಾರಣಗಳಿಂದ ಟೆಂಡರ್ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಮಾರ್ಪಾಡು ಮಾಡಲಾಗಿದೆ.

ನಿಗದಿಪಡಿಸಿದ್ದ ದಿನಾಂಕ	ಮಾರ್ಪಾಡಾದ ದಿನಾಂಕ
(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ 07.02.2025ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ವಿಚಾರಣೆಗೆ ಕೊನೆಯ ದಿನಾಂಕ 13.02.2025ರ ಸಂಜೆ 4:00 ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 14.02.2025ರ ಬೆಳಿಗ್ಗೆ 11:30 ಗಂಟೆಗೆ ನಡೆಸಲಾಗುವುದು. (4) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಆನ್‌ಲೈನ್‌ನಲ್ಲಿ ಸಲ್ಲಿಸುವ ದಿನಾಂಕ 24.02.2025ರ ಸಂಜೆ 4:00 ಗಂಟೆಗೆ. (5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 25.02.2025ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು.	(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ 14.02.2025, ಸಂಜೆ 4:30 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್ ವಿಚಾರಣೆಗೆ ಕೊನೆಯ ದಿನಾಂಕ 19.02.2025ರ ಸಂಜೆ 4:00 ಗಂಟೆಯುವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 20.02.2025ರ ಬೆಳಿಗ್ಗೆ 11:30 ಗಂಟೆಗೆ ನಡೆಸಲಾಗುವುದು. (4) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಆನ್‌ಲೈನ್‌ನಲ್ಲಿ ಸಲ್ಲಿಸುವ ದಿನಾಂಕ 03.03.2025ರ ಸಂಜೆ 4:00 ಗಂಟೆಗೆ. (5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 04.03.2025ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು.

2 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇಎಂಡಿ ಮೊತ್ತವನ್ನು ಕೆಳಕಂಡ ಮಾರ್ಪಾಡುಗಳಂತೆ ಅಳವಡಿಸಿಕೊಳ್ಳುವುದು.

ಪ್ರಸ್ತುತ	ಮಾರ್ಪಾಡಾಗಿರುವುದು
₹.12.07 ಲಕ್ಷಗಳು (ಹನ್ನೆರಡು ಲಕ್ಷದ ಏಳು ಸಾವಿರಗಳು ಮಾತ್ರ) (ರೂ.2.00 ಲಕ್ಷಗಳು (ಎರಡು ಲಕ್ಷ ಮಾತ್ರ)ವನ್ನು ಕೆಪಿಪಿ ಪೋರ್ಟಲ್ ಆನ್‌ಲೈನ್ ಮೂಲಕ ಪಾವತಿಸಬೇಕು ಮತ್ತು ಉಳಿದ ರೂ.10.07 ಲಕ್ಷಗಳು (ಹತ್ತು ಲಕ್ಷದ ಏಳು ಸಾವಿರಗಳು ಮಾತ್ರ) ಬ್ಯಾಂಕ್ ಗ್ಯಾರಂಟಿ ಮೂಲಕ ಪಾವತಿಸಬೇಕು)	₹.12.07 ಲಕ್ಷಗಳು (ಹನ್ನೆರಡು ಲಕ್ಷದ ಏಳು ಸಾವಿರಗಳು ಮಾತ್ರ) (ರೂ.1.00 ಲಕ್ಷಗಳು (ಒಂದು ಲಕ್ಷ ಮಾತ್ರ)ವನ್ನು ಕೆಪಿಪಿ ಪೋರ್ಟಲ್ ಆನ್‌ಲೈನ್ ಮೂಲಕ ಪಾವತಿಸಬೇಕು ಮತ್ತು ಉಳಿದ ರೂ.11.07 ಲಕ್ಷಗಳು (ಹನ್ನೊಂದು ಲಕ್ಷದ ಏಳು ಸಾವಿರಗಳು ಮಾತ್ರ) ಬ್ಯಾಂಕ್ ಗ್ಯಾರಂಟಿ ಮೂಲಕ ಪಾವತಿಸಬೇಕು)

ಇನ್ನುಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಪೂರ್ವ ವಲಯ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ / CHAMUNDESHWARI ELECTRICITY SUPPLY CORPORATION LIMITED

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು
Telephone No: 9448994705
(A Government of Karnataka Undertaking)
Corporate Office, Procurement Section, CESC, Mysuru-570017.
Website: www.cescmysore.org
E-mail ID: gmpurc@cescmysore.org
Company Identity Number(CIN): U40109KA2004SGC035177

ಚಾವಿಸನಿನಿ/ಪ್ರವ್ಯ/ಉ.ಪ್ರವ್ಯ(ಖ)/ಸ.ಪ್ರವ್ಯ(ಖ–2)/2024–25/29026 ದಿನಾಂಕ: 12.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾವಿಸನಿನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ.ಸಂ	ಸಾಮಾಗ್ರಿಗಳ ವಿವರ	ವಿಚಾರಣೆ ಸಂಖ್ಯೆ/ ದಿನಾಂಕ
1	ಚಾವಿಸನಿನಿಗೆ 11ಕೆವಿ 200Amp ಸಿಂಗಲ್ ಬ್ರೇಕ್ ಪಾಲಿಮೇರಿಕ್ ಜಿ.ಓ.ಎಸ್ ಸರಬರಾಜು ಮಾಡಲು	ಸಿ2–6056/ 12–02–2025

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 14–02–2025 ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91–8046010000, +91–8068948777 ಅಥವಾ ಇ–ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ. ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

ಸಹಿ/– ಪ್ರಧಾನ ವ್ಯವಸ್ಥಾಪಕರು(ಖರೀದಿ), ಚಾ.ವಿ.ಸ.ನಿ.ನಿ., ಮೈಸೂರು
DIPR/DDMYS/1275/KSMCA/901/2024-25

ಕರ್ನಾಟಕ ಸರಕಾರ — ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ – 581 301

DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301
ದೂರವಾಣಿ: 08382 221170 Email: ka.uttarakannada.dudc@gmail.com
No: UK/DUDC/AmrutNagarothanaPhase-4/CR/2024-25 Dated: 11-02-2025

ಅಲ್ಪಾವಧಿ ಟೆಂಡರು ಪ್ರಕಟಣೆ

ಕೆಟಿಪಿಪಿ ಕಾಯ್ದೆ 1999 ನಿಯಮ 2000 ರಂತೆ, ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕಾರವಾರರವರು ಅಮೃತ ನಗರೋತ್ಥಾನ ಹಂತ –4 ಯೋಜನೆಯಡಿ ಈ ಕೆಳಗೆ ವಿವರಿಸಿದ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **KPWD** ಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರು ಎಲ್ಲಾ ದಾಖಲಾತಿಗಳೊಂದಿಗೆ **KPPP** ಪೋರ್ಟಲ್ **(http:/kppp.karnataka.gov.in)** ಮೂಲಕ ತಮ್ಮ ದರವನ್ನು ಸಲ್ಲಿಸಬಹುದಾಗಿದೆ. ಟೆಂಡರ್ ವಿವರ ಹಾಗೂ ವೇಳಾ ಪಟ್ಟಿ ಈ ಕೆಳಗಿನಂತಿರುತ್ತದೆ.
(1) ಗುತ್ತಿಗೆದಾರರೊಂದಿಗೆ ಪೂರ್ವಭಾವಿ ಸಭೆ/ಸ್ಪಷ್ಟೀಕರಣ **ದಿನಾಂಕ: 18–02–2025 ಸಮಯ 11.30 ಗಂಟೆ** ಜಿಲ್ಲಾ ನಗರಾಭಿವೃದ್ಧಿ ಕೋಶ ಕಚೇರಿ ಮಾಡುವುದು. (2) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 21–02–2025 ಸಮಯ 17.00 ಗಂಟೆ** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 24–02–2025 ಸಮಯ 17.30 ಗಂಟೆ** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 28–02–2025 ಸಮಯ 11.00 ಗಂಟೆ**

ನಗರ ಸ್ಥಳೀಯ ಸಂಸ್ಥೆ ಹೆಸರು	ಇಂಡೆಂಟ್ ನಂಬರ್
ನಗರಸಭೆ ದಾಂಡೇಲಿ	Indent No. DMA/2024-25/OW/ WORK_INDENT33364/ CALL-2

ಟೆಂಡರ್ ಕುರಿತು ಹೆಚ್ಚಿನ ಮಾಹಿತಿಗಾಗಿ **http:/kppp.karnataka.gov.in. &**
http://www.uttarakannadadudc.mrc.gov.in/ ಅಥವಾ ಈ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ
DIPR/ADK/KSMCA/874/24-25 dt. 12.02.2025

ಕರ್ನಾಟಕ ಸರಕಾರ (ಲೋಕೋಪಯೋಗಿ, ಇಲಾಖೆ) — ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆ: ಕಲಬುರಗಿ

ಸಂ:ಕಾನಿಇಂ/ಲೋಇ./ಸೇವಿ/ತಾಶಾ–1/2024–25/2911 ದಿನಾಂಕ : 12–02–2025

:: ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::

1) ಕಾಮಗಾರಿಯ ವಿವರ: 1. ಚಿಂಚೋಳಿ ತಾಲೂಕಿನ 05 ರಸ್ತೆ ಕಾಮಗಾರಿಗಳ ಇಂಡೆಂಟ್ ಸಂ.: 18515, 18597, 19621 (ಎಸ್.ಸಿ), 19534, 19563, 2. ಸೇಡಂ ತಾಲೂಕಿನ 01 ರಸ್ತೆ ಕಾಮಗಾರಿಗಳ ಇಂಡೆಂಟ್ ಸಂ. : 18925, 3. ಚಿತ್ತಾಪೂರ ತಾಲೂಕಿನ 01 ರಸ್ತೆ ಕಾಮಗಾರಿ ಇಂಡೆಂಟ್ ಸಂ : 17993, 2) ಲೆಕ್ಕ ಶೀರ್ಷಿಕೆ: 2024–25ನೇ ಸಾಲಿನ 5054 ಅಂಪೆಡಿಕ್ಸ್–ಇ ಹಾಗೂ 3054 ರಾಜ್ಯ ಹೆದ್ದಾರಿ ನಿರ್ವಹಣೆ ಕಾಮಗಾರಿಗಳು, 3) ಟೆಂಡರಿಗಿಟ್ಟ ಮೊತ್ತ: **ಕನಿಷ್ಠ ರೂ. 5.00 ಲಕ್ಷಗಳು, ಗರಿಷ್ಠ ರೂ. 500.00 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ: 1ನೇ ದರ್ಜೆ & ಮೇಲ್ಪಟ್ಟು, 5) ಪೂರ್ವಭಾವಿ ಸಭೆ ದಿನಾಂಕ: **21–02–2025 ಬೆಳಿಗ್ಗೆ 11:30 ಗಂಟೆವರೆಗೆ,** 6) ಟೆಂಡರ್ ಸ್ಪಷ್ಟೀಕರಣ ಪಡೆಯುವ ಹಾಗೂ ಸಲ್ಲಿಸುವ ಅಂತಿಮ ದಿನಾಂಕ : **24–02–2025 ಸಾಯಂಕಾಲ 17:30 ಗಂಟೆಯವರೆಗೆ,** 7) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ., 8) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **25–02–2025 ರ ಸಾಯಂಕಾಲ 16:00 ಗಂಟೆಯವರೆಗೆ,** 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **27–02–2025 ರ ಸಾಯಂಕಾಲ 16:30 ಗಂಟೆಯವರೆಗೆ,** 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **01–03–2025 ರ ಸಾಯಂಕಾಲ 16:30 ಗಂಟೆಯವರೆಗೆ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್ ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ: ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.kppp.karnataka.gov.in ಮಾಡಲಾಗುವುದು.
ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯ ಮುಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ
ವಾ.ಸಾ.ಸಂ.ಇ/ಕಲಬುರಗಿ/949/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ಗೃಹ ಮಂಡಳಿ

Karnataka Housing Board — Building Communities
ಗೃಹ ಆಯುಕ್ತರವರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಪ.ಪ್ರ/2024–25 ದಿನಾಂಕ: 13–02–2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಬ್ಯಾಲಾಳು ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ. ಹಂಚಿಕೆ ನಂತರ ಉಳಿದಿರುವ ನಿವೇಶನಗಳನ್ನು ವಿಲೇವಾರಿ ಮಾಡಲು ಆನ್‌ಲೈನ್ ಮುಖಾಂತರ ಸಾರ್ವಜನಿಕರಿಂದ ಆರಂಭಿಕ ಠೇವಣಿಯೊಂದಿಗೆ ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು e-payment ಮೂಲಕ ಅರಂಭಿಕ ಠೇವಣಿ ಹಣವನ್ನು ಪಾವತಿ ಮಾಡಿ **ದಿನಾಂಕ: 15–02–2025** ರಿಂದ ಅರ್ಜಿ ಸಲ್ಲಿಸಬಹುದಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **28–02–2025** ಅಗಿರುತ್ತದೆ.

ನಿವೇಶನಗಳಗೆ ಪಾವತಿಸಬೇಕಾಗಿರುವ ನೊಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಮೊತ್ತ ಈ ಕೆಳಕಂಡಂತಿದೆ.

ಸ್ಥಳ ಮತ್ತು ಜಿಲ್ಲೆ	ವರ್ಗ	ಹಂಚಿಕೆಗೆ ಲಭ್ಯವಿರುವ ನಿವೇಶನಗಳು	ನೊಂದಣಿ ಶುಲ್ಕ (ರೂ.ಗಳಲ್ಲಿ)	ಆರಂಭಿಕ ಠೇವಣಿ (ರೂ.ಗಳಲ್ಲಿ)	ಮಂಡಳ ದರ (ಪ್ರತಿ ಚದರಡಿಗೆ)
ಬೆಂಗಳೂರು ದಕ್ಷಿಣ ತಾಲ್ಲೂಕು, ಬ್ಯಾಲಾಳು	EWS	09	300/-	25,000/-	875/-
	LIG	197	500/-	50,000/-	1750/-
	MIG	555	1000/-	75,000/-	
	HIG-I	67	1,500/-	1,00,000/-	

ಅರ್ಜಿ ನೊಂದಣಿ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಲು ಹಾಗೂ ನಿಯಮ ಮತ್ತು ಷರತ್ತುಗಳ ಪೂರ್ಣ ವಿವರಗಳಾಗಿ ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ, ಮೊಬೈಲ್ ನಂ. 9845600099 ಹಾಗೂ ಸಹಾಯಕ ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳ, 4ನೇ ಮಹಡಿ, ಕಾವೇರಿ ಭವನ, ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ಮೊಬೈಲ್ ನಂ. 9164839817, ದೂರವಾಣಿ ಸಂಖ್ಯೆ: 080–22273511 ವಿಸ್ತರಣೆ: 307/309 ರಲ್ಲಿ ಸಂಪರ್ಕಿಸಬಹುದು

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
DIPR/CP/RO 5037/AAPL/2024-25

ಪರಿಶಿಷ್ಟ ಜಾತಿ ಒಳ ಮೀಸಲಾತಿ ಆಯೋಗದ ಅಧ್ಯಕ್ಷ ಎಚ್.ಎನ್. ನಾಗಮೋಹನ್‌ದಾಸ್

‘ಒಳಮೀಸಲಾತಿ ವರದಿ ಸಲ್ಲಿಕೆ ಶೀಘ್ರ’

ಪ್ರಜಾವಾಣಿ ವಾರ್ತೆ


ಬೆಂಗಳೂರು: ‘ಒಳ ಮೀಸಲಾತಿಯಲ್ಲಿ ಯಾರಿಗೂ ಅನ್ಯಾಯವಾಗುವುದಿಲ್ಲ. ಒಳ ಮೀಸಲಾತಿ ಹಂಚಿಕೆ ಕುರಿತು ಸರ್ಕಾರಕ್ಕೆ ಶೀಘ್ರವೇ ವರದಿ ಸಲ್ಲಿಸಲಾಗುತ್ತದೆ’ ಎಂದು ಪರಿಶಿಷ್ಟ ಜಾತಿ ಒಳ ಮೀಸಲಾತಿ ಆಯೋಗದ ಅಧ್ಯಕ್ಷ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಹೇಳಿದರು.

ಕರ್ನಾಟಕ ಮಾದಿಗ ಒಳ ಮೀಸಲಾತಿ ಹೋರಾಟ ಸಮಿತಿ ಗುರುವಾರ ಹಮ್ಮಿಕೊಂಡಿದ್ದ, ‘ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರಿಗೆ ಮನವಿ ಸಲ್ಲಿಸುವ ಮಾದಿಗ ಸಂಬಂಧಿತ ಜಾತಿಗಳ ಸಮನ್ವಯ ಸಭೆ’ಯಲ್ಲಿ ಮನವಿ ಸ್ವೀಕರಿಸಿ ಅವರು ಮಾತನಾಡಿದರು.

‘ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿಯ ಅಗತ್ಯವಿದೆ. ಅದು ಬೇಕೋ ಬೇಡವೋ ಎಂಬ ಚರ್ಚೆ ಅನಗತ್ಯ. ಸುಪ್ರೀಂ ಕೋರ್ಟ್ ಅದರ ಅಗತ್ಯವನ್ನು ಹೇಳಿದ್ದು, ಸಾಮಾಜಿಕ, ರಾಜಕೀಯ, ಔದ್ಯೋಗಿಕವಾಗಿ ವರ್ಗೀಕರಣ ಮಾಡಿ ಮೀಸಲಾತಿ ಹಂಚಿಕೆ ಮಾಡಿ ಎಂದು ಹೇಳಿದೆ. ಆದ್ದರಿಂದ, ಒಳ ಮೀಸಲಾತಿಯನ್ನು ಹೇಗೆ ಕೊಡಬೇಕು? ಯಾರಿಗೆ ಎಷ್ಟು ಕೊಡಬೇಕು ಎಂಬ ಬಗ್ಗೆ ನಿರ್ಧಾರವಾಗಬೇಕಿದೆ’ ಎಂದರು.

‘ಕೆಲವು ಸಮುದಾಯದವರು ಮೀಸಲಾತಿಯನ್ನು ಪಡೆದುಕೊಂಡು ಉನ್ನತಮಟ್ಟಕ್ಕೆ ಹೋಗಿದ್ದಾರೆ. ಕೆಲವರು ಇನ್ನೂ ಕೆಳ ಸ್ತರದಲ್ಲೇ ಇದ್ದಾರೆ. ಅವರು ಮತ್ತು ಇವರ ಮಧ್ಯೆ ಸಂಘರ್ಷವಾಗದಂತೆ ಮೀಸಲಾತಿ ನೀಡಬೇಕು. ಎಲ್ಲರೂ ಸಹೋದರತ್ವ ಭಾವದಿಂದ ಇದನ್ನು ನೋಡಬೇಕು’ ಎಂದು ಹೇಳಿದರು.

‘ಉಳ್ಳವರಿಗೆ ಸೌಲಭ್ಯ ತಡವಾದರೆ ಸಮಸ್ಯೆಯಾಗುವುದಿಲ್ಲ, ಹಸಿದವರಿಗೆ ಏನೂ ಸಿಗದಿದ್ದರೆ ಸಾಯುತ್ತಾರೆ. ಇದನ್ನೆಲ್ಲ ಪರಿಗಣಿಸಿ ಆಯೋಗ ಸಲಹೆಗಳನ್ನು ನೀಡುತ್ತದೆ. ನೀವೆಲ್ಲ ನೀಡಿರುವ ಸಲಹೆ, ಮನವಿಗಳನ್ನು ಪರಿಶೀಲಿಸಿ, ಹಲವು ವಿಷಯಗಳನ್ನು ಮಾರ್ಗಸೂಚಿಯಾಗಿ ಸಲಿದ್ದೇವೆ’ ಎಂದರು.



ಕರ್ನಾಟಕ ಮಾದಿಗ ಒಳ ಮೀಸಲಾತಿ ಹೋರಾಟ ಸಮಿತಿ ವತಿಯಿಂದ ಪರಿಶಿಷ್ಟ ಜಾತಿ ಒಳ ಮೀಸಲಾತಿ ಆಯೋಗದ ಅಧ್ಯಕ್ಷ ಎಚ್.ಎನ್. ನಾಗಮೋಹನ್‌ದಾಸ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ, ಮಾಜಿ ಸಚಿವ ಎಚ್. ಆಂಜನೇಯ, ನಿವೃತ್ತ ಪೊಲೀಸ್ ಅಧಿಕಾರಿ ಬಸವರಾಜ ಮಾಲಗತ್ತಿ, ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ಸುಜಾತಾ ದೊಡ್ಡಮನಿ ಮತ್ತು ಮಾಜಿ ಸಚಿವ ಶಿವಣ್ಣ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ಆಳುವ ವರ್ಗ ದಿಕ್ಕು ತಪ್ಪಿಸುತ್ತದೆ...’

‘ಮೀಸಲಾತಿ ಎಂಬುದು ಶಾಶ್ವತ ಪರಿಹಾರ ಅಲ್ಲ. 100 ಉದ್ಯೋಗಾವಕಾಶಗಳಲ್ಲಿ 98 ಖಾಸಗಿ ಸಂಸ್ಥೆಗಳಲ್ಲಿರುತ್ತವೆ. ಅಲ್ಲಿ ಮೀಸಲಾತಿ ಇಲ್ಲ. ಸರ್ಕಾರಿ ವಲಯದಲ್ಲಿ ಮಂಜೂರಾದ ಒಟ್ಟು ಹುದ್ದೆಗಳ ಪೈಕಿ 2.74 ಲಕ್ಷ ಹುದ್ದೆ ಖಾಲಿ ಇವೆ. ಅವರು ನೇಮಕವನ್ನೇ ಮಾಡಿಕೊಳ್ಳದಿದ್ದರೆ ಮೀಸಲಾತಿ ಇರುವುದರಿಂದ ಪ್ರಯೋಜನವೇನು? ಆಳುವ ವರ್ಗ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತದೆ. ಅವರ ಬಗ್ಗೆ ಚರ್ಚಿಸಿ, ಚಿಂತಿಸಿ ನಮ್ಮ ಮಾರ್ಗವನ್ನು ಕಂಡುಕೊಳ್ಳಬೇಕು’ ಎಂದು ನಾಗಮೋಹನ್‌ದಾಸ್ ಕಿವಿಮಾತು ಹೇಳಿದರು.

‘ಆಯೋಗ ರಚನೆಯಾದ ಒಂದೂವರೆ ತಿಂಗಳಲ್ಲಿ 2,500ಕ್ಕೂ ಹೆಚ್ಚು ಮನವಿಗಳು ಸಲ್ಲಿಕೆಯಾಗಿವೆ. 2,000ಕ್ಕೂ ಹೆಚ್ಚು ಮಂದಿಯೊಂದಿಗೆ ಚರ್ಚೆ ನಡೆಸಿದ್ದೇನೆ. ನಿಮ್ಮ ಎಲ್ಲ ಸಲಹೆ, ಮನವಿಗಳನ್ನು ಕಿವಿಯಿಂದಲ್ಲ, ಹೃದಯದಿಂದ ಆಲಿಸಿದ್ದೇನೆ. ನಿಮ್ಮ ನೋವು, ಕಷ್ಟದ ಅರಿವು ನನಗಿದೆ’ ಎಂದರು.

‘ಸಾಮಾಜಿಕ ನ್ಯಾಯ ಕೊಡಿಸಿ’

‘ಅನ್ಯಾಯಕ್ಕೆ ಒಳಗಾದ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಕೊಡಿಸಬೇಕು’ ಎಂದು ಮಾಜಿ ಸಚಿವ ಎಚ್. ಆಂಜನೇಯ ಮನವಿ ಮಾಡಿದರು.

ಮಾದಿಗ ಸಮುದಾಯದಲ್ಲಿ ಸಮಗಾರ, ಚಮ್ಮಾರ, ಮೋಚಿ, ಡೋರ್, ದಕ್ಕಲಿಗ ಸೇರಿದಂತೆ 45ಕ್ಕೂ ಹೆಚ್ಚು ಒಳ ಪಂಗಡಗಳಿವೆ. ಅವರನ್ನೆಲ್ಲ ಮಾದಿಗ ಸಮುದಾಯದೊಂದಿಗೇ ಪರಿಗಣಿಸಬೇಕು. ಆದಿ ಜಾಂಬವ, ಆದಿ ದ್ರಾವಿಡ, ಆದಿ ಆಂಧ್ರ ಎಂದು ದಾಖಲಿಸದೆ, ನಿರ್ದಿಷ್ಟ ಪಂಗಡದ ಹೆಸರನ್ನೇ ನಮೂದಿಸಬೇಕು’ ಎಂದು ಕೋರಿದರು.

ಒಳ ಮೀಸಲಾತಿ ಜಾರಿಗೆ ಒತ್ತಾಯ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಒಂದೂವರೆ ವರ್ಷವಾದರೂ ನೆಪ ಮಾತ್ರಕ್ಕೆ ಆಯೋಗ ನೇಮಿಸಿ, ಮಾದಿಗ ಸಮಾಜಕ್ಕೆ ದ್ರೋಹವೆಸಗಿದೆ ಎಂದು ಭೀಮ್ ಆರ್ಮಿ ಸೌತ್ ಇಂಡಿಯಾ ಕರ್ನಾಟಕ ಸಂಸ್ಥಾಪಕ ಅಧ್ಯಕ್ಷ ಸಿ.ಅನ್ನದಾನಿ ಆರೋಪಿಸಿದ್ದಾರೆ.

‘ಒಳ ಮೀಸಲಾತಿ ಜಾರಿ ಮಾಡುವುದಾಗಿ ಕಾಂಗ್ರೆಸ್ ಪಕ್ಷ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿತ್ತು. ಈ ವಿಚಾರದಲ್ಲಿ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದೆ’ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

‘ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ಮನೆಮನೆ ಸಮೀಕ್ಷೆ ನಡೆಸಿ, ಆಯಾ ಜಾತಿಗಳ ಜನಸಂಖ್ಯೆ, ಹಿಂದುಳಿದಿರುವಿಕೆ, ಒಳ ಮೀಸಲಾತಿ ವರ್ಗೀಕರಣ ವರದಿಯನ್ನು ಸಿದ್ಧಪಡಿಸಿದೆ. ಪರಿಶಿಷ್ಟ ಜಾತಿಯ ಉಪಜಾತಿಗಳಿಗೆ ಒಳ ಮೀಸಲಾತಿ ಹಂಚಿಕೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ 2024ರ ಆಗಸ್ಟ್ 1ರಂದು ಆದೇಶಿಸಿದೆ. ಸರ್ಕಾರ ನವೆಂಬರ್ 12ರಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ನೇತೃತ್ವದಲ್ಲಿ ಏಕ ಸದಸ್ಯ ಆಯೋಗ ರಚಿಸಿದೆ’ ಎಂದರು.

ಮಚ್ಚಿಗ, ಡೋರ್, ದಕ್ಕಲಿಗ ಸಮುದಾಯದ ಮುಖಂಡರು ಮಾತನಾಡಿ, ‘ನಮ್ಮ ಸಮುದಾಯವು ಮಾದಿಗ ಸಮುದಾಯವನ್ನು ಅಣ್ಣ ಎಂದು ಒಪ್ಪಿಕೊಂಡಿದೆ. ಅವರೊಂದಿಗೆ ನಾವಿರುತ್ತೇವೆ’ ಎಂದು ಹೇಳಿದರು.

‘ಕುಟುಂಬದ ಆರ್ಥಿಕ ಸ್ಥಿತಿ ಮಾನದಂಡವಾಗಲಿ’

ಮಂಗಳೂರು: ‘ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿಗೆ ಕುಟುಂಬದ ಆರ್ಥಿಕ ಸ್ಥಿತಿಗತಿ ಅಥವಾ ವಾರ್ಷಿಕ ಆದಾಯ ಮಾನದಂಡ ಆಗಬೇಕೇ ಹೊರತು, ಜಾತಿ ನೆಲೆಗಟ್ಟು ಅಲ್ಲ’ ಎಂದು ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ಸಂಘ ಸಂಸ್ಥೆಗಳ ಮಹಾ ಒಕ್ಕೂಟ ಹೇಳಿದೆ.

ಈ ಕುರಿತು ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾ ಒಕ್ಕೂಟದ ಅಧ್ಯಕ್ಷ ಲೋಲಾಕ್ಷ, ‘ಪರಿಶಿಷ್ಟ ಜಾತಿಗಳನ್ನು ನ್ಯಾಯೋಚಿತವಾಗಿ ವರ್ಗೀಕರಿಸಬೇಕು. ಇದಕ್ಕಾಗಿ ಮಾನದಂಡ ರೂಪಿಸಬೇಕು. ಇದು ಕೆನೆಪದರ ನೀತಿಗಿಂತ ಭಿನ್ನವಾಗಿರಬೇಕು’ ಎಂದು ಒತ್ತಾಯಿಸಿದರು.


‘2023ರಲ್ಲಿ ಆಗಿನ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ನೇತೃತ್ವದ ಸಂಪುಟದ ಉಪಸಮಿತಿಯ 101 ಪರಿಶಿಷ್ಟ ಜಾತಿಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಿತ್ತು. ಒಂದನೇ ಗುಂಪಿನ ನಾಲ್ಕು ಜಾತಿಗಳಿಗೆ ಶೇ 6, ಎರಡನೇ ಗುಂಪಿನ ನಾಲ್ಕು ಜಾತಿಗಳಿಗೆ ಶೇ 5.5, ಮೂರನೇ ಗುಂಪಿನ 4 ಜಾತಿಗಳಿಗೆ ಶೇ 4.5 ರಷ್ಟು, ಇನ್ನುಳಿದ 89 ಸಣ್ಣ ಪುಟ್ಟ ಜಾತಿಗಳಿಗೆ ಕೇವಲ ಶೇ 1ರಷ್ಟು ಮೀಸಲಾತಿ ನಿಗದಿ ಪಡಿಸಿತ್ತು. ಈ ಅವೈಜ್ಞಾನಿಕ ಶಿಫಾರಸನ್ನು ಆಯೋಗವು ತಿರಸ್ಕರಿಸಬೇಕು’ ಎಂದು ಮನವಿ ಮಾಡಿದರು.

‘ಸುಪ್ರೀಂ ಕೋರ್ಟ್‌ನ ಏಳು ಸದಸ್ಯರ ಪೀಠದ ತೀರ್ಪಿನಂತೆ ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸಲು ಅವುಗಳ ಸಾಮಾಜಿಕ - ಆರ್ಥಿಕ ಪರಿಸ್ಥಿತಿಯ ಅಧಿಕೃತ ದತ್ತಾಂಶ ಅತ್ಯಗತ್ಯ. ನ್ಯಾ.ಎ.ಜೆ.ಸದಾಶಿವ ಆಯೋಗದ ವರದಿ ಅಪ್ರಸ್ತುತ ಎಂದು ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಅದನ್ನು ತಿರಸ್ಕರಿಸಿತ್ತು. ಎಚ್. ಕಾಂತರಾಜ್ ನೇತೃತ್ವದ ಮತ್ತು ಕೆ. ಜಯಪ್ರಕಾಶ್ ಹೆಗ್ಡೆ ನೇತೃತ್ವದ ರಾಜ್ಯ ಹಿಂದುಳಿದ ವರ್ಗಗಳ ಆಯೋಗಗಳ ವರದಿಯನ್ನು ರಾಜ್ಯ ಸರ್ಕಾರ ಇನ್ನೂ ಅಂಗೀಕರಿಸಿಲ್ಲ. ನ್ಯಾ.ನಾಗಮೋಹನದಾಸ್ ಆಯೋಗದ ಬಳಿ ಪರಿಶಿಷ್ಟ ಜಾತಿಗಳ ನಿಖರ ದತ್ತಾಂಶವಿಲ್ಲ’ ಎಂದರು.

ಸುದ್ದಿ 2 ನಿಮಿಷ

ನೀರಾವರಿ: ₹ 52,000 ಕೋಟಿ ವೆಚ್ಚದ ಯೋಜನೆಗೆ ಕ್ರಮ

ಶಿವಮೊಗ್ಗ: ‘ರಾಜ್ಯದಲ್ಲಿ ಬರಗಾಲ ಪೀಡಿತ ಪ್ರದೇಶಗಳನ್ನು ಗುರುತಿಸಿ ಮೂಲ ನೀರಾವರಿ ವ್ಯವಸ್ಥೆ ಕಲ್ಪಿಸಿ ರೈತರಿಗೆ ಅನುಕೂಲ ಮಾಡಿ ಕೊಡಲು ಆದ್ಯತೆ ನೀಡಲಾಗುತ್ತಿದೆ. ₹ 52,000 ಕೋಟಿ ವೆಚ್ಚದ ನೀರಾವರಿ ಯೋಜನೆಗೆ ಸಂಬಂಧಿಸಿದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ’ ಎಂದು ಸಣ್ಣ ನೀರಾವರಿ ಸಚಿವ ಎಂ.ಎಸ್. ಬೋಸರಾಜ ಹೇಳಿದರು.



ಸೊರಬ ತಾಲ್ಲೂಕಿನ ಬಂಗಾರ ಧಾಮದಲ್ಲಿ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರ ಸಮಾಧಿಗೆ ಭೇಟಿ ನೀಡಿ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರು ಪೂರೈಸಲು ₹ 1,800 ಕೋಟಿ ವೆಚ್ಚದಲ್ಲಿ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ ಎಂದ ಅವರು, ‘ಹವಾಮಾನ ವೈಪರೀತ್ಯಗಳಿಂದ ಅಂತರ್ಜಲ ಕಡಿಮೆಯಾಗಿದೆ. ನದಿ, ಹಳ್ಳ-ಕೊಳ್ಳಗಳಿಗೆ ಅಡ್ಡಲಾಗಿ ಚೆಕ್ ಡ್ಯಾಂಗಳನ್ನು ನಿರ್ಮಿಸುವುದರಿಂದ ಅಂತರ್ಜಲ ವೃದ್ಧಿಯಾಗಿ ರೈತರು ಸಕಾಲಕ್ಕೆ ಬೆಳೆ ಬೆಳೆದು ಆರ್ಥಿಕವಾಗಿ ಸಬಲರಾಗಲು ಸಹಕಾರಿಯಾಗಲಿದೆ. ಈ ನಿಟ್ಟಿನಲ್ಲಿ ಬ್ಯಾರೇಜ್ ನಿರ್ಮಾಣಕ್ಕೆ ಒತ್ತು ನೀಡಲಾಗುತ್ತಿದೆ’ ಎಂದರು.

ನಕಲಿ ಅಂಕಪಟ್ಟಿ: ಎಫ್‌ಐಆರ್

ಮಂಡ್ಯ: ‘ಇಲ್ಲಿನ ಜಿಲ್ಲಾ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರ ಹುದ್ದೆಗೆ ಅರ್ಜಿ ಸಲ್ಲಿಸುವಾಗ ನಕಲಿ ಅಂಕಪಟ್ಟಿಗಳನ್ನು ಕೊಟ್ಟಿದ್ದಾರೆ’ ಎಂಬ ಆರೋಪದ ಮೇರೆಗೆ ವಿ.ವಿನೋದ್ ಎಂಬುವವರ ವಿರುದ್ಧ ಮಂಡ್ಯ ಪಶ್ಚಿಮ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಅರಸಿನಕುಂಟೆಯ ಆದರ್ಶ ನಗರದ ನಿವಾಸಿ. 2022ರಲ್ಲಿ ಯೋಜನಾ ವ್ಯವಸ್ಥಾಪಕ ಹುದ್ದೆಗೆ ಅರ್ಜಿ ಸಲ್ಲಿಸಿದ್ದು, ಸ್ನಾತಕೋತ್ತರ ಪದವಿಯನ್ನು (ಎಂ.ಟೆಕ್ ಇನ್ ಸಿವಿಲ್ ಎಂಜಿನಿಯರಿಂಗ್) ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ (ಕೆಎಸ್‌ಒಯು) ಪ್ರಥಮ ದರ್ಜೆಯೊಂದಿಗೆ ಪಡೆದಿರುವುದಾಗಿ ಹೇಳಿ, 2016ನೇ ಸಾಲಿನ ನಕಲಿ ಅಂಕಪಟ್ಟಿ ಸಲ್ಲಿಸಿದ್ದಾರೆ’ ಎಂದು ಸಾಮಾಜಿಕ ಹೋರಾಟಗಾರ ಕೆ.ಆರ್.ರವೀಂದ್ರ ದೂರು ಸಲ್ಲಿಸಿದ್ದರು.

‘ವಿನೋದ್ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಿರ್ಮಿತಿ ಕೇಂದ್ರದಲ್ಲಿ 2014ರಿಂದ 2019ರವರೆಗೆ ಸಹಾಯಕ ಯೋಜನಾ ವ್ಯವಸ್ಥಾಪಕರಾಗಿ ಹಾಗೂ ಕೆಆರ್‌ಐಡಿಎಲ್‌ನಲ್ಲೂ ಕರ್ತವ್ಯ ನಿರ್ವಹಿಸಿರುವ ಬಗ್ಗೆ ಮಾಹಿತಿ ನೀಡಿದ್ದಾರೆ. ನಕಲಿ ಅಂಕಪಟ್ಟಿ ಸಲ್ಲಿಸಿ ವಂಚಿಸಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ದೂರಿನಲ್ಲಿ ಒತ್ತಾಯಿಸಿದ್ದರು.

ಹಾಡುತ್ತಲೇ ಇರಲಿ ಜಾನಪದ ಕೋಗಿಲೆ

• ಅಕ್ಷತಾ ಕೃಷ್ಣಮೂರ್ತಿ

ನುಡಿ ನಮನ

‘ಮಗ ಇಲ್ಲದಿದ್ದರೇನಂತೆ, ನನಗೆ ಊರ ತುಂಬ ಮಕ್ಕಳಿದ್ದಾರೆ. ನನ್ನನ್ನು ಪ್ರೀತಿಸುವ ಮೊಮ್ಮಕ್ಕಳ ಸಂಖ್ಯೆಗೆ ಲೆಕ್ಕವಿಲ್ಲ’. ಇದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸುಕ್ರಿ ಬೊಮ್ಮಗೌಡ ಅವರು ಯಾವಾಗಲೂ ಹೇಳುತ್ತಿದ್ದ ಮಾತು. ಹೀಗಾಗಿ ನಾವು ಅವರನ್ನು ಸುಕ್ರಿ ಗೌಡ ಬದಲು ಪ್ರೀತಿಯಿಂದ ಸುಕ್ರಜ್ಜಿ ಎಂದು ಕರೆಯುತ್ತಿದ್ದೆವು.

‘ಸಾರಾಯಿ ಅನ್ನೋದು ವಿಷ. ಕಟ್ಟಿಕೊಂಡ ಗಂಡನನ್ನು, ಮಗನನ್ನು, ನನ್ನೆದುರು ಆಡಿ ಬೆಳೆಯುತ್ತಿದ್ದ ಊರಿನ ಹತ್ತಾರು ಮಕ್ಕಳನ್ನು ಈ ವಿಷ ಕಸಿದುಕೊಂಡಿತು. ವಿಷವನ್ನು ಊರಿಂದ ಹೊರಗಟ್ಟಬೇಕು’ ಎನ್ನುತ್ತಿದ್ದ ಸುಕ್ರಜ್ಜಿ ಹೋರಾಡಿ ಬಡಗೇರಿ ಗ್ರಾಮದಲ್ಲಿ ಸಾರಾಯಿ ಮಾರಾಟ ನಿಷೇಧ ಆಗುವಂತೆ ಮಾಡಿದ್ದು ಈಗ ಇತಿಹಾಸ.

ಸುಕ್ರಿ ಅಸಂಖ್ಯ ಹಾಡುಗಳನ್ನು ಬಲ್ಲವರು. ಅಂಜುಗನ ಹಕ್ಕಿ ಕಥೆ, ರಾಮಾಯಣ, ಮಹಾಭಾರತ, ಅಜ್ಜಮುನಿ ಕಥೆ, ಹಾಲಕ್ಕಿ ಹೆಸರು ಬಂದ ಬಗೆ ಸೇರಿ ಅನೇಕ ಹಾಡುಗಳನ್ನು ಹಾಡುತ್ತಿದ್ದರು. ಆಶು ಕವಿತೆ ಕಟ್ಟುವ, 24 ತಾಸೂ ಹಾಡುವಷ್ಟು ಹಾಡುಗಳು ಅವರ ನೆನಪಿನದಲ್ಲಿದ್ದವು.



ಮದ್ಯಪಾನ ನಿಷೇಧಕ್ಕೆ ಆಗ್ರಹಿಸಿ ಮುರುಡೇಶ್ವರದಿಂದ ಕಾರವಾರಕ್ಕೆ ಪಾದ ಯಾತ್ರೆ ನಡೆಸುವ ಹೋರಾಟಕ್ಕೆ ಸುಕ್ರಿ ಗೌಡ ಅವರು ಡೊಳ್ಳು ಬಾರಿಸಿ ಚಾಲನೆ ನೀಡಿದ್ದರು.

ಬೆಂಕಿಯಲ್ಲಿ ಅರಳಿದ ಹೂವು: ಸುಕ್ರಜ್ಜಿ ಅವರ ಹುಟ್ಟೂರು ಅಂಕೋಲಾ ತಾಲ್ಲೂಕಿನ ಶಿರಕುಳಿ. ಶುಕ್ರವಾರ ಹುಟ್ಟಿದ ಕಾರಣಕ್ಕೆ ‘ಸುಕ್ರಿ’ ಎಂದು ಪಾಲಕರು ಹೆಸರಿಟ್ಟರು. ಸುತ್ತಲ ಪರಿಸರವನ್ನು ಸೂಕ್ಷ್ಮವಾಗಿ ನೋಡುವ, ನೆಲದ ಸೊಗಡನ್ನು ಹೀರಿಕೊಳ್ಳುವ ಗುಣ ಸುಕ್ರಿಯವರಲ್ಲಿತ್ತು. ಸುಕ್ರಿ ಶಾಲೆ ಕಲಿತವರಲ್ಲ. ಬಡತನ, ಹಸಿವು, ಅವಮಾನಗಳನ್ನೆಲ್ಲ ಚಿಕ್ಕಂದಿನಿಂದ ಎದುರಿಸುತ್ತ ಬಂದರೂ ಕುಗ್ಗಲಿಲ್ಲ.

ಎಲ್ಲವನ್ನೂ ಎದುರಿಸುವ ಧೈರ್ಯ ಚಿಕ್ಕಂದಿನಿಂದ ಬಂದಿತ್ತು. ಹೀಗಾಗಿಯೇ ಆ ಕಾಲದಲ್ಲಿ ಹುಡುಗರಿಗೆ ಮಾತ್ರ ಮೀಸಲಾಗಿದ್ದ ದನ ಕಾಯುವ ಕೆಲಸವನ್ನು ಸುಕ್ರಿ ಮಾಡುತ್ತಿದ್ದರು. ಆಟಗಳಲ್ಲಿ ಗಂಡು ಮಕ್ಕಳನ್ನು ಸೋಲಿಸುತ್ತಿದ್ದರು. ಒಂದರ್ಥದಲ್ಲಿ ಅವರು ಬೆಂಕಿಯಲ್ಲಿ ಅರಳಿದ ಹೂವು!

ಹೀಗೆ ಆಡುತ್ತ, ಹಾಡುತ್ತ ಅಪಾರವಾದ ಜಾನಪದವನ್ನು ತನ್ನೊಡಲಲ್ಲಿ ತುಂಬಿಕೊಂಡ ಸುಕ್ರಿ ಅವರದ್ದು ಬಾಲ್ಯವಿವಾಹ. ಸುಕ್ರಿ ಅವರಿಗೆ 12ನೇ ವರ್ಷದಲ್ಲಿ ಬಡಗೇರಿಯ 45ರ ಬೊಮ್ಮ ಗೌಡನೊಂದಿಗೆ ಮದುವೆಯಾಯಿತು. ಮಕ್ಕಳಿರದ ಕಾರಣ ಸುಕ್ರಿ ತಮ್ಮನ ಮಗ ಶಂಕರ ಅವರನ್ನು ದತ್ತು ಪಡೆದರು. ಆದರೆ, ಸಾರಾಯಿ ಕುಡಿತದಿಂದ ಶಂಕರ ಮೃತಪಟ್ಟನು. ಸುಕ್ರಿ ಅವರ ಪ್ರತಿಭೆ ಬಲ್ಲ ಬಡಗೇರಿಯ ಗೋವಿಂದ ಮಹಾಲೆ ಅವರು ಜಗತ್ತೇ ಸುಕ್ರಿಯವರನ್ನು ಗುರುತಿಸುವಂತೆ ಮಾಡಿದರು.

ನಾಟಿ ಔಷಧ ಬಲ್ಲ ವೈದ್ಯೆ, ವಿಶ್ವವಿದ್ಯಾಲಯದಲ್ಲಿ ಸಂಪನ್ಮೂಲ ವ್ಯಕ್ತಿಯೂ ಆದವರು. ಜಾನಪದ ಕೋಗಿಲೆಯಾಗಿ ಮಿಂಚಿದವರು. ಇನ್ನು ಅವರ ಧ್ವನಿ ಕೇಳದಿರಬಹುದು. ಆದರೆ, ಅವರು ಹಾಡುತ್ತಿದ್ದ ಪದಗಳು ಕಿವಿಯಲ್ಲಿ ಗುನಗುನಿಸುತ್ತ ಇರಲಿ.



ಸುಕ್ರಿ ಗೌಡ ನಿಧನ

ಕಾರವಾರ: ಹಾಲಕ್ಕಿ ಸಮುದಾಯದ ಜಾನಪದ ಗೀತೆಗಳನ್ನು ಹಾಡುವುದರ ಜೊತೆಗೆ ಮದ್ಯಪಾನ ವಿರೋಧಿ ಹೋರಾಟದಲ್ಲಿ ತೊಡಗಿದ್ದ ಅಂಕೋಲಾ ತಾಲ್ಲೂಕು ಬಡಗೇರಿಯ ಸುಕ್ರಿ ಬೊಮ್ಮ ಗೌಡ (88) ಗುರುವಾರ ನಸುಕಿನಲ್ಲಿ ಸ್ವಗೃಹದಲ್ಲಿ ನಿಧನರಾದರು.

‘ಸುಕ್ರಜ್ಜಿ’ ಎಂದೇ ಖ್ಯಾತರಾಗಿದ್ದ ಅವರು ಬಡಗೇರಿ ಗ್ರಾಮದಲ್ಲಿ ಮದ್ಯ ಮಾರಾಟ ಹಾವಳಿ ಹೆಚ್ಚಿದ್ದರಿಂದ ಅದರ ತಡೆಗೆ 1990ರ ದಶಕದಲ್ಲಿ ಜನಾಂದೋಲನ ನಡೆಸಿದ್ದರು. ಶಿಕ್ಷಣ ಪಡೆಯದಿದ್ದರೂ ಸಾವಿರಾರು ಜಾನಪದ ಗೀತೆಗಳನ್ನು ನಿರರ್ಗಳವಾಗಿ ಹಾಡಿ, ಅವುಗಳ ಅರ್ಥ ವಿವರಿಸುತ್ತಿದ್ದರು. ಅವರನ್ನು ‘ಜಾನಪದ ವಿಶ್ವಕೋಶ’ ಎಂದೇ ಕರೆಯಲಾಗುತಿತ್ತು. ಹಂಪಿ ವಿಶ್ವವಿದ್ಯಾಲಯ, ಜಾನಪದ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಪಾಠ ಬೋಧಿಸಿದ್ದರು.

1999ರಲ್ಲಿ ಜನಪದಶ್ರೀ ಪ್ರಶಸ್ತಿ, 2006ರಲ್ಲಿ ನಾಡೋಜ ಪ್ರಶಸ್ತಿ, 2017ರಲ್ಲಿ ಪದ್ಮಶ್ರೀ ಪ್ರಶಸ್ತಿಗೆ ಪಾತ್ರರಾಗಿದ್ದರು. ಸುಕ್ರಿ ಗೌಡ ಅವರ ಅಂತ್ಯಕ್ರಿಯೆ ಸಕಲ ಸರ್ಕಾರಿ ಗೌರವದೊಂದಿಗೆ ಬಡಗೇರಿಯಲ್ಲಿ ನಡೆಯಿತು.

‘ಬಡಗೇರಿ ಗ್ರಾಮದ ರಸ್ತೆಗೆ ಸುಕ್ರಿ ಗೌಡ ಹೆಸರು ಇರಿಸಲಾಗುವುದು’ ಎಂದು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ತಿಳಿಸಿದರು.

ಬೇಡಿಕೆ ಈಡೇರಿಸುವಂತೆ ಅಂಗನವಾಡಿ ಕಾರ್ಯಕರ್ತೆಯರ ಪಟ್ಟು

ಗೌರವಧನ ಹೆಚ್ಚಳಕ್ಕಾಗಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಗೌರವಧನ ಹೆಚ್ಚಳ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ, ರಾಜ್ಯ ಸಂಯುಕ್ತ ಅಂಗನವಾಡಿ ನೌಕರರ ಸಂಘದಿಂದ (ಸಂಯೋಜನೆ: ಎಐಯುಟಿಯುಸಿ) ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಯಿತು.

ಕಾರ್ಯಕರ್ತೆಯರಿಗೆ ತಿಂಗಳಿಗೆ ₹15 ಸಾವಿರ ಹಾಗೂ ಸಹಾಯಕಿಯರಿಗೆ ₹10 ಸಾವಿರ ನಿಗದಿ ಪಡಿಸಿ ಮುಂದಿನ ಬಜೆಟ್‌ನಲ್ಲಿ ಘೋಷಣೆ ಮಾಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ನಿವೃತ್ತರಿಗೆ ₹2 ಲಕ್ಷ ಪರಿಹಾರ ನೀಡಬೇಕು. ಸುಪ್ರೀಂ ಕೋರ್ಟ್ ಆದೇಶದಂತೆ ಅಂಗನವಾಡಿ ನೌಕರರಿಗೆ ಗ್ರಾಚ್ಯುಟಿ (ಉಪ ಧನ) ಹಣ ನೀಡಬೇಕು. ಇದಕ್ಕೆ ಅನುದಾನ ಮೀಸಲು ಇಡಬೇಕು ಎಂದು ಒತ್ತಾಯಿಸಿದರು.

ಅಂಗನವಾಡಿ ಕಾರ್ಯಕರ್ತೆಯರನ್ನು ಸರ್ಕಾರವು ‘ಸಿ’ ಹಾಗೂ ‘ಡಿ’ ದರ್ಜೆಯ ನೌಕರರೆಂದು ಪರಗಣಿಸಬೇಕು. ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಕ್ಷೇಮಾಭಿವೃದ್ಧಿ ನಿಧಿಯಿಂದ ಸಕಾಲದಲ್ಲಿ ವೈದ್ಯಕೀಯ ವೆಚ್ಚವನ್ನು ಬಿಡುಗಡೆ ಮಾಡಬೇಕು. ಸಹಾಯಧನವನ್ನು ₹2 ಲಕ್ಷಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.



ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ರಾಜ್ಯ ಸಂಯುಕ್ತ ಅಂಗನವಾಡಿ ನೌಕರರ ಸಂಘದ ಸದಸ್ಯರು ಗುರುವಾರ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು — ಪ್ರಜಾವಾಣಿ ಚಿತ್ರ

ಈಗಾಗಲೇ ನಿವೃತ್ತಿಯಾದ ಅಂಗನವಾಡಿ ಕಾರ್ಯಕರ್ತೆಯರಿಗೆ ₹50 ಸಾವಿರ ಹಾಗೂ ಸಹಾಯಕಿಯರಿಗೆ ₹30 ಸಾವಿರ ನಿವೃತ್ತಿ ಪರಿಹಾರ ಹಣ ದೊರೆಯುತ್ತಿಲ್ಲ. ಈ ಸಮಸ್ಯೆಯನ್ನು ತಕ್ಷಣವೇ ಪರಿಹರಿಸಬೇಕು. ಎಲ್ಲರಿಗೂ ಪಿಂಚಣಿ ದೊರೆಯುವಂತೆ ಮಾಡಬೇಕು ಎಂಬ ಬೇಡಿಕೆಯನ್ನು ಮಂಡಿಸಿದರು.

ಸೇವಾ ಹಿರಿತನ ಆಧರಿಸಿ ಬಡ್ತಿ ನೀಡಬೇಕು. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐಸಿಡಿಎಸ್) ಕೆಲಸಗಳನ್ನು ಹೊರತುಪಡಿಸಿ ಇತರೆ ಇಲಾಖೆಗಳ ಹೆಚ್ಚುವರಿ ಕೆಲಸಗಳನ್ನು ನೀಡಬಾರದು. ಹೆಚ್ಚುವರಿ ಕೆಲಸಗಳಿಂದ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.


ಪ್ರತಿ ತಿಂಗಳ 5ರ ಒಳಗೆ ತಿಂಗಳ ಗೌರವಧನವನ್ನು ಬಿಡುಗಡೆ ಮಾಡಬೇಕು. ಪ್ರತಿವರ್ಷ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಎರಡು ಜತೆ ಸಮವಸ್ತ್ರ ವಿತರಿಸಬೇಕು. ಅಂಗನವಾಡಿ ಕೇಂದ್ರಗಳಿಗೆ ಮೂಲಸೌಲಭ್ಯ ಕಲ್ಪಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಕೆ. ಸೋಮಶೇಖರ್ ಯಾದಗಿರಿ, ರಾಜ್ಯ ಕಾರ್ಯದರ್ಶಿ ಎಂ. ಉಮಾದೇವಿ ವಹಿಸಿದ್ದರು.

ಪೊಲೀಸ್ ಅಧಿಕಾರಿಗಳೂ ಸೇರಿ ನಾಲ್ವರ ವಿರುದ್ಧ ಎಫ್‌ಐಆರ್

ಅಧಿಕಾರಿಗಳ ಮಧ್ಯೆ ಆತ್ಮೀಯತೆ: ಪತ್ನಿಗೆ ಕೊಲೆ ಬೆದರಿಕೆ

ಪ್ರಜಾವಾಣಿ ವಾರ್ತೆ



ಗೋವರ್ಧನ್

ಬೆಂಗಳೂರು: ಹಲ್ಲೆ, ಮಾನಸಿಕ ಕಿರುಕುಳ, ಕೊಲೆ ಬೆದರಿಕೆ ಹಾಕಿದ ಆರೋಪದ ಅಡಿ ಇಬ್ಬರು ಪೊಲೀಸ್ ಅಧಿಕಾರಿಗಳೂ ಸೇರಿದಂತೆ ನಾಲ್ವರ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಇಂದಿರಾನಗರದ ಡಿಫೆನ್ಸ್ ಕಾಲೊನಿಯ ನಿವಾಸಿ ಅಮೃತಾ ಗೋವರ್ಧನ್ ಅವರು ನೀಡಿದ ದೂರಿನ ಮೇರೆಗೆ ಅಮೃತಾ ಅವರ ಪತಿಯೂ ಆಗಿರುವ ಆಗ್ನೇಯ ವಿಭಾಗದ ಸೈಬರ್ ಠಾಣೆಯ ಎಸಿಪಿ ಗೋವರ್ಧನ್, ಅವರ ತಾಯಿ ಜ್ಞಾನಮಣಿ, ಡಿವೈಎಸ್‌ಪಿ ಅಶ್ವಿನಿ ಕುಮಾರಿ ಮತ್ತು ಅವರ ತಂದೆ ಬೈಲಮೂರ್ತಿ ಎಂಬುವವರ ವಿರುದ್ಧ ಹೈಗ್ರೌಂಡ್ಸ್ ಠಾಣೆ ಪೊಲೀಸರು ದೌರ್ಜನ್ಯ, ಹಲ್ಲೆ ಹಾಗೂ ಇತರೆ ಆರೋಪಗಳ ಅಡಿ ದೂರು ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

‘ಗೋವರ್ಧನ್ ಹಾಗೂ ಅಶ್ವಿನಿ ಅವರು ಆತ್ಮೀಯತೆಯಿಂದ ಇದ್ದು, ನನಗೆ ಹಿಂಸೆ ನೀಡುತ್ತಿದ್ದಾರೆ’ ಎಂದು ಅಮೃತಾ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಅಲ್ಲದೇ ಇಬ್ಬರು ಪೊಲೀಸ್ ಅಧಿಕಾರಿಗಳ ಮಧ್ಯೆ ವಾಟ್ಸ್‌ಆ್ಯಪ್‌ನಲ್ಲಿ ನಡೆದಿರುವ ಚಾಟಿಂಗ್‌ಗಳ ಸ್ಕ್ರೀನ್‌ಶಾಟ್‌ಗಳನ್ನು ಪೊಲೀಸರಿಗೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಎಸಿಪಿ ಗೋವರ್ಧನ್ ಅವರು 2014ರಲ್ಲಿ ನನ್ನನ್ನು ಮದುವೆ ಆಗಿದ್ದರು. ನಮಗೆ ಏಳು ವರ್ಷದ ಪುತ್ರಿ ಇದ್ದಾಳೆ’ ಎಂದು ಅಮೃತಾ ಅವರು ದೂರಿನಲ್ಲಿ ಹೇಳಿದ್ದಾರೆ.

‘ಗೋವರ್ಧನ್ ಅವರು 2022ರಲ್ಲಿ ಮೈಸೂರಿನಲ್ಲಿ ತರಬೇತಿಗೆ ತೆರಳಿದ್ದರು. ತರಬೇತಿ ವೇಳೆ ಅಶ್ವಿನಿ ಅವರ ಪರಿಚಯವಾಗಿತ್ತು. ಇಬ್ಬರ ಮಧ್ಯೆ ಸ್ನೇಹ ಬೆಳೆದಿತ್ತು. ಅದಾದ ಮೇಲೆ ಪತಿಯ ವರ್ತನೆಯಲ್ಲಿ ಬದಲಾವಣೆ ಆಗಿತ್ತು’ ಎಂದು ಅಮೃತಾ ದೂರಿನಲ್ಲಿ ವಿವರಿಸಿದ್ದಾರೆ.

‘ನನ್ನ ಪತಿಗೆ ಅಶ್ವಿನಿ ಅವರು ನಿರಂತರವಾಗಿ ಕರೆ ಮಾಡುತ್ತಿದ್ದರು. ಪತಿಯನ್ನು ಪ್ರಶ್ನಿಸಿದಾಗ ನನ್ನ ಮೇಲೆ ಹಲ್ಲೆ ನಡೆಸಿ, ವಿಚ್ಛೇದನ ನೀಡುವುದಾಗಿ ಬೆದರಿಕೆ ಹಾಕಿದ್ದರು. ಅದಾದ ಮೇಲೆ ಅಶ್ವಿನಿ ಅವರನ್ನು ಸಂಪರ್ಕ ಮಾಡಲಾಯಿತು. ಅವರಿಗೂ ಮದುವೆಯಾಗಿ ನಾಲ್ಕು ವರ್ಷದ ಮಗು ಇರುವುದು ಗೊತ್ತಾಯಿತು. ಪತಿಯಿಂದ ದೂರ ಇರುವಂತೆ ಆಕೆಯ ಬಳಿ ಕೇಳಿಕೊಂಡೆ. ಅದನ್ನು ಆಕೆ ನಿರಾಕರಿಸಿದ್ದಳು’ ಎಂದು ವಿವರಿಸಿದ್ದಾರೆ.

‘ಗೋವರ್ಧನ್ ಅವರ ಪೋಷಕರಿಗೂ ವಿಚಾರ ತಿಳಿಸಿದ್ದೆ. ಅದಕ್ಕೆ ಪುತ್ರನ ವೈಯಕ್ತಿಕ ವಿಚಾರಕ್ಕೆ ಹೋಗದಂತೆ ನನಗೇ ಹೇಳಿದ್ದರು. ನನ್ನ ಮೇಲೆ ಸೀಮೆಣ್ಣೆ ಸುರಿದು ಬೆಂಕಿಹಚ್ಚಲು ಪ್ರಯತ್ನಿಸಿದ್ದರು. ಅದರಿಂದ ಪಾರಾಗಿದ್ದೆ. ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿದ್ದೆ’ ಎಂದು ಉಲ್ಲೇಖಿಸಿದ್ದಾರೆ.

‘ಫೆಬ್ರುವರಿ 6ರಂದು ಹೈಗ್ರೌಂಡ್ಸ್‌ನಲ್ಲಿರುವ ಆಕೆಯ ಮನೆಗೆ ಹೋದಾಗ ಆಕೆಯ ತಂದೆ ನನಗೆ ಅವಾಚ್ಯ ಪದಗಳಿಂದ ನಿಂದಿಸಿದ್ದರು. ಗೋವರ್ಧನ್, ಅಶ್ವಿನಿ ಮತ್ತು ಆಕೆಯ ತಂದೆ, ಸುಳ್ಳು ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸುವುದಾಗಿ ಬೆದರಿಕೆ ಹಾಕಿದ್ದಾರೆ’ ಎಂದು ಮಹಿಳೆ ದೂರಿದ್ದಾರೆ.

ಪೊಲೀಸರಿಂದ ತನಿಖೆ

‘ಪೊಲೀಸರಿಗೆ ದೂರು ನೀಡಲಾಗಿದ್ದು ಅವರು ತನಿಖೆ ನಡೆಸಲಿದ್ದಾರೆ. ಗೋವರ್ಧನ್ ಇದಕ್ಕೂ ಮೊದಲು ವೈದ್ಯ ವೃತ್ತಿ ಮಾಡುತ್ತಿದ್ದರು. ನಂತರ ಪೊಲೀಸ್ ಇಲಾಖೆಗೆ ಸೇರಿದ್ದಾರೆ. ಅಶ್ವಿನಿ ಕಾರವಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಗೋವರ್ಧನ್ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ’ ಎಂದು ಅಮೃತಾ ಪರ ವಕೀಲೆ ಗ್ರೀಷ್ಮಾ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ.

ವಿಚಾರಣಾ ಸಮಿತಿಗೂ ದೂರು

‘2024ರ ಜನವರಿ 2ರಂದು ಕರ್ನಾಟಕ ಪೊಲೀಸ್ ಅಕಾಡೆಮಿಯ ವಿಚಾರಣಾ ಸಮಿತಿಗೆ ದೂರು ನೀಡಿದ್ದೆ. ವಿಚಾರಣಾ ಸಮಿತಿಯಿಂದ ಗೋವರ್ಧನ್‌ಗೆ ಸಮನ್ಸ್ ಬಂದಿತ್ತು. ದೂರು ವಾಪಸ್ ಪಡೆಯುವಂತೆಯೂ ಬೆದರಿಕೆ ಹಾಕಿದ್ದರು’ ಎಂದೂ ದೂರುದಾರೆ ತಿಳಿಸಿದ್ದಾರೆ.

ಭೂಮಾಪಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಶಿವಕುಮಾರ್

ಮೂಡಿಗೆರೆ (ಚಿಕ್ಕಮಗಳೂರು): ಸರ್ವೆ ಇಲಾಖೆಯ ತಾಲ್ಲೂಕು ಘಟಕದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಭೂಮಾಪಕ ಶಿವಕುಮಾರ್ (52) ಗುರುವಾರ ತಾವು ವಾಸವಿದ್ದ ಬಾಡಿಗೆ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಬೆಣ್ಣೆಹಳ್ಳಿಯವರಾದ ಶಿವಕುಮಾರ್, ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕರಾಗಿಯೂ ಆಯ್ಕೆಯಾಗಿದ್ದರು. ಮೂಡಿಗೆರೆ ಬಾಡಿಗೆ ಮನೆಯಲ್ಲಿ ಒಂಟಿಯಾಗಿ ವಾಸವಾಗಿದ್ದರು.

ಅವರ ಪತ್ನಿ ಹಾಗೂ ಮಗಳು ಬೆಂಗಳೂರಿನಲ್ಲಿದ್ದು, ಮಗಳು ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದಾರೆ ಎಂದು ತಿಳಿದು ಬಂದಿದೆ. ಶಿವಕುಮಾರ್ ಅವರ ಸಾವಿಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ಮೂಡಿಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮಹಾತ್ಮಗಾಂಧಿ ಸ್ಮಾರಕ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಯಲಿದ್ದು, ಕುಟುಂಬದವರು ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪೂರ್ಣಾವಧಿ ಸಿ.ಎಂ: ಮತ್ತೆ ಮುನ್ನೆಲೆಗೆ

ಎರಡನೇ ಮುಖಪುಟದಿಂದ...

ಆ ಸಂದರ್ಭದಲ್ಲಿ ಹೈಕಮಾಂಡ್‌ನವರು ಎರಡೂವರೆ ವರ್ಷ ಅಧಿಕಾರ ಎಂದೇನೂ ನಮಗೆ ಹೇಳಿರಲಿಲ್ಲ. ಹೀಗಾಗಿ ನಾವೆಲ್ಲ ಸಿದ್ದರಾಮಯ್ಯ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ ಎಂದೇ ಭಾವಿಸಿದ್ದೇವೆ’ ಎಂದರು.



ಸಿದ್ದರಾಮಯ್ಯ



ಪರಮೇಶ್ವರ

ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಮಲ್ಲಿಕಾರ್ಜುನ ಖರ್ಗೆ ಸುಳಿವು ಕೊಟ್ಟಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಅದರ ಬಗ್ಗೆ ನಾನು ಪ್ರತಿಕ್ರಿಯೆ ಕೊಡುವುದಿಲ್ಲ. ಹೈಕಮಾಂಡ್ ತೀರ್ಮಾನ ಏನೇ ಇದ್ದರೂ ನಾವು ಒಪ್ಪಿಕೊಳ್ಳುತ್ತೇವೆ’ ಎಂದರು.

ಪೂರ್ಣಾವಧಿ ಇರುತ್ತಾರೆ: ‘ದೇವರಾಜ ಅರಸು ಅವರು ಏಳು ವರ್ಷ ಮುಖ್ಯಮಂತ್ರಿ ಆಗಿದ್ದರು. ಸಿದ್ದರಾಮಯ್ಯನವರು ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಇರುತ್ತಾರೆ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

‘ಏಳು ವರ್ಷಗಳಲ್ಲ, ಸಿದ್ದರಾಮಯ್ಯ ಹತ್ತು ವರ್ಷ ಇರುತ್ತಾರೆ. ಅವರನ್ನು ಹೈಕಮಾಂಡ್ ಮುಖ್ಯಮಂತ್ರಿ ಮಾಡಿದೆ. ಸದ್ಯ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ’ ಎಂದರು.

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, ‘ಈ ಅವಧಿ ಪೂರೈಸಿ ಮತ್ತೆ ಸಿದ್ದರಾಮಯ್ಯ ನೇತೃತ್ವದಲ್ಲಿಯೇ ಚುನಾವಣೆ ಎದುರಿಸುತ್ತೇವೆ. ಮುಂದಿನ ಬಾರಿಯೂ ನಾವು ಅಧಿಕಾರಕ್ಕೆ ಬರುತ್ತೇವೆ’ ಎಂದೂ ಹೇಳಿದರು.

ರಾಜಕೀಯದಲ್ಲಿ ಮುಂದುವರಿಯಲು ಒತ್ತಡ

‘ನನಗೆ ಚುನಾವಣಾ ರಾಜಕೀಯ ಸ್ವಲ್ಪ ಮಟ್ಟಿಗೆ ಸಾಕು ಅನಿಸಿದೆ. ಆದರೆ, ಜನರ ಪ್ರೀತಿ, ವಿಶ್ವಾಸ ಜಾಸ್ತಿ ಇರುವುದರಿಂದ ಮುಂದುವರಿಯಬೇಕೇ, ಬೇಡವೇ ಎಂದು ಅವರ ಅಭಿಪ್ರಾಯ ಪಡೆದು ತೀರ್ಮಾನ ಮಾಡುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಆ ಮೂಲಕ, ಮುಂದಿನ ವಿಧಾನಸಭಾ ಚುನಾವಣೆಯಲ್ಲೂ ಸಕ್ರಿಯ ರಾಜಕೀಯದಲ್ಲಿ ಮುಂದುವರಿಯುವ ಇಂಗಿತವನ್ನು ಅವರು ವ್ಯಕ್ತಪಡಿಸಿದ್ದಾರೆ.

ಸುದ್ದಿವಾಹಿನಿ ‘ಪಬ್ಲಿಕ್ ಟಿವಿ’ ಜೊತೆ ಮಾತನಾಡಿರುವ ಮುಖ್ಯಮಂತ್ರಿ, ‘ಮುಂದೆ ಚುನಾವಣೆಯಲ್ಲಿ ನಿಲ್ಲಬಾರದು ಎಂದು ಮಾನಸಿಕವಾಗಿ ನಾನು ತಯಾರಾಗಿದ್ದೇನೆ. ಆದರೆ, ಜನ, ಹಿತೈಷಿಗಳು, ಸ್ನೇಹಿತರು ಎಲ್ಲರೂ ರಾಜಕೀಯದಲ್ಲಿ ಮುಂದುವರಿಯಬೇಕೆಂದು ಒತ್ತಡ ಹಾಕುತ್ತಿದ್ದಾರೆ’ ಎಂದಿದ್ದಾರೆ.

‘ಅಧಿಕಾರ ಜನ ಕೊಡುವುದಲ್ಲವೇ? ಮುಂದಿನ ಚುನಾವಣೆಯಲ್ಲೂ ಜನ ಅಧಿಕಾರ ಕೊಟ್ಟರೆ ನಾವು ಮುಂದುವರಿಯುತ್ತೇವೆ. ಮುಂದಿನ ಚುನಾವಣೆಯಲ್ಲೂ ಜನ ನಮಗೆ ಅಭಿಮಾನದಿಂದ ಅಧಿಕಾರ ಕೊಡುತ್ತಾರೆಂಬ ವಿಶ್ವಾಸ ನನಗೇನೊ ಇದೆ’ ಎಂದು ಹೇಳಿದ್ದಾರೆ. ‘ಒಂದು ಪಕ್ಷ ಅಧಿಕಾರಕ್ಕೆ ಬರಬೇಕಾದರೆ ಜನರ ಆಶೀರ್ವಾದ ಬೇಕಾಗುತ್ತದೆ. ಆ ಮೇಲೆ, ಮುಖ್ಯಮಂತ್ರಿ, ಸಚಿವರು ಆಗಲು ಹೈಕಮಾಂಡ್, ಶಾಸಕರ ಆರ್ಶೀವಾದ ಬೇಕು’ ಎಂದರು.

ಪ್ರತಿಕ್ರಿಯಿಸದ ಡಿಕೆಶಿ: ‘ಸಿದ್ದರಾಮಯ್ಯ ಪೂರ್ಣ ಅವಧಿ ಮುಖ್ಯಮಂತ್ರಿ ಆಗಿ ಇರುತ್ತಾರೆ’ ಎಂಬ ಕೆಲವು ಸಚಿವರ ಹೇಳಿಕೆಯ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿರಾಕರಿಸಿದರು.

ಈ ಬಗ್ಗೆ ಸುದ್ದಿಗಾರರು ಪ್ರಸ್ತಾಪಿಸಿದಾಗ, ತಲೆಯಾಡಿಸುತ್ತಾ ಅವರು ಹೆಜ್ಜೆ ಹಾಕಿದರು.

ಮುಖ್ಯಮಂತ್ರಿ ಕೆಲಸ ಸರ್ಕಾರಿ ಕೆಲಸವೇ? ಅದು ಸಾರ್ವಜನಿಕ ಕೆಲಸ. ಜನರಿಗಾಗಿ ಕೆಲಸ ಮಾಡುವಾಗ ನಿವೃತ್ತಿ ಇರುತ್ತದೆಯೇ? ಸಾರ್ವಜನಿಕ ಜೀವನದಲ್ಲಿ ನಿವೃತ್ತಿ ಇರುವುದಿಲ್ಲ

ಎಚ್.ಸಿ. ಮಹದೇವಪ್ಪ ಸಮಾಜ ಕಲ್ಯಾಣ ಸಚಿವ

ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿ ಆಗಬೇಕೆಂದು ಎಲ್ಲರೂ ಹೇಳಿದ್ದಾರೆ. ತಕ್ಷಣ ಹೇಳಿದರೆ ಏನೂ ಆಗುವುದಿಲ್ಲ. ಅದನ್ನೂ ಕಾದು ನೋಡಬೇಕು

ಸತೀಶ ಜಾರಕಿಹೊಳಿ ಲೋಕೋಪಯೋಗಿ ಸಚಿವ



‘ನಾಗರಿಕರ ಬಗ್ಗೆ ಕಾಳಜಿ ಇದ್ದರೆ ಪ್ರಯಾಣ ದರ ಇಳಿಸಿ’

ಬೆಂಗಳೂರು: ‘ನಮ್ಮ ಮೆಟ್ರೊ’ ಪ್ರಯಾಣ ದರವನ್ನು ಹೆಚ್ಚಳ ಎಷ್ಟು ಮಾಡಿದೆ ಎಂಬ ಬಗ್ಗೆ ಲೆಕ್ಕಾಚಾರ ಇಲ್ಲದೇ ಮೆಟ್ರೊದಲ್ಲಿ ಪ್ರಯಾಣಿಸಿದಾಗ ಬೆಲೆ ದುಪ್ಪಟ್ಟಾಗಿರುವುದನ್ನು ಕಂಡು ಪ್ರಯಾಣಿಕರು ಅವಕ್ಕಾಗಿದ್ದಾರೆ. ದುಬಾರಿ ದರ ನಿಗದಿ ಮಾಡಿರುವುದನ್ನು ಖಂಡಿಸಿದ್ದಾರೆ. ಈ ಬಗ್ಗೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ.





ದೇಶದ ವಿವಿಧ ರಾಜ್ಯಗಳ ಪ್ರಮುಖ ನಗರಗಳಲ್ಲಿ ಸಂಚರಿಸುವ ಮೆಟ್ರೊ ಪ್ರಯಾಣದ ಕನಿಷ್ಠ ದರ ₹5 ರಿಂದ ಆರಂಭವಾಗಿ ಗರಿಷ್ಠ ₹50ರವರೆಗೆ ಇದೆ. ಆದರೆ ನಮ್ಮ ಮೆಟ್ರೊ ಕನಿಷ್ಠ ದರ ₹ 10ರಿಂದ ಗರಿಷ್ಠ ₹90ರವರೆಗೆ ಇದೆ. ಸಾರ್ವಜನಿಕರು ದುಪ್ಪಟ್ಟು ಪ್ರಯಾಣ ದರ ಪಾವತಿಸಬೇಕಾಗಿದೆ. ಈ ದರ ಹೆಚ್ಚಳದಿಂದ ಜನ ಮರಳಿ ಸ್ವಂತ ವಾಹನ ಬಳಕೆಗೆ ಮುಂದಾಗಲಿದ್ದು, ಮತ್ತೆ ರಸ್ತೆ ಸಂಚಾರ ಅಸ್ತವ್ಯಸ್ತವಾಗಲಿದೆ. ಇದಕ್ಕೆ ಯಾರು ಹೊಣೆ? ನಮ್ಮ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ.

ಕೌಡ್ಲೆ ರವಿ, ಅಂಜನಾನಗರ



ಮೆಟ್ರೊ ರೈಲಿನ ಒಂದು ಬೋಗಿಯಲ್ಲಿ ಗರಿಷ್ಠ 50 ಸೀಟುಗಳು ಇರುತ್ತವೆ. ಆದರೆ ಪ್ರತಿ ಬೋಗಿಯಲ್ಲೂ ಸೀಟುಗಳಿಗೆ ಹೋಲಿಸಿದರೆ ಕನಿಷ್ಠ ಮೂರರಿಂದ ನಾಲ್ಕು ಪಟ್ಟು ಜನ ಪ್ರಯಾಣಿಸುತ್ತಾರೆ. ಇದರ ಅರ್ಥ ಒಂದು ರೈಲು ಸಂಚರಿಸಿದರೆ ಬಿಎಂಆರ್‌ಸಿಎಲ್‌ಗೆ ಮೂರರಿಂದ ನಾಲ್ಕು ಪಟ್ಟು ಲಾಭ ಪಡೆಯುತ್ತಿದೆ. ಪ್ರತಿ ಬೋಗಿಯಲ್ಲಿನ ಒಟ್ಟು ಸೀಟುಗಳ ಆಧಾರ ಮೇಲೆ ಮೆಟ್ರೊ ಪ್ರಯಾಣದ ಮೂಲ ದರ ನಿಗದಿಪಡಿಸಲಾಗುತ್ತದೆ. ಇದರಿಂದ ಸಂಸ್ಥೆಗೆ ಯಾವುದೇ ರೀತಿಯ ನಷ್ಟ ಸಾಧ್ಯವಿಲ್ಲ. ಈಗ ಮೆಟ್ರೊ ಪ್ರಯಾಣ ದರ ಏರಿಕೆ ಮಾಡಿರುವುದು ಸಂಪೂರ್ಣ ಅಸಂಮಜಸವಾಗಿದೆ. ದರ ಏರಿಕೆಗೆ ಕೇಂದ್ರದ ಕಡೆ ಬೆರಳು ತೋರಿಸುವ ಬದಲು ದರ ಏರಿಕೆಯನ್ನು ಮುಖ್ಯಮಂತ್ರಿಯವರು ಜನತೆಯ ಪರವಾಗಿ ಏಕೆ ವಿರೋಧಿಸುತ್ತಿಲ್ಲ?

ಎನ್‌.ಸಿ. ಶ್ರೀನಿವಾಸ, ಮಾಜಿ ಮುಖ್ಯ ಮಾಹಿತಿ ಆಯುಕ್ತ



ನಮ್ಮ ಮೆಟ್ರೊ ಪ್ರಯಾಣ ದರವನ್ನು ಹೆಚ್ಚಿಸಿರುವುದು ಖಂಡನೀಯ. ಸಾರ್ವಜನಿಕ ಸಾರಿಗೆ ಎಂದರೆ ಸರ್ಕಾರ ಜನರಿಗೆ ನೀಡಬೇಕಾದ ಮೂಲ ಸೌಲಭ್ಯವಾಗಿದೆ. ಇದು ಲಾಭರಹಿತ ಸೇವೆ ಆಗಬೇಕು. ಮೆಟ್ರೊ ಪರಿಸರ ಸ್ನೇಹಿ ಆಗಿರುವುದರಿಂದ ಸರ್ಕಾರ ಈ ಸಂಸ್ಥೆಗೆ ಹೆಚ್ಚು ಅನುದಾನ ನೀಡಿ, ಪ್ರಯಾಣ ದರವನ್ನು ಕನಿಷ್ಠ ಮಟ್ಟಕ್ಕೆ ಇಳಿಸಬೇಕು.

ಪರಿಸರ ಚಂದ್ರಶೇಖರ, ಬಸವನಗುಡಿ



ಮೆಟ್ರೊ ರೈಲಿನ ದೈನಂದಿನ ಕಾರ್ಯಾಚರಣೆ ವೆಚ್ಚವನ್ನು ಸರಿದೂಗಿಸಲು ಪ್ರಯಾಣದ ದರ ಹೆಚ್ಚಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಸಂಸ್ಥೆಯು ಸಬೂಬು ಹೇಳುತ್ತಿದೆ. ಆದರೆ ಇದರ ಇತರ ವೆಚ್ಚಗಳನ್ನು ಕಡಿಮೆಗೊಳಿಸಬೇಕು. ಬಿಎಂಆರ್‌ಸಿಎಲ್‌ಗೆ ಮೆಟ್ರೊ ನಿಲ್ದಾಣಗಳ ನಿರ್ಮಾಣದ ವೆಚ್ಚವೇ ಹೊರೆಯಾಗಿದೆ. ಎರಡು ಮೂರು ಕಿ.ಮೀ ಅಂತರದಲ್ಲಿ 3-4 ನಿಲ್ದಾಣಗಳ ಅವಶ್ಯಕತೆ ಇದೆಯೆ? ಅವೈಜ್ಞಾನಿಕವಾಗಿ ಮೆಟ್ರೊ ನಿಲ್ದಾಣಗಳನ್ನು ನಿರ್ಮಿಸುವುದನ್ನು ಕೈಬಿಟ್ಟು, ವೆಚ್ಚ ಕಡಿಮೆ ಮಾಡಬೇಕು.

ಅನಿಲ್ ಕುಮಾರ್ ಬಿ.ಎ., ಗಿರಿನಗರ



ಮೆಟ್ರೊದಲ್ಲಿ ಎಂ.ಜಿ. ರಸ್ತೆಯಿಂದ ಕುಂದಲಹಳ್ಳಿಗೆ ಪ್ರಯಾಣಿಸಲು ₹ 33.25ರಷ್ಟು ದರ ಪಾವತಿ ಮಾಡುತ್ತಿದ್ದೆ. ಅದು ಈಗ ₹70ಕ್ಕೆ ಏರಿಕೆಯಾಗಿದೆ. ಇದು ಶೇ 100ಕ್ಕೂ ಅಧಿಕ ಹೆಚ್ಚಳ. ಇಷ್ಟೊಂದು ಹೆಚ್ಚಳವನ್ನು ಯಾವ ಆಧಾರದಲ್ಲಿ ಮಾಡಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ. ಕೆಂಗೇರಿ, ವೈಟ್‌ಫೀಲ್ಡ್‌ನಂಥ ದೂರದ ಪ್ರದೇಶಕ್ಕೆ ಪ್ರಯಾಣಿಸುವವರ ಕಥೆ ಏನು? ನಿತ್ಯ ಮೆಟ್ರೊವನ್ನು ಅವಲಂಬಿಸಿರುವವರು ದರ ಹೆಚ್ಚಳದ ಭಾರವನ್ನು ತಡೆದುಕೊಳ್ಳುವುದು ಹೇಗೆ? ದರ ಏರಿಕೆಯು ಸಾಮಾನ್ಯ ಜನರನ್ನು ಮೆಟ್ರೊದಿಂದ ದೂರ ಮಾಡಿದೆ. ನಮ್ಮಂತೆ ಅನಿವಾರ್ಯವಾಗಿ ಮೆಟ್ರೊ ಬಳಸುವವರ ಜೇಬಿಗೆ ಕತ್ತರಿ ಹಾಕಲಾಗಿದೆ.

ಸ್ವಾತಿ ಹುಲಿ, ಕುಂದಲಹಳ್ಳಿ



ದೇಶದ ಮೊದಲ ಮೆಟ್ರೊ ಕೋಲ್ಕತ್ತಾದಲ್ಲಿ ಪ್ರಾರಂಭವಾಯಿತು. ನಾನು ಇತ್ತೀಚೆಗೆ ಕೋಲ್ಕತ್ತಾ ಮೆಟ್ರೊ ರೈಲಿನಲ್ಲಿ ಕಾಳಿ ಘಾಟನಿಂದ 15 ಕಿ.ಮೀ ದೂರದ ದಕ್ಷಿಣೇಶ್ವರಕ್ಕೆ ಪ್ರಯಾಣ ಮಾಡಿದರೂ ಟಿಕೆಟ್ ದರ ₹25 ಇತ್ತು. ಇದೇ ರೀತಿ ಅಲ್ಲಿ ಮೆಟ್ರೊ ಪ್ರಯಾಣ ದರ ಕನಿಷ್ಠ ₹5 ರಿಂದ ಗರಿಷ್ಠ ₹35 ಇದೆ. ಆದರೆ ಬೆಂಗಳೂರು ಮೆಟ್ರೊ ರೈಲು ಪ್ರಯಾಣ ದರ ಇಡೀ ದೇಶದಲ್ಲಿ ಗರಿಷ್ಠ. ಇದು ಪ್ರಯಾಣಿಕರ ಸುಲಿಗೆ. ಮೆಟ್ರೊ ಪ್ರಯಾಣದ ದರ ಏರಿಕೆಗೆ ಕಾರಣ ನಾವಲ್ಲ ಅವರು ಎಂದು ಹೇಳಿದರೆ ಸಮಸ್ಯೆ ಪರಿಹಾರ ಆಗುವುದಿಲ್ಲ. ಮೊದಲು ಪ್ರಯಾಣ ದರ ಇಳಿಸಿ, ಜನಸಾಮಾನ್ಯರ ಮೇಲಿನ ಹೊರೆ ಕಡಿತಗೊಳಿಸಿ

ರುದ್ರೇಶ್ ಅದರಂಗಿ, ಪ್ರಯಾಣಿಕ



‘ನಮ್ಮ ಮೆಟ್ರೊ’ ಹೆಸರನ್ನೂ ‘ಬಿಎಂಆರ್‌ಸಿಎಲ್ ಮೆಟ್ರೊ’ ಎಂದು ಬದಲಿಸಿದರೆ ಸೂಕ್ತ. ಪ್ರಯಾಣ ದರ ಹೆಚ್ಚಳದಲ್ಲಿ ‘ನಮ್ಮ’ ಅಸ್ತಿತ್ವದ ಒಂದು ಅಂಶವನ್ನೂ ಸಹ ಪರಿಗಣಿಸದ ಮೆಟ್ರೊ ‘ನಮ್ಮ ಮೆಟ್ರೊ’ ಆಗಲು ಹೇಗೆ ಸಾಧ್ಯ? ದೇಶದಲ್ಲಿ ಅತ್ಯಂತ ದುಬಾರಿ ಮೆಟ್ರೊ ಎಂಬ ಕುಖ್ಯಾತಿಗೆ ‘ನಮ್ಮ’ ಹೆಸರನ್ನು ಏಕೆ ಬಳಸುತ್ತೀರಿ? ಬದಲಿಸಿಬಿಡಿ. ಹಾಗೆಯೇ, ‘ದರ ಏರಿಕೆಗೆ ನೀವು ಕಾರಣ ನಾವಲ್ಲ’ ಎಂದು ಪರಸ್ಪರ ಕೆಸರೆರಚಾಟದಲ್ಲಿ ಮುಳುಗಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೂಡಲೇ ಈ ನಾಟಕವನ್ನು ಕೈಬಿಡಬೇಕು. ಸಾರ್ವಜನಿಕರ ಬಗ್ಗೆ ಕಾಳಜಿ ಇದ್ದರೆ ಕೂಡಲೇ ಮೆಟ್ರೊ ಪ್ರಯಾಣ ದರ ಕಡಿತಗೊಳಿಸಬೇಕು.

ನಿರ್ಮಲಾ ಎಚ್‌.ಎಲ್., ಮಲ್ಲೇಶ್ವರ



ಬೆಂಗಳೂರಿನ ಮಧ್ಯಮ ವರ್ಗದ ನಿತ್ಯದ ಸಾರಿಗೆ ನಮ್ಮ ಮೆಟ್ರೊ. ಹೀಗೆ ಒಂದೇ ಬಾರಿಗೆ ಪ್ರಯಾಣಿಕರ ಮೇಲೆ ದುಬಾರಿ ದರ ಏರಿಕೆಯ ಬರೆ ಎಳೆಯಬೇಕಿರಲಿಲ್ಲ. ಸರಿಯಾದ ರೀತಿಯಲ್ಲಿ ಮೆಟ್ರೊ ಮಾರ್ಗದ ಮತ್ತು ಅದರ ನಿಲ್ದಾಣದ ಜಾಗವನ್ನು ಬಳಸಿಕೊಂಡು ಜಾಹೀರಾತು, ನಿಲ್ದಾಣದಲ್ಲಿರುವ ಖಾಲಿ ಜಾಗ ಬಾಡಿಗೆ ನೀಡಿ ಆದಾಯ ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡುವ ಮೂಲಕ ಪ್ರಯಾಣ ದರ ಕಡಿಮೆ ಮಾಡಬಹುದು. ನಗರದಲ್ಲಿ ಜಾಹೀರಾತು ಪ್ರದರ್ಶಿಸಲು ಕಂಪನಿಗಳು ಸರತಿ ಸಾಲಿನಲ್ಲಿ ನಿಂತಿವೆ. ಅವರಿಗೆ ಜಾಗಬೇಕಿದೆ, ಮೆಟ್ರೊ ಇದಕ್ಕೆ ಉತ್ತರವಾಗಬೇಕಿದೆ.

ಶ್ರೀನಿಧಿ ಶ್ರೀಕರ

ಅಭಿಪ್ರಾಯ ಕಳುಹಿಸಿ

ಮೆಟ್ರೊ ಪ್ರಯಾಣ ದರ ಏರಿಕೆಯ ಬಗ್ಗೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು 50 ಪದಗಳ ಮಿತಿಯಲ್ಲಿ ಈ ಕೆಳಗಿನ ವಾಟ್ಸ್‌ಆ್ಯಪ್ ಸಂಖ್ಯೆಗೆ ಕಳುಹಿಸಬಹುದು. ಜೊತೆಗೆ ನಿಮ್ಮ ಭಾವಚಿತ್ರವೂ ಇರಲಿ.

ವಾಟ್ಸ್‌ಆ್ಯಪ್ ಸಂಖ್ಯೆ: **96060 38256**



ಮೆಟ್ರೊ ಪ್ರಯಾಣ ದರ ಏರಿಕೆಯನ್ನು ಖಂಡಿಸಿ, ಸಿಪಿಎಂ ಸದಸ್ಯರು ಗುರುವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು. ತಕ್ಷಣ ದರ ಏರಿಕೆ ವಾಪಸ್ ಪಡೆಯಬೇಕು ಎಂದೂ ಆಗ್ರಹಿಸಿದರು – ಪ್ರಜಾವಾಣಿ ಚಿತ್ರ

ನಷ್ಟ ಕಡಿಮೆಯಾಗುತ್ತಿದ್ದರೂ ಏರಿದ ಪ್ರಯಾಣ ದರ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ‘ನಮ್ಮ ಮೆಟ್ರೊ’ ವರ್ಷದಿಂದ ವರ್ಷಕ್ಕೆ ನಷ್ಟ ಕಡಿಮೆ ಮಾಡಿಕೊಂಡು ಬರುತ್ತಿದೆ. ಬಿಎಂಆರ್‌ಸಿಎಲ್ 2022–23ನೇ ಸಾಲಿನಲ್ಲಿ ₹ 476 ಕೋಟಿ ನಷ್ಟದಲ್ಲಿದ್ದರೆ, 2023–24ರಲ್ಲಿ ನಷ್ಟದ ಪ್ರಮಾಣವು ₹ 341 ಕೋಟಿಗೆ ಇಳಿದಿತ್ತು. ಆದರೂ, ಪ್ರಯಾಣ ದರ ಹೆಚ್ಚಿಸುವ ಮೂಲಕ ಪ್ರಯಾಣಿಕರಿಗೆ ಬರೆ ಎಳೆದಿದೆ.

ಬಿಎಂಆರ್‌ಸಿಎಲ್ 2013–14ರಲ್ಲಿ ₹9.8 ಕೋಟಿ ವರಮಾನ ಮತ್ತು ₹48.7 ಕೋಟಿ ಕಾರ್ಯಾಚರಣೆ ವೆಚ್ಚ ಇತ್ತು. 2023–24ನೇ ಸಾಲಿನಲ್ಲಿ ₹573.9 ಕೋಟಿ ವರಮಾನ ಮತ್ತು ₹613.07 ಕೋಟಿ ವೆಚ್ಚಕ್ಕೆ ಏರಿದೆ. ಅಲ್ಲದೇ ಈ ವರ್ಷ ವರಮಾನದ ಪ್ರಮಾಣವು ಇನ್ನಷ್ಟು ಹೆಚ್ಚಾಗುವ, ನಷ್ಟದ ಪ್ರಮಾಣ ಕಡಿಮೆಯಾಗುವ ನಿರೀಕ್ಷೆಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿದೆ.

ಆದರೆ, ಬಿಎಂಆರ್‌ಸಿಎಲ್ ದರ ಏರಿಕೆಯ ಬಗ್ಗೆ ಬೇರೆ ಲೆಕ್ಕಾಚಾರಗಳನ್ನು ಮುಂದಿಡುತ್ತಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ತಲಾ ಶೇ 20ರಷ್ಟು ಯೋಜನಾ ವೆಚ್ಚಗಳನ್ನು ಭರಿಸುತ್ತವೆ. ಉಳಿದ ಶೇ 60ರಷ್ಟನ್ನು ಬಾಹ್ಯ ಹಣಕಾಸು ಸಂಸ್ಥೆಗಳಿಂದ ಸಾಲ ರೂಪದಲ್ಲಿ ಪಡೆಯಬೇಕು. ಅದಕ್ಕೆ ಬಡ್ಡಿ ಪಾವತಿಸಬೇಕು. ಇದನ್ನು ಪ್ರಯಾಣ ದರದಿಂದ ಸಂಗ್ರಹಿಸಿದ ವರಮಾನದಲ್ಲೇ ಭರಿಸಬೇಕಿದೆ ಎಂದು ಅಂಕಿ ಅಂಶಗಳನ್ನು ಮುಂದಿಟ್ಟಿದೆ.

ಪ್ರಯಾಣಿಕರಿಗೆ ಅವರು ಸಂಚರಿಸುವ ದೂರಕ್ಕೆ ಸರಿಯಾಗಿ ಪ್ರಯಾಣ ಶುಲ್ಕ ವಿಧಿಸುವ ಬದಲು, ಬಿಎಂಆರ್‌ಸಿಎಲ್‌ನ ಲಾಭ-ನಷ್ಟಗಳನ್ನು ಆಧರಿಸಿ ಪ್ರಯಾಣ ದರ ವಿಧಿಸಬಾರದು ಎಂಬ ನಾಗರಿಕರ ಸಲಹೆಯನ್ನು ದರ ನಿಗದಿ ಸಮಿತಿ ಪರಿಗಣಿಸಿಲ್ಲ. ‘ಮುಂದೆ ಅನುಷ್ಠಾನಗೊಳ್ಳುವ ಯೋಜನೆಗಳ ಖರ್ಚನ್ನು ಭರಿಸಲು ಪ್ರಯಾಣಿಕರು ಮೆಟ್ರೊ ಮಾಲೀಕರಲ್ಲ. ಅವೆಲ್ಲ ಸರ್ಕಾರಗಳ ಜವಾಬ್ದಾರಿ’ ಎಂದು ನಾಗರಿಕರು ತಿಳಿಸಿದ್ದರೂ ಪ್ರಯೋಜನವಾಗಿಲ್ಲ.

ಮೆಟ್ರೊ ಪ್ರಯಾಣಿಕರ ಸಂಖ್ಯೆ ಕುಸಿತ: ಪ್ರಯಾಣದರ ಹೆಚ್ಚಳ ಮಾಡಿದ ನಂತರ ಪ್ರಯಾಣಿಕರ ಸಂಖ್ಯೆ ದಿನದಿಂದ ದಿನಕ್ಕೆ ಇಳಿಕೆ ಕಾಣತೊಡಗಿದೆ. ಪ್ರಯಾಣಿಕರ ಸಂಖ್ಯೆ ಭಾನುವಾರ ಸರಾಸರಿ 7 ಲಕ್ಷ ಇರುತ್ತಿತ್ತು. ಹೆಚ್ಚಳವಾದ ಮೊದಲ ದಿನವೇ 6.23 ಲಕ್ಷಕ್ಕೆ ಇಳಿದಿತ್ತು. ಸೋಮವಾರ 8.28 ಲಕ್ಷ ಜನರು ಪ್ರಯಾಣಿಸಿದ್ದರೆ, ಮಂಗಳವಾರ 7.78 ಲಕ್ಷ, ಬುಧವಾರ 7.62 ಲಕ್ಷ ಜನರು ಪ್ರಯಾಣಿಸಿದ್ದಾರೆ.

ಪ್ರತಿ ಸೋಮವಾರ ಪ್ರಯಾಣಿಕರ ಸಂಖ್ಯೆ ಯಾವಾಗಲೂ ಹೆಚ್ಚಿರುತ್ತದೆ. ಹಿಂದಿನ ಐದು ಸೋಮವಾರಗಳಲ್ಲಿ ಸಂಚರಿಸಿದವರ ಸರಾಸರಿ ಪ್ರಮಾಣವು 8.80 ಲಕ್ಷ ಆಗಿದ್ದು, ದರ ಏರಿಕೆಯ ನಂತರ 52 ಸಾವಿರ ಕಡಿಮೆಯಾಗಿದೆ. ಮಂಗಳವಾರ ಸರಾಸರಿ 8.50 ಲಕ್ಷ ಜನರು ಪ್ರಯಾಣಿಸುತ್ತಿದ್ದು, ಈ ಮಂಗಳವಾರ 72 ಸಾವಿರಕ್ಕೆ ಕಡಿಮೆಯಾಗಿದೆ.

‘ಪ್ರತಿ ತಿಂಗಳು ಕೆಲವು ದಿನಗಳಲ್ಲಿ ಪ್ರಯಾಣಿಕರು ಕಡಿಮೆ ಇರುತ್ತಾರೆ. ಒಂದೆರಡು ದಿನಗಳನ್ನು ಪರಿಗಣಿಸಿ ಪ್ರಯಾಣಿಕರು ಕಡಿಮೆಯಾಗಿರುವುದು ಪ್ರಯಾಣ ದರ ಏರಿಕೆಯಿಂದಲೇ ಎಂಬ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ. ಒಂದು ತಿಂಗಳು ಗಮನಿಸಲಾಗುವುದು. ನಿರಂತರದ ಪ್ರಮಾಣವನ್ನು ನೋಡಿ ತೀರ್ಮಾನಕ್ಕೆ ಬರಬಹುದು’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಸ್. ಮಹೇಶ್ವರ ರಾವ್ ಪ್ರತಿಕ್ರಿಯಿಸಿದರು.



‘8 ವರ್ಷ ಹೆಚ್ಚಳವಾಗಿಲ್ಲ’

‘2017ರ ನಂತರ ಮೆಟ್ರೊ ಪ್ರಯಾಣ ದರ ಹೆಚ್ಚಳವಾಗಿಲ್ಲ. ಎಂಟು ವರ್ಷಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಯ ವೇತನ ಶೇ 43ರಷ್ಟು ಹೆಚ್ಚಳವಾಗಿದೆ. ವಿದ್ಯುತ್ ವೆಚ್ಚವು ಶೇ 40ರಷ್ಟು ಜಾಸ್ತಿಯಾಗಿದೆ. ನಮ್ಮ ಹಲವು ರೈಲುಗಳು, ನಿಲ್ದಾಣಗಳಿಗೆ 15 ವರ್ಷವಾಗುತ್ತಾ ಬಂದಿದ್ದು, ಅವುಗಳ ನಿರ್ವಹಣೆಯ ವೆಚ್ಚ ಶೇ 60ರಷ್ಟು ಹೆಚ್ಚಾಗಿದೆ. ಇವುಗಳನ್ನೆಲ್ಲ ಪರಿಶೀಲಿಸಿ, ಪರಿಗಣಿಸಿ ದರ ನಿಗದಿ ಸಮಿತಿ ವರದಿ ನೀಡಿದೆ ಎಂದು ಮಹೇಶ್ವರ ರಾವ್ ತಿಳಿಸಿದರು.

ಪ್ರಯಾಣದ ದರವು ಎಲ್ಲ ವೆಚ್ಚಗಳನ್ನು ಸೇರಿಸಿಯೇ ಇರುತ್ತದೆ. ಸಾಲವನ್ನು ಕೂಡ ಪ್ರಯಾಣಿಕರ ಸಂಚಾರಕ್ಕಾಗಿಯೇ ಮಾಡಲಾಗಿರುತ್ತದೆ. ಇನ್ನು ಐದು ವರ್ಷದಲ್ಲಿ ₹10,422 ಕೋಟಿ ಸಾಲ ಮರುಪಾವತಿ ಮಾಡಬೇಕಿದೆ ಎಂದರು.

‘ಮೆಟ್ರೊ ಅಧಿಕಾರಿಗಳು ಖರ್ಚು ಕಡಿಮೆ ಮಾಡಲಿ’

‘ಬಿಎಂಆರ್‌ಸಿಎಲ್‌ನ ಅಧಿಕಾರಿಗಳು ವಾಹನ ಭತ್ಯೆ ಎಂದು ಪ್ರತಿ ತಿಂಗಳು ₹20 ಸಾವಿರದಿಂದ ₹40 ಸಾವಿರದವರೆಗೆ ತೆಗೆದುಕೊಳ್ಳುತ್ತಾರೆ. ಸುಮಾರು 700 ಅಧಿಕಾರಿಗಳಿದ್ದು, ಈ ಭತ್ಯೆಯೇ ತಿಂಗಳಿಗೆ ₹1.5 ಕೋಟಿಯಾಗುತ್ತದೆ. ಕಚೇರಿ ವಾಹನಗಳು ಇನ್ನೂ ಸುಸ್ಥಿತಿಯಲ್ಲಿದ್ದರೂ ₹5 ಕೋಟಿ ವೆಚ್ಚ ಮಾಡಿ ಹೊಸ ವಾಹನಗಳನ್ನು ಖರೀದಿಸಿದ್ದಾರೆ. ಇಂಥ ಹಲವು ವೆಚ್ಚಗಳನ್ನು ಕಡಿಮೆ ಮಾಡಲು ಅವಕಾಶ ಇದ್ದರೂ ದುಂದುವೆಚ್ಚ ಮಾಡಲಾಗುತ್ತಿದೆ. ಹೊರೆಯನ್ನು ಪ್ರಯಾಣಿಕರ ಮೇಲೆ ಹೊರಿಸಲಾಗುತ್ತಿದೆ’ ಎಂದು ಬಿಎಂಆರ್‌ಸಿಎಲ್ ನೌಕರರ ಯೂನಿಯನ್ ಉಪಾಧ್ಯಕ್ಷ ಸೂರ್ಯನಾರಾಯಣ ಮೂರ್ತಿ ಆರೋಪಿಸಿದ್ದಾರೆ.

ಅರ್ಹತೆ ಇಲ್ಲದೇ ಇದ್ದರೂ ಮೇಲಧಿಕಾರಿಗಳೊಂದಿಗೆ ಹೊಂದಾಣಿಕೆ ಇರುವ ಕಾರಣಕ್ಕೆ ಕೆಲವು ಅಧಿಕಾರಿಗಳಿಗೆ ಬಡ್ತಿ ನೀಡಿ ಉನ್ನತ ದರ್ಜೆಗೆ ಏರಿಸುವುದಕ್ಕಾಗಿಯೇ ಹುದ್ದೆಗಳನ್ನು ಸೃಜಿಸಲಾಗಿದೆ. ಇದರಿಂದ ₹1 ಕೋಟಿಯಷ್ಟು ನಷ್ಟ ಉಂಟಾಗಿದೆ. ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡಿ ನಿವೃತ್ತರಾದವರು ಬಿಎಂಆರ್‌ಸಿಎಲ್‌ನಲ್ಲಿ ಅಧಿಕಾರಿಗಳಾಗಿದ್ದಾರೆ. ಅವರಿಗೆ ಕೆಲವು ತಿಂಗಳ ಹಿಂದೆ ₹ 50 ಸಾವಿರದಿಂದ ₹1 ಲಕ್ಷದಷ್ಟು ವೇತನ ಹೆಚ್ಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಈ ಬಗ್ಗೆ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ವಿವರ ಸಹಿತ ದೂರು ನೀಡಿದ್ದರೂ ಯಾವುದೇ ಕ್ರಮಗಳಾಗಿಲ್ಲ ಎಂದು ಅವರು ಮಾಹಿತಿ ನೀಡಿದ್ದಾರೆ.

ದರ: ಮರು ಪರಿಶೀಲಿಸಲು ಸಂಸದ ಮಂಜುನಾಥ್ ಮನವಿ



ಬೆಂಗಳೂರು: ‘ನಮ್ಮ ಮೆಟ್ರೊ’ ಪ್ರಯಾಣ ದರವನ್ನು ಹೆಚ್ಚಳ ಮಾಡಿರುವುದರಿಂದ ಜನರಿಗೆ ತೊಂದರೆಯಾಗಿದ್ದು, ಮರುಪರಿಶೀಲನೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ವಸತಿ ಮತ್ತು ನಗರ ವ್ಯವಹಾರ ಸಚಿವ ಮನೋಹರ್ ಲಾಲ್ ಖಟ್ಟರ್ ಅವರಿಗೆ ಸಂಸದ ಡಾ. ಸಿ.ಎನ್. ಮಂಜುನಾಥ್ ಪತ್ರ ಬರೆದಿದ್ದಾರೆ.

‘ಬೆಂಗಳೂರು ನಿವಾಸಿಗಳ ಜನಜೀವನದ ಭಾಗವಾಗಿರುವ ‘ನಮ್ಮ ಮೆಟ್ರೊ’ ದರವನ್ನು ಶೇ 40ರಿಂದ ಶೇ 50ರಷ್ಟು ಹೆಚ್ಚಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ, ಕಾರ್ಮಿಕರಿಗೆ, ನಿತ್ಯ ಪ್ರಯಾಣಿಸುವವರಿಗೆ ಭಾರಿ ಹೊರೆಯಾಗಿದೆ’ ಎಂದಿದ್ದಾರೆ. ವಾಹನದಟ್ಟಣೆಯಿಂದ ರಕ್ಷಿಸಲು ಮೆಟ್ರೊ ಪ್ರಮುಖ ಪಾತ್ರ ವಹಿಸುತ್ತಿತ್ತು. ಆದರೆ, ಪ್ರಯಾಣ ದರ ಏರಿಸಿದ್ದರಿಂದ ಜನರು ಮೆಟ್ರೊ ಪ್ರಯಾಣವನ್ನು ಕೈಬಿಡುತ್ತಿದ್ದಾರೆ. ಇದಕ್ಕೆ ಬೆಲೆ ಏರಿಕೆಯ ಬಳಿಕ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿರುವುದೇ ಸಾಕ್ಷಿ ಎಂದು ಪತ್ರದಲ್ಲಿ ಹೇಳಿದ್ದಾರೆ.

‘ದರ ಏರಿಕೆಗೂ ನಮಗೂ ಸಂಬಂಧವಿಲ್ಲ’



ಬೆಂಗಳೂರು: ‘ಮೆಟ್ರೊ ಪ್ರಯಾಣ ದರ ಇಳಿಸಬೇಕು ಎಂದು ನಮ್ಮ ಸರ್ಕಾರದ ಅಭಿಪ್ರಾಯವನ್ನು ಬಿಎಂಆರ್‌ಸಿಎಲ್‌ಗೆ ತಿಳಿಸಿದ್ದು, ಅಂತಿಮ ತೀರ್ಮಾನ ಕೇಂದ್ರ ಸಮಿತಿ ಕೈಗೊಳ್ಳಬೇಕು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

‘ಪ್ರಯಾಣ ದರ ಏರಿಕೆಗೂ ನಮಗೂ ಸಂಬಂಧವಿಲ್ಲ. ಈ ವಿಚಾರ ರಾಜ್ಯ ಸರ್ಕಾರದ ಸುಪರ್ದಿಗೆ ಬರುವುದಿಲ್ಲ. ಇದಕ್ಕಾಗಿಯೇ ಕೇಂದ್ರ ಸಮಿತಿ ರಚಿಸಲಾಗಿದೆ’ ಎಂದು ಅವರು ಸುದ್ದಿಗಾರರಿಗೆ ಗುರುವಾರ ತಿಳಿಸಿದರು.

‘ಜನರ ಮನವಿ ಆಲಿಸಿ ಮುಖ್ಯಮಂತ್ರಿಯವರು ಮೆಟ್ರೊ ದರ ಇಳಿಸುವ ಬಗ್ಗೆ ಅಭಿಪ್ರಾಯ ತಿಳಿಸಿದ್ದಾರೆ. ಜನಸಾಮಾನ್ಯರು ಹಾಗೂ ಮೆಟ್ರೊ ಹಿತಾಸಕ್ತಿ ಕಾಯಲು ಯಾವ ನಿರ್ಧಾರ ಮಾಡುತ್ತಾರೋ ಮಾಡಲಿ. ಈ ದರ ನಿಗದಿಗೆ ನ್ಯಾಯಾಧೀಶರ ನೇತೃತ್ವದ ಪ್ರತ್ಯೇಕ ಕೇಂದ್ರ ಸಮಿತಿ ಮಾಡಲಾಗಿದೆ. ಆ ಸಮಿತಿಗೆ ನಾವು ನಮ್ಮ ಅಭಿಪ್ರಾಯ ತಿಳಿಸುತ್ತೇವೆ. ಅಂತಿಮ ನಿರ್ಧಾರ ಅವರದು’ ಎಂದರು.

‘ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರು ಮತ್ತು ಅಧಿಕಾರಿಗಳ ಜತೆ ಬೆಳಿಗ್ಗೆ ಚರ್ಚೆ ಮಾಡಿದ್ದೇನೆ. ದರ ಏರಿಕೆ ನಿರ್ಧಾರದ ಬಗ್ಗೆ ಮರುಪರಿಶೀಲನೆ ನಡೆಸಬೇಕು ಎಂದು ಒತ್ತಾಯಿಸಿದ್ದೇನೆ. ಆದರೆ, ಮೆಟ್ರೊ ದರ ಪರಿಷ್ಕರಣೆ ನಮ್ಮ ಕೈಯಲ್ಲಿ ಇಲ್ಲ. ಕೇಂದ್ರ ಸರ್ಕಾರದ ಕಾರ್ಯದರ್ಶಿಗಳೇ ಮೆಟ್ರೊ ಮುಖ್ಯಸ್ಥರಾಗಿದ್ದಾರೆ. ಮೆಟ್ರೊ ದರ ನಿಗದಿಗೆ ರಚಿಸಲಾಗಿರುವ ಸಮಿತಿ ಸಾಧಕ–ಬಾಧಕಗಳನ್ನು ನೋಡಿ ತೀರ್ಮಾನ ಮಾಡುತ್ತದೆ. ದರ ಏರಿಕೆ ಮಾನದಂಡಗಳನ್ನು ಪರಿಶೀಲಿಸಿ, ಮತ್ತೆ ಲೆಕ್ಕಾಚಾರ ಮಾಡಿ ದರ ಕಡಿಮೆ ಮಾಡಲು ಸಮಿತಿ ಮುಂದೆ ಪ್ರಸ್ತಾಪ ಮಾಡಿ ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇವೆ’ ಎಂದು ಅವರು ಹೇಳಿದರು.

ಪ್ಲಾಸ್ಟಿಕ್ ಕಾರ್ಖಾನೆ ಬೆಂಕಿಗೆ ಆಹುತಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಮಾಗಡಿ ಮುಖ್ಯರಸ್ತೆಯ ಅಂಜನಾ ನಗರದ ಕೆ.ಇ.ಬಿ ರಸ್ತೆಯಲ್ಲಿ ಇರುವ ಪ್ಲಾಸ್ಟಿಕ್ ಕಾರ್ಖಾನೆಯಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಕಾರ್ಖಾನೆ ಭಸ್ಮವಾಗಿದೆ.

ಗುರುವಾರ ಮಧ್ಯಾಹ್ನ 2 ಗಂಟೆ ಸುಮಾರಿಗೆ ಶಾರ್ಟ್ ಸರ್ಕಿಟ್‌ನಿಂದ ಕ್ಷಣಾರ್ಧದಲ್ಲಿ ಕಾರ್ಖಾನೆಗೆ ಬೆಂಕಿ ಹೊತ್ತುಕೊಂಡಿತು. ಕಾರ್ಖಾನೆಯಲ್ಲಿದ್ದ ಕಾರ್ಮಿಕರು ಹೊರಗೆ ಓಡಿ ಬಂದು, ಪ್ರಾಣ ಉಳಿಸಿಕೊಂಡಿದ್ದಾರೆ.

ಕೆ.ಆರ್. ಗಂಗಾಧರ್ ಆ್ಯಂಡ್ ಸನ್ಸ್ ಮಾಲೀಕತ್ವದ ಕಾರ್ಖಾನೆಯಲ್ಲಿ ಸುಮಾರು 20 ಕಾರ್ಮಿಕರಿದ್ದಾರೆ. ₹30 ಲಕ್ಷ ಮೌಲ್ಯದ ವಸ್ತುಗಳು ಸುಟ್ಟು ಭಸ್ಮವಾಗಿವೆ.

ಬೆಂಕಿಯ ಕೆನ್ನಾಲಿಗೆ ಅಕ್ಕಪಕ್ಕದ ಮನೆಗಳಿಗೆ ತಗುಲಿ ಹಾನಿಯಾಗಿದೆ. ಅಗ್ನಿಶಾಮಕ ದಳದ 30 ಸಿಬ್ಬಂದಿ, ಪೊಲೀಸರು ಹಾಗೂ ಸ್ಥಳೀಯರು ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ.

ಕಾರ್ಖಾನೆಯ ಪಕ್ಕದಲ್ಲಿ ವಿದ್ಯುತ್ ಪರಿವರ್ತಕದ ಕಂಬಗಳಿದ್ದವು. ಆ ಕಡೆಗೆ ಬೆಂಕಿ ವ್ಯಾಪಿಸುವುದನ್ನು ತಪ್ಪಿಸಿದ್ದರಿಂದ ಹೆಚ್ಚಿನ ಅನಾಹುತ ತಪ್ಪಿದೆ.

ಯಂತ್ರವೊಂದು ಚಾಲನೆಯಲ್ಲಿದ್ದಾಗ ಉಂಟಾದ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡಿದೆ ಎಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಘಟನಾ ಸ್ಥಳಕ್ಕೆ ಶಾಸಕ ಎಸ್.ಟಿ.ಸೋಮಶೇಖರ್ ಭೇಟಿ ನೀಡಿದರು.

‘ಈ ಭಾಗದಲ್ಲಿ ಸುಮಾರು 30 ವರ್ಷಗಳಿಂದ ಪ್ಲಾಸ್ಟಿಕ್ ಕವರ್ ಉತ್ಪಾದನಾ ಘಟಕಗಳಿದ್ದವು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಅಗ್ನಿ ಅನಾಹುತದಲ್ಲಿ ಭಾಗಶಃ ಹಾನಿಗೊಳಗಾಗಿರುವ ಮನೆಯನ್ನು ದುರಸ್ತಿ ಮಾಡಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದು ಸೋಮಶೇಖರ್ ತಿಳಿಸಿದರು.



ಕಾರ್ಯಾಚರಣೆ ನಡೆಸಿದ ರೈಲ್ವೆ ಪೊಲೀಸರ ಜೊತೆಯಲ್ಲಿ ಬಂಧಿತರು ಇದ್ದಾರೆ

ಚಲಿಸುತ್ತಿದ್ದ ರೈಲಿನಿಂದ ತಳ್ಳಿ ವ್ಯಕ್ತಿಯ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲಿಸುತ್ತಿದ್ದ ರೈಲಿನಿಂದ ತಳ್ಳಿ ವ್ಯಕ್ತಿಯನ್ನು ಕೊಲೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಬೆಂಗಳೂರು ಗ್ರಾಮಾಂತರ ರೈಲ್ವೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಅರಳಹಳ್ಳಿ ಗ್ರಾಮದ ದೇವಪ್ಪ ಹಾಗೂ ಹಲ್ಲಹಳ್ಳಿ ಗ್ರಾಮದ ಪೀರಪ್ಪ ಬಂಧಿತರು.

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆ ಬಳಿಯ ಮಾದಾನೆ ಗ್ರಾಮದ ಎಂ.ಜೆ.ಕುಮಾರ್ ಅವರು ನೀಡಿದ್ದ ಮಾಹಿತಿ ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಗಿದೆ ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ.

‘ಯಶವಂತಪುರ–ಬೀದರ್ ಎಕ್ಸ್‌ಪ್ರೆಸ್’ ರೈಲು ಫೆ.11ರಂದು ಯಶವಂತಪುರ ರೈಲು ನಿಲ್ದಾಣದಿಂದ ಹೊರಟಿತ್ತು. ಅದೇ ರೈಲಿನಲ್ಲಿ ಕುಮಾರ್ ಅವರು ಪ್ರಯಾಣಿಸುತ್ತಿದ್ದರು. ರೈಲಿನ ಸಾಮಾನ್ಯ ಬೋಗಿಯಲ್ಲಿ ಹೆಚ್ಚಿನ ಪ್ರಯಾಣಿಕರು ಇದ್ದರು. ಜಾಗವಿಲ್ಲದ ಕಾರಣಕ್ಕೆ ಅಪರಿಚಿತ ವ್ಯಕ್ತಿಯೊಬ್ಬರು ಶೌಚಾಲಯದ ಬಳಿ ಕುಳಿತುಕೊಳ್ಳಲು ತೆರಳಿದ್ದರು. ಅದೇ ಸ್ಥಳದಲ್ಲಿ ಆರೋಪಿಗಳು ಕುಳಿತಿದ್ದರು. ಅಪರಿಚಿತ ವ್ಯಕ್ತಿಗೆ ಆರೋಪಿಗಳು ಕೂರಲು ಜಾಗ ಬಿಡಲಿಲ್ಲ. ಆಗ ಗಲಾಟೆ ನಡೆದು, ವ್ಯಕ್ತಿಯನ್ನು ರೈಲಿನಿಂದ ಕೆಳಕ್ಕೆ ತಳ್ಳಿ ಕೊಲೆ ಮಾಡಿದ್ದರು’ ಎಂದು ಪೊಲೀಸರು ತಿಳಿಸಿದರು.

‘ರೈಲ್ವೆ ಸಹಾಯವಾಣಿಗೆ ಬಂದ ಮಾಹಿತಿ ಆಧರಿಸಿ ಫೆ.12ರಂದು ಯಲಹಂಕ–ಕೊಡಿಗೇಹಳ್ಳಿ ರೈಲು ನಿಲ್ದಾಣದ ಮಧ್ಯೆ ಪರಿಶೀಲಿಸಿದಾಗ ಮೃತದೇಹ ಪತ್ತೆಯಾಗಿತ್ತು. ಆರೋಪಿಗಳ ಪತ್ತೆಗೆ ಎರಡು ವಿಶೇಷ ಪೊಲೀಸ್ ತಂಡಗಳನ್ನು ರಚಿಸಲಾಗಿತ್ತು. ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಲಾಯಿತು. ಚಲಿಸುತ್ತಿದ್ದ ರೈಲಿನಿಂದ ವ್ಯಕ್ತಿಯನ್ನು ತಳ್ಳಿ ಕೊಲೆ ಮಾಡಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಕೃತ್ಯ ಎಸಗಿದ 24 ತಾಸಿನ ಒಳಗಾಗಿ ಆರೋಪಿಗಳನ್ನು ಬಂಧಿಸುವಲ್ಲಿ ರೈಲ್ವೆ ಪೊಲೀಸರು ಯಶಸ್ವಿ ಆಗಿದ್ದಾರೆ’ ಎಂದು ರೈಲ್ವೆ ಎಸ್‌ಪಿ ಸೌಮ್ಯಲತಾ ತಿಳಿಸಿದ್ದಾರೆ.

ಟಿಕೆಟ್ ರಹಿತ ಪ್ರಯಾಣ: ದಂಡ



ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಜನವರಿಯಲ್ಲಿ ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದ 3,621 ಜನರಿಂದ ₹6.86 ಲಕ್ಷ ದಂಡ ವಸೂಲಿ ಮಾಡಲಾಗಿದೆ.

ಕೆಎಸ್‌ಆರ್‌ಟಿಸಿ ತನಿಖಾ ತಂಡದಲ್ಲಿನ ಅಧಿಕಾರಿಗಳು ತಪಾಸಣೆ ನಡೆಸಿ ನಿಗಮದ ಆದಾಯದಲ್ಲಿ ₹94,284 ಸೋರಿಕೆ ಪತ್ತೆ ಹಚ್ಚಿದ್ದರು. ಅದನ್ನು ದಂಡ ಸಹಿತ ವಸೂಲಿ ಮಾಡಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

‘ಡಿಕೆಶಿ ಕೈಯಿಂದ ಬೆಂಗಳೂರು ಅಭಿವೃದ್ಧಿ ಸಚಿವಗಿರಿ ಕಿತ್ತುಕೊಳ್ಳಿ’

ಪ್ರಜಾವಾಣಿ ವಾರ್ತೆ



ಮುನಿರತ್ನ

ಬೆಂಗಳೂರು: ಬೆಂಗಳೂರು ನಗರಾಭಿವೃದ್ಧಿ ಸಚಿವರನ್ನು ಬದಲಿಸಿ, ಪ್ರಾಮಾಣಿಕರೊಬ್ಬರಿಗೆ ಈ ಜವಾಬ್ದಾರಿ ನೀಡಬೇಕು ಎಂದು ಆರ್.ಆರ್.ನಗರ ಕ್ಷೇತ್ರದ ಬಿಜೆಪಿ ಶಾಸಕ ಎನ್. ಮುನಿರತ್ನ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎರಡು ಪುಟಗಳ ಪತ್ರ ಬರೆದು ಒತ್ತಾಯಿಸಿದ್ದಾರೆ.

ನಗರದ ಬಗ್ಗೆ ಮುಖ್ಯಮಂತ್ರಿ ಅವರಿಗೆ ಕಳಕಳಿ ಇದ್ದರೆ ಸಚಿವರಾದ ರಾಮಲಿಂಗಾರೆಡ್ಡಿ, ಕೆ.ಜೆ.ಜಾರ್ಜ್, ಕೃಷ್ಣ ಬೈರೇಗೌಡ ಇವರಲ್ಲಿ ಒಬ್ಬರನ್ನು ನೇಮಕ ಮಾಡುವಂತೆ ಪತ್ರದಲ್ಲಿ ಆಗ್ರಹಿಸಿದ್ದಾರೆ.

‘ಈ ಪೈಕಿ ಯಾರ ಬಗ್ಗೆಯೂ ಒಲವು ಇಲ್ಲದಿದ್ದರೆ, ಸಚಿವ ದಿನೇಶ್ ಗುಂಡೂರಾವ್, ಶಾಸಕ ಎಂ.ಕೃಷ್ಣಪ್ಪ ಅವರನ್ನಾದರೂ ನೇಮಕ ಮಾಡಬಹುದು. ಈ ರೀತಿ ಬದಲಾವಣೆ ಮಾಡಿದರೆ ಸರ್ಕಾರಕ್ಕೆ ಎರಡು ವರ್ಷಗಳ ಕಳಂಕವನ್ನು ತೊಳೆದುಕೊಳ್ಳಲು ಅನುಕೂಲವಾಗುತ್ತದೆ’ ಎಂದು ಮುನಿರತ್ನ ಮನವಿ ಮಾಡಿದ್ದಾರೆ.

‘ಬೆಂಗಳೂರು ನಗರಾಭಿವೃದ್ಧಿ ಸಚಿವರೇ ತಾರಾ ಹೋಟೆಲ್‌ಗಳಲ್ಲಿ ಕುಳಿತು ವ್ಯವಹಾರ ಕುದುರಿಸುತ್ತಾರೆ. ನಗರದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಅಪಾರ್ಟ್‌ಮೆಂಟ್ ಕಟ್ಟಡ ನಿರ್ಮಾಣದ ನಕ್ಷೆ ಮಂಜೂರಾತಿಗೆ ಮುಂಚಿತವಾಗಿ ಒಂದು ಚದರಡಿಗೆ ₹150 ಕೊಡುವಂತೆ ಭ್ರಷ್ಟಾಚಾರ, ಎಲ್‌ಒಸಿಗಳಲ್ಲಿ ಭ್ರಷ್ಟಾಚಾರ, ನಾಗಮೋಹನದಾಸ್ ಸಮಿತಿ ಹೆಸರಲ್ಲಿ ಗುತ್ತಿಗೆದಾರರ ಕಾಮಗಾರಿಗಳಲ್ಲಿ ಶೇ 10 ರಷ್ಟು ಕಟಾವು ಮಾಡಿ ನಂತರ ಬಿಡುಗಡೆ ಮಾಡುತ್ತಾರೆ’ ಎಂದು ದೂರಿದ್ದಾರೆ.

‘ಶೇ 35 ಕಮಿಷನ್ ಕೊಟ್ಟರಷ್ಟೇ ಟೆಂಡರ್’

ಆಂಧ್ರ ಪ್ರದೇಶದ ಮುಖ್ಯಮಂತ್ರಿಯವರ ಸಹಚರರು ನಮ್ಮ ರಾಜ್ಯದ ಗುತ್ತಿಗೆದಾರರ ಮೇಲೆ ಸವಾರಿ ಮಾಡಲು ಬಂದಿದ್ದಾರೆ. ಇತರ ರಾಜ್ಯಗಳ ಗುತ್ತಿಗೆದಾರರಿಗೆ ಶೇ 12 ರಷ್ಟು ಮುಂಗಡ ಅನುದಾನ ನೀಡಿದ್ದಾರೆ. ಕಾರ್ಯಾದೇಶ ಕೊಟ್ಟ ನಂತರ ಶೇ 8, ಅನುದಾನ ಬಿಡುಗಡೆ ಮಾಡಲು ಶೇ 15 ರಷ್ಟು ಕಮಿಷನ್ ಪಡೆಯಲಾಗುತ್ತದೆ. ಒಟ್ಟಾರೆ ಶೇ 35 ಕ್ಕೆ ವ್ಯವಹಾರ ಕುದುರಿಸಿ ಮುಂಗಡ ಹಣ ನೀಡಿದ್ದಾರೆ ಎಂದು ಮುನಿರತ್ನ ಆರೋಪಿಸಿದ್ದಾರೆ.

ಕಾರು ಓಡಿಸುತ್ತಲೇ ಲ್ಯಾಪ್‌ಟಾಪ್‌ನಲ್ಲಿ ಕಚೇರಿ ಕೆಲಸ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರು ಚಾಲನೆ ಮಾಡುತ್ತಲೇ ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯನ್ನು ಪತ್ತೆ ಹಚ್ಚಿರುವ ನಗರದ ಸಂಚಾರ ವಿಭಾಗದ ಪೊಲೀಸರು, ಅವರಿಗೆ ದಂಡ ವಿಧಿಸಿ ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ.

ಉತ್ತರ ವಿಭಾಗದ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ವೇಳೆ ಮಹಿಳೆಯೊಬ್ಬರು ಕಾರು ಚಾಲನೆ ಮಾಡುತ್ತಲೇ ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅದನ್ನು ಗಮನಿಸಿದ ಪಕ್ಕದ ಕಾರಿನ ಪ್ರಯಾಣಿಕರು, ಮೊಬೈಲ್‌ನಲ್ಲಿ ಅದರ ದೃಶ್ಯವನ್ನು ಸೆರೆ ಹಿಡಿದಿದ್ದರು.

ಆ ವಿಡಿಯೊವನ್ನು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದರು. ಅದು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿತ್ತು. ವಿಡಿಯೊ ತುಣುಕನ್ನು ಗಮನಿಸಿದ ಸಂಚಾರ ವಿಭಾಗದ ಪೊಲೀಸರು, ಕ್ಷಿಪ್ರ ಕಾರ್ಯಾಚರಣೆ ನಡೆಸಿ ಮಹಿಳೆಯನ್ನು ಪತ್ತೆಹಚ್ಚಿ ದಂಡ ವಿಧಿಸಿದ್ದಾರೆ.

ಸಮುದಾಯದ ಅಭ್ಯುದಯಕ್ಕೆ ಕೈಜೋಡಿಸಿ: ವಿಖ್ಯಾತಾನಂದ ಶ್ರೀ ಸ್ವಾಮೀಜಿ


ಪೀಠಾರೋಹಣ 3ನೇ ವಾರ್ಷಿಕೋತ್ಸವ

ಪ್ರಜಾವಾಣಿ ವಾರ್ತೆ

ಮಾಗಡಿ (ರಾಮನಗರ): ತಾಲ್ಲೂಕಿನ ಸೋಲೂರಿನ ಆರ್ಯ ಈಡಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ವಿಖ್ಯಾತಾನಂದ ಸ್ವಾಮೀಜಿ ಪೀಠಾರೋಹಣದ ಮೂರನೇ ವರ್ಷದ ವಾರ್ಷಿಕೋತ್ಸವ ಭರತ ಹುಣ್ಣಿಮೆ ದಿನವಾದ ಬುಧವಾರ ಮಠದಲ್ಲಿ ಅದ್ದೂರಿಯಾಗಿ ಜರುಗಿತು.

ಪೀಠಾರೋಹಣದ ವಾರ್ಷಿಕೋತ್ಸವ ಅಂಗವಾಗಿ ಸಮುದಾಯದ ಗಣ್ಯರು ಹಾಗೂ ಭಕ್ತರು ಸ್ವಾಮೀಜಿ ಪಾದಪೂಜೆ ಮಾಡಿದರು. ನಂತರ ಗುರುಪೂಜೆ ಜರುಗಿತು.

ಸ್ವಾಮೀಜಿಗೆ ಬೆಳ್ಳಿ ಕಿರೀಟ ಹಾಗೂ ಬೆಳ್ಳಿ ಪಾದುಕೆಗಳನ್ನು ಅರ್ಪಿಸಲಾಯಿತು. ಭಕ್ತರು ‘ಶ್ರೀ ವಿಖ್ಯಾತಾನಂದ ಸ್ವಾಮೀಜಿ ಅವರಿಗೆ ಜಯವಾಗಲಿ’ ಎಂದು ಜಯಘೋಷ ಕೂಗಿದರು. ನಾಡಿನ ವಿವಿಧೆಡೆಯಿಂದ ಬಂದಿದ್ದ ಸಾವಿರಾರು ಭಕ್ತರು, ಈಡಿಗ ಸಮುದಾಯದವರು ಈ ಐತಿಹಾಸಿಕ ಕ್ಷಣಗಳಿಗೆ ಸಾಕ್ಷಿಯಾದರು.



ಸೋಲೂರಿನ ಆರ್ಯ ಈಡಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ವಿಖ್ಯಾತಾನಂದ ಸ್ವಾಮೀಜಿ ಅವರ ಪೀಠಾರೋಹಣದ ಮೂರನೇ ವರ್ಷದ ವಾರ್ಷಿಕೋತ್ಸವದಲ್ಲಿ ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ, ರೇಣುಕಾ ಯಲ್ಲಮ್ಮ ದೇವಿ ಟ್ರಸ್ಟ್ ಅಧ್ಯಕ್ಷ ಜೆ.ಪಿ. ಸುಧಾಕರ್ ಸೇರಿದಂತೆ ಸಮುದಾಯದ ಗಣ್ಯರು ಇದ್ದಾರೆ

ಚಲನಚಿತ್ರ ನಿರ್ಮಾಪಕ ಚಿನ್ನೇಗೌಡ, ಆರ್ಯ ಈಡಿಗ ಮಹಾಸಂಸ್ಥಾನ ಮಠ ಕಾರ್ಯದರ್ಶಿ ಧರ್ಮ ವಿಜೇತ್, ಖಜಾಂಚಿ ಹರೀಶ್, ಆಡಳಿತಾಧಿಕಾರಿ ಸಂತೋಷ್ ಕುಮಾರ್ ಹಾಜರಿದ್ದರು.

‘ಬ್ರಹ್ಮರ್ಷಿ ನಾರಾಯಣ ಗುರುಗಳ ತತ್ವ ಮತ್ತು ಸಿದ್ಧಾಂತದ ಅಡಿ ಮಠವು ಸಮುದಾಯದ ಏಳಿಗೆಗೆ ಶ್ರಮಿಸುತ್ತಿದೆ. ಶಿಕ್ಷಣ, ಉದ್ಯೋಗ ಹಾಗೂ ಸಂಘಟನೆಗೆ ಆದ್ಯತೆ ನೀಡುತ್ತಾ ಸಮುದಾಯದ ಅಭ್ಯುದಯಕ್ಕೆ ಮುನ್ನುಡಿ ಬರೆಯಲಾಗುತ್ತಿದೆ. ಈ ಕಾರ್ಯಕ್ಕೆ ಎಲ್ಲರೂ ಕೈ ಜೋಡಿಸಬೇಕು’ ಎಂದು ವಿಖ್ಯಾತಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು.

‘ಅನಿರೀಕ್ಷಿತವಾಗಿ ಈ ಸಮುದಾಯದ ಜವಾಬ್ದಾರಿ ಹೊರುವ ಸುಯೋಗ ಲಭಿಸಿದೆ. ಎಲ್ಲರ ಸಹಕಾರ ಹಾಗೂ ಭಕ್ತಿ-ಶ್ರದ್ಧೆಯಿಂದ ಈ ಹೊಣೆಯನ್ನು ನಿರ್ವಹಿಸುತ್ತಾ ಬಂದಿರುವೆ. ತಾಯಿ ಯಲ್ಲಮ್ಮನ ಜಾತ್ರಾ ಮಹೋತ್ಸವದ ಸುಸಂದರ್ಭದಲ್ಲೇ ಪಟ್ಟಾಭಿಷೇಕದ ವಾರ್ಷಿಕೋತ್ಸವ ನಡೆಯುತ್ತಿರುವುದು ಸಂತಸ ತಂದಿದೆ’ ಎಂದರು.

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ ಅಧ್ಯಕ್ಷ ಎಂ. ತಿಮ್ಮೇಗೌಡ ಮಾತನಾಡಿ, ‘ಪ್ರತಿ ವರ್ಷದಂತೆ ಈ ವರ್ಷವೂ ಯಲ್ಲಮ್ಮ ದೇವಿಯ ಜಾತ್ರಾ ಮಹೋತ್ಸವ ಹಾಗೂ ಸ್ವಾಮೀಜಿ ಅವರ ಪಟ್ಟಾಭಿಷೇಕದ ವಾರ್ಷಿಕೋತ್ಸವ ಅದ್ದೂರಿಯಾಗಿ ನೆರವೇರುತ್ತಿದೆ. ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಸಮುದಾಯವು ಅಭಿವೃದ್ಧಿ ಪಥದಲ್ಲಿ ಸಾಗಬೇಕು’ ಎಂದರು.

‘ಕಟ್ಟಕಡೆಯ ವ್ಯಕ್ತಿಗೂ ಶಿಕ್ಷಣ ಸಿಗಬೇಕು’

‘ಸಮುದಾಯದ ಕಟ್ಟಕಡೆಯಲ್ಲಿರುವವರಿಗೂ ಶಿಕ್ಷಣ ಸಿಗುವಂತಾಗಬೇಕು. ಅವರು ಸಹ ಸ್ವಾವಲಂಬನೆಯ ಬದುಕು ರೂಪಿಸಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರುವುದಕ್ಕೆ ಎಲ್ಲರೂ ಸಹಕಾರ ನೀಡುವ ಕೆಲಸವಾಗಬೇಕಿದೆ. ಇದಕ್ಕೆ ಸಮುದಾಯದವರೆಲ್ಲರೂ ಕೈ ಜೋಡಿಸಬೇಕು. ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷರಾದ ಎಂ. ತಿಮ್ಮೇಗೌಡರು ಸೇರಿದಂತೆ ಹಲವರು ಆ ನಿಟ್ಟಿನಲ್ಲಿ ಸಹಕಾರ ನೀಡುತ್ತಿದ್ದಾರೆ’ ಎಂದು ವಿಖ್ಯಾತಾನಂದ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಆಗಸ ನೋಡಲು ನೂಕುನುಗ್ಗಲು

• ಖಲೀಲಅಹ್ಮದ ಶೇಖ

ಬೆಂಗಳೂರು: ಯಲಹಂಕ ವಾಯುನೆಲೆಯಲ್ಲಿ ನಡೆಯುತ್ತಿರುವ ಏರೊ ಇಂಡಿಯಾ ವೈಮಾನಿಕ ಪ್ರದರ್ಶನ ವೀಕ್ಷಣೆಗೆ ಗುರುವಾರ ಕಿಕ್ಕಿರಿದು ಸೇರಿದ್ದ ಜನ, ವಿಮಾನಗಳ ಹಾರಾಟವನ್ನು ಹತ್ತಿರದಿಂದ ಕಣ್ತುಂಬಿಕೊಂಡು ಸಂಭ್ರಮಿಸಿದರು.

ವೈಮಾನಿಕ ಪ್ರದರ್ಶನದ ಕೊನೆಯ ಎರಡು ದಿನ ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿತ್ತು. ಎಳೆ ಬಿಸಿಲು ಏರುವ ಮುನ್ನವೇ ಲಗುಬಗೆಯಿಂದ ಬಂದು ಸೇರಿದ್ದ ಜನ, ಲೋಹದ ಹಕ್ಕಿಗಳ ಹಾರಾಟಕ್ಕೆ ಕಾತರದಿಂದ ಕಾದಿದ್ದರು. ಬೆಳಿಗ್ಗೆ 9 ಗಂಟೆಗೆ ಮೊದಲ ಪ್ರದರ್ಶನ ಆರಂಭವಾಯಿತು. ವೈಮಾನಿಕ ಪ್ರದರ್ಶನದ ಬಳಿ ತೆರಳುವ ಮುನ್ನ ಸಾರ್ವಜನಿಕರಿಗೆ ಸಂಚಾರ ದಟ್ಟಣೆಯ ಬಿಸಿ ತಟ್ಟಿತು.

ಸುಖೋಯ್, ತೇಜಸ್ ಯುದ್ಧ ವಿಮಾನಗಳು ಘರ್ಜನೆ ನಡುವೆ ನೀಡಿದ ಪ್ರದರ್ಶನ ವೀಕ್ಷಕರನ್ನು ನಿಬ್ಬೆರಗಾಗಿಸಿತು. ಸೂರ್ಯ ಕಿರಣ್ ತಂಡ ನಡೆಸಿದ ಕಸರತ್ತು ನೆರೆದಿದ್ದವರನ್ನು ರೋಮಾಂಚನಗೊಳಿಸಿತು. ಆಕಾಶದಲ್ಲಿ ಬಿಡಿಸಿದ ಚಿತ್ತಾರ, ಎದುರಿನಿಂದ ಬಂದು ಡಿಕ್ಕಿಯಾಗುತ್ತವೆ ಎನ್ನುಷ್ಟರಲ್ಲೇ ಕ್ಷಣಾರ್ಧದಲ್ಲೇ ತಪ್ಪಿಸಿಕೊಂಡು ಬಾಗಿ ಸಾಗುವ ದೃಶ್ಯಗಳು ಅಚ್ಚರಿ ಮೂಡಿಸಿದವು. ಸೂರ್ಯ ಕಿರಣ್ ತಂಡವು ಆಗಸದಲ್ಲಿ ಬಿಡಿಸಿದ ಹೃದಯಾಕಾರದ ಚಿತ್ತಾರ ಮನಮೋಹಕವಾಗಿತ್ತು. ತ್ರಿವರ್ಣ ಹೊಗೆ ಉಗುಳುತ್ತಾ ಸಾಗಿದ ಪರಿ ಕಣ್ತುಂಬಿಕೊಂಡ ಮಕ್ಕಳು, ಯುವಕರು ಕೇಕೆ ಹಾಕಿ ಸಂಭ್ರಮಿಸಿದರು.



ಏರೊ ಇಂಡಿಯಾ ವೈಮಾನಿಕ ಪ್ರದರ್ಶನವನ್ನು ವೀಕ್ಷಿಸಲು ಗುರುವಾರ ಬಂದಿದ್ದ ಜನಸಾಗರ ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಸಂಚಾರ ದಟ್ಟಣೆ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಗುರುವಾರ ವಿಪರೀತ ಸಂಚಾರ ದಟ್ಟಣೆ ಉಂಟಾಗಿ, ವಾಹನ ಸವಾರರು ಪರದಾಡಿದರು.

ಏರೊ ಇಂಡಿಯಾ ವೈಮಾನಿಕ ಪ್ರದರ್ಶನ ವೀಕ್ಷಿಸಲು ಗುರುವಾರದಿಂದ ಸಾರ್ವಜನಿಕರಿಗೆ ಅವಕಾಶ ಕಲ್ಪಿಸಿರುವುದರಿಂದ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಭಾರಿ ಸಂಚಾರ ದಟ್ಟಣೆ ಉಂಟಾಗಿತ್ತು.

ವೈಮಾನಿಕ ಪ್ರದರ್ಶನದ ಸುತ್ತಮುತ್ತಲ ಪ್ರದೇಶಗಳಲ್ಲಿ ಶಾಲಾ ವಾಹನಗಳು, ಕಾರುಗಳು, ದ್ವಿಚಕ್ರ ವಾಹನಗಳು, ಬಸ್‌ಗಳ ಸಂಖ್ಯೆ ಹೆಚ್ಚಾಗಿತ್ತು. ಬೆಳಿಗ್ಗೆಯಿಂದಲೇ ಹೆಬ್ಬಾಳ, ಬಳ್ಳಾರಿ ರಸ್ತೆ, ಕೊಡಿಗೆಹಳ್ಳಿ, ಜಕ್ಕೂರು ಸೇರಿ ಹಲವೆಡೆ ಸಂಚಾರ ದಟ್ಟಣೆ ಉಂಟಾಗಿತ್ತು.

ಮೇಖ್ರಿ ವೃತ್ತ, ಹೆಬ್ಬಾಳದಿಂದಲೇ ಸಂಚಾರ ವಿಭಾಗದ ಪೊಲೀಸರು ಬ್ಯಾರಿಕೇಡ್ ಅಳವಡಿಸಿ ಬಸ್, ಲಾರಿ ಸೇರಿ ಭಾರಿ ವಾಹನಗಳನ್ನು ತಡೆದು ಸರ್ವೀಸ್ ರಸ್ತೆಯಲ್ಲಿ ಕಳುಹಿಸಿದರು. ಸಂಜೆ ವಾಯುನೆಲೆಯಿಂದ ಹೊರಟವರೂ ದಟ್ಟಣೆಯಲ್ಲಿ ಸಿಲುಕಿದರು.

ವೈಮಾನಿಕ ಪ್ರದರ್ಶನವನ್ನು ವೀಕ್ಷಿಸುತ್ತಿದ್ದ ಜನ ಬಿಸಿಲಿನಿಂದ ರಕ್ಷಣೆ ಪಡೆದುಕೊಳ್ಳಲು ಛತ್ರಿಯ ಮೊರೆ ಹೋಗಿದ್ದರು. ವೃದ್ಧರಾದಿಯಾಗಿ ಹಲವರು ಕುರ್ಚಿಗಳಲ್ಲಿ ಪ್ರದರ್ಶನವನ್ನು ಎಲೆಕ್ಟ್ರಿಕ್ ವಾಹನಗಳ ಮೂಲಕ ಮಡಚಬಹುದಾದ ಕುಳಿತುಕೊಂಡು ಕಣ್ತುಂಬಿಕೊಂಡರು. ಸಾರ್ವಜನಿಕರಿಗೆ ಕುಡಿಯುವ ನೀರಿನ ಬಾಟಲಿಗಳನ್ನು ಸ್ವಯಂ ಸೇವಕರು ವಿತರಣೆ ಮಾಡಿದರು.

ರಷ್ಯಾದ ಸುಖೋಯ್ ಯುದ್ಧ ವಿಮಾನದ ಮುಂಭಾಗದಲ್ಲಿ ನಿರ್ಮಿಸಿದ್ದ ಸೆಲ್ಫಿ ಪಾಯಿಂಟ್ ಬಳಿ ಸಾರ್ವಜನಿಕರು ಸೆಲ್ಫಿ ತೆಗೆದುಕೊಳ್ಳಲು ಮುಗಿಬಿದ್ದಿದ್ದರು. ಅಮೆರಿಕದ ವಾಯು ಪಡೆಯ ಬ್ಯಾಂಡ್ ಪ್ರಸ್ತುತಪಡಿಸಿದ ಗೀತೆಗಳಿಗೆ ಯುವಕರು ಹೆಜ್ಜೆ ಹಾಕಿದರು.

ಕೆರೆ ಏರಿ, ಅಪಾರ್ಟ್‌ಮೆಂಟ್ ಮೇಲೆ ಜನರ ದಂಡು

ವಾಯುನೆಲೆಗೆ ಪ್ರವೇಶ ಪಡೆಯಲು ಸಾಧ್ಯವಾಗದ ಜನ ಹೆದ್ದಾರಿ ಬದಿಯಲ್ಲಿರುವ ಹುಣಸಮಾರನಹಳ್ಳಿ ಕೆರೆಯ ಏರಿಯ ಮೇಲೆ ಕುಳಿತು ಲೋಹದ ಹಕ್ಕಿಗಳ ಕಸರತ್ತು ವೀಕ್ಷಿಸಿದರು.

ವಾಯುನೆಲೆಯ ಅಕ್ಕಪಕ್ಕದ ಅಪಾರ್ಟ್‌ಮೆಂಟ್‌ಗಳ ಫ್ಲ್ಯಾಟ್‌ಗಳಲ್ಲಿ ವೈಮಾನಿಕ ಪ್ರದರ್ಶನ ವೀಕ್ಷಿಸಲು ₹200 ಶುಲ್ಕ ಪಡೆದು ವೀಕ್ಷಕರಿಗೆ ಬೇಕಾದ ಸೌಕರ್ಯಗಳನ್ನು ನೀಡಲಾಗಿತ್ತು.

ವಿಮಾನಗಳು ಆಗಸದಲ್ಲೇ ತಮ್ಮ ಕಸರತ್ತು ಪ್ರದರ್ಶಿಸುತ್ತಿದ್ದುದರಿಂದ ಹೊರಗಿದ್ದ ಜನರಿಗೂ ಹತ್ತಿರದಿಂದಲೇ ನೋಡಿದ ಅನುಭವ ಆಯಿತು. ರಸ್ತೆ ಬದಿಯಲ್ಲಿ ವಾಹನ ದಟ್ಟಣೆ ಉಂಟಾಗದಂತೆ ಸಂಚಾರ ವಿಭಾಗದ ಪೊಲೀಸರನ್ನೂ ನಿಯೋಜಿಸಲಾಗಿತ್ತು. ಕೆರೆಯ ಸುತ್ತಲೂ ಜನ ಸಂದಣಿ ಹೆಚ್ಚಿತ್ತು.

ಐಡೆಕ್ಸ್: ನವೋದ್ಯಮ ಮಳಿಗೆಯಲ್ಲಿ ಭವಿಷ್ಯದ ರಕ್ಷಣಾ ತಂತ್ರಜ್ಞಾನ

ಬೆಂಗಳೂರು: ಭವಿಷ್ಯದ ರಕ್ಷಣಾ ವ್ಯವಸ್ಥೆಗೆ ಬೇಕಿರುವ ಅತ್ಯಾಧುನಿಕ ಸಲಕರಣೆಗಳು ಯಲಹಂಕ ವಾಯುನೆಲೆಯಲ್ಲಿ ಆಯೋಜನೆಗೊಂಡಿರುವ ಏರೊ ಇಂಡಿಯಾ 15ನೇ ಆವೃತ್ತಿಯಲ್ಲಿನ ಐಡೆಕ್ಸ್ ನವೋದ್ಯಮ ಮಳಿಗೆಯಲ್ಲಿ ಅನಾವರಣ ಗೊಂಡಿವೆ. ಬೆಂಗಳೂರು ಸಹಿತ ದೇಶದ ಪ್ರಮುಖ ನಗರಗಳಲ್ಲಿರುವ ಹಲವು ನವೋದ್ಯಮಗಳು ಅಭಿವೃದ್ಧಿ ಪಡಿಸಿರುವ ಸಾಧನಗಳು ದೇಶ, ವಿದೇಶಗಳ ಸೇನಾಧಿಕಾರಿಗಳ ಗಮನ ಸೆಳೆಯುತ್ತಿವೆ.

• ಇ.ಎಸ್. ಸುಧೀಂದ್ರ ಪ್ರಸಾದ್

- **ಶತ್ರು ಸಂಹಾರಕ್ಕೆ ಪುಟ್ಟ ಸ್ಪಿಯರ್‌ಬಾಟ್:** ಕಟ್ಟಡದ ಒಂದು ಪಾರ್ಶ್ವದಲ್ಲಿ ಶತ್ರುಗಳಿರುವ ಸಂಶಯವಿದ್ದಲ್ಲಿ, ಸ್ಪಿಯರ್‌ಬಾಟ್ ಎಂಬ ಸಾಧವನ್ನು ಗೋಡೆಯ ಆಚೆ ಎಸೆದರೆ ಸಾಕು. ಇದರಲ್ಲಿರುವ ಕ್ಯಾಮೆರಾ ಹಾಗೂ ಸೆನ್ಸರ್‌ಗಳು ಆ ಕೊಠಡಿಯ ದೃಶ್ಯ ಸಹಿತ ಮಾಹಿತಿಯನ್ನು ನೀಡಲಿವೆ. ಒಂದೊಮ್ಮೆ ತಾನೇ ದಾಳಿಗೆ ಒಳಗಾಗುವುದಾದರೆ, ತನ್ನನ್ನೇ ತಾನು ಸ್ಫೋಟಿಸಿಕೊಂಡು ಶತ್ರುಗಳನ್ನು ಸಂಹಾರ ಮಾಡಲಿದೆ. ಬೆಂಗಳೂರಿನ ಕ್ಸೆನೊಮಸ್ ಎಂಬ ಕಂಪನಿ ಈ ಸಾಧನವನ್ನು ಅಭಿವೃದ್ಧಿಪಡಿಸಿದೆ.
- **ಉಭಯ ಜೀವಿಯಂತೆ ಕೂರ್ಮ ಕೆಲಸ:** ನೆಲ ಹಾಗೂ ನೀರಿನಲ್ಲಿ ಸಂಚರಿಸುವ ಸಾಮರ್ಥ್ಯವಿರುವ ಉಭಯಜೀವಿಯಂತೆ ತೆವಳುವ ರೊಬೊವನ್ನು ವಿಕ್ರಾ ಓಷನ್ ಟೆಕ್ ಕಂಪನಿ ಅಭಿವೃದ್ಧಿಪಡಿಸಿದೆ. ಚೆನ್ನೈನಲ್ಲಿ ತಯಾರಾಗಿರುವ 'ಕೂರ್ಮ' ರೊಬೊ, ಹಲವು ಸೆನ್ಸರ್‌ಗಳನ್ನು ಹೊಂದಿದ್ದು, ನೆಲ ಮತ್ತು ನೀರಿನೊಳಗೆ ನೆಲದ ಸದೃಢತೆಯನ್ನು ತಿಳಿಸುವ ಸಾಮರ್ಥ್ಯ ಹೊಂದಿದೆ. ಗಡಿ ಭದ್ರತಾ ಪಡೆಗೆ ಸಿದ್ಧಪಡಿಸಿರುವ ಈ ಸಾಧನ ಒಂದು ನಾಟಿಕಲ್ ಮೈಲು ವೇಗದಲ್ಲಿ ಆರು ಗಂಟೆಗಳವರೆಗೂ ಸಂಚರಿಸುವ ಮತ್ತು 2 ಕಿ.ಮೀ. ದೂರದವರೆಗೂ ಮಾಹಿತಿ ರವಾನಿಸುವ ಸಾಮರ್ಥ್ಯ ಹೊಂದಿದೆ.
- **ಕಡಲಾಳದಲ್ಲಿ ಗಸ್ತು ತಿರುಗುವ ಯುಯುವಿ:** ಹೈದರಾಬಾದ್ ಮೂಲದ ರೆಕಿಸೆ ಎಂಬ ಕಂಪನಿ ಅಭಿವೃದ್ಧಿಪಡಿಸಿರುವ ಮಾನವರಹಿತ ಜಲತಾಂರ್ಗಾಮಿ ಪುಟ್ಟ ನೌಕೆ ಜಲ್‌ಕಪಿ. 11 ಮೀಟರ್ ಉದ್ದದ ಈ ನೌಕೆಯು 300 ಮೀಟರ್‌ನಷ್ಟು ಕಡಲಾಳದಲ್ಲಿ 30ರಿಂದ 45 ದಿನಗಳವರೆಗೆ ಗಸ್ತು ತಿರುಗುವ ಸಾಮರ್ಥ್ಯ ಹೊಂದಿದೆ. ಇದನ್ನು ಕಡಲಿನ ನಕ್ಷೆ ತಯಾರಿಸಲು, ಶತ್ರು ನೌಕೆಗಳ ಮಾಹಿತಿ ರವಾನಿಸಲು ಮತ್ತು ತಕ್ಕಮಟ್ಟಿಗೆ ದಾಳಿ ನಡೆಸುವಂತೆ ಅಭಿವೃದ್ಧಿಪಡಿಸಲಾಗಿದೆ. ಇದೇ ಕಂಪನಿಯು ನೌಕಾದಳಕ್ಕೆ ಇನ್ನಷ್ಟು ಹೊಸ ತಂತ್ರಜ್ಞಾನದ ಸಾಧನಗಳನ್ನು ಅಭಿವೃದ್ಧಿಪಡಿಸಿ ಇಲ್ಲಿ ಪ್ರದರ್ಶನಕ್ಕಿಟ್ಟಿದೆ.



ತ್ಸಲ್ಲಾ ಏರೋಸ್ಪೇಸ್ ಕಂಪನಿಯ ಫೀನಿಕ್ಸ್

- **ಸುರಂಗ ಮಾರ್ಗ ಪತ್ತೆಮಾಡುವ ಭುವಿ:** ನಿಯೊಟೊ ಕಂಪನಿ ಅಭಿವೃದ್ಧಿಪಡಿಸಿರುವ ನೆಲದಡಿಯ ಬಂಕರ್‌ಗಳ ಪತ್ತೆ ಮಾಡುವ ಡ್ರೋನ್ ಭುವಿ. ಶತ್ರುಗಳು ನೆಲದಡಿಯಲ್ಲಿ ಸುರಂಗ ನಿರ್ಮಿಸಿದ್ದರೆ, ಅದನ್ನು ಭೂಮಿ ಮೇಲೆ ಒಂದು ಮೀಟರ್ ಎತ್ತರದಲ್ಲಿ ಹಾರಾಡುವ ಈ ಸಾಧನ ಪತ್ತಹೆಚ್ಚಬಲ್ಲದು. ನೆಲದಡಿಯಲ್ಲಿ 10 ಮೀಟರ್ ಆಳದವರಗಿನ ಮಾಹಿತಿಯನ್ನು ಇದು ನೀಡಬಲ್ಲದು.
- **ಹಡಗಿನ ವಿಪತ್ತು ನಿರ್ವಹಣೆಗೆ ಫೀನಿಕ್ಸ್:** ಹಡಗುಗಳಲ್ಲಿ ಅಗ್ನಿ ಆಕಸ್ಮಿಕ ಸಂಭವಿಸಿದಲ್ಲಿ, ವಿದ್ಯುತ್ ಪೂರೈಕೆಯನ್ನು ಮೊದಲು ಸ್ಥಗಿತಗೊಳಿಸಲಾಗುತ್ತದೆ. ದಟ್ಟ ಹೊಗೆ ಆವರಿಸಿದ ಸ್ಥಳದಲ್ಲಿ ಮನುಷ್ಯರು ಹೋಗುವುದು ಕಷ್ಟದ ಕೆಲಸ. ಇದಕ್ಕಾಗಿಯೇ ಬೆಂಗಳೂರು ಮೂಲದ ತ್ಸಲ್ಲಾ ಏರೋಸ್ಪೇಸ್ ಕಂಪನಿಯು ಫೀನಿಕ್ಸ್ ಎಂಬ ಡ್ರೋನ್ ಅಭಿವೃದ್ಧಿಪಡಿಸಿದೆ. 200 ಡಿಗ್ರಿ ತಾಪಮಾನವನ್ನೂ ತಡೆದುಕೊಳ್ಳಬಲ್ಲ ಸಾಮರ್ಥ್ಯವಿರುವ ಈ ಡ್ರೋನ್, ಹೊಗೆ ಆವರಿಸಿರುವ ಸ್ಥಳದಲ್ಲಿ ಹಾರಾಟ ನಡೆಸಿ, ಅಲ್ಲಿನ ಮಾಹಿತಿಯನ್ನು ನಿಯಂತ್ರಣ ಕೋಣೆಗೆ ಕಳುಹಿಸುವ ಸಾಮರ್ಥ್ಯ ಹೊಂದಿದೆ.



ಯಲಹಂಕ ವಾಯು ನೆಲೆಯಲ್ಲಿ ನಡೆಯುತ್ತಿರುವ ಏರೊ ಇಂಡಿಯಾ ವೈಮಾನಿಕ ಪ್ರದರ್ಶನಕ್ಕೆ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅವರು ಭೇಟಿ ನೀಡಿ, ಹೆಲಿಕಾಪ್ಟರ್‌ನಲ್ಲಿ ಕುಳಿತುಕೊಂಡು ತಜ್ಞರಿಂದ ಮಾಹಿತಿ ಪಡೆದುಕೊಂಡರು

ಹಾರಾಟ ನಡೆಸಿದ ತೇಜಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ಅಭಿವೃದ್ಧಿಪಡಿಸಿರುವ ಹಿಂದೂಸ್ತಾನ್ ಟರ್ಬೊ ಟ್ರೈನರ್ 40 (ಎಚ್‌ಟಿಟಿ) ತರಬೇತಿ ಯುದ್ಧ ವಿಮಾನದಲ್ಲಿ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿಸೂರ್ಯ ಅವರು ಗುರುವಾರ ಹಾರಾಟ ನಡೆಸಿದರು.

ಯಲಹಂಕ ವಾಯುನೆಲೆಯಲ್ಲಿ ಆಯೋಜನೆಗೊಂಡಿರುವ ಏರೊ ಇಂಡಿಯಾ 15ನೇ ಆವೃತ್ತಿಯ ನಾಲ್ಕನೇ ದಿನವಾದ ಗುರುವಾರ ಭೇಟಿ ನೀಡಿದ ತೇಜಸ್ವಿಸೂರ್ಯ ಅವರು ಪೈಲಟ್ ಪೋಷಾಕಿ ನಲ್ಲಿದ್ದರು. ಅವರನ್ನು ಬರಮಾಡಿಕೊಂಡ ಭಾರತೀಯ ವಾಯು ಸೇನೆಯ ಅಧಿಕಾರಿಗಳು ಎಚ್‌ಟಿಟಿ-40 ಯುದ್ಧ ವಿಮಾನದ ಕಾಕ್‌ಪಿಟ್‌ನಲ್ಲಿ ಸಹ ಪೈಲಟ್ ಆಸನದಲ್ಲಿ ಕೂರಿಸಿದರು.

ತರಬೇತಿ ವಿಮಾನದಲ್ಲಿ ಕೆಲಕಾಲ ಹಾರಾಟ ನಡೆಸಿದ ತೇಜಸ್ವಿಸೂರ್ಯ ಅವರು ನಂತರ ಮಾತನಾಡಿ, 'ಎಚ್‌ಎಎಲ್ ನಿರ್ಮಿಸಿರುವ ಎಚ್‌ಟಿಟಿ-40ಯಂತಹ ಯುದ್ಧ ವಿಮಾನಗಳು ಸ್ವಾವಲಂಬಿ ಹಾಗೂ ವೈಜ್ಞಾನಿಕ ಪರಾಕ್ರಮಕ್ಕೆ ಸಾಕ್ಷಿಯಾಗಿವೆ. ದೇಶಕ್ಕೆ ಸರಿಯಾದ ನಾಯಕತ್ವ ಮತ್ತು ಬೆಂಬಲ ಸಿಕ್ಕಾಗ ಇಂಥ ಸಂಸ್ಥೆಗಳಿಗೆ ಸಮರ್ಪಕ ಬೆಂಬಲ ಸಿಗಲಿದೆ' ಎಂದರು.



ಬೆಂಗಳೂರಿನ ಯಲಹಂಕ ವಾಯುನೆಲೆಯಲ್ಲಿ ಆಯೋಜನೆಗೊಂಡಿರುವ ಏರೊ ಇಂಡಿಯಾ 15ನೇ ಆವೃತ್ತಿಯ ನಾಲ್ಕನೇ ದಿನವಾದ ಗುರುವಾರ ಸಂಸದ ತೇಜಸ್ವಿಸೂರ್ಯ ಅವರು ಎಚ್‌ಎಎಲ್ ನಿರ್ಮಿತ ಎಚ್‌ಟಿಟಿ-40 ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿದ ನಂತರ ಜನರತ್ತ ಕೈಬೀಸಿದರು — ಪಿಟಿಐ ಚಿತ್ರ

ಪ್ರೊ. ಮಾಧವ ಗಾಡ್ಗೀಳ್ ಆತ್ಮಕಥೆ 'ಏರು ಘಟ್ಟದ ನಡಿಗೆ' ಬಿಡುಗಡೆ

2.50 ಲಕ್ಷ ಎಕರೆ ಅರಣ್ಯ ಒತ್ತುವರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 2.50 ಲಕ್ಷ ಎಕರೆ ಅರಣ್ಯ ಜಮೀನು ಒತ್ತುವರಿಯಾಗಿದ್ದು, ಈವರೆಗೂ 5,000 ಎಕರೆ ಒತ್ತುವರಿ ತೆರವು ಮಾಡಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

ಚಿತ್ರಕಲಾ ಪರಿಷತ್ತಿನಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ನಾಗೇಶ ಹೆಗಡೆ ಮತ್ತು ಶಾರದಾ ಗೋಪಾಲ ಅನುವಾದಿಸಿರುವ ಪ್ರೊ. ಮಾಧವ ಗಾಡ್ಗೀಳರ ಆತ್ಮಕಥೆ 'ಎ ವಾಕ್ ಅಪ್ ದ ಹಿಲ್'ನ ಕನ್ನಡ ಕೃತಿ 'ಏರುಘಟ್ಟದ ನಡಿಗೆ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

ಒತ್ತುವರಿ ತೆರವಿಗೆ ಸರ್ಕಾರ ಕ್ರಮ ಕೈಗೊಂಡಿದ್ದು, ಬೆಂಗಳೂರು ನಗರದಲ್ಲಿ ಸಾವಿರಾರು ಕೋಟಿ ಮೌಲ್ಯದ 117 ಎಕರೆ ತೆರವು ಮಾಡಲಾಗಿದೆ. ತೆರವು ಮಾಡಿಸಲಾದ ಅರಣ್ಯ ಜಮೀನಿನ ಗಡಿ ಗುರುತಿಗೆ ಕಂದಕ ತೋಡಿ, ಗಿಡ ನೆಡಲಾಗಿದೆ. ಮತ್ತೆ ಒತ್ತುವರಿ ಆಗದಂತೆ ಎಚ್ಚರ ವಹಿಸಲೂ ಸೂಚಿಸಲಾಗಿದೆ ಎಂದರು.

ರಾಜ್ಯದಲ್ಲಿ ಶೇಕಡ 33ರಷ್ಟು ಅರಣ್ಯ ಪ್ರದೇಶ ಇರಬೇಕು. ಆದರೆ ಶೇ 21.7ರಷ್ಟು ಮಾತ್ರ ಇದೆ. ರಾಜ್ಯದ ಹಸಿರು ವ್ಯಾಪ್ತಿ ಹೆಚ್ಚಿಸಲು 2023-24ರ ಸಾಲಿನಲ್ಲಿ 5 ಕೋಟಿ ಸಸಿ ನೆಡುವ ಗುರಿ ನೀಡಿದ್ದು, ಗುರಿ ಮೀರಿದ ಸಾಧನೆ ಮಾಡಲಾಗಿತ್ತು. ಇವುಗಳ ಪೈಕಿ ಎಷ್ಟು ಬದುಕಿ ಉಳಿದಿವೆ ಎಂದು ತಿಳಿಯಲು ಲೆಕ್ಕ ಪರಿಶೋಧನೆ ಮಾಡಿಸಲಾಗಿದ್ದು, ಈ ವಿವರವನ್ನು ಅರಣ್ಯ ಇಲಾಖೆಯ ಅಂತರ್ಜಾಲ ತಾಣದಲ್ಲಿ ಅಪ್ ಲೋಡ್ ಮಾಡಲಾಗಿದೆ ಎಂದು ತಿಳಿಸಿದರು.

ಕೆ. ಕಸ್ತೂರಿ ರಂಗನ್ ಸಮಿತಿಯ ವರದಿಯಲ್ಲಿ ರಾಜ್ಯದ ಪಶ್ಚಿಮಘಟ್ಟ ಪ್ರದೇಶದಲ್ಲಿ 20,668 ಚ.ಕಿ.ಮೀ. ಪರಿಸರ ಸೂಕ್ಷ್ಮ ಎಂದು ಗುರುತಿಸಿದ್ದು, ಈಗಾಗಲೇ 16,114 ಚದರ ಕಿ.ಮೀ. ಸಂರಕ್ಷಿಸಲಾಗಿದೆ. ವರದಿಯಲ್ಲಿ ನಮೂದಿಸಿರುವ ವ್ಯಾಪ್ತಿಯ ಶೇ 83ರಷ್ಟು ಪ್ರದೇಶದ ಸಂರಕ್ಷಣೆಯಾಗಿದೆ. ಉಳಿದ 4 ಸಾವಿರ ಚ.ಕಿ.ಮೀ ಅಂದರೆ ಶೇ 17ರಷ್ಟು ಪ್ರದೇಶದಲ್ಲಿ 39 ತಾಲ್ಲೂಕುಗಳ ಸುಮಾರು 1,449 ಗ್ರಾಮಗಳಿದ್ದು, ಇಲ್ಲಿ ಶಾಲೆ, ಆಸ್ಪತ್ರೆ, ಅಂಗನವಾಡಿ, ವಸತಿ ಪ್ರದೇಶಗಳಿವೆ. ಹೀಗಾಗಿ ಜೀವನ, ಜೀವನೋಪಾಯ ಮತ್ತು ಪರಿಸರ ಸಂರಕ್ಷಣೆ ಎಲ್ಲವನ್ನೂ ಸಮತೋಲಿತವಾಗಿ ತೆಗೆದುಕೊಂಡು ಹೋಗಲಾಗುತ್ತಿದೆ ಎಂದರು.

ಶಿಕ್ಷಣ ತಜ್ಞ ಪ್ರೊ. ಕೆ.ಇ. ರಾಧಾಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಆಕೃತಿ ಆಶಯ ಪ್ರಕಾಶನದ ಕಲ್ಲೂರು ನಾಗೇಶ್, ಪರಿಸರ ಚಿಂತಕ ನರೇಂದ್ರ ರೈ ದೇರ್ಲ, ಆರ್.ಪಿ.ಇ. ಸೊಸೈಟಿ ಕಾರ್ಯದರ್ಶಿ ನಟರಾಜ್ ಸಾಗರನಹಳ್ಳಿ ಪಾಲ್ಗೊಂಡಿದ್ದರು.



ಪ್ರೊ. ಮಾಧವ ಗಾಡ್ಗೀಳರ ಆತ್ಮಕಥೆ 'ಏರುಘಟ್ಟದ ನಡಿಗೆ' ಪುಸ್ತಕ ಬಿಡುಗಡೆ ಮಾಡಿದ ಸಚಿವ ಈಶ್ವರ ಖಂಡ್ರೆ ಅವರು, ಅನುವಾದಕ ನಾಗೇಶ ಹೆಗಡೆ ಅವರಿಗೆ ಪುಸ್ತಕ ನೀಡಿದರು. ನರೇಂದ್ರ ರೈ ದೇರ್ಲ, ಕ್ಯಾಪ್ಟನ್ ಜಿ.ಆರ್. ಗೋಪಿನಾಥ್, ಕೆ.ಇ. ರಾಧಾಕೃಷ್ಣ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

> ಕರ್ನಾಟಕವೂ ಸೇರಿದಂತೆ ಆರು ರಾಜ್ಯಗಳಲ್ಲಿ ಅಂತರ್ಜಲ ಮಟ್ಟ ಪಾತಾಳಕ್ಕಿಳಿದಿದೆ. ಮನುಷ್ಯನ ದುರಾಸೆಯಿಂದ ನೆಲದೊಳಗೆ ಬರಗಾಲ ಸೃಷ್ಟಿ ಮಾಡಲಾಗಿದೆ
> **ನಾಗೇಶ ಹೆಗಡೆ**, ಲೇಖಕ

> ಅತಿಯಾದ ರಾಸಾಯನಿಕ ಬಳಕೆಯಿಂದಾಗಿ ಭೂಮಿ ಬಂಜರಾಗುತ್ತಿದೆ. ಬಂಜರು ಭೂಮಿಯಿಂದಾಗಿ ಏಡಿಗಳು ಸಿಗುತ್ತಿಲ್ಲ
> **ಕ್ಯಾಪ್ಟನ್ ಜಿ.ಆರ್.ಗೋಪಿನಾಥ್**, ಚಿಂತಕ

ಅಂಕಿ ಅಂಶಗಳು

5 ಕೋಟಿ — 2023-24ರಲ್ಲಿ ಸಸಿ ನೆಡುವ ಗುರಿ

5.48 ಕೋಟಿ — ನೆಟ್ಟ ಸಸಿಗಳ ವಿವರ

3 ಕೋಟಿ — 2024-25ರಲ್ಲಿ ನೆಟ್ಟ ಸಸಿ



ಪ್ರಶಸ್ತಿ ಗೌರವ

ಶ್ರೀ ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನದ 25ನೇ ವರ್ಷದ ರಜತ ಮಹೋತ್ಸವ ಹಾಗೂ ಪುರಂದರದಾಸರ ಆರಾಧನೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ವಾನ್ ಆರ್.ಕೆ. ಪದ್ಮನಾಭ ಅವರಿಗೆ ಜೀವಮಾನದ ಸಂಗೀತ ಸಾಧನಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ತಂಬಿಹಳ್ಳಿ ಮಾಧವತೀರ್ಥ ಮಠದ ವಿದ್ಯಾಸಾಗರ ಮಾಧವತೀರ್ಥ ಸ್ವಾಮೀಜಿ, ರಾಘವೇಂದ್ರ ಸ್ವಾಮಿಗಳ ಮಠದ ಸುಬುಧೇಂದ್ರತೀರ್ಥ ಸ್ವಾಮೀಜಿ, ಪ್ರತಿಷ್ಠಾನದ ಸಂಸ್ಥಾಪಕರಾದ ಗೌರಿ ನಾಗರಾಜ್ ಉಪಸ್ಥಿತರಿದ್ದರು

ನಿಧನ ವಾರ್ತೆ

ಎಸ್.ಕೆ.ಆಂಜನಪ್ಪ



ಯಲಹಂಕ: ಸೊಣ್ಣಪ್ಪನಹಳ್ಳಿ ಗ್ರಾಮಪಂಚಾಯಿತಿ ಮಾಜಿ ಅಧ್ಯಕ್ಷ ಎಸ್.ಕೆ.ಆಂಜನಪ್ಪ(78) ಅವರು ಅನಾರೋಗ್ಯದಿಂದ ವಿದ್ಯಾನಗರ ಕ್ರಾಸ್‌ನ (ಸೊಣ್ಣಪ್ಪನಹಳ್ಳಿ) ತಮ್ಮ ನಿವಾಸದಲ್ಲಿ ಗುರುವಾರ ನಿಧನರಾದರು.

ಮೃತರಿಗೆ ಪತ್ನಿ ಹಾಗೂ ಇಬ್ಬರು ಸಹೋದರರು ಇದ್ದಾರೆ. ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ವಿದ್ಯಾನಗರ ಕ್ರಾಸ್ ಬಳಿಯಿರುವ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭಯೋತ್ಪಾದನೆ ನಿಗ್ರಹಕ್ಕೆ ಪಣ

ಎರಡನೇ ಮುಖಪುಟದಿಂದ...

'ರಕ್ಷಣೆ, ತಂತ್ರಜ್ಞಾನ ಮತ್ತು ಭದ್ರತೆಯು ಉಭಯ ರಾಷ್ಟ್ರಗಳ ಬಾಂಧವ್ಯದ ಪ್ರಮುಖ ಅಂಶಗಳು. ಕೃತಕ ಬುದ್ಧಿಮತ್ತೆ, ಸೆಮಿಕಂಡಕ್ಟರ್, ಬಾಹ್ಯಾಕಾಶ ಹಾಗೂ ಇನ್ನಿತರ ಪ್ರಮುಖ ಕ್ಷೇತ್ರಗಳಲ್ಲಿ ನಾವು ಪರಸ್ಪರ ಸಹಕಾರ ಹೆಚ್ಚಿಸಿಕೊಳ್ಳಲು ವಿಪುಲ ಅವಕಾಶಗಳಿವೆ. ಇವುಗಳ ಬಗ್ಗೆಯೂ ನಾವು ಮಹತ್ವದ ಚರ್ಚೆ ನಡೆಸಿದ್ದೇವೆ' ಎಂದು ಮೋದಿ ಹೇಳಿದ್ದಾರೆ.

ಇದೇ ವೇಳೆ ಮೋದಿ ಅವರು ಸ್ಪೇಸ್‌ಎಕ್ಸ್‌ನ ಸಿಇಒ ಇಲಾನ್ ಮಸ್ಕ್ ಅವರನ್ನು ಭೇಟಿಯಾಗಿ, ಬಾಹ್ಯಾಕಾಶ, ತಂತ್ರಜ್ಞಾನ, ಆವಿಷ್ಕಾರ ಹಾಗೂ ಮೊಬಿಲಿಟಿಯಂತಹ ಹಲವು ವಿಷಯಗಳ ಬಗ್ಗೆ ಚರ್ಚಿಸಿದರು.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಮೋದಿ ಶುಕ್ರವಾರ ಮುಂಜಾನೆ (ಭಾರತೀಯ ಕಾಲಮಾನ) ಭೇಟಿಯಾಗಲಿದ್ದು, ಉಭಯ ರಾಷ್ಟ್ರಗಳ ನಡುವೆ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವ ಮಾರ್ಗ, ಅಕ್ರಮ ವಲಸಿಗರ ಸಮಸ್ಯೆ, ವ್ಯಾಪಾರ, ತಂತ್ರಜ್ಞಾನ, ರಕ್ಷಣಾ ಪಾಲುದಾರಿಕೆ ಸೇರಿದಂತೆ ಹಲವು ಮಹತ್ವದ ವಿಷಯಗಳ ಕುರಿತು ಉಭಯ ನಾಯಕರು ಚರ್ಚಿಸುವ ನಿರೀಕ್ಷೆ ಇದೆ.

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನ: ಸಾನ್ನಿಧ್ಯ: ಶ್ರೀ ಶ್ರೀ ರವಿಶಂಕರ್ ಗುರೂಜಿ, ಉದ್ಘಾಟನೆ: ದ್ರೌಪದಿ ಮುರ್ಮು, ಅತಿಥಿಗಳು: ಭಾನುಮತಿ ನರಸಿಂಹನ್, ಅನ್ನಪೂರ್ಣ ದೇವಿ, ಹೇಮಾ ಮಾಲಿನಿ, ದಾಶೋ ದೆಚೆನ್ ವಾಂಗ್ಮೊ, ಮರಿಯಾ ಜಾರ್ಜಿಯನ್, ಶೋಭಾ ಕರಂದ್ಲಾಜೆ, ಆಯೋಜನೆ ಮತ್ತು ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ಬೆಳಿಗ್ಗೆ 9.45ರಿಂದ

ಪ್ರೀತಿಯಿಂದ ಕಲಿಕೆಯ ಸಂಭ್ರಮ: ರಸಪ್ರಶ್ನೆ: ಲಕ್ಷ್ಮಿ ಗೋಪಾಲ ಕೃಷ್ಣ, ಸಂಗೀತ: ಆರ್. ಅರುಣ್‌ಕುಮಾರ್, ಆಯೋಜನೆ: ಆರೋಹಣ, ಸ್ಥಳ: ಬಾಲ್ಯ, ಮಂಗನಹಳ್ಳಿ ಅಡ್ಡರಸ್ತೆ, ಸರ್.ಎಂ.ವಿ. ಬಡಾವಣೆ, ಬೆಳಿಗ್ಗೆ 11ರಿಂದ

ಪ್ರಶಸ್ತಿ ಪ್ರದಾನ ಸಮಾರಂಭದ ಉದ್ಘಾಟನೆ: ಎನ್. ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಉಪಸ್ಥಿತಿ: ನಂದಿದುರ್ಗ ಬಾಲುಗೌಡ, ಆಯೋಜನೆ: ಯುವಚೇತನ ಯುವಜನ ಕೇಂದ್ರ, ಸ್ಥಳ: ಎನ್‌ಜಿಒ ಸಭಾಂಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30

ದಿ ಸೇಂಟ್ ಜಾನ್ಸ್ ಜೆರಿಯಾಟ್ರಿಕ್ ಸೆಂಟರ್ ಭರವಸೆಯ ಕಿರಣದ ಉದ್ಘಾಟನೆ: ಅತಿಥಿಗಳು: ರಾಮಲಿಂಗಾರೆಡ್ಡಿ, ವಿಕ್ಟರ್ ಹೆನ್ರಿ ಠಾಕೂರ್, ಅಧ್ಯಕ್ಷತೆ: ಆ್ಯಂಡ್ರೂಸ್ ತರುತ್, ಆಯೋಜನೆ ಮತ್ತು ಸ್ಥಳ: ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ, ಸರ್ಜಾಪುರ ರಸ್ತೆ, ಸಂಜೆ 4

ಸಂಸ್ಥಾಪಕರ ದಿನಾಚರಣೆ 'ಶಿವಲಿಂಗ ಪ್ರಶಸ್ತಿ' ಪ್ರದಾನ: ಎಸ್.ಟಿ. ಸೋಮಶೇಖರ್, ಉದ್ಘಾಟನೆ: ಶಿವರುದ್ರ ಸ್ವಾಮೀಜಿ, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಪ್ರಶಸ್ತಿ ಸ್ವೀಕರಿಸುವವರು: ವಿ. ಪುಣ್ಯೇಶ್ ಕುಮಾರ್, ಗುರುರಾಜ ಆಚಾರ್ಯ, ಎ. ಮಹೇಂದ್ರ, ಅತಿಥಿಗಳು: ಜಯವಿಭವಸ್ವಾಮಿ, ಧರಣಿದೇವಿ ಮಾಲಗತ್ತಿ, ಬಿ.ಎಸ್. ಮಂಜುನಾಥಸ್ವಾಮಿ, ಬಲವಂತರಾವ್ ಪಾಟೀಲ್, ಬಿ.ಕೆ. ಶಿವರಾಂ, ವೀರಕಪುತ್ರ ಶ್ರೀನಿವಾಸ್, ಆಶಯ ನುಡಿ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ ಹಿಂಭಾಗ, ಜೆ.ಸಿ. ರಸ್ತೆ, ಸಂಜೆ 4, (ಸಭಾ ಕಾರ್ಯಕ್ರಮ ಸಂಜೆ 5.30)

ನಾದಗೀತೋತ್ಸವ, ಯುವ ಇಂಚರ ಪ್ರಶಸ್ತಿ ಪ್ರದಾನ: ಪ್ರಕಾಶ್ ಸೊಂಟಕೆ, ಅಧ್ಯಕ್ಷತೆ: ಕಾ.ವೆಂ. ಶ್ರೀನಿವಾಸಮೂರ್ತಿ, ಆನಂದ್ ಮಾದಲಗೆರೆ, ಪ್ರಶಸ್ತಿ ಸ್ವೀಕರಿಸುವವರು: ಕಾರ್ತಿಕ್ ಭಟ್, ಪ್ರಾಸ್ತವಿಕ ನುಡಿ: ಇಂಚರ ಪ್ರವೀಣ್ ಕುಮಾರ್, ಆಯೋಜನೆ: ಇಂಚರ ಸುಗಮ ಸಂಗೀತ ಸಂಸ್ಥೆ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಸಾಮೂಹಿಕ ಸರಸ್ವತಿ ಪೂಜೆ: ಆಯೋಜನೆ: ನಂಜನಗೂಡು ಶ್ರೀಕಂಠೇಶ್ವರ ಸೇವಾ ಸಂಘ, ಸ್ಥಳ: ಶ್ರೀಕಂಠೇಶ್ವರ ಭವನ, ಮಲ್ಲೇಶ್ವರ, ಸಂಜೆ 5.30



60ನೇ ನಾದಜ್ಯೋತಿ ಸಂಗೀತ ಸಂಭ್ರಮ–2025: ವೇಣು: ಶಶಾಂಕ್ ಸುಬ್ರಮಣಿಯಂ, ಪಿಟೀಲು: ಎಚ್.ಎನ್. ಭಾಸ್ಕರ್, ಮೃದಂಗ: ಹರಿಹರನ್ ಸುಂದರಂ, ಘಟ: ಗಿರಿಧರ್ ಉಡುಪ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್‌ಪಾರ್ಕ್, ಮಲ್ಲೇಶ್ವರ, ಸಂಜೆ 6ರಿಂದ



'ಬ್ಲಾಕ್‌ಔಟ್' ನಾಟಕ ಪ್ರದರ್ಶನ: ನಿರ್ದೇಶನ: ಸುಂದರಶ್ರೀ, ಆಯೋಜನೆ: ಸಾಫಲ್ಯ ರಂಗ ತಂಡ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30

ಶಾಸಕರಿಗೆ ಸಂಪುಟ ದರ್ಜೆ ಸ್ಥಾನಮಾನ ವಿಚಾರಣೆ 21ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: '48 ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ನೀಡಿ ವಿವಿಧ ನಿಗಮ-ಮಂಡಳಿಗಳಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದು ಸಂವಿಧಾನದ 164 (1ಎ)ನೇ ವಿಧಿಯ ಸ್ಪಷ್ಟ ಉಲ್ಲಂಘನೆಯಾಗಿದ್ದು, ಬೊಕ್ಕಸಕ್ಕೆ ಅನಗತ್ಯ ಹೊರೆಯಾಗಿರುವ ಈ ಹುದ್ದೆಗಳನ್ನು ಬರ್ಖಾಸ್ತುಗೊಳಿಸಬೇಕು' ಎಂದು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಸೂರಿ ಪಾಯಲ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ಅರ್ಜಿದಾರರ ಪರ ಸುಪ್ರೀಂ ಕೋರ್ಟ್ ವಕೀಲ ಸಾಯಿ ದೀಪಕ್, ಆನ್‌ಲೈನ್ ಮುಖಾಂತರ ವಾದ ಮಂಡನೆಗೆ ಮುಂದಾದರು. ಆದರೆ, ತಾಂತ್ರಿಕ ಅಡಚಣೆ ಉಂಟಾದ ಕಾರಣ 'ಖುದ್ದು ಹಾಜರಾಗಿ ವಾದ ಮಂಡಿಸಿ' ಎಂದು ಸೂಚಿಸಿ ವಿಚಾರಣೆಯನ್ನು ಇದೇ 21ಕ್ಕೆ ನ್ಯಾಯಪೀಠ ಮುಂದೂಡಿತು.

ಮಲಬಾರ್ ಟ್ರಸ್ಟ್ ಕಾರ್ಯಕ್ರಮದಲ್ಲಿ ಡಿ.ಕೆ.ಶಿವಕುಮಾರ್

'ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನೆರವು: ಶ್ಲಾಘನೀಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಮಹಿಳಾ ಸಬಲೀಕರಣಕ್ಕಾಗಿ ಆರ್ಥಿಕ ನೆರವು ನೀಡುವಂತಹ ಮಹತ್ವವಾದ ಕಾರ್ಯಕ್ರಮವನ್ನು ಮಲಬಾರ್ ಚಾರಿಟಬಲ್ ಟ್ರಸ್ಟ್ ರೂಪಿಸಿದೆ. ಸಂಸ್ಥೆಯ ಇಂಥ ಕಾರ್ಯಕ್ರಮಗಳನ್ನು ನಾನು ಮತ್ತು ನಮ್ಮ ಸರ್ಕಾರ ಬೆಂಬಲಿಸುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ನಗರದಲ್ಲಿ ಮಲಬಾರ್ ಚಾರಿಟಬಲ್ ಟ್ರಸ್ಟ್ ಗುರುವಾರ ಆಯೋಜಿಸಿದ್ದ 'ಹೆಣ್ಣುಮಕ್ಕಳಿಗೆ ವಿದ್ಯಾರ್ಥಿ ವೇತನ ಘೋಷಣೆ ಮತ್ತು ವಿತರಣೆ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. 'ರಾಜ್ಯದ ಸುಮಾರು ಐದು ಸಾವಿರ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ನೀಡುತ್ತಿದ್ದಾರೆ. ನಿಮ್ಮೆಲ್ಲರ ಬದುಕು ಹಸನಾಗಬೇಕು ಎಂಬುದು ಅವರ ಗುರಿ. ಕಂಪನಿಯವರು ಸಂಪಾದಿಸಿದ ಹಣದಲ್ಲಿ ಸ್ವಲ್ಪ ಭಾಗವನ್ನು ಮಹಿಳಾ ಸಬಲೀಕರಣದಂತಹ ಸಾಮಾಜಿಕ ಕಾರ್ಯಗಳಿಗೆ ವಿನಿಯೋಗಿಸುತ್ತಿದ್ದಾರೆ. ಅವರ ಕಾರ್ಯ ಶ್ಲಾಘನೀಯವಾದುದು' ಎಂದು ಪ್ರಶಂಸಿಸಿದರು.



ಮಲಬಾರ್ ಚಾರಿಟಬಲ್ ಟ್ರಸ್ಟ್ ಗುರುವಾರ ನಗರದಲ್ಲಿ ಆಯೋಜಿಸಿದ್ದ 'ಹೆಣ್ಣುಮಕ್ಕಳಿಗೆ ವಿದ್ಯಾರ್ಥಿವೇತನ ಘೋಷಣೆ ಮತ್ತು ವಿತರಣಾ ಕಾರ್ಯಕ್ರಮ'ಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಾಲನೆ ನೀಡಿದರು. ಆಷರ್ ಓ, ಎನ್.ಎ. ಹ್ಯಾರಿಸ್, ಎಂ.ಪಿ. ಅಹ್ಮದ್ ಹಾಗೂ ಫಿಲ್ಸರ್ ಬಾಬು ಹಾಜರಿದ್ದರು ಪ್ರಜಾವಾಣಿ ಚಿತ್ರ

'ಹೆಣ್ಮಕ್ಕಳು ಸಮಾಜವನ್ನು ಉಳಿಸುತ್ತಾರೆ. ಕುಟುಂಬ ಬೆಳೆಸುತ್ತಾರೆ ಎಂಬುದು ಮಲಬಾರ್ ಸಮೂಹದ ನಂಬಿಕೆ. ನಮ್ಮ ಸರ್ಕಾರ ಕೂಡ ಮಹಿಳೆಯರಿಗಾಗಿ ಗೃಹ ಜ್ಯೋತಿ, ಗೃಹ ಲಕ್ಷ್ಮಿ ಮತ್ತು ಶಕ್ತಿಯಂತಹ ಯೋಜನೆಗಳನ್ನು ಜಾರಿಗೆ ತಂದಿದೆ' ಎಂದರು.

ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ.ಅಹ್ಮದ್ ಮಾತನಾಡಿ, 'ನಮ್ಮ ಕಂಪನಿಯ ವಾರ್ಷಿಕ ಲಾಭದ ಶೇಕಡ 5ರಷ್ಟು ಭಾಗವನ್ನು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ಶಿಕ್ಷಣ, ಆರೋಗ್ಯ ರಕ್ಷಣೆ, ಪರಿಸರ ಸಂರಕ್ಷಣೆ ಮತ್ತು ಬಡತನ ನಿರ್ಮೂಲನೆಯಂತಹ ಉಪಕ್ರಮಗಳಿಗೆ ವಿನಿಯೋಗಿಸುತ್ತಿದ್ದೇವೆ' ಎಂದು ಹೇಳಿದರು.

'ನಮ್ಮ ಟ್ರಸ್ಟ್‌ನಿಂದ ಈ ವರ್ಷ ದೇಶದಲ್ಲಿ ವಿದ್ಯಾರ್ಥಿವೇತನ ವಿತರಣೆ ಕಾರ್ಯಕ್ರಮಕ್ಕಾಗಿ ₹16 ಕೋಟಿ ಮೀಸಲಿಟ್ಟಿದ್ದೇವೆ. ಈ ಹಣವನ್ನು 21 ಸಾವಿರಕ್ಕೂ ಹೆಚ್ಚು ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ವಿನಿಯೋಗಿಸುತ್ತಿದ್ದೇವೆ. ಕರ್ನಾಟಕದಲ್ಲಿ 291 ಕಾಲೇಜುಗಳ 5,501 ವಿದ್ಯಾರ್ಥಿನಿಯರ ಓದಿಗೆ ನೆರವಾಗಲು ₹4.74 ಕೋಟಿಯನ್ನು ವಿದ್ಯಾರ್ಥಿ ವೇತನವನ್ನಾಗಿ ನೀಡುತ್ತಿದ್ದೇವೆ' ಎಂದರು.

ಕಾರ್ಯಕ್ರಮ ದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್.ಎ.ಹ್ಯಾರಿಸ್, ಮಲಬಾರ್ ಗ್ರೂಪ್‌ನ ಇಂಡಿಯಾ ಕಾರ್ಯಾಚರಣೆಗಳ ವ್ಯವಸ್ಥಾಪಕ ನಿರ್ದೇಶಕ ಓ. ಅಷರ್, ಕರ್ನಾಟಕ ವಲಯದ ಮುಖ್ಯಸ್ಥ ಫಿಲ್ಸರ್ ಬಾಬು ಭಾಗವಹಿಸಿದ್ದರು.

ಇ.ಡಿಗೆ 'ಸುಪ್ರೀಂ' ತರಾಟೆ

ನವದೆಹಲಿ (ಪಿಟಿಐ): ಆರೋಪಿಯನ್ನು ಜೈಲಿನಲ್ಲಿಯೇ ಇಡಲು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯನ್ನು (ಪಿಎಂಎಲ್‌ಎ) ಬಳಸಿಕೊಂಡಿದ್ದಕ್ಕೆ ಜಾರಿ ನಿರ್ದೇಶನಾಲಯವನ್ನು (ಇ.ಡಿ) ಸುಪ್ರೀಂ ಕೋರ್ಟ್ ತೀವ್ರ ತರಾಟೆಗೆ ತೆಗೆದುಕೊಂಡಿತು. ವರದಕ್ಷಿಣೆ ಕಾನೂನಿನಂತೆ 'ಇದೂ ದುರ್ಬಳಕೆಯಾಗುತ್ತಿದೆಯೇ' ಎಂದು ಪ್ರಶ್ನಿಸಿತು.

ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ನ್ಯಾಯಪೀಠವು ಬುಧವಾರ, ಛತ್ತೀಸಗಢದ ಅಬಕಾರಿ ಇಲಾಖೆಯ ಮಾಜಿ ಅಧಿಕಾರಿ ಅರುಣ್ ಪಾತಿ ತ್ರಿಪಾಠಿ ಅವರಿಗೆ ಜಾಮೀನು ಮಂಜೂರು ಮಾಡಿ ಹೀಗೆ ಕೇಳಿತು.



ದೂರನ್ನು ಪರಿಗಣಿಸಿ ವಿಚಾರಣಾ ನ್ಯಾಯಾಲಯವು ನೀಡಿದ್ದ ಆದೇಶವನ್ನು ಛತ್ತೀಸಗಢ ಹೈಕೋರ್ಟ್ ವಜಾ ಮಾಡಿದ್ದರೂ ಆರೋಪಿಯನ್ನು ಜೈಲಿನಲ್ಲಿ ಇಟ್ಟಿರುವುದೇಕೆ ಎಂದು ಸುಪ್ರೀಂ ಕೋರ್ಟ್ ಅಚ್ಚರಿ ವ್ಯಕ್ತಪಡಿಸಿತು.

ವ್ಯಕ್ತಿಯು ಜೈಲಿನಲ್ಲಿಯೇ ಇರಬೇಕು ಎಂಬುದು ಪಿಎಂಎಲ್‌ಎಯ ಪರಿಕಲ್ಪನೆ ಅಲ್ಲ. ವಿಚಾರಣಾ ನ್ಯಾಯಾಲಯದ ಆದೇಶವನ್ನು ವಜಾಗೊಳಿಸಿದ ನಂತರವೂ ವ್ಯಕ್ತಿಯನ್ನು ಜೈಲಿನಲ್ಲಿ ಇರಿಸುವ ಪ್ರವೃತ್ತಿ ಮುಂದುವರಿದರೆ ಏನು ಹೇಳಲು ಸಾಧ್ಯ? ಸೆಕ್ಷನ್ 498ಎ ಪ್ರಕರಣಗಳು ಏನಾಗುತ್ತಿವೆ ನೋಡಿ. ಪಿಎಂಎಲ್‌ಎ ಸಹ ಇದೇ ರೀತಿ ದುರ್ಬಳಕೆ ಆಗುತ್ತಿದೆಯೇ ಎಂದು ಪ್ರಶ್ನಿಸಿತು.

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಆರೋಪದಲ್ಲಿ ತಮಗೆ ಜಾಮೀನು ನಿರಾಕರಿಸಿದ್ದ ಛತ್ತೀಸಗಢ ಹೈಕೋರ್ಟ್ ಆದೇಶ ಪ್ರಶ್ನಿಸಿ ಭಾರತೀಯ ಟೆಲಿಕಾಂ ಸೇವೆ ಅಧಿಕಾರಿ ತ್ರಿಪಾಠಿ ಅವರು ಸಲ್ಲಿಸಿದ್ದ ಅಜಿಯನ್ನು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ದಿಕ್ಕಾಪಾಲಾಗಿ ಓಡಿದ ಆನೆಗಳು ಕಾಲ್ತುಳಿತದಲ್ಲಿ ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೋಯಿಕ್ಕೋಡ್‌ನ ಕೊಯಿಲಾಂಡಿಯ ದೇಗುಲದಲ್ಲಿ ಗುರುವಾರ ಉತ್ಸವದ ವೇಳೆ ಎರಡು ಆನೆಗಳು ದಿಕ್ಕಾಪಾಲಾಗಿ ಓಡಿದ್ದು, ಅದರಿಂದ ಜನರು ಚದುರಿ ಉಂಟಾದ ಕಾಲ್ತುಳಿತದಲ್ಲಿ ಇಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ.

ಇಲ್ಲಿನ ಮಣಕುಳಂಗರ ದೇವಸ್ಥಾನದ ಆವರಣದಲ್ಲಿ ಈ ಅವಘಡ ಸಂಭವಿಸಿದೆ. ಉದ್ರಿಕ್ತ ಆನೆಗಳ ಕಂಡು ಜನರು ಓಡಿದ್ದರಿಂದ ಐವರು ಗಾಯಗೊಂಡರು. ಅವರ ಸ್ಥಿತಿ ಗಂಭೀರವಾಗಿದೆ.

ವರದಿಗಳ ಪ್ರಕಾರ, ರೋಷಗೊಂಡ ಆನೆಯು ಮತ್ತೊಂದು ಆನೆಯ ಮೇಲೆ ದಾಳಿ ನಡೆಸಿದೆ. ಆಗ ಎರಡೂ ಆನೆಗಳು ಜನರ ಗುಂಪಿನ ನಡುವೆ ಓಡಾಡಿದ್ದು, ನೂಕುನುಗ್ಗಲಿಗೆ ಕಾರಣವಾಯಿತು. 30 ನಿಮಿಷದ ಬಳಿಕ ಆನೆಗಳು ಸಹಜ ಸ್ಥಿತಿಗೆ ಬಂದವು. ಆನೆ ದಾಳಿಯಿಂದ ಗೋಡೆಯೊಂದು ಕುಸಿದಿದೆ.

ಕಳೆದ ವಾರ ರಾಜ್ಯದಲ್ಲಿ ಇಂಥದೇ ಪ್ರತ್ಯೇಕ ಘಟನೆಯಲ್ಲಿ ಇಬ್ಬರು ಸತ್ತಿದ್ದರು. ಉತ್ಸವಗಳಲ್ಲಿ ಆನೆಗಳ ಬಳಕೆ ಕುರಿತು ಕಠಿಣ ನಿಯಮಗಳನ್ನು ಹೈಕೋರ್ಟ್ ಹೇರಿತ್ತು. ಆದರೆ, ಆಯೋಜಕರು ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದರು.

ರಾಜ್ಯಸಭೆಯಲ್ಲಿ ಆಡಳಿತ ಹಾಗೂ ವಿಪಕ್ಷಗಳ ಸದಸ್ಯರ ಮಾತಿನ ಚಕಮಕಿ

ವಕ್ಫ್ ಮಸೂದೆ ವರದಿ ಮಂಡನೆ

ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಮಸೂದೆಗೆ ಸಂಬಂಧಿಸಿದ ಸಂಸತ್ತಿನ ಜಂಟಿ ಸಮಿತಿಯ ವರದಿಯನ್ನು ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಗದ್ದಲದ ನಡುವೆ ಗುರುವಾರ ಮಂಡಿಸಲಾಯಿತು.

ಆಡಳಿತ ಹಾಗೂ ವಿರೋಧ ಪಕ್ಷಗಳ ಸದಸ್ಯರ ನಡುವೆ ಮಾತಿನ ಚಕಮಕಿ ಜೋರಾದ ಕಾರಣಕ್ಕೆ ಕಲಾಪವನ್ನು ಅಲ್ಪ ಅವಧಿಗೆ ಮುಂದೂಡಬೇಕಾಯಿತು.

ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ವಿರೋಧ ಪಕ್ಷಗಳ ಇತರ ಕೆಲವು ಸದಸ್ಯರು, ಭಿನ್ನ ಅನಿಸಿಕೆಗಳನ್ನು ವರದಿಯಿಂದ ಅಳಿಸಲಾಗಿದೆ ಎಂದು ದೂರಿದರು. ಆದರೆ ಈ ಆರೋಪವನ್ನು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅಲ್ಲಗಳೆದರು.

ಸಮಿತಿಯ ಸದಸ್ಯೆ, ಬಿಜೆಪಿಯ ಮೇಧಾ ವಿ. ಕುಲಕರ್ಣಿ ಅವರು ವಕ್ಫ್ (ತಿದ್ದುಪಡಿ) ಮಸೂದೆ ಕುರಿತ ವರದಿಯನ್ನು ಮಂಡಿಸಿದರು. ವರದಿಯ ಮಂಡನೆ ಆಗುತ್ತಿದ್ದಂತೆಯೇ ವಿರೋಧ ಪಕ್ಷಗಳ ಸದಸ್ಯರು ಗದ್ದಲ ಆರಂಭಿಸಿದರು.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಬಂದ ಸಂದೇಶವೊಂದನ್ನು ಸಭಾಪತಿ ಜಗದೀಪ್ ಧನಕರ್ ಅವರು ಓದಲು ಯತ್ನಿಸಿದಾಗಲೂ ಗದ್ದಲ ಮುಂದುವರಿದಿತ್ತು. 'ರಾಷ್ಟ್ರಪತಿ ಅವರಿಗೆ ಅಗೌರವ ತೋರಬೇಡಿ' ಎಂದು ಹೇಳಿದ ಧನಕರ್, ವಿರೋಧ ಪಕ್ಷಗಳ ಸದಸ್ಯರು ತಮ್ಮ ಆಸನದಲ್ಲಿ ಕುಳಿಕೊಳ್ಳಲು ಸೂಚಿಸುವಂತೆ ಖರ್ಗೆ ಅವರಿಗೆ ಹೇಳಿದರು. ಗದ್ದಲ ಮುಂದುವರಿದ ಪರಿಣಾಮವಾಗಿ ಸದನವನ್ನು ತುಸು ಹೊತ್ತು ಮುಂದೂಡಲಾಯಿತು.

ಕಲಾಪ ಮತ್ತೆ ಆರಂಭವಾದಾಗಲೂ ವಿರೋಧ ಪಕ್ಷಗಳ ಪ್ರತಿಭಟನೆ ಮುಂದುವರಿಯಿತು. ಕೆಲವು ಸದಸ್ಯರು ಸಭಾಪತಿ ಎದುರಿನ ಅಂಗಳಕ್ಕೆ ಇಳಿದರು. ಸಮೀರುಲ್ ಇಸ್ಲಾಂ, ನದೀಮುಲ್ ಹಕ್ ಮತ್ತು ಎಂ. ಮೊಹಮದ್ ಅಬ್ದುಲ್ಲಾ ಅವರು ಸದನದಲ್ಲಿ ಗೊಂದಲ ಸೃಷ್ಟಿಸಿದ್ದಾರೆ ಎಂದು ಧನಕರ್ ಹೇಳಿದರು.

ಭಿನ್ನ ಅಭಿಪ್ರಾಯಗಳನ್ನು ವರದಿಯಿಂದ ತೆಗೆಯಲಾಗಿದೆ ಎಂದು ಡಿಎಂಕೆ ಸದಸ್ಯ ತಿರುಚಿ ಶಿವ ಮತ್ತು ಎಎಪಿ ಸದಸ್ಯ ಸಂಜಯ್ ಸಿಂಗ್ ಅವರೂ ಆಕ್ಷೇಪ ವ್ಯಕ್ತಪಡಿಸಿದರು.

ವರದಿಯಿಂದ ಯಾವ ಅಂಶವನ್ನೂ ಅಳಿಸಿಲ್ಲ ಎಂದು ರಿಜಿಜು ಉತ್ತರಿಸಿದರು. ಆದರೆ ತಾವು ದಾಖಲಿಸಿದ್ದ ಭಿನ್ನ ಅಭಿಪ್ರಾಯವನ್ನು ವರದಿಯಿಂದ ತೆಗೆಯಲಾಗಿದೆ ಎಂದು ಕಾಂಗ್ರೆಸ್ ಸದಸ್ಯ ಸೈಯದ್ ನಾಸಿರ್ ಹುಸೇನ್ ದೂರಿದರು.



ಕೇಂದ್ರ ಸಚಿವ ಕಿರಣ್ ರಿಜಿಜು ಅವರು ರಾಜ್ಯಸಭೆಯಲ್ಲಿ ಗುರುವಾರ ಮಾತನಾಡಿದರು —ಪಿಟಿಐ ಚಿತ್ರ

ತಿದ್ದೋಲೆ ಮಂಡನೆ

ನವದೆಹಲಿ (ಪಿಟಿಐ): ಮೇಧಾ ವಿ. ಕುಲಕರ್ಣಿ ಅವರು ಸಮಿತಿಯ ವರದಿಗೆ ತಿದ್ದೋಲೆಯೊಂದನ್ನು ಗುರುವಾರ ಮಧ್ಯಾಹ್ನದ ನಂತರ ರಾಜ್ಯಸಭೆಯಲ್ಲಿ ಮಂಡಿಸಿದರು.

ವರದಿಯ ಅನುಬಂಧ 5ಕ್ಕೆ ತಿದ್ದೋಲೆಯನ್ನು ಮಂಡಿಸಲಾಗಿದೆ. 'ಅನುಬಂಧ 5' ಸಮಿತಿಯ ಸದಸ್ಯರಿಂದ ಸ್ವೀಕರಿಸಿದ ಭಿನ್ನ ಅಭಿಪ್ರಾಯಗಳಿಗೆ ಸಂಬಂಧಿಸಿದೆ. ಮೇಧಾ ಅವರು ಗುರುವಾರ ಬೆಳಿಗ್ಗೆ ವರದಿಯನ್ನು ಮಂಡಿಸಿದ್ದರು. ಈ ತಿದ್ದೋಲೆಯಲ್ಲಿ, ಮೊದಲು ಮಂಡಿಸಿದ್ದ ವರದಿಯಿಂದ ಅಳಿಸಿದ್ದ ಅಂಶಗಳು ಇವೆ.

ತಿದ್ದೋಲೆಯನ್ನು ಮಂಡಿಸಲಾಗಿದೆ ಎಂದಾದರೆ ಸಚಿವರೊಬ್ಬರು ಸದನವನ್ನು ಈ ಮೊದಲು ತಪ್ಪುದಾರಿಗೆ ಎಳೆದಿರುವುದು ಸಾಬೀತಾಗಿದೆ ಎಂದು ವಿರೋಧ ಪಕ್ಷಗಳ ಸದಸ್ಯರು ಹೇಳಿದರು.

ವಿರೋಧ ಪಕ್ಷಗಳ ಸದಸ್ಯರು ನೀಡಿದ್ದ ಭಿನ್ನ ಅಭಿಪ್ರಾಯಗಳಿಗೆ ವರದಿಯಲ್ಲಿ ಕತ್ತರಿ ಹಾಕಲಾಗಿದೆ. ಇದು ಖಂಡನಾರ್ಹ, ಪ್ರಜಾಪ್ರಭುತ್ವ ವಿರೋಧಿ. ಇದು ನಕಲಿ ವರದಿ.

ಮಲ್ಲಿಕಾರ್ಜುನ ಖರ್ಗೆ
ರಾಜ್ಯಸಭೆಯ ವಿರೋಧ ಪಕ್ಷದ ನಾಯಕ

ಸಮಿತಿಯ ಬಗ್ಗೆಯೇ ಆರೋಪ ಹೊರಿಸುವಂತಹ ಅಂಶಗಳು ಇದ್ದರೆ, ಅದು ಸರಿಯಲ್ಲ ಎಂದು ಅಧ್ಯಕ್ಷರಿಗೆ ಅನ್ನಿಸಿದರೆ, ಅವುಗಳನ್ನು ತೆಗೆಯುವ ಅಧಿಕಾರವು ಅಧ್ಯಕ್ಷರಿಗಿದೆ

ಕಿರಣ್ ರಿಜಿಜು
ಸಂಸದೀಯ ವ್ಯವಹಾರಗಳ ಸಚಿವ

ನ್ಯಾ. ಯಾದವ್ ವಜಾ: ನೋಟಿಸ್

ಹೈಕೋರ್ಟ್ ನ್ಯಾಯಮೂರ್ತಿಯನ್ನು ಕರ್ತವ್ಯದಿಂದ ತೆಗೆಯುವ ಅಧಿಕಾರವು ಸಂಸತ್ತಿಗೆ ಮಾತ್ರವೇ ಇದೆ ಎಂದು ಹೇಳಿರುವ ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರು, ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಶೇಖರ್ ಯಾದವ್ ಅವರನ್ನು ಹುದ್ದೆಯಿಂದ ವಜಾಗೊಳಿಸಲು ನೀಡಿರುವ ನೋಟಿಸ್ ತಮ್ಮ ಬಳಿ ಬಾಕಿ ಇದೆ ಎಂದು ತಿಳಿಸಿದ್ದಾರೆ.

ನ್ಯಾಯಮೂರ್ತಿ ಯಾದವ್ ಅವರನ್ನು ವಜಾಗೊಳಿಸಲು ರಾಜ್ಯಸಭೆಯ 55 ಸದಸ್ಯರು ಸಭಾಪತಿಗೆ ಡಿಸೆಂಬರ್‌ನಲ್ಲಿ ನೋಟಿಸ್ ನೀಡಿದ್ದಾರೆ ಎಂಬುದನ್ನು ಸುಪ್ರೀಂ ಕೋರ್ಟ್‌ನ ಪ್ರಧಾನ ಕಾರ್ಯದರ್ಶಿಗೆ ಮಾಹಿತಿ ನೀಡುವಂತೆ ಧನಕರ್ ಅವರು ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದರು.

ಸುದ್ದಿ 2 ನಿಮಿಷ

ಟಿಬೆಟ್ ಧರ್ಮಗುರು ದಲೈಲಾಮಾಗೆ 'ಜೆಡ್' ಶ್ರೇಣಿಯ ಭದ್ರತೆ

ನವದೆಹಲಿ (ಪಿಟಿಐ): ಟಿಬೆಟ್ ಧರ್ಮಗುರು ದಲೈಲಾಮಾ ಅವರಿಗೆ ಜೀವ ಬೆದರಿಕೆ ಇರುವುದರಿಂದ ಕೇಂದ್ರ ಸರ್ಕಾರವು 'ಜೆಡ್' ಶ್ರೇಣಿಯ ಭದ್ರತೆಯನ್ನು ಒದಗಿಸಿದೆ ಎಂದು ಅಧಿಕೃತ ಮೂಲಗಳು ಗುರುವಾರ ತಿಳಿಸಿದೆ.

ಕೇಂದ್ರ ಗೃಹ ಸಚಿವಾಲಯವು, ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ವಿಐಪಿ ವಿಭಾಗಕ್ಕೆ ದಲೈಲಾಮಾ ಅವರ ರಕ್ಷಣೆಯ ಜವಾಬ್ದಾರಿಯನ್ನು ವಹಿಸಿದೆ.

ಸುಮಾರು 30 ಸಿಆರ್‌ಪಿಎಫ್ ಕಮಾಂಡೋಗಳ ತಂಡವು ದಲೈಲಾಮಾ ಅವರನ್ನು ರಕ್ಷಿಸಲು ಪಾಳಿಯಲ್ಲಿ ಕೆಲಸ ಮಾಡುತ್ತದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಲ್ಲದೇ, ಮಣಿಪುರದ ಬಿಜೆಪಿ ನಾಯಕ ಸಂಬಿತ್ ಪಾತ್ರಾ ಅವರಿಗೂ 'ಜೆಡ್' ಶ್ರೇಣಿಯ ಭದ್ರತೆಯನ್ನು ಒದಗಿಸಿದೆ ಎಂದು ಮೂಲಗಳು ತಿಳಿಸಿವೆ.



ಬೀಳ್ಕೊಡುಗೆ: 35 ವಿಲಾಸಿ ಕಾರುಗಳಲ್ಲಿ ಬಂದ ವಿದ್ಯಾರ್ಥಿಗಳು

ಸೂರತ್ (ಪಿಟಿಐ): ಕಾಲೇಜು ಬೀಳ್ಕೊಡುಗೆ ಸಮಾರಂಭಕ್ಕಾಗಿ 12ನೇ ತರಗತಿಯ ಕೆಲವು ವಿದ್ಯಾರ್ಥಿಗಳು, ಸುಮಾರು 35 ವಿಲಾಸಿ ಕಾರುಗಳ ಬೆಂಗಾವಲಿನಲ್ಲಿ ಬಂದಿದ್ದು, ಈ ಕುರಿತ ವಿಡಿಯೊ ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿದೆ.

ವಿಲಾಸಿ ಕಾರುಗಳಲ್ಲಿ ಬಿಎಂಡಬ್ಲ್ಯು, ಮಸರಾಟಿ, ಮರ್ಸಿಡಿಸ್, ಪೋರ್ಶೆ ಇದ್ದವು. ಕೆಲವು ಕಾರುಗಳನ್ನು ವಿದ್ಯಾರ್ಥಿಗಳೇ ಚಾಲನೆ ಮಾಡಿದ್ದಾರೆ. ಬರುವ ಹಾದಿಯಲ್ಲಿ ಕೆಲವು ವಿದ್ಯಾರ್ಥಿಗಳು ಕಾರಿನ ಬಾಗಿಲು ತೆಗೆದು ದೇಹವನ್ನು ಹೊರಚಾಚಿದ್ದರು. ಸನ್‌ರೂಫ್‌ನಿಂದ ತಲೆ ಹೊರಗೆ ಹಾಕಿ ಕೇಕೆ ಹಾಕಿದ್ದರು. ಕೆಲವರು ಸ್ಮೋಕ್ ಗನ್ ಹಿಡಿದಿದ್ದರು. ಇವೆಲ್ಲ ದೃಶ್ಯಗಳೂ ವಿಡಿಯೊದಲ್ಲಿವೆ.

ಗುಜರಾತ್ ರಾಜ್ಯದ ಸೂರತ್‌ನ ಒಲ್ಪಾಡ್ ವಲಯದಲ್ಲಿರುವ ಫೌಂಟನ್ ಹೆಡ್ ಸ್ಕೂಲ್‌ನ ವಿದ್ಯಾರ್ಥಿಗಳ ಈ 'ಸ್ವೇಚ್ಛಾಚಾರ'ದ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೆಯಾದಂತೆ, ಈ ಮಕ್ಕಳ ತಂದೆ–ತಾಯಿಗಳ ವಿರುದ್ಧ ಸಾರ್ವಜನಿಕವಾಗಿ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಪೊಲೀಸರು ಸ್ವಯಂಪ್ರೇರಿತ ಕ್ರಮಕ್ಕೆ ಮುಂದಾಗಿದ್ದು, ಮೂವರು ವಿದ್ಯಾರ್ಥಿಗಳು, ತಂದೆ–ತಾಯಿ ಸೇರಿ ಒಟ್ಟು 6 ಎಫ್‌ಐಆರ್ ದಾಖಲಿಸಿದ್ದಾರೆ. 22 ಕಾರುಗಳನ್ನು ವಶಕ್ಕೆ ಪಡೆದಿದ್ದಾರೆ.

ನಿಷೇಧಿತ ಸಂಘಟನೆಯ 6 ಮಂದಿ ಬಂಧನ

ಇಂಫಾಲ್ (ಪಿಟಿಐ): ಮಣಿಪುರದ ಇಂಫಾಲ್‌ಪಶ್ಚಿಮ ಮತ್ತು ಕಾಕ್‌ಚಿಂಗ್ ಜಿಲ್ಲೆಯಲ್ಲಿ ನಡೆದ ವಿವಿಧ ಕಾರ್ಯಾಚರಣೆಗಳಲ್ಲಿ ಮೂರು ನಿಷೇಧಿತ ಸಂಘಟನೆಗಳ ಆರು ಸದಸ್ಯರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

'ನಿಷೇಧಿತ ಕಾಂಗ್ಲಿಪಾಕ್ ಕಮ್ಯುನಿಸ್ಟ್ ಪಕ್ಷದ (ಪಿಡಬ್ಲೂಜಿ) ನಾಲ್ವರನ್ನು ಇಂಫಾಲ್ ಪಶ್ಚಿಮ ಜಿಲ್ಲೆಯ ಕಾಮೆಂಗ್ ಸಬಲ್‌ನಲ್ಲಿರುವ ಅವರ ಶಿಬಿರದಿಂದ ಬಂಧಿಸಲಾಗಿದೆ. ಬಂಧಿತರಿಂದ ಐದು ಬಂದೂಕು ಸೇರಿದಂತೆ ವಿವಿಧ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ತಖೇಲ್ಲಾಮಯುಮ್ ವಿಕ್ಟರ್ (23), ಹುಯಿಡ್ರೋಮ್ ವಿಕಾಸ್ ಸಿಂಗ್ (25), ಓಯಿನಮ್ ನೋಚಾ (19) ಮತ್ತು ಅವಂಗ್ಬಿ ಜಾನ್ (33)ಬಂಧಿತರು.

ನಿಷೇಧಿತ ಪ್ರಿಪಾಕ್ ಸಂಘಟನೆಯ (ಪಿಆರ್‌ಒ) ಸಕ್ರಿಯ ಸದಸ್ಯನೊಬ್ಬನನ್ನು ಇಂಪಾಲ್ ಪಶ್ಚಿಮ ಜಿಲ್ಲೆಯಲ್ಲಿ ಬುಧವಾರ ಬಂಧಿಸಲಾಗಿದ್ದು, ಆತನನ್ನು ಪೆಬಮ್ ದಾಕೇಶೋರ್ ಸಿಂಗ್ (51) ಎಂದು ಗುರುತಿಸಲಾಗಿದೆ.

ಮತ್ತೊಂದು ಕಾರ್ಯಾಚರಣೆಯಲ್ಲಿ ಕಾಕ್‌ಚಿಂಗ್ ಜಿಲ್ಲೆಯ ಎರುಂಪಲ್ ಪ್ರದೇಶದಿಂದ ನಿಷೇಧಿತ ಕೆಸಿಪಿಯ (ಸಿಟಿ ಮೈತೇಯಿ) ಒಬ್ಬ ಸದಸ್ಯ, ಮೊಯಿರಾಂಗ್ಥೆಮ್ ಗೋಬಿನ್ (38) ಅನ್ನು ಬಂಧಿಸಲಾಯಿತು.

ಬಂಧಿತರು, ಮಣಿಪುರದ ಇಂಫಾಲ್ ಪಶ್ಚಿಮ ಮತ್ತು ಕಾಕ್‌ಚಿಂಗ್ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಸಾರ್ವಜನಿಕರಿಂದ ಹಣ ಸುಲಿಗೆ ಮಾಡುತ್ತಿದ್ದರು.

ಟೋಲ್ ಪ್ಲಾಜಾ ಅವ್ಯವಸ್ಥೆ: ಕಿಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಟೋಲ್ ಪ್ಲಾಜಾಗಳಲ್ಲಿ ಒಪ್ಪಂದದ ಅನುಸಾರ ಮೂಲಸೌಲಭ್ಯ ಕಲ್ಪಿಸಲಾಗುತ್ತಿಲ್ಲ ಹಾಗೂ ವಾಹನಗಳ ಸರಾಗ ಚಲನೆಗೆ ಕ್ರಮ ವಹಿಸುತ್ತಿಲ್ಲ' ಎಂದು ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಸಮಾಧಾನ ವ್ಯಕ್ತಪಡಿಸಿದೆ.

ಟೋಲ್ ಪ್ಲಾಜಾಗಳ ಕಾರ್ಯ ನಿರ್ವಹಣೆ ಸುಧಾರಣೆಗೆ ಕೈಗೊಂಡಿರುವ ಕ್ರಮಗಳ ವಿವರ ನೀಡಿ ಎಂದೂ ಅಧಿಕಾರಿಗಳಿಗೆ ಸೂಚಿಸಿದೆ. ಸಮಿತಿಯ ಸಭೆಯಲ್ಲಿ ಪಕ್ಷಭೇದ ಮರೆತು ಸಂಸದರು, 'ಟೋಲ್'ಗಳಲ್ಲಿ ಅಧಿಕ ಶುಲ್ಕ ಸಂಗ್ರಹಿಸಲಾಗುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಟೋಲ್ ಸಂಗ್ರಹ, ಟೋಲ್ ನಿಯಂತ್ರಣ, ದರ ನಿಗದಿ, ಬಳಕೆದಾರರ ಶುಲ್ಕ ಸಂಗ್ರಹ ಸೇರಿ ಟೋಲ್‌ಗಳಲ್ಲಿನ ವಿವಿಧ ಸಮಸ್ಯೆಗಳ ಕುರಿತು ಚರ್ಚಿಸಲು ಕಾಂಗ್ರೆಸ್‌ನ ಮುಖಂಡ, ಸಂಸದ ಕೆ.ಸಿ.ವೇಣುಗೋಪಾಲ್ ನೇತೃತ್ವದ ಸಮಿತಿಯು ಸಭೆ ನಡೆಸಿತು.

ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಕಾರ್ಯದರ್ಶಿ ವಿ.ಉಮಾಶಂಕರ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಅಧ್ಯಕ್ಷ ಸಂತೋಷ್ ಕುಮಾರ್ ಯಾದವ್, ಸಚಿವಾಲಯದ ಹಿರಿಯ ಅಧಿಕಾರಿಗಳು ಈ ಸಭೆಯಲ್ಲಿ ಪಾಲ್ಗೊಂಡಿದ್ದರು.

ಶೌಚಾಲಯ ಸೌಲಭ್ಯ, ಅಪಘಾತ ಸಹಾಯವಾಣಿ ಸೇರಿದಂತೆ ಹಲವು ಮೂಲಸೌಕರ್ಯಗಳನ್ನು ಟೋಲ್‌ಗಳಲ್ಲಿ ಕಲ್ಪಿಸಿಲ್ಲ. ವಾಹನ ದಟ್ಟಣೆ ನಿವಾರಣೆಗೆ ಪ್ಲಾಜಾಗಳ ನಿರ್ವಾಹಕರು ಏಕೆ ಕ್ರಮ ವಹಿಸುತ್ತಿಲ್ಲ ಎಂದೂ ಸದಸ್ಯರು ತೀವ್ರ ತರಾಟೆಗೆ ತೆಗೆದುಕೊಂಡರು.

ಸೌಲಭ್ಯ ಒದಗಿಸದ ನಿರ್ವಾಹಕರ ಮೇಲೆ ಕೈಗೊಂಡ ಶಿಸ್ತುಕ್ರಮಗಳ ವಿವರ ನೀಡುವಂತೆ ಆಗ್ರಹಪಡಿಸಿದರು.

ಎನ್‌ಎಚ್‌ಎಐ ಅಧಿಕಾರಿಗಳು, 'ಟೋಲ್'ಗಳ ಸಮೀಪ ವಾಹನ ದಟ್ಟಣೆ ತಪ್ಪಿಸಲು ವಾರ್ಷಿಕ ಟೋಲ್ ಪಾಸ್ ವಿತರಿಸುವ ಚಿಂತನೆ ಇದೆ. ಸದ್ಯ, ದ್ವಾರಕಾ ಎಕ್ಸ್‌ಪ್ರೆಸ್ ವೇನಲ್ಲಿ ಪೈಲಟ್ ಯೋಜನೆಯಡಿ ನೋಂದಣಿ ಸಂಖ್ಯೆ ಗುರುತಿಸುವ ಸ್ವಯಂಚಾಲಿತ ವ್ಯವಸ್ಥೆ ಅಳವಡಿಸಲಾಗಿದೆ' ಎಂದು ಸಭೆಗೆ ಮಾಹಿತಿ ನೀಡಿದರು.

ಟೋಲ್ ಸಂಗ್ರಹ ಕುರಿತ ಹಾಲಿ ನಿಯಮಗಳನ್ನು ಮರುಪರಿಶೀಲಿಸಬೇಕು ಎಂದು ಸಮಿತಿಯು ಅಧಿಕಾರಿಗಳಿಗೆ ಸಲಹೆ ಮಾಡಿತು.

ರಾಜ್ಯದಲ್ಲಿ ₹13,702 ಕೋಟಿ ಸಂಗ್ರಹ

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಕರ್ನಾಟಕದಲ್ಲಿ ಕಳೆದ ಐದು ವರ್ಷಗಳಲ್ಲಿ ₹13,702 ಕೋಟಿ ರಸ್ತೆ ಶುಲ್ಕ (ಟೋಲ್) ಸಂಗ್ರಹಿಸಿದೆ.

ಲೋಕಸಭೆಯಲ್ಲಿ ಸದಸ್ಯ ಡಾ.ಎಂ.ಕೆ. ವಿಷ್ಣುಪ್ರಸಾದ್ ಅವರು ಪ್ರಶ್ನೋತ್ತರ ಅವಧಿಯಲ್ಲಿ ಗುರುವಾರ ಕೇಳಿದ ಪ್ರಶ್ನೆಗೆ ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಈ ಬಗ್ಗೆ ಉತ್ತರ ನೀಡಿದ್ದಾರೆ. ರಾಜ್ಯದಲ್ಲಿ ಐದೇ ವರ್ಷಗಳಲ್ಲಿ ರಸ್ತೆ ಶುಲ್ಕ ಸಂಗ್ರಹ ಪ್ರಮಾಣ ದುಪ್ಪಟ್ಟಾಗಿದೆ.

ರಾಜ್ಯದಲ್ಲಿ 58 ರಸ್ತೆ ಶುಲ್ಕದ ಪ್ಲಾಜಾಗಳಿವೆ. ಈ ಪೈಕಿ, 14 ಪ್ಲಾಜಾಗಳು ಕಳೆದ ಮೂರು ವರ್ಷಗಳಲ್ಲಿ ಕಾರ್ಯಾರಂಭ ಮಾಡಿವೆ ಎಂದು ಅವರು ತಿಳಿಸಿದ್ದಾರೆ.

ರಸ್ತೆ ಶುಲ್ಕ (ಕೋಟಿಗಳಲ್ಲಿ)

ವರ್ಷ	ರಸ್ತೆ ಶುಲ್ಕ
2019–20	₹1,881
2020–21	₹1,866
2021–22	₹2,351
2022–23	₹3,516
2023–24	₹4,086

1000 ಕಣ್ಗಾವಲು ಹೆಲಿಕಾಪ್ಟರ್ ಖರೀದಿ

ನವದೆಹಲಿ (ಪಿಟಿಐ): ಸಮುದ್ರ ಮಟ್ಟದಿಂದ 5,500 ಮೀಟರ್ ಎತ್ತರದ ಪ್ರದೇಶಗಳ ಮೇಲೆ ಹಗಲು-ರಾತ್ರಿ ನಿರಂತರವಾಗಿ ಕಣ್ಗಾವಲು ವಹಿಸುವ ಸಾಮರ್ಥ್ಯದ ಸಾಧನಗಳನ್ನು ಒಳಗೊಂಡ ಸುಮಾರು 1,000 ಕಣ್ಗಾವಲು ಹೆಲಿಕಾಪ್ಟರ್‌ಗಳ ಖರೀದಿ ಪ್ರಕ್ರಿಯೆಯನ್ನು ಸರ್ಕಾರ ಆರಂಭಿಸಿದೆ.

'ಮೇಕ್ ಇನ್ ಇಂಡಿಯಾ' ಮತ್ತು 'ಆತ್ಮನಿರ್ಭರ ಭಾರತ'ದ ಸ್ಫೂರ್ತಿ ಮೇರೆಗೆ ಅತ್ಯಂತ ಎತ್ತರದ ಪ್ರದೇಶಗಳ ಮೇಲೆ ಕಣ್ಗಾವಲು ವಹಿಸಲು ಸಾಮರ್ಥ್ಯವಿರುವ ಸಾಧನಗಳನ್ನು ಒಳಗೊಂಡ ಕಣ್ಗಾವಲು ಹೆಲಿಕಾಪ್ಟರ್ ಖರೀದಿಸಲಾಗುವುದು ಎಂದು ಹೆಲಿಕಾಪ್ಟರ್ ಪೂರೈಸುವ ಕಂಪನಿಗೆ ಸಲ್ಲಿಸಲಾದ ದಾಖಲೆಗಳಲ್ಲಿ (ಆರ್‌ಎಫ್‌ಐ) ತಿಳಿಸಲಾಗಿದೆ.

ರಕ್ಷಣಾ ಸಚಿವಾಲಯವು ಸುಮಾರು 1,000 ಕಣ್ಗಾವಲು ಹೆಲಿಕಾಪ್ಟರ್‌ಗಳನ್ನು ಖರೀದಿಸುವ ಉದ್ದೇಶ ಹೊಂದಿದೆ. ಅತಿ ಎತ್ತರದ ಪ್ರದೇಶಗಳ ಮೇಲೆ ಕಣ್ಗಾವಲು ವಹಿಸುವ ಸಾಮರ್ಥ್ಯದ ಹೆಲಿಕಾಪ್ಟರ್‌ಗಳನ್ನು ಪೂರೈಸಬಹುದಾದ ಭಾರತೀಯ ವರ್ತಕರನ್ನು ಗುರುತಿಸಲಾಗುತ್ತಿದೆ ಎಂದು ಆರ್‌ಎಫ್‌ಐ ದಾಖಲೆಗಳಲ್ಲಿ ತಿಳಿಸಲಾಗಿದೆ.

ವಿಚಾರ ಗಟ್ಟಿಯಾಗಿ ಹೇಳಿ: ಸ್ವಪಕ್ಷೀಯರಿಗೆ ರಾಹುಲ್ ಸಲಹೆ

ನವದೆಹಲಿ: 'ನಿಮಗೆ ಹಿತ ಎನಿಸುವ ಯಾವುದೇ ಭಾಷೆಯಲ್ಲಿ ನೀವು ಮಾತನಾಡಿ, ಆದರೆ, ನೀವು ಹೇಳಲು ಹೊರಟ ವಿಚಾರಗಳನ್ನು ಗಟ್ಟಿಯಾಗಿ ಹೇಳಿ'– ಹೀಗೆಂದು ಕಾಂಗ್ರೆಸ್ ಸಂಸದರಿಗೆ ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಸಲಹೆ ನೀಡಿದ್ದಾರೆ.

ಮಾರ್ಚ್ 10ರಿಂದ ಆರಂಭವಾಗಲಿರುವ ಎರಡನೇ ಹಂತದ ಬಜೆಟ್ ಅಧಿವೇಶನದಲ್ಲಿ ಸಂಸದರ ಹಾಜರಾತಿ ಮೇಲೆ ಕಟ್ಟುನಿಟ್ಟಾಗಿ ಕಣ್ಗಾವಲು ವಹಿಸಲಾಗುವುದು. ಅಧಿವೇಶನದ ಮೊದಲ ಹಂತವು ಕಡಿಮೆ ಅವಧಿಯದ್ದಾಗಿತ್ತು. ಹೀಗಾಗಿ, ಪಕ್ಷದ ನಾಯಕತ್ವವು ಪಕ್ಷದ ಸಂಸದರ ಹಾಜರಾತಿಯನ್ನು ಹೆಚ್ಚು ಗಂಭೀರವಾಗಿ ಪರಿಗಣಿಸಿರಲಿಲ್ಲ ಎಂದು ಪಕ್ಷದ ಸಂಸದರಿಗೆ ರಾಹುಲ್ ಎಚ್ಚರಿಕೆ ನೀಡಿರುವುದಾಗಿ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಅಜಂ ಖಾನ್‌ಗೆ ಜಾಮೀನು



ಅಜಂ ಖಾನ್

ನವದೆಹಲಿ (ಪಿಟಿಐ): ಯಂತ್ರೋಪಕರಣ ಕಳ್ಳತನ ಪ್ರಕರಣದಲ್ಲಿ ಉತ್ತರ ಪ್ರದೇಶದ ಮಾಜಿ ಸಚಿವ ಅಜಂ ಖಾನ್ ಹಾಗೂ ಅವರ ಪುತ್ರ ಅಬ್ದುಲ್ಲಾ ಅಜಂ ಖಾನ್ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ಮಂಜೂರು ಮಾಡಿದೆ.

ನ್ಯಾಯಮೂರ್ತಿಗಳಾದ ಎಂ.ಎಂ ಸುಂದರೇಶ್ ಹಾಗೂ ರಾಜೇಶ್ ಬಿಂದಾಲ್ ಅವರಿದ್ದ ಪೀಠವು ಜಾಮೀನು ನೀಡಿ ಆದೇಶ ಹೊರಡಿಸಿದೆ. ಜಾಮೀನು ನೀಡಲು ನಿರಾಕರಿಸಿದ ಅಲಹಾಬಾದ್ ಹೈಕೋರ್ಟ್ ಆದೇಶ ಪ್ರಶ್ನಿಸಿ ಅಜಂ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ನಕ್ಸಲ್ ನಾಯಕ ಹುಂಗಾ ಹತ್ಯೆ

ಬಿಜಾಪುರ್ (ಪಿಟಿಐ): ಛತ್ತೀಸಗಢದ ಬಿಜಾಪುರ್‌ನಲ್ಲಿ ಮಂಗಳವಾರ ನಡೆದ ಎನ್‌ಕೌಂಟರ್‌ನಲ್ಲಿ ಹತ್ಯೆಯಾದ 31 ಮಂದಿ ನಕ್ಸಲೀಯರಲ್ಲಿ ಹುಂಗಾ ಕರ್ಮಾ ಕೂಡ ಸೇರಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಈತನ ಬಗ್ಗೆ ಮಾಹಿತಿ ನೀಡಿದವರಿಗೆ ₹8 ಲಕ್ಷದ ಬಹುಮಾನ ಕೂಡ ಘೋಷಣೆ ಆಗಿತ್ತು.

ಜನವರಿ 6ರಂದು ಇಂದ್ರಾವತಿ ರಾಷ್ಟ್ರೀಯ ಉದ್ಯಾನದಲ್ಲಿ ನಡೆದ ಕಚ್ಚಾ ಬಾಂಬ್ ಸ್ಫೋಟ (ಐಇಡಿ) ಪ್ರಕರಣದಲ್ಲಿ ಈತ ಪ್ರಮುಖ ಸಂಚುಕೋರ ಆಗಿದ್ದ.

ವೈಎಸ್‌ಆರ್‌ಸಿಪಿಯ ವಂಶಿ ಬಂಧನ

ಅಮರಾವತಿ/ಹೈದರಾಬಾದ್ (ಪಿಟಿಐ): ಹಿಂದಿನ ವೈಎಸ್‌ಆರ್‌ಸಿಪಿ ಆಡಳಿತದಲ್ಲಿ ಟಿಡಿಪಿ ಗನ್ನವರಂ ಕಚೇರಿ ಮೇಲೆ ನಡೆದ ದಾಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ವೈಎಸ್‌ಆರ್‌ಪಿ ನಾಯಕ ವಲ್ಲಭನೇನಿ ವಂಶಿ ಅವರನ್ನು ಆಂಧ್ರ ಪ್ರದೇಶದ ಪೊಲೀಸರು ಗುರುವಾರ ಹೈದರಾಬಾದ್‌ನಲ್ಲಿ ಬಂಧಿಸಿದ್ದಾರೆ.

ಹೈದರಾಬಾದ್‌ನ ಹೈಟೆಕ್ ಸಿಟಿ ಪ್ರದೇಶದ ರಾಯದುರ್ಗಂನಲ್ಲಿರುವ ಅವರ ಅಪಾರ್ಟ್‌ಮೆಂಟ್ ಸಮುಚ್ಚಯದಿಂದ ವಂಶಿ ಅವರನ್ನು ಪೊಲೀಸರು ಬಂಧಿಸಿದರು. ಬಿಎನ್‌ಎಸ್ ಮತ್ತು ಎಸ್‌ಸಿ/ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದಾರೆ. ವಂಶಿ ಅವರು ನಿರೀಕ್ಷಣಾ ಜಾಮೀನು ಪಡೆದಿದ್ದರು. ಆದರೆ, ಅವರನ್ನು ಅಕ್ರಮವಾಗಿ ಬಂಧಿಸಲಾಗಿದೆ. ಸತ್ಯವರ್ಧನ್ ಅವರು ದೂರು ಅರ್ಜಿಯನ್ನು ಇತ್ತೀಚೆಗಷ್ಟೇ ಹಿಂಪಡೆದಿದ್ದರು ಎಂದು ವೈಎಸ್‌ಆರ್‌ಸಿಪಿಯು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

24ರವರೆಗೆ ಶಾಸಕ ಅಮಾನತ್ ಉಲ್ಲಾ ಬಂಧಿಸದಂತೆ ಕೋರ್ಟ್ ಆದೇಶ



ಅಮಾನತ್ ಉಲ್ಲಾ ಖಾನ್

ನವದೆಹಲಿ (ಪಿಟಿಐ): ಪೊಲೀಸರ ಮೇಲೆ ಹಲ್ಲೆ ನಡೆಸಿದ ಆರೋಪ ಪ್ರಕರಣದಲ್ಲಿ ಎಎಪಿ ಶಾಸಕ ಅಮಾನತ್ ಉಲ್ಲಾ ಖಾನ್ ಅವರನ್ನು ಫೆ. 24ರವರೆಗೆ ಬಂಧಿಸಬಾರದು ಎಂದು ಸ್ಥಳೀಯ ಕೋರ್ಟ್ ಆದೇಶಿಸಿದೆ.

ವಿಶೇಷ ನ್ಯಾಯಾಧೀಶರಾದ ಜಿತೇಂದ್ರ ಸಿಂಗ್ ಅವರು, ಈ ಪ್ರಕರಣದಲ್ಲಿ ತನಿಖಾಧಿಕಾರಿಗಳು ಬಯಸಿದಾಗ ಅಗತ್ಯ ಸಹಕಾರ ನೀಡಬೇಕು ಎಂದು ಶಾಸಕರಿಗೆ ಸೂಚಿಸಿದರು.

ಫೆ. 10ರಂದು ಜಾಮಿಯಾ ನಗರದಲ್ಲಿ ಶಾಸಕರ ನೇತೃತ್ವದ ಗುಂಪು ಪೊಲೀಸರ ಮೇಲೆ ಹಲ್ಲೆ ನಡೆಸಿದೆ ಎಂದು ಶಾಸಕರ ವಿರುದ್ಧ ದೆಹಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ನಿರೀಕ್ಷಣಾ ಜಾಮೀನು ಕೋರಿದ್ದ ಅರ್ಜಿ ವಿಚಾರಣೆ ನಡೆಸಿದ ಕೋರ್ಟ್, ಫೆ. 24ರ ಘಟನೆಗೆ ಸಂಬಂಧಿಸಿ ಸಿ.ಸಿ.ಟಿ.ವಿ ದೃಶ್ಯಗಳೂ ಸೇರಿ ಲಭ್ಯವುಳ್ಳ ಎಲ್ಲ ದಾಖಲೆ ಹಾಜರುಪಡಿಸಿ ಎಂದು ಪೊಲೀಸರಿಗೆ ಸೂಚಿಸಿತು.

ಮಹಾರಾಷ್ಟ್ರ: ಪಿಸಿಸಿ ಅಧ್ಯಕ್ಷರಾಗಿ ಸಪಕಾಲ್

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿ (ಎಂಪಿಸಿಸಿ) ಅಧ್ಯಕ್ಷರನ್ನಾಗಿ ಮಾಜಿ ಶಾಸಕ ಹರ್ಷವರ್ಧನ್ ಸಪಕಾಲ್ ಅವರನ್ನು ಪಕ್ಷದ ಹೈಕಮಾಂಡ್ ಗುರುವಾರ ನೇಮಕ ಮಾಡಿದೆ.

ನಾನಾ ಪಟೋಲೆ ಅವರು ಈವರೆಗೆ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಕಳಪೆ ಸಾಧನೆ ತೋರಿದ್ದಕ್ಕೆ ಪಟೋಲೆ ಅವರು ಹೊಣೆ ಹೊರುವುದಾಗಿ ಹೇಳಿದ್ದರು.

ಮಹಾರಾಷ್ಟ್ರ ವಿಧಾನಸಭೆಯ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ವಿಜಯ್ ವಡೆಟ್ಟಿವಾರ್ ಅವರ ನೇಮಕಕ್ಕೆ ಹೈಕಮಾಂಡ್ ಅಸ್ತು ಎಂದಿದೆ.

ಸಪಕಾಲ್ ಅವರು ದೊಡ್ಡ ಹೆಸರು ಹೊಂದಿಲ್ಲದಿದ್ದರೂ, ಅವರು ಸಂಘಟನೆಯನ್ನು ಕಟ್ಟುವಲ್ಲಿ ಹೆಚ್ಚಿನ ಅನುಭವ ಹೊಂದಿದ್ದಾರೆ ಎನ್ನಲಾಗಿದೆ.

ವರ್ಷಕ್ಕೆ 20 ಸಾವಿರ ಬಸ್, ಟ್ರಕ್ ಸಿದ್ಧ

ವೋಲ್ವೊ ಹೊಸಕೋಟೆ ಘಟಕ ವಿಸ್ತರಣೆ ಒಪ್ಪಂದಕ್ಕೆ ಸಹಿ • ₹1,400 ಕೋಟಿ ಹೂಡಿಕೆ • ತಯಾರಿಕೆ ಹೆಚ್ಚಳ

3,000 ಬಸ್ ಮತ್ತು ಟ್ರಕ್ — ಹೊಸಕೋಟೆ ಘಟಕದ ಈಗಿನ ವಾರ್ಷಿಕ ತಯಾರಿಕೆ

20,000 ಬಸ್ ಮತ್ತು ಟ್ರಕ್ — ವಿಸ್ತರಣೆಯ ನಂತರ ತಯಾರಿಕಾ ಸಾಮರ್ಥ್ಯ

2,000 ಹೊಸ ನೇರ ಉದ್ಯೋಗ ಸೃಷ್ಟಿ

- ರಫ್ತು ಮಾರುಕಟ್ಟೆಗೂ ಬಸ್–ಟ್ರಕ್ ಪೂರೈಕೆಗೆ ಅನುವು. ವೋಲ್ವೊದ ಜಾಗತಿಕ ಕಾರ್ಯಾಚರಣೆಗೆ ಹೊಸಕೋಟೆ ಘಟಕವೇ ಕೇಂದ್ರವಾಗಲಿದೆ
- ವೋಲ್ವೊ ರಫ್ತು ಕೇಂದ್ರಗಳಲ್ಲಿ ಕರ್ನಾಟಕದ ಪಾಲು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಲಿದೆ
- ಸಾವಿರಾರು ಪರೋಕ್ಷ ಉದ್ಯೋಗಗಳು ಸೃಷ್ಟಿ. ಮೂಲಸೌಕರ್ಯ ಅಭಿವೃದ್ಧಿಗೆ ನೆರವು

ಪ್ರಜಾವಾಣಿ ವಾರ್ತೆ



ಒಡಂಬಡಿಕೆ ನಂತರ ವೋಲ್ವೊ ಕಂಪನಿಯ ಅಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಭಿನಂದಿಸಿದರು

ಬೆಂಗಳೂರು: ಸ್ವೀಡನ್ ಮೂಲದ ವೋಲ್ವೊ ಕಂಪನಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಘಟಕದಲ್ಲಿ ವರ್ಷಕ್ಕೆ 20 ಸಾವಿರ ಬಸ್ ಮತ್ತು ಟ್ರಕ್ ತಯಾರಿಕೆ ಒಪ್ಪಂದಕ್ಕೆ ಸಹಿ ಮಾಡಿದೆ. ಈ ಯೋಜನೆಯಿಂದ 2,000 ನೇರ ಉದ್ಯೋಗಗಳು ಸೃಷ್ಟಿಯಾಗಲಿವೆ.

ರಾಜ್ಯದಲ್ಲಿ ವೋಲ್ವೊ ಕಂಪನಿಯು ಪೀಣ್ಯ, ಹೊಸಕೋಟೆ ಮತ್ತು ಧಾರವಾಡ ಸಮೀಪದ ಪೀತಂಪುರದಲ್ಲಿ ತಯಾರಿಕಾ ಘಟಕಗಳನ್ನು ಹೊಂದಿದೆ. ಹೊಸಕೋಟೆ ಘಟಕದಲ್ಲಿ ವಾರ್ಷಿಕ 3,000 ಬಸ್ ಮತ್ತು ಟ್ರಕ್‌ಗಳನ್ನು ತಯಾರಿಸಲಾಗುತ್ತಿದೆ. ಘಟಕವನ್ನು ವಿಸ್ತರಿಸಲು ₹1,400 ಕೋಟಿ ಹೂಡಿಕೆ ಮಾಡಲಾಗುತ್ತಿದೆ. ಈ ಮೂಲಕ ಬಸ್ ಮತ್ತು ಟ್ರಕ್‌ಗಳ ವಾರ್ಷಿಕ ತಯಾರಿಕಾ ಸಾಮರ್ಥ್ಯವನ್ನು 20,000ಕ್ಕೆ ಹೆಚ್ಚಿಸಲು ಕಂಪನಿ ಮುಂದಾಗಿದೆ.

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಭಾಗವಾಗಿ ಕಂಪನಿಯು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಗುರುವಾರ ಒಪ್ಪಂದ ಮಾಡಿಕೊಂಡಿತು. ಸರ್ಕಾರದ ಪರವಾಗಿ ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಮತ್ತು ವೋಲ್ವೊ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಕಮಲ್ ಬಾಲಿ ಒಡಂಬಡಿಕೆಗೆ ಸಹಿ ಹಾಕಿದರು. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸಾಕ್ಷಿಯಾದರು.

ವೋಲ್ವೊ ಸಿಇಒ ಮಾರ್ಟಿನ್ ಲಾಂಡ್‌ಸ್ಟೆಡ್ಟ್, 'ಹೊಸಕೋಟೆ ಘಟಕದ ವಿಸ್ತರಣೆಯಿಂದ ಉದ್ಯೋಗಸೃಷ್ಟಿಯ ಜತೆಗೆ ಸ್ಥಳೀಯ ಮಾರುಕಟ್ಟೆ ಅಗತ್ಯಗಳನ್ನೂ ಸರಾಗವಾಗಿ ಪೂರೈಸಲು ಸಾಧ್ಯವಾಗಲಿದೆ. ಬೆಂಗಳೂರು ನಗರವು ಕಂಪನಿಯ ಪಾಲಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ 4ನೇ ಅತಿದೊಡ್ಡ ಕೇಂದ್ರವಾಗಿದೆ. ಇಲ್ಲಿನ ಜಿಸಿಸಿ ಕೇಂದ್ರದಲ್ಲಿ 3,500ಕ್ಕೂ ಹೆಚ್ಚು ಮಂದಿ ಕೆಲಸ ಮಾಡುತ್ತಿದ್ದು, ಇಲ್ಲಿ ಆರ್ ಆ್ಯಂಡ್ ಡಿ, ಐ.ಟಿ, ಖರೀದಿ, ಲಾಜಿಸ್ಟಿಕ್ಸ್ ಮತ್ತು ಹಣಕಾಸು ಸೇವೆಗಳನ್ನು ನಿರ್ವಹಿಸಲಾಗುತ್ತಿದೆ. ನೂತನ ಒಪ್ಪಂದದಿಂದ ಇದು ಇನ್ನಷ್ಟು ಹೆಚ್ಚಲಿದೆ' ಎಂದರು.

> **ರಸ್ತೆ ಮೂಲಕ ಸರಕು ಸಾಗಣೆ ಪ್ರಮಾಣವು ಎರಡು ದಶಕದಲ್ಲಿ ಹಲವು ಪಟ್ಟು ಹೆಚ್ಚಾಗಲಿದೆ. ಭಾರತದಲ್ಲಿ ಸರಕು ಸಾಗಣೆ ಕ್ಷೇತ್ರದ ವಹಿವಾಟಿಗೆ ಉತ್ತಮ ಅವಕಾಶಗಳಿವೆ**
> **ಮಾರ್ಟಿನ್ ಲಾಂಡ್‌ಸ್ಟೆಡ್ಟ್,** ವೋಲ್ವೊ ಸಿಇಒ

> **ವೋಲ್ವೊ ಕಂಪನಿಯು ಹೊಸಕೋಟೆಯಲ್ಲಿನ ತನ್ನ ಘಟಕ ವಿಸ್ತರಣೆ ಮಾಡುತ್ತಿರುವುದು ರಾಜ್ಯದಲ್ಲಿ ಕೈಗಾರಿಕೆಗೆ ಇರುವ ಉತ್ತಮ ವಾತಾವರಣ ಮತ್ತು ಸಹಕಾರದ ಪ್ರತೀಕ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಕನ್ನಡಿಗರಿಗೆ ಹೆಚ್ಚಿನ ಉದ್ಯೋಗ: ಸಿ.ಎಂ

ದೇಶ–ವಿದೇಶಗಳ ಹೂಡಿಕೆದಾರರು ಕರ್ನಾಟಕದ ಜನರಿಗೆ ಉದ್ಯೋಗದ ಅವಕಾಶಗಳನ್ನು ದೊರಕಿಸಿದರೆ ಬಂಡವಾಳ ಹೂಡಿಕೆ ಸಾರ್ಥಕವಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವೋಲ್ವೊ ಕಂಪನಿ 25 ವರ್ಷಗಳ ಹಿಂದೆಯೇ ರಾಜ್ಯಕ್ಕೆ ಬಂದು, ಬದಲಾವಣೆಗೆ ನಾಂದಿ ಹಾಡಿತು. ಉತ್ಕೃಷ್ಟ ಗುಣಮಟ್ಟದ ಬಸ್‌ಗಳ ತಯಾರಿಕೆಗೆ ಕಂಪನಿ ಹೆಸರಾಗಿದೆ. ರಾಜ್ಯ ಸಾರಿಗೆ ನಿಗಮದ ಐಷಾರಾಮಿ ಬಸ್‌ಗಳನ್ನು ಜನರು ಇದೇ ಹೆಸರಿನಿಂದ ಕರೆಯುತ್ತಿದ್ದಾರೆ. ವೋಲ್ವೊ ಕಂಪನಿಗೆ ಸರಕಾರ ಅಗತ್ಯ ಸೌಲಭ್ಯ ಮತ್ತು ನೆರವು ಒದಗಿಸಲಿದೆ. ಕಂಪನಿ ಹೆಚ್ಚಿನ ಕನ್ನಡಿಗರಿಗೆ ಕೆಲಸ ಕೊಡಬೇಕು. ಇದರಿಂದ ಸ್ಥಳೀಯರಿಗೆ ಭದ್ರತೆ ಮತ್ತು ಆರ್ಥಿಕ ಬೆಳವಣಿಗೆ ಎರಡನ್ನೂ ಸಾಧಿಸಬಹುದು ಎಂದರು.

'ಕೈಗಾರಿಕೆ ಸ್ಥಾಪನೆ, ಉದ್ಯೋಗ ಸೃಷ್ಟಿ ಮೂಲಕ ರಾಜ್ಯದ ಆರ್ಥಿಕತೆಯಲ್ಲಿ ಭಾಗಿಯಾಗುವ ವೋಲ್ವೊಗೆ ಸರ್ಕಾರವು ಸಹಕಾರ ಇದ್ದೇ ಇರುತ್ತದೆ' ಎಂದು ಸಿದ್ದರಾಮಯ್ಯ ಹೇಳಿದರು.

'ಕ್ವಿನ್ ಸಿಟಿ'ಯತ್ತ ಪ್ರತಿಷ್ಠಿತ ಮೂವತ್ತು ವಿ.ವಿಗಳ ಚಿತ್ತ



ಕ್ವಿನ್ ಸಿಟಿ ಕುರಿತು ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಜತೆ ನಡೆದ ಸಭೆಯ ವೇಳೆ ಸಚಿವರಾದ ಎಂ.ಬಿ. ಪಾಟೀಲ, ಶರಣಪ್ರಕಾಶ ಪಾಟೀಲ ಚರ್ಚಿಸಿದರು. ಸಚಿವ ಸುಧಾಕರ್ ಇದ್ದಾರೆ.

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 30 ವಿಶ್ವವಿದ್ಯಾಲಯಗಳ ಪ್ರತಿನಿಧಿಗಳ ಜತೆ ಚರ್ಚೆ
- 'ಕ್ವಿನ್ ಸಿಟಿ' ಸಹಭಾಗಿತ್ವಕ್ಕೆ 9 ವಿವಿಗಳ ಒಪ್ಪಂದ
- ಕರ್ನಾಟಕದತ್ತ ಸೇಂಟ್‌ಜಾನ್ಸ್, ಲಿವರ್‌ಪೂಲ್ ಆಸಕ್ತಿ

ಬೆಂಗಳೂರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಕ್ವಿನ್ ಸಿಟಿ'ಯಲ್ಲಿ ಕ್ಯಾಂಪಸ್ ತೆರೆಯಲು 30 ವಿಶ್ವವಿದ್ಯಾಲಯಗಳು ಸಮ್ಮತಿಸಿವೆ. 9 ವಿಶ್ವವಿದ್ಯಾಲಯಗಳು ಒಪ್ಪಂದಕ್ಕೆ ಸಹಿ ಹಾಕಿವೆ.

ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ 'ಕ್ವಿನ್ ಸಿಟಿ' ಯೋಜನೆ ರೂಪುರೇಷೆ ಕುರಿತು ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಪ್ರತಿನಿಧಿಗಳ ಜತೆ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮಹತ್ವದ ಮಾತುಕತೆ ನಡೆಸಿದರು.

ಸಭೆಯ ನಂತರ ಮಾತನಾಡಿದ ಸಚಿವ ಸುಧಾಕರ್, ಸಮಕಾಲೀನ ಜಗತ್ತಿಗೆ ತಕ್ಕಂತೆ ಉದ್ಯೋಗ ಆಧಾರಿತ ಕಲಿಕೆಯ ಪಠ್ಯಕ್ರಮ ರೂಪಿಸಲು, ಉನ್ನತ ಶಿಕ್ಷಣದ ಮುಂದಿನ ಹೆಜ್ಜೆ ನಿರ್ಧರಿಸಲು ಶಿಕ್ಷಣ ತಜ್ಞರು ಹಾಗೂ ಉದ್ಯಮಿಗಳನ್ನು ಒಳಗೊಂಡ ಜಂಟಿ ಸಮಿತಿ ರಚಿಸಲಾಗುವುದು ಎಂದರು.

ಉದ್ಯಮಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ಉನ್ನತ ಶಿಕ್ಷಣದ ಪಠ್ಯಕ್ರಮ ಬದಲಿಸಲು ಕೇಳುತ್ತಿರುವುದು ಸರಿಯಲ್ಲ. ವಿದ್ಯಾರ್ಥಿಗಳ ಕಲಿಕೆ ಸಮಗ್ರವಾಗಿರಬೇಕು. ಬಹುಮುಖಿಯಾದ ಕೌಶಲ ಕಲಿಸಬೇಕು. ಆಗ ಮಾತ್ರ ಪರ್ಯಾಯ ಉದ್ಯೋಗಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಶೇ 70ರಷ್ಟು ಹೊರರಾಜ್ಯಗಳ ವಿದ್ಯಾರ್ಥಿಗಳೇ ಇದ್ದಾರೆ ಎಂದು ಹೇಳಿದರು.

ವಿವಿಧ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಾದ ಡಾ.ಪ್ರಭಾಕರ ಕೋರೆ, ಪಿಇಎಸ್‌ನ ಜವಾಹರ್, ಆರ್.ವಿ. ಶಿಕ್ಷಣ ಸಂಸ್ಥೆಯ ನಾಗರಾಜ್ ಉಪಸ್ಥಿತರಿದ್ದರು.

> **ಕ್ವಿನ್ ಸಿಟಿಯ ಭಾಗವಾಗಲು ಪಿಲಾನಿಯಲ್ಲಿರುವ ಹೆಸರಾಂತ ಬಿರ್ಲಾ ತಾಂತ್ರಿಕ ವಿಜ್ಞಾನಗಳ ಸಂಸ್ಥೆ, ತೋಟಗಾರಿಕೆ ಕ್ಷೇತ್ರದ ವರ್ಲ್ಡ್ ಹಾರ್ಟಿ ಸೆಂಟರ್ ಆಸಕ್ತಿ ತೋರಿವೆ**
> **ಎಂ.ಬಿ. ಪಾಟೀಲ,** ಕೈಗಾರಿಕಾ ಸಚಿವ

> **ರಾಜ್ಯದಲ್ಲಿ 70 ವೈದ್ಯಕೀಯ ಕಾಲೇಜುಗಳಿದ್ದು, ಪದವಿ ಹಂತದಲ್ಲಿ 11 ಸಾವಿರ, ಸ್ನಾತಕೋತ್ತರ ಹಂತದಲ್ಲಿ 6 ಸಾವಿರ ಸೀಟುಗಳ ಹಂಚಿಕೆಯಾಗುತ್ತಿದೆ**
> **ಡಾ.ಶರಣಪ್ರಕಾಶ ಪಾಟೀಲ,** ವೈದ್ಯಕೀಯ ಶಿಕ್ಷಣ ಸಚಿವ

> **ಆರೋಗ್ಯ ಸೇವೆ ಮತ್ತು ಸಂಶೋಧನೆಗಳಿಗೆ 'ಕ್ವಿನ್ ಸಿಟಿ'ಯಲ್ಲಿ ₹1,000 ಕೋಟಿ ಹೂಡಿಕೆ ಮಾಡಲಾಗುವುದು. ಇದರಿಂದ 1,500 ಉದ್ಯೋಗ ಸೃಷ್ಟಿಯಾಗಲಿದೆ**
> **ಪ್ರಭಾಕರ್ ಕೋರೆ,** ಅಧ್ಯಕ್ಷ, ಕೆಇಎಲ್ ಸಂಸ್ಥೆ

ಸಕ್ಕರೆ, ಎಥೆನಾಲ್ ಉತ್ಪಾದನೆ

₹1,000 ಕೋಟಿ — ಶಿವಶಕ್ತಿ ಶುಗರ್ಸ್‌ನ ಹೂಡಿಕೆ


₹250 ಕೋಟಿ — ಇನಾಂದಾರ್ ಶುಗರ್ಸ್‌ನ ಹೂಡಿಕೆ

ಅಭಿಪ್ರಾಯಗಳು



ಸಮಾವೇಶದ ಪ್ರತಿ ಹಂತದಲ್ಲೂ ಅಚ್ಚುಕಟ್ಟಾದ ನಿರ್ವಹಣೆ ಮಾಡಲಾಗಿದೆ. ಅತಿಥಿಗಳ ಊಟ, ವಸತಿ, ಗೋಷ್ಠಿ, ಪ್ರದರ್ಶನ ಯಶಸ್ವಿಯಾಗಿವೆ. ಹೂಡಿಕೆದಾರರ ಆಸಕ್ತಿ ಭವಿಷ್ಯದ ಕರ್ನಾಟಕದ ಯೋಜನೆಗೆ ಶಕ್ತಿ ತುಂಬಿದೆ

ಸೆಲ್ವಕುಮಾರ್, ಪ್ರಧಾನ ಕಾರ್ಯದರ್ಶಿ, ಕೈಗಾರಿಕಾ ಇಲಾಖೆ



ಇನ್ವೆಸ್ಟ್ ಕರ್ನಾಟಕ ಸಮಾವೇಶವು ವಿದ್ಯಾರ್ಥಿಗಳ ಜ್ಞಾನವನ್ನು ವಿಸ್ತಾರಗೊಳಿಸುತ್ತದೆ. ಏರ್‌ಟ್ಯಾಕ್ಸಿ ಸೇರಿದಂತೆ ಭವಿಷ್ಯದ ಆವಿಷ್ಕಾರಗಳು ಹೊಸ ಭರವಸೆ ಮೂಡಿಸಿವೆ

ಅಭಿತ್, ವಿದ್ಯಾರ್ಥಿ



ಹೊಸ ಆವಿಷ್ಕಾರಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಸರ್ಕಾರವು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದೆ. ಇಂತಹ ಕಾರ್ಯಕ್ರಮಗಳು ಇನ್ನಷ್ಟು ನಡೆಯಬೇಕು. ರಾಜ್ಯದ ಪ್ರಗತಿಗೆ ಹೆಚ್ಚಿನ ಬಂಡವಾಳ ಹರಿದು ಬರಬೇಕು.

ಅಖಿಲ, ವಿದ್ಯಾರ್ಥಿನಿ



ನಂಬಲು ಅಸಾಧ್ಯವಾದಷ್ಟು ಸ್ಪಂದನೆ ದೊರಕಿದೆ. ಬಂದವರೆಲ್ಲ ಭವಿಷ್ಯದ ಭಾರತದ ಬಗ್ಗೆ ಚಿಂತನೆ ಮಾಡುವಂತೆ ಸಮಾವೇಶ ಪ್ರೇರೇಪಿಸಿದೆ. ಭಾಗವಹಿಸಿದ್ದು ಖುಷಿ ತಂದಿದೆ

ಕಾಂಚನ, ಕ್ರೋನಿಸ್ ಕಂಪನಿ ಉದ್ಯೋಗಿ

'ನಗರಕ್ಕೆ 6 ಟಿಎಂಸಿ ಅಡಿ ನೀರು'

ಬೆಂಗಳೂರು: 'ಉದ್ಯಮಗಳ ಏಳಿಗೆಗೆ ನೀರು ಅತ್ಯಂತ ಮುಖ್ಯ. ಬೆಂಗಳೂರಿನ ಉದ್ಯಮಗಳಿಗೆ ನೀರು ಒದಗಿಸಲು ಕ್ರಮ ತೆಗೆದುಕೊಳ್ಳುತ್ತೇನೆ. ಎಷ್ಟು ಬೆಲೆ ತೆತ್ತಾದರೂ ಕಾವೇರಿ ನದಿಯಿಂದ ನಗರಕ್ಕೆ ಆರು ಟಿಎಂಸಿ ಅಡಿಯಷ್ಟು ನೀರು ತರುತ್ತೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಎಂಎಸ್‌ಎಂಇ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ನಗರದ ಮೂಲಸೌಕರ್ಯವನ್ನು ಉತ್ತಮ ಪಡಿಸಲಾಗುವುದು. ಅದರ ಜತೆಗೆ ಬಿಯಾಂಡ್ ಬೆಂಗಳೂರು ಪರಿಕಲ್ಪನೆ ಅಡಿಯಲ್ಲಿ, ರಾಜಧಾನಿಯಾಚೆಯ ನಗರ–ಪಟ್ಟಣಗಳಲ್ಲೂ ಉದ್ಯಮಗಳ ಸ್ಥಾಪನೆಗೆ ಒತ್ತು ನೀಡುತ್ತಿದ್ದೇವೆ. ಉದ್ಯಮಿಗಳೂ ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಬೇಕು' ಎಂದರು.

'ಎಂಎಸ್‌ಎಂಇ ಪ್ರಶಸ್ತಿ'



ಗೌರವ ಪುರಸ್ಕಾರ

ಕೈಗಾರಿಕಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಗುರುವಾರದ ಕಾರ್ಯಕ್ರಮದಲ್ಲಿ 'ಎಂಎಸ್‌ಎಂಇ ಪ್ರಶಸ್ತಿ' ಪ್ರದಾನ ಮಾಡಿ ಗೌರವಿಸಲಾಯಿತು. ಸರ್ಕಾರದ ಜತೆಗೆ ಮಾಡಿಕೊಂಡ ಒಡಂಬಡಿಕೆಗಳನ್ನು ಪ್ರದರ್ಶಿಸಲಾಯಿತು. ರಾಜ್ಯಪಾಲ ಥಾವರಚಂದ್ ಗೆಹಲೋತ್, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಭಾಗಿಯಾಗಿದ್ದರು

ಚಾಲಕ ರಹಿತ ಇವಿ ಟ್ರ್ಯಾಕ್ಟರ್



ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಪ್ರದರ್ಶನಕ್ಕೆ ಇಡಲಾಗಿದ್ದ ಚಾಲಕ ರಹಿತ ಟ್ರ್ಯಾಕ್ಟರ್ — ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

27-28 ಎಚ್‌ಪಿ — ಟ್ರ್ಯಾಕ್ಟರ್‌ನ ಮೋಟಾರ್‌ಗಳ ಸಾಮರ್ಥ್ಯ

1 ಗಂಟೆ — ಬ್ಯಾಟರಿಯ ಪೂರ್ಣ ಪ್ರಮಾಣದ ಚಾರ್ಜಿಂಗ್‌ಗೆ ಬೇಕಾದ ಸಮಯ

8 ಗಂಟೆ — ಒಮ್ಮೆ ಚಾರ್ಜಿಂಗ್ ಮಾಡಿದರೆ, ಕೆಲಸ ಮಾಡುವ ಗರಿಷ್ಠ ಅವಧಿ

- ಬಿತ್ತನೆ, ಬೆಳೆ ಕಟಾವು ಉಪಕರಣಗಳ ಅಳವಡಿಕೆ
- ಮರ, ಗಿಡ, ಕಲ್ಲು ಗ್ರಹಿಸುವ ಸಂವೇದಕಗಳಿಂದ ಸ್ವಯಂಚಾಲನೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರೈತರಿಗೆ ಇನ್ನು ಟ್ರ್ಯಾಕ್ಟರ್‌ಗೆ ಡೀಸೆಲ್ ಹೊಂದಿಸುವ, ಚಾಲಕರನ್ನು ಹುಡುಕುವ ತಾಪತ್ರಯ ತಪ್ಪಲಿದೆ. ಹೊಲ ಉಳುಮೆ ಮಾಡಲು, ಕೃಷಿ ಉತ್ಪನ್ನಗಳನ್ನು ಸಾಗಣೆ ಮಾಡಲು ಚಾಲಕ ರಹಿತ ಎಲೆಕ್ಟ್ರಿಕಲ್ ಟ್ರ್ಯಾಕ್ಟರ್‌ಗಳು ಲಭ್ಯವಾಗಲಿವೆ.

'ಟಫೇ ಇಂಡಿಯಾ ಕಂಪನಿ' ಇಂತಹ ಟ್ರ್ಯಾಕ್ಟರ್‌ಗಳನ್ನು ಅಭಿವೃದ್ಧಿಪಡಿಸಿದ್ದು, ಅರಮನೆ ಮೈದಾನದಲ್ಲಿ ನಡೆಯುತ್ತಿರುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ.

'ಟಫೇ ಇವಿ–28' ಹೆಸರಿನಲ್ಲಿ ನಿರ್ಮಿಸಿರುವ ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡ ಈ ಟ್ರ್ಯಾಕ್ಟರ್ ಅನ್ನು ಹೊಲ, ತೋಟಗಳಲ್ಲಿ ಉಳುಮೆ ಮಾಡಲು ಸಾಧ್ಯವಾಗುವಂತೆ ಅಭಿವೃದ್ಧಿಪಡಿಸಲಾಗಿದೆ. ಟ್ರ್ಯಾಕ್ಟರ್‌ಗೆ ಸೆನ್ಸಾರ್ ಅಳವಡಿಸಲಾಗಿದ್ದು, ಉಳುಮೆ ಮಾಡುವ ಜಾಗದ ಉದ್ದ, ಅಗಲದ ವಿಸ್ತಾರವನ್ನು ನಮೂದಿಸಿ ಬಿಟ್ಟರೆ ಸಾಕು, ನಮೂದಿಸಿದ ಸಮಯ ಮುಗಿಯುವವರೆಗೂ ಸ್ವಯಂ ಕಾರ್ಯ ನಿರ್ವಹಿಸುತ್ತದೆ. ಅಡೆತಡೆಗಳು ಎದುರಾದರೆ ಚಲನೆಯನ್ನು ಸ್ಥಗಿತಗೊಳಿಸುತ್ತದೆ. ತೋಟಗಳಲ್ಲೂ ಮರ, ಗಿಡ, ಕಲ್ಲುಗಳನ್ನು ಗ್ರಹಿಸಿ ಅವುಗಳಿಗೆ ಅಡಚಣೆಯಾಗದಂತೆ ಕೆಲಸ ಮಾಡಲಿದೆ.

27ರಿಂದ 28 ಎಚ್‌ಪಿ ಎಂಜಿನ್ ಸಾಮರ್ಥ್ಯ ಹೊಂದಿದ್ದು, ಎಂಟು ಗಂಟೆ ನಿರಂತರವಾಗಿ ಕಾರ್ಯನಿರ್ವಹಿಸಲಿದೆ. ರ‍್ಯಾಪಿಡ್ ಚಾರ್ಜಿಂಗ್ ಮೂಲಕ ಒಂದು ತಾಸಿನಲ್ಲೇ ಬ್ಯಾಟರಿ ರೀಚಾರ್ಜ್ ಆಗುತ್ತದೆ ಎಂದು ಕಂಪನಿ ಹೇಳಿದೆ.

ಮುಂದೆ ಹಾಗೂ ಹಿಮ್ಮುಖವಾಗಿ ಸರಾಗ ವಾಗಿ ಚಲಿಸುವ ಈ ಟ್ರ್ಯಾಕ್ಟರ್‌ನ ಮಧ್ಯ ಭಾಗದಲ್ಲಿ ಕಟಾವು ಯಂತ್ರ ಅಳವಡಿಕೆಗೆ ಅವಕಾಶ ಕಲ್ಪಿಸಲಾಗಿದೆ. ಇದರಿಂದ ರೈತರು ಉಳುಮೆಯ ಜತೆಗೆ, ಭತ್ತ, ರಾಗಿ ಮೊದಲಾದ ಬೆಳೆಗಳನ್ನು ಕಟಾವು ಮಾಡಬಹುದು.

ಬಿಸಿಲು ಮಳೆಗೆ ರಕ್ಷಣೆ: ಬಿಸಿಲು, ಮಳೆಯಿಂದ ರೈತರನ್ನು ಸಂರಕ್ಷಿಸಲು ಕಂಪನಿ ಇತರೆ ಮಾದರಿಯ ಡೀಸೆಲ್ ಟ್ರ್ಯಾಕ್ಟರ್‌ಗಳಿಗೆ ಜೆಸಿಬಿ ಯಂತ್ರಗಳ ಮಾದರಿಯಲ್ಲಿ ಕ್ಯಾಬಿನ್ ಸಿದ್ಧಪಡಿಸಿದೆ.

ಶತ್ರುಗಳ ಮೇಲೆ 'ನಿಂಬಸ್' ಕಣ್ಣು

ಗಡಿಯಲ್ಲಿ ಶತ್ರು ಸೈನಿಕರ ಚಲನವಲನ, ಭಯೋತ್ಪಾದಕ ಚಟುವಟಿಕೆಗಳ ಮೇಲೆ ಹದ್ದಿನ ಕಣ್ಣು ಇಡುವಂತಹ ಬಹುಉಪಯೋಗಿ ಎಲೆಕ್ಟ್ರಿಕಲ್ ಡ್ರೋನ್ ಭಾರತೀಯ ಸೇನೆಯ ಮೆಚ್ಚುಗೆ ಪಡೆದಿದೆ. 'ನ್ಯೂಸ್ಪೇಸ್' ಕಂಪನಿ ಸಿದ್ಧಪಡಿಸಿರುವ ನಿಂಬಸ್ ಹೆಸರಿನ ಈ ಡ್ರೋನ್ 5 ಕಿ.ಮೀ. ಎತ್ತರದವರೆಗೂ ಹಾರಾಟ ನಡೆಸುತ್ತದೆ. 15 ಕಿ.ಮೀ ದೂರದವರೆಗೂ ಸಾಗಲಿವೆ. ಒಂದು ಕೊಠಡಿಯಲ್ಲಿ ಕುಳಿತು ಏಕಕಾಲಕ್ಕೆ ಇಂತಹ 75 ಡ್ರೋನ್‌ಗಳನ್ನು ಹಾರಿಸುವ, ನಿಯಂತ್ರಿಸುವ ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗಿದೆ.

ಇದರಲ್ಲಿರುವ ಕ್ಯಾಮೆರಾಗಳು ಅದರ ಇರುವಿಕೆಯ ಸುತ್ತಲೂ ಎರಡು ಕಿ.ಮೀ. ವ್ಯಾಪ್ತಿಯಲ್ಲಿ ಹಗಲು–ರಾತ್ರಿಯಲ್ಲೂ ಸ್ಪಷ್ಟ ಚಿತ್ರಗಳನ್ನು ರವಾನಿಸುತ್ತವೆ. ಶತ್ರುಗಳಿಗೆ ತನ್ನ ಇರುವಿಕೆ ತಿಳಿಯದಷ್ಟು ಸೂಕ್ಷ್ಮ ಶಬ್ದತರಂಗಗಳ ವ್ಯವಸ್ಥೆ ಹೊಂದಿದೆ. ಜತೆಗೆ 30ರಿಂದ 40 ಕೆ.ಜಿ. ತೂಕದ ಸಾಮಗ್ರಿಗಳನ್ನು ಹೊತ್ತಯ್ಯಬಲ್ಲವು.

ಇಂದು ಸಮಾರೋಪ ಉಚಿತ ಪ್ರವೇಶ

ಬೆಂಗಳೂರು: ನಾಲ್ಕು ದಿನಗಳ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಇಂದು (ಫೆ. 14) ತೆರೆಬೀಳಲಿದೆ. ಸಾರ್ವಜನಿಕರಿಗೆ ಮುಕ್ತ ಹಾಗೂ ಉಚಿತ ಪ್ರವೇಶವಿದೆ. ಬೆಳಿಗ್ಗೆ 11ಕ್ಕೆ ನಡೆಯುವ ಸಮಾರೋಪದಲ್ಲಿ ಸಂಸದ ಶಶಿ ತರೂರ್ ಭಾಗವಹಿಸುವರು.

ಮೂರನೇ ದಿನವಾದ ಗುರುವಾರ ಉದ್ಯಮಿಗಳು, ನವೋದ್ಯಮಿಗಳು, ತಾಂತ್ರಿಕ ಕಾಲೇಜುಗಳ ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಿದ್ದರು. ನವೀನ ಆವಿಷ್ಕಾರಗಳನ್ನು ಕುತೂಹಲದಿಂದ ವೀಕ್ಷಿಸಿ, ಮಾಹಿತಿ ಪಡೆದುಕೊಂಡರು. ವಿದೇಶಿ ಪ್ರತಿನಿಧಿಗಳು ದೇಸಿ ಉತ್ಪನ್ನ, ತಂತ್ರಜ್ಞಾನಕ್ಕೆ ಮಾರುಹೋದರು.

ಉದ್ಯಮಶೀಲತೆಗೆ ಹತ್ತಾರು ದಾರಿ

ಬೆಂಗಳೂರು: ಉದ್ಯಮಶೀಲತೆಗೆ ಎಂಥದ್ದೆಲ್ಲಾ ದಾರಿಗಳಿರಬೇಕು? ಇಂಥದ್ದೊಂದು ಪ್ರಶ್ನೆಯನ್ನಿರಿಸಿಕೊಂಡು ಸಂವಾದ ಆರಂಭಿಸಿದ ಇಂಕ್‌ಟಾಕ್ಸ್ ಸಿಇಒ ಲಕ್ಷ್ಮೀ ಪ್ರತೂರಿ ಅವರು ಚಿತ್ರ ನಿರ್ದೇಶಕಿ, ಮನೆ ಅಡುಗೆ ಉದ್ಯಮಿ ಮಹಿಳೆ ಮತ್ತು ಟೆಕ್ ಪರಿಣಿತ ಮಹಿಳೆಯರನ್ನು ಮಾತಿಗೆಳೆದರು.

ಚಿತ್ರ ನಿರ್ಮಾಣ ಕಡೆಗೆ ಚಿತ್ರ ನಿರ್ದೇಶನವು ಹಲವರಿಗೆ ಉದ್ಯೋಗ ಕೊಡುವ ಉದ್ದಿಮೆಯೂ ಆಗಬಲ್ಲದು ಎಂಬುದನ್ನು ಚಿತ್ರ ನಿರ್ದೇಶಕಿ ಕಿರಣ್ ರಾವ್ ವಿವರಿಸಿದರು. ಬೆಂಗಳೂರಿನ ಮಲ್ಲೇಶ್ವರದಲ್ಲಿ ಕಳೆದ ಶಾಲಾ–ಕಾಲೇಜು ದಿನಗಳು ಸಾಂಪ್ರದಾಯಿಕ ಉದ್ಯಮಗಳಾಚೆಗೆ ಚಿತ್ರರಂಗದಲ್ಲಿ ಉದ್ಯೋಗ ಹುಡುಕುವ ದಾರಿ ತೋರಿದ ಬಗೆಯನ್ನು ತೆರೆದಿಟ್ಟರು. 'ಆದರೆ ಮನೆ–ಮಕ್ಕಳ ಹೊಣೆಯನ್ನು ನಿಭಾಯಿಸುವುದು ಕಷ್ಟವಾದರೂ ಅಸಾಧ್ಯವೇನಲ್ಲ' ಎಂದರು.

ಕಿರಣ್ ಎತ್ತಿದ ವಿಚಾರಕ್ಕೆ ಉತ್ತರವೆಂಬಂತೆ ತಮ್ಮ ಉದ್ಯಮದ ಹಾದಿಯನ್ನು ತೆರೆದಿಟ್ಟ 'ಸುಖೀ ಗೌರ್ಮೆಟ್ ಫುಡ್ಸ್ ಇಂಡಿಯಾ'ದ ಮುಖ್ಯಸ್ಥೆ ಸುಖೀ, 'ಮನೆಯವರು ಮತ್ತು ಮಕ್ಕಳಿಗೂ ನಮ್ಮ ಉದ್ಯಮದಲ್ಲೇ ಆಸಕ್ತಿ ಬರುವಂತೆ ಮಾಡುವುದು ಪರಿಹಾರ' ಎಂದರು. ಬೆಂಗಳೂರಿನ ವಾಯುನೆಲೆಯಲ್ಲಿ ಇದ್ದಾಗ ಮನೆ ಅಡುಗೆ ಸಂಸ್ಕರಿಸಿ ಇಡಲು ಮಾಡಿದ ಪ್ರಯೋಗಗಳು, ಅಮೆರಿಕದಲ್ಲಿ ಉದ್ಯಮಿಯಾಗಲು ಹೇಗೆ ನೆರವಾಯಿತು ಎಂಬುದನ್ನು ವಿವರಿಸಿದರು.

ಮೈಕ್ರೊಸಾಫ್ಟ್ ಇಂಡಿಯಾ ನಿರ್ದೇಶಕಿ, ಕನ್ನಡತಿ ಇರಿನಾ ಗೋಷ್, 'ಇಂಗ್ಲಿಷ್ ಬರದ ಬಾಲಕಿಯೊಬ್ಬಳು ಎಐ ಮೂಲಕ ತಾನು ಏನೆಲ್ಲಾ ಕಲಿತೆ, ಎಐ ಜತೆಗೆ ಕನ್ನಡದಲ್ಲೇ ಹೇಗೆ ಸಂವಾದ ನಡೆಸಿದೆ ಎಂಬುದನ್ನೇ ವ್ಲಾಗಿಂಗ್ ಮಾಡಿದಳು. ಕಲಿಕೆಯ ಜತೆಗೆ ಹಣವನ್ನೂ ಗಳಿಸಿದಳು. ಇಂಗ್ಲಿಷ್ ಬರದವರೂ ತಂತ್ರಜ್ಞಾನದ ನೆರವಿನಿಂದ ಜಾಗತಿಕ ಮಟ್ಟದಲ್ಲಿ ವ್ಯವಹರಿಸಬಹುದು ಎಂಬುದಕ್ಕೆ ಇದು ನಿದರ್ಶನ' ಎಂದರು.

ಎಐ ಸಾಧ್ಯತೆಗಳು: 'ಗೂಗಲ್ ಎಕ್ಸ್' ಸ್ಥಾಪಕ ಸೆಬಾಸ್ಟಿಯನ್ ಥ್ರನ್ ಅಭಿಮತ

ಸತ್ತ ಬಳಿಕವೂ ಮಾತನಾಡಬಹುದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಸಾವಿನ ನಂತರವೂ ಮಕ್ಕಳು, ಮೊಮ್ಮಕ್ಕಳ ಜತೆಗೆ ನಾವು ಮಾತನಾಡಬಹುದಾದ ಸಾಧ್ಯತೆಯನ್ನು ಎಐ ಸೃಷ್ಟಿಸಲಿದೆ' ಎಂದು 'ಗೂಗಲ್ ಎಕ್ಸ್' ಸ್ಥಾಪಕ ಸೆಬಾಸ್ಟಿಯನ್ ಥ್ರನ್ ತಿಳಿಸಿದರು.

'ಜಾಗತಿಕ ಹೂಡಿಕೆದಾರರ ಸಮಾವೇಶ'ದಲ್ಲಿ ಗುರುವಾರ ನಡೆದ 'ಪ್ರವರ್ತಕ ಎಐ: ಅಮೋಘ ಕಲ್ಪನೆಯಿಂದ ನೈಜ ಪ್ರಭಾವದವರೆಗೆ' ಗೋಷ್ಠಿಯಲ್ಲಿ ಅವರು ಮಾತನಾಡಿದರು.


ಎಐ ಪ್ರಗತಿಯು ಕಲ್ಪನೆಗೂ ಮೀರಿ ಬೆಳೆಯುತ್ತಿದೆ. 'ಚಾಟ್ ಜಿಪಿಟಿ'ಯನ್ನು ಮೂರು ವರ್ಷಗಳ ಹಿಂದೆ ಯಾರೂ ಕಲ್ಪಿಸಿಕೊಂಡಿರಲಿಲ್ಲ. ಮುಂದಿನ ಮೂರು ವರ್ಷಗಳಲ್ಲಿ ಎಐ ಸ್ವರೂಪ ಹೇಗಿರಲಿದೆ ಎಂದು ಹೇಳಲು ಸಾಧ್ಯವಿಲ್ಲ. ಸ್ವಯಂಚಾಲಿತ ಕಾರುಗಳು ಎಷ್ಟು ಸ್ವತಂತ್ರವಾಗಿವೆ ಎಂದರೆ ಸ್ಯಾನ್ ಫ್ರಾನ್ಸಿಸ್ಕೊದಲ್ಲಿ 'ವೇಮೋ' ಕಾರು ಯಾರ ಮೇಲ್ವಿಚಾರಣೆಯೂ ಇಲ್ಲದೆ ಜನರನ್ನು ಒಯ್ಯುತ್ತಿದೆ. ಮುಂದಿನ ದಿನಗಳಲ್ಲಿ ಭಾರತಕ್ಕೂ ಬರಲಿದೆ ಎಂದು ಹೇಳಿದರು.

ಎಐ ತಂತ್ರಜ್ಞಾನವು ಮನುಷ್ಯ ಕುಲವನ್ನು ನಾಶ ಮಾಡಲಿದೆ ಎಂಬ ಭಯ ಜನರಲ್ಲಿತ್ತು. ಈಗ ಈ ಆತಂಕ ದೂರವಾಗಿದೆ. ಜನರು ವ್ಯಾಪಕವಾಗಿ ಬಳಸುತ್ತಿದ್ದಾರೆ. ಎಐ ಮೊದಲು ಬರವಣಿಗೆಯಲ್ಲಿ ಮುಂದಿನ ಪದವನ್ನು ಊಹಿಸುತ್ತಿತ್ತು. ಆನಂತರ ವಾಕ್ಯ ಊಹಿಸುತ್ತಿತ್ತು. ಈಗ ಪುಟಗಟ್ಟಲೆ ಸ್ವತಂತ್ರವಾಗಿ ಬರೆಯಬಲ್ಲದು ಎಂದರು.

'ದಿ ಎಕನಾಮಿಸ್ಟ್' ನ ಗ್ರಾಫಿಕ್ ವಿವರ ವಿಭಾಗದ ಸಂಪಾದಕಿ ಮಿಚೆಲ್ ಹೆನ್ನೆಸ್ಸಿ ಗೋಷ್ಠಿ ನಿರ್ವಹಿಸಿದರು.

ಉದ್ಯೋಗ ನಷ್ಟವೂ.. ಹೊಸ ಉದ್ಯೋಗ ಸೃಷ್ಟಿಯೂ

ಎಐ (ಕೃತಕ ಬುದ್ಧಿಮತ್ತೆ) ಬಳಕೆ ಹೆಚ್ಚಾದಾಗ ಈಗಿರುವ ಉದ್ಯೋಗಗಳಲ್ಲಿ ಶೇ 60ರಷ್ಟು ಇಲ್ಲವಾಗಬಹುದು. ಅದೇ ಹೊತ್ತಿಗೆ ಅದಕ್ಕಿಂತ ಅಧಿಕ ಹೊಸ ಉದ್ಯೋಗಗಳು ಸೃಷ್ಟಿಯಾಗಲಿದೆ. ಯುವಜನರು ಅದಕ್ಕೆ ಸಿದ್ಧರಾಗಬೇಕು ಎಂದು ಸೆಬಾಸ್ಟಿಯನ್ ಥ್ರನ್ ತಿಳಿಸಿದರು.



ಗೋಷ್ಠಿಯಲ್ಲಿಸೆಬಾಸ್ಟಿಯನ್ ಥ್ರನ್ ಮಾತನಾಡಿದರು. 'ದಿ ಎಕನಾಮಿಸ್ಟ್'ನ ಗ್ರಾಫಿಕ್ ವಿವರ ವಿಭಾಗದ ಸಂಪಾದಕಿ ಮಿಚೆಲ್ ಹೆನ್ನೆಸ್ಸಿ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

ಗುಡ್ಡಗಾಡು ಓಡಾಟಕ್ಕೆ 'ಅಶ್ವ' ಎಟಿವಿ ಬಲ

• ಜಯಸಿಂಹ ಆರ್.

600-1200 ಕೆ.ಜಿ. — ಭಾರ ಹೊರುವ ಸಾಮರ್ಥ್ಯ

4 — ಅವತರಣಿಕೆಗಳಲ್ಲಿ ಲಭ್ಯ

2-4 — ಸೀಟುಗಳ ವಿನ್ಯಾಸದಲ್ಲಿ ಲಭ್ಯ

1 ಟನ್ — ಗುಡ್ಡಗಾಡು ಪ್ರದೇಶದಲ್ಲಿ ಟ್ರೈಲರ್ ಸಮೇತ ಭಾರ ಎಳೆಯುವ ಸಾಮರ್ಥ್ಯ

- ರಸ್ತೆ ಇಲ್ಲದ ಪ್ರದೇಶದಲ್ಲೂ ಕಾರ್ಯಾಚರಣೆ ಸಾಮರ್ಥ್ಯ, ನೀರು, ಕೆಸರು, ಗದ್ದೆ–ಹೊಲಗಳಲ್ಲಿ ಓಡಾಟಕ್ಕೆ ಅನುಕೂಲವಾಗುವ ಸವಲತ್ತು
- ಪಿಟಿಒ ಅಗತ್ಯವಿಲ್ಲದ ಕೃಷಿ ಉಪಕರಣಗಳ ಜೋಡಣೆ. ಕುಂಟೆ, ಹಲಗೆ, ಉಳುಮೆ, ಬಿತ್ತನೆ, ಔಷಧ ಸಿಂಪಡಣೆ ಉಪಕರಗಳ ಬಳಕೆ
- ಮೊದಲ ಹಂತದ ಸ್ವಯಂಚಾಲನಾ ಸವಲತ್ತುಗಳು. ₹25 ಲಕ್ಷದಿಂದ ₹35 ಲಕ್ಷ: ವಿವಿಧ ಅವತರಣಿಕೆಗಳ ಬೆಲೆ



956 ಸಿಸಿ ಸಾಮರ್ಥ್ಯದ ವಿ–ಟ್ವಿನ್ ಪೆಟ್ರೋಲ್ ಎಂಜಿನ್, ಸಿವಿಟಿ ಟ್ರಾನ್ಸ್‌ಮಿಷನ್

ಬೆಂಗಳೂರು: ಕರ್ನಾಟಕ ಮಾತ್ರವಲ್ಲ ದೇಶದ ಬಹುತೇಕ ಕಡೆ ತೋಟಗಾರಿಕೆ, ಗುಡ್ಡಗಾಡು ಪ್ರದೇಶಗಳಲ್ಲಿ ಓಡಾಡಲು, ಕಾರ್ಮಿಕರನ್ನು ಕರೆದೊಯ್ಯಲು ಈಗಲೂ ಜೀವನಾಡಿಯಂತಿರುವುದು ಟ್ರ್ಯಾಕ್ಟರ್ ಮತ್ತು ಅದಕ್ಕೆ ಜೋಡಿಸಿದ ಟ್ರೇಲರ್‌ಗಳು. ಇಂತಹ ಓಡಾಟ ಮತ್ತು ಸಣ್ಣ–ಪುಟ್ಟ ಸರಕುಗಳನ್ನು ಆರಾಮವಾಗಿ ಸಾಗಿಸಲು ಅನುವು ಮಾಡಿಕೊಡುವ ವಾಹನ ಏಕೆ ಇರಬಾರದು ಎಂಬ ಪ್ರಯತ್ನದ ಫಲವಾಗಿ ದೇಶೀಯವಾಗಿ ಅಭಿವೃದ್ಧಿಪಡಿಸಿದ 'ಅಶ್ವ' ಎಟಿವಿ ಈಗ ಮಾರುಕಟ್ಟೆಯಲ್ಲಿದೆ.

ಮಲೆನಾಡಿನಲ್ಲಿ ತೋಟಗಳನ್ನು ಹೊಂದಿರುವ ಮತ್ತು ಅಲ್ಲಿನ ಓಡಾಟದ ಅಗತ್ಯಗಳನ್ನು ಕಂಡಿರುವ ನಾಲ್ಕಾರು ಮಂದಿ ಡ್ರಾಯಿಂಗ್‌ಬೋರ್ಡ್ ಮೇಲೆ ಮೂಡಿಸಿದ ಕಲ್ಪನೆ ಈಗ 'ಎ–ಥಾನ್ ಆಲ್ ಟೆರೇನ್ ವೆಹಿಕಲ್ ಪ್ರೈ. ಲಿಮಿಟೆಡ್' ಆಗಿ ರೂಪುಗೊಂಡಿದೆ.

ಕೃಷಿ ಎಂಜಿನಿಯರಿಂಗ್, ಆಟೊಮೊಬೈಲ್ ಎಂಜಿನಿಯರಿಂಗ್, ಎಐ ಎಂಜಿನಿಯರಿಂಗ್, ಡಿಸೈನ್ ಎಂಜಿನಿಯರಿಂಗ್‌ನಲ್ಲಿ ಪರಿಣತಿ ಹೊಂದಿದ ಹಿರಿಯರು ಮತ್ತು ಯುವಕರನ್ನು ಒಳಗೊಂಡ ತಂಡದ ನಾಲ್ಕಾರು ವರ್ಷಗಳ ಶ್ರಮ 'ಅಶ್ವ'ವನ್ನು ರೂಪಿಸಿದೆ. ಬಂಗಾರಪೇಟೆಯ ದಾಸರಹೊಸಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ ಹಾಗೂ ತಯಾರಿಕಾ ಘಟಕ ಹೊಂದಿರುವ ಎ–ಥಾನ್ ಅಪ್ಪಟ ಕನ್ನಡಿಗರ ಕಂಪನಿ.

'ಗುಡ್ಡಗಾಡು–ಅರಣ್ಯ ಪ್ರದೇಶಲ್ಲಿ ಸಮೀಕ್ಷೆ–ರಕ್ಷಣಾ ಕಾರ್ಯಾಚರಣೆ, ಪ್ರವಾಹ ಸಂದರ್ಭದ ಕಾರ್ಯಾಚರಣೆಗಳನ್ನೂ ಗಮನದಲ್ಲಿ ಇರಿಸಿಕೊಂಡು 'ಅಶ್ವ'ವನ್ನು ವಿನ್ಯಾಸ ಮಾಡಲಾಗಿದೆ' ಎನ್ನುತ್ತಾರೆ ಎ–ಥಾನ್‌ನ ಮುಖ್ಯ ಪ್ರಾಡಕ್ಟ್ ಎಂಜಿನಿಯರ್ ಅಶ್ವಿನ್ ಜಾರ್ಜ್. ಇಂಡೊ–ಟಿಬೆಟಿಯನ್ ಗಡಿ ಪೊಲೀಸ್ ಪಡೆಯ ಓಡಾಟಕ್ಕೆ ಹಲವು 'ಅಶ್ವ 4x4'ಗಳ ಪೂರೈಕೆ ಆರಂಭವಾಗಿದೆ ಎನ್ನುತ್ತದೆ ಕಂಪನಿ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ,
ಆಕಳ ಹಾಲನೆರೆದು, ಜೇನುತುಪ್ಪವ ಹೊಯ್ದರೆ
ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ?

-ಬಸವಣ್ಣ

ಜನಗಣತಿಗೆ ಬಜೆಟ್‌ನಲ್ಲಿ ಅಲ್ಪ ಮೊತ್ತ ಅನುಮಾನ ಮೂಡಿಸಿದ ಕೇಂದ್ರದ ನಡೆ

ರಾಷ್ಟ್ರ ಮಟ್ಟದಲ್ಲಿ ಜನಗಣತಿ ನಡೆಸುವ ವಿಚಾರದಲ್ಲಿನ ಅನಿಶ್ಚಿತತೆ ಮುಂದುವರಿದಿದೆ. ಇದು, ಒಂದಿಷ್ಟು ಕಳವಳವನ್ನು ಹಾಗೂ ಸರ್ಕಾರವು ಜನಗಣತಿಯನ್ನು ನಡೆಸುವ ಇರಾದೆಯನ್ನು ನಿಜಕ್ಕೂ ಹೊಂದಿದೆಯೇ ಎಂಬ ಪ್ರಶ್ನೆಯನ್ನು ಮೂಡಿಸಿದೆ. ಈಗಾಗಲೇ ತಡವಾಗಿರುವ ಜನಗಣತಿಯನ್ನು 2025ರಲ್ಲಿ ನಡೆಸಲಾಗುತ್ತದೆ ಹಾಗೂ ಈ ವರ್ಷವನ್ನು ಮೂಲವಾಗಿ ಇರಿಸಿಕೊಂಡು ಪ್ರತಿ ಹತ್ತು ವರ್ಷಗಳಿಗೆ ಒಮ್ಮೆ ಜನಗಣತಿ ನಡೆಯುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಈಗ ಸಂಸತ್ತಿನಲ್ಲಿ ಮಂಡನೆಯಾಗಿರುವ 2025-26ನೇ ಸಾಲಿನ ಬಜೆಟ್‌ನಲ್ಲಿ ಜನಗಣತಿಗಾಗಿ ₹574.80 ಕೋಟಿ ಮೊತ್ತವನ್ನು ಮಾತ್ರ ತೆಗೆದಿರಿಸಲಾಗಿದೆ. ಜನಗಣತಿ ಕುರಿತ ತನ್ನ ಆಲೋಚನೆಗಳ ಬಗ್ಗೆ ಕೇಂದ್ರ ಸರ್ಕಾರವು ಏನನ್ನೂ ಇದುವರೆಗೆ ಹೇಳಿಲ್ಲ. ರಾಜ್ಯಸಭೆಯಲ್ಲಿ ಮಾತನಾಡಿರುವ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಜನಗಣತಿ ನಡೆಸುವಲ್ಲಿ ಆಗಿರುವ ವಿಳಂಬದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಜನಗಣತಿಯು ನಡೆಯದೇ ಇದ್ದರೆ ಅಂದಾಜು 14 ಕೋಟಿ ಜನರಿಗೆ ಆಹಾರದ ಭದ್ರತೆಯನ್ನು ನಿರಾಕರಿಸಿದಂತೆ ಆಗುತ್ತದೆ ಎಂದು ಅವರು ಹೇಳಿದ್ದಾರೆ. ಜನಗಣತಿ ಮೂಲಕ ಸಿಗುವ ಅಂಕಿ-ಅಂಶವನ್ನು ಆಧರಿಸಿ, ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ ಫಲಾನುಭವಿಗಳನ್ನು ಲೆಕ್ಕಹಾಕಲಾಗುತ್ತದೆ. ಆದರೆ, ಜನಗಣತಿಯ ಅಂಕಿ-ಅಂಶಗಳು ಇಲ್ಲದಿದ್ದಾಗ ಈ ಕಾಯ್ದೆಯ ಅಡಿಯಲ್ಲಿ ಸಿಗುವ ಪ್ರಯೋಜನಗಳು ದೊಡ್ಡ ಸಂಖ್ಯೆಯ ಜನರಿಗೆ ಇಲ್ಲದಂತೆ ಆಗುತ್ತವೆ.



ಜನಸಂಖ್ಯೆಯ ನಿಖರ ಲೆಕ್ಕ ಇಲ್ಲದೇ ಇದ್ದಾಗ ನೀತಿ ನಿರೂಪಣೆಯ ಮೇಲೆ ಗಂಭೀರ ಪರಿಣಾಮಗಳು ಉಂಟಾಗುತ್ತವೆ

ದೇಶದ ಜನಸಂಖ್ಯೆಯನ್ನು ಲೆಕ್ಕಹಾಕುವ ಅತಿ ದೊಡ್ಡ ಹಾಗೂ ಅತ್ಯಂತ ಸಮಗ್ರವಾದ ಕಾರ್ಯಕ್ರಮ ಜನಗಣತಿ. ದೇಶದ ಜನಸಂಖ್ಯೆ ಎಷ್ಟು ಎಂಬುದನ್ನು ತಿಳಿಸುವುದಷ್ಟೇ ಅಲ್ಲದೆ, ಇದು ಸಮಾಜ ಹಾಗೂ ಆರ್ಥಿಕತೆಯ ಬಗ್ಗೆ ಮಾಹಿತಿ ಒದಗಿಸುತ್ತದೆ, ದೇಶದ ಹಲವು ಕ್ಷೇತ್ರಗಳಲ್ಲಿ ಆಗಿರುವ ಬದಲಾವಣೆಗಳನ್ನು ಅರ್ಥ ಮಾಡಿಕೊಳ್ಳಲು ನೆರವಾಗುತ್ತದೆ. ಕಡೆಯ ಬಾರಿಗೆ ಜನಗಣತಿ ನಡೆದಿದ್ದು 2011ರಲ್ಲಿ. ಆ ನಂತರದಲ್ಲಿ ದೇಶವು ಹಲವು ಬದಲಾವಣೆಗಳನ್ನು ಕಂಡಿದೆ. 2011ರಲ್ಲಿ ದೇಶದ ಜನಸಂಖ್ಯೆಯು 121 ಕೋಟಿ ಆಗಿತ್ತು. ಅದು ಈಗ 145 ಕೋಟಿ ಆಗಿರಬಹುದು ಎಂದು ಅಂದಾಜು ಮಾಡಲಾಗಿದೆ. 2021ರಲ್ಲಿ ನಡೆಯಬೇಕಿದ್ದ ಜನಗಣತಿಯನ್ನು ಕೋವಿಡ್ ಸಾಂಕ್ರಾಮಿಕದ ಕಾರಣಕ್ಕೆ ಮುಂದೂಡಲಾಯಿತು. ಆ ಸಂದರ್ಭದಲ್ಲಿ ಜಗತ್ತಿನ ಇತರ ಹಲವು ದೇಶಗಳು ಕೂಡ ತಮ್ಮಲ್ಲಿ ನಡೆಯಬೇಕಿದ್ದ ಜನಗಣತಿಯನ್ನು ಮುಂದೂಡಿದವು. ಆದರೆ ಆ ಪೈಕಿ ಒಂದಿಷ್ಟು ದೇಶಗಳು ನಂತರದಲ್ಲಿ ಜನಗಣತಿ ಕಾರ್ಯ ನಡೆಸಿವೆ. ಆದರೆ ವಿಶ್ವದಲ್ಲಿ ಅತ್ಯಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಭಾರತವು ಇನ್ನಷ್ಟೇ ಜನಗಣತಿ ನಡೆಸಬೇಕಿದೆ.

ಜನಸಂಖ್ಯೆಯ ನಿಖರ ಲೆಕ್ಕ ಇಲ್ಲದೇ ಇದ್ದಾಗ ನೀತಿ ನಿರೂಪಣೆಯ ಮೇಲೆ ಗಂಭೀರ ಪರಿಣಾಮಗಳು ಉಂಟಾಗುತ್ತವೆ. ಸರ್ಕಾರಗಳು ಸಂಪನ್ಮೂಲ ಹಂಚಿಕೆ ಮಾಡುವಾಗ ಕೂಡ ಸಮಸ್ಯೆಗಳು ಸೃಷ್ಟಿಯಾಗುತ್ತವೆ. ಸಾರ್ವಜನಿಕ ನೀತಿ ನಿರೂಪಣೆಯು ಪರಿಣಾಮಕಾರಿ ಆಗಿರಬೇಕು ಎಂದಾದರೆ ದತ್ತಾಂಶಗಳು ನಿಖರವಾಗಿ ಇರಬೇಕು. ಆಗಮಾತ್ರ ನೀತಿಗಳನ್ನು, ಯೋಜನೆಗಳನ್ನು ಸೂಕ್ತವಾಗಿ ರೂಪಿಸಲು ಹಾಗೂ ಅರ್ಹ ಫಲಾನುಭವಿಗಳಿಗೆ ಅವು ಸಿಗುವಂತೆ ಮಾಡಲು ಸಾಧ್ಯವಾಗುತ್ತದೆ. ನೀತಿ ನಿರೂಪಣೆಯಲ್ಲಿ ನೆರವಾಗುವ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ, ಕಾರ್ಮಿಕರ ಸಮೀಕ್ಷೆ, ಮಾದರಿ ನೋಂದಣಿ ವ್ಯವಸ್ಥೆ, ಕುಟುಂಬಗಳ ಮಟ್ಟದಲ್ಲಿನ ಖರೀದಿ ಕುರಿತ ಸಮೀಕ್ಷೆಯು ಜನಗಣತಿಯ ದತ್ತಾಂಶವನ್ನು ಆಧರಿಸಿರುತ್ತವೆ. ದೇಶದಲ್ಲಿ ವಲಸೆ ಹೆಚ್ಚಾಗಿ, 2011ರ ನಂತರದಲ್ಲಿ ದೇಶದ ಜನಸಂಖ್ಯಾ ಸ್ವರೂಪವು ಬಹಳಷ್ಟು ಬದಲಾವಣೆಗಳನ್ನು ಕಂಡಿದೆ. ನಗರೀಕರಣ ಹೆಚ್ಚಾದಂತೆ, ಜನರ ಜೀವನಶೈಲಿಯಲ್ಲಿ ಬದಲಾವಣೆ ಆದಂತೆ ದೇಶದ ಸಾಮಾಜಿಕ ಮತ್ತು ಆರ್ಥಿಕ ಸ್ವರೂಪದಲ್ಲಿಯೂ ಬದಲಾವಣೆಗಳು ಆಗಿವೆ. ಇದೇ ರೀತಿಯಲ್ಲಿ ರಾಜ್ಯಗಳ ಮಟ್ಟದಲ್ಲಿಯೂ ಬದಲಾವಣೆಗಳು ಆಗಿವೆ. ಆ ಬದಲಾವಣೆಗಳನ್ನು ಸ್ಪಷ್ಟವಾಗಿ ಗುರುತಿಸಿ, ಜನಕಲ್ಯಾಣ ಯೋಜನೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ರೂಪಿಸಲು ಜನಗಣತಿಯ ಅಂಕಿ-ಅಂಶ ಬೇಕೇ ಬೇಕು. ಕೇಂದ್ರ ಸರ್ಕಾರವು ಜನಗಣತಿಗೆ ಸಂಬಂಧಿಸಿದ ಕಳವಳ ನಿವಾರಿಸುವ ಮತ್ತು ಪ್ರಶ್ನೆಗಳಿಗೆ ಉತ್ತರಿಸುವ ಕೆಲಸವನ್ನು ಮಾಡಬೇಕು.

ಈ ಸೋಲು ಪರ್ಯಾಯ ರಾಜಕೀಯ ಕಟ್ಟುವ ಪ್ರಯತ್ನಗಳನ್ನು ನಿರುತ್ಸಾಹಗೊಳಿಸುತ್ತದೆ

ಎಎಪಿ ಸೋಲನ್ನು ಸಂಭ್ರಮಿಸಲಾಗದು



ವಿಶ್ಲೇಷಣೆ

ಯೋಗೇಂದ್ರ ಯಾದವ್

‘ಈಗ ನೀವು ಮುಕ್ತವಾಗಿ ಮಾತನಾಡಬಹುದು’ ಎಂದು ಸುದ್ದಿವಾಹಿನಿಯೊಂದರ ನಿರೂಪಕರು ನನ್ನನ್ನು ಪ್ರಚೋದಿಸಿದರು. ಎಎಪಿ ಇನ್ನೇನು ಅಧಿಕಾರಕ್ಕೆ ಬಂತು ಎಂದಾಗ ಆ ಪಕ್ಷ ತೊರೆದ ನಾಯಕರ ಸಾಲಿಗೆ ನನ್ನನ್ನೂ ಸೇರಿಸಲು ಯತ್ನಿಸಿದರು. ಎಎಪಿಯ ಸೋಲನ್ನು ಸಂಭ್ರಮಿಸುವ ರೀತಿಯಲ್ಲಿ ಕುಮಾರ್ ವಿಶ್ವಾಸ್ ಅಥವಾ ಸ್ವಾತಿ ಮಲಿವಾಲ್ ಅವರು ನೀಡಿರುವ ಸಂದೇಶಗಳು ಎಎಪಿ ತೊರೆದವರ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹರಿದಾಡುತ್ತಿವೆ. ಈ ಕುರಿತು ಮರುಕಪಡಬೇಕು ಅಷ್ಟೇ. ಇಂತಹುದರ ಭಾಗವಾಗುವ ಮನಃಸ್ಥಿತಿಯಲ್ಲಿ ನಾನಿಲ್ಲ.

ಒಂದು ದಶಕದ ಹಿಂದೆ, ಎಎಪಿಯವರು ನಮ್ಮ ಕುರಿತು ಆಡಿದ್ದ ಮಾತುಗಳು ಮತ್ತು ಮಾಡಿದ್ದ ಅವಮಾನವನ್ನು ಮರೆತಿದ್ದೇನೆ ಎಂದಲ್ಲ. ದೆಹಲಿಯಲ್ಲಿ ಬಿಜೆಪಿಯ ಗೆಲುವು ಮತ್ತು ಎಎಪಿಯ ಸೋಲಿನಲ್ಲಿ ಇರುವ ಹೆಚ್ಚು ಗಂಭೀರ ವಿಚಾರಗಳನ್ನು ನನ್ನ ವೈಯಕ್ತಿಕ ಅನುಭವವು ಮರೆಮಾಚುವಂತೆ ಆಗಬಾರದು. ಇದು ನನ್ನ ಕುರಿತು ಅಥವಾ ಆಮ್ ಆದ್ಮಿ ಪಕ್ಷದ ಕುರಿತು ಅಥವಾ ಅದರ ನಾಯಕರ ಕುರಿತು ಅಲ್ಲ. ಇಲ್ಲಿ ಮುಖ್ಯವಾಗುವುದು ‘ಆಮ್ ಆದ್ಮಿ’ (ಸಾಮಾನ್ಯ ಜನ).

ಈ ಚುನಾವಣೆಯ ಫಲಿತಾಂಶವು ಎಎಪಿಯ ಒಂದು ದಶಕದ ಆಳ್ವಿಕೆಯ ಕುರಿತ ಜನಮತಗಣನೆ. ಜನರು ಸ್ಪಷ್ಟವಾಗಿ ಎಎಪಿಯನ್ನು ತಿರಸ್ಕರಿಸುವ ತೀರ್ಪು ನೀಡಿದ್ದಾರೆ. ಈ ತೀರ್ಪಿನ ಪ್ರಯೋಜನ ಬಿಜೆಪಿಗೆ ದೊರೆಯಿತು ಅಷ್ಟೇ. ಯಾವ ಕ್ರಮಗಳನ್ನು ಕೈಗೊಂಡಿದ್ದರೆ ಈಗಿನ ಪರಿಸ್ಥಿತಿಯನ್ನು ತಿರುವು ಮುರುವು ಮಾಡಬಹುದಿತ್ತು ಎಂದು ಈಗ ಊಹಿಸುವುದು ಕಷ್ಟ. ಬಿಜೆಪಿ ನಾಯಕತ್ವದ ಕುರಿತು ಭ್ರಷ್ಟಾಚಾರದ ಆರೋಪಗಳು ಕೇಳಿಬಂದರೆ ಸಮೂಹ ಮಾಧ್ಯಮಗಳು ಅವುಗಳಿಗೆ ಪ್ರಚಾರ ನೀಡದೆ ಮುಚ್ಚಿಹಾಕಲು ಯತ್ನಿಸುತ್ತವೆ. ಎಎಪಿ ನಾಯಕತ್ವದ ಕುರಿತು ಕೇಳಿಬಂದಿದ್ದ ಭ್ರಷ್ಟಾಚಾರದ ಆರೋಪಗಳನ್ನು ಹೀಗೆಯೇ ಮಾಡಿದ್ದರೆ ಅದರಿಂದ ಎಎಪಿಗೆ ಅನುಕೂಲ ಆಗಬಹುದಿತ್ತು. ಕೇಂದ್ರದ ಬಜೆಟ್ ಮಂಡನೆಗಿಂತ ಮೊದಲೇ ಮತದಾನ ನಡೆಯುವಂತೆ ಚುನಾವಣಾ ಆಯೋಗವು ನೋಡಿಕೊಂಡಿದ್ದರೆ ಅಥವಾ ತಾನು ಭರವಸೆ ನೀಡಿದಂತೆ, ಬಜೆಟ್‌ನ ಘೋಷಣೆಗಳು ಮತದಾರರ ಮೇಲೆ ಪ್ರಭಾವ ಬೀರದಂತೆ ನೋಡಿಕೊಂಡಿದ್ದರೆ ಪರಿಸ್ಥಿತಿ ಬದಲಾಗುತ್ತಿತ್ತು. ಮಹಿಳೆಯರಿಗೆ ನಗದು ವರ್ಗಾವಣೆ ಯೋಜನೆಯನ್ನು ಜಾರಿ ಮಾಡಲು ಎಎಪಿ ನೇತೃತ್ವದ ಸರ್ಕಾರಕ್ಕೆ ಲೆಫ್ಟಿನೆಂಟ್ ಗವರ್ನರ್ ಅನುವು ಮಾಡಿಕೊಟ್ಟಿದ್ದರೆ ಫಲಿತಾಂಶ ಬದಲಾಗಬಹುದಿತ್ತು. ಎಎಪಿ ಮತ್ತು ಕಾಂಗ್ರೆಸ್ ಮೈತ್ರಿ ಮಾಡಿಕೊಳ್ಳದೇ ಇದ್ದರೂ ಚುನಾವಣಾ ಹೊಂದಾಣಿಕೆ ಮಾಡಿಕೊಂಡಿದ್ದರೂ ಆಗುತ್ತಿತ್ತು. ಇದರಲ್ಲಿ ಯಾವುದೇ ಒಂದು ಸಾಕಾರಗೊಂಡಿದ್ದರೂ ಶೇ 2ರಷ್ಟು ಮತಗಳು ಎಎಪಿಗೆ ಬೀಳುತ್ತಿದ್ದವು. ಅದಾಗಿದ್ದರೆ ಫಲಿತಾಂಶ ಬೇರೆಯೇ ಆಗುತ್ತಿತ್ತು.

ಹೀಗಿದ್ದರೂ ಆಡಳಿತವಿರೋಧಿ ಅಲೆ ಬಲವಾಗಿಯೇ ಇತ್ತು ಎಂಬುದನ್ನು ಅಲ್ಲಗಳೆಯಲು ಆಗದು. ಅಭಿವೃದ್ಧಿ, ರಸ್ತೆಗಳು, ಸ್ವಚ್ಛತೆ, ಒಳಚರಂಡಿ ಮತ್ತು ಕುಡಿಯುವ ನೀರಿನ ವಿಚಾರಗಳಲ್ಲಿ ಜನ ಭ್ರಮನಿರಸನಗೊಂಡಿದ್ದರು ಎಂದು ಸಿಎಸ್‌ಡಿಎಸ್-ಲೋಕನೀತಿ ಸಮೀಕ್ಷೆಯು ಹೇಳಿದೆ. ಹಾಗೆಯೇ ಕೇಜ್ರಿವಾಲ್ ಅವರ ಜನಪ್ರಿಯತೆಯು ಎಎಪಿಯ ಮತ ಪ್ರಮಾಣಕ್ಕಿಂತ ಕಡಿಮೆ ಇದೆ. ಆಘಾತಕಾರಿ ವಿಚಾರವೆಂದರೆ, ಭ್ರಷ್ಟಾಚಾರವನ್ನು ವಿರೋಧಿಸುತ್ತಲೇ ಮುಂಚೂಣಿಗೆ ಬಂದ ಎಎಪಿ ನೇತೃತ್ವದ ಸರ್ಕಾರವು ‘ಪೂರ್ಣವಾಗಿ’ ಅಥವಾ ‘ಒಂದು ಮಟ್ಟಿಗೆ’ ಭ್ರಷ್ಟವಾಗಿದೆ ಎಂದು ದೆಹಲಿಯ ಮೂರನೇ ಎರಡರಷ್ಟು ಜನ ಭಾವಿಸಿದ್ದಾರೆ. ಎಎಪಿಗೆ ಮತ ಹಾಕಿರುವ ಹೆಚ್ಚಿನವರಿಗೆ ಬೇರೊಂದು ಆಯ್ಕೆ ಇದ್ದಿದ್ದರೆ, ಬಿಜೆಪಿ ವಿಶ್ವಾಸಾರ್ಹ ವ್ಯಕ್ತಿಯನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸಿದ್ದರೆ ಅಥವಾ ಕಾಂಗ್ರೆಸ್ ಪಕ್ಷವು ಇನ್ನಷ್ಟು ಬಲವಾಗಿ ಇದ್ದಿದ್ದರೆ ಎಎಪಿಯ ವಿರುದ್ಧ ಇನ್ನೂ ಸ್ಪಷ್ಟವಾದ ಫಲಿತಾಂಶವೇ ಬರುತ್ತಿತ್ತು.

ಸಾಂವಿಧಾನಿಕ ಪ್ರಜಾಸತ್ತೆಯ ಪರವಾಗಿ ಇರುವವರಿಗೆ ಚಿಂತಿಸಲು ಮತ್ತು ಆತ್ಮಾವಲೋಕನಕ್ಕೆ ಇಲ್ಲಿ ಕಾರಣ ಇದೆ. ನಿಜ ಹೇಳಬೇಕು ಎಂದರೆ, ರಾಜಕಾರಣವನ್ನು ಬದಲಿಸುವ ಉದ್ದೇಶದಿಂದ ಬಂದ ಪಕ್ಷವು ಸ್ಥಾಪನೆಯಾದ ಕೆಲವೇ ವರ್ಷಗಳಲ್ಲಿ ರಾಜಕೀಯ ಆಟದ ನಿಯಮಗಳನ್ನು ಒಪ್ಪಿಕೊಂಡಿತ್ತು. ವ್ಯಕ್ತಿ ಆರಾಧನೆ, ಒಬ್ಬ ವ್ಯಕ್ತಿಯ ಕೈಯಲ್ಲೇ ಅಧಿಕಾರ ಕೇಂದ್ರೀಕರಣ, ನಾಯಕರ ಸುತ್ತಲಿನ ಕೂಟದಿಂದ ನಿಗೂಢ ಕಾರ್ಯಾಚರಣೆಗಳು, ಸಿನಿಕತನದ ದ್ವಿಮುಖ ನೀತಿ, ಸಾಮಾನ್ಯ ಕಾರ್ಯಕರ್ತನ ಕುರಿತು ಅಸಡ್ಡೆ... ಹೀಗೆ ಎಎಪಿ ಇತರ ಪಕ್ಷಗಳಿಗಿಂತ ಭಿನ್ನವೇನೂ ಅಲ್ಲ ಎಂಬುದನ್ನು ಸಾಬೀತುಪಡಿಸಲಾಗಿದೆ. ಮುಖ್ಯಮಂತ್ರಿಯವರ ‘ಶೀಷ್ ಮಹಲ್’ ಹಗರಣವನ್ನು ಪ್ರತಿಕೂಲ ಮಾಧ್ಯಮವು ಉತ್ಪ್ರೇಕ್ಷೆ ಮಾಡಿತು. ಆದರೆ, ಗಾಂಧಿ ಮಾರ್ಗವನ್ನು ಅನುಸರಿಸುವುದಾಗಿ ಎಎಪಿ ನಾಯಕತ್ವವು ಹೇಳಿಕೊಳ್ಳುತ್ತಿದ್ದರೂ ನಡವಳಿಕೆ ಅದಕ್ಕೆ ವ್ಯತಿರಿಕ್ತವಾಗಿರುವುದು ಮಾಧ್ಯಮದ ಉತ್ಪ್ರೇಕ್ಷೆಗೆ ಕಾರಣವಾಗಿರಬಹುದು.

ಅಬಕಾರಿ ಹಗರಣದಲ್ಲಿ ಎಎಪಿ ನಾಯಕರು ದೋಷಿಗಳು ಎಂದು ನ್ಯಾಯಾಲಯವು ಹೇಳದೇ ಇರಬಹುದು. ಈ ಹಗರಣವು ಬರೇ ಕಲ್ಪನೆಯಂತೂ ಅಲ್ಲ ಹಾಗೂ ಇದರಿಂದಾಗಿ ಎಎಪಿಗೆ ಇದ್ದ ನೈತಿಕ ಮೇಲುಗೈ ಕಳೆದುಹೋಯಿತು. ಈ ಎಲ್ಲಕ್ಕಿಂತಲೂ ಕೆಟ್ಟದಾಗಿ ನಡೆದ ಕೆಲವು ಬೆಳವಣಿಗೆಗಳೂ ಇವೆ- ದೆಹಲಿ ಗಲಭೆ ಸಂದರ್ಭದಲ್ಲಿ ಎಎಪಿ ನೇತೃತ್ವದ ಸರ್ಕಾರ ಏನನ್ನೂ ಮಾತನಾಡಲಿಲ್ಲ; ಬುಲ್ಡೋಜರ್ ಕಾರ್ಯಾಚರಣೆಯಲ್ಲಿ ಎಎಪಿ ಸಹಭಾಗಿಯಾಯಿತು; ರೋಹಿಂಗ್ಯ ಸಮುದಾಯದ ಅಸಹಾಯಕ ಮುಸ್ಲಿಮರ ಬೆನ್ನಟ್ಟುವಿಕೆ ಕಾರ್ಯಾಚರಣೆಯಲ್ಲಿ ಸಕ್ರಿಯವಾಗಿಯೇ ಭಾಗಿಯಾಯಿತು. ಈ ಎಲ್ಲ ನಡೆಗಳೂ ಬಿಜೆಪಿಯ ಹಿಂದೂ ಬಹುಸಂಖ್ಯಾತವಾದವನ್ನು ಹಿಂದಿಕ್ಕಿ ತಾನು ಮುಂದೆ ಹೋಗಲು ಕೈಗೊಂಡ ಪ್ರಜ್ಞಾಪೂರ್ವಕ ರಾಜಕೀಯ ತಂತ್ರಗಳಾಗಿದ್ದವು.




ಎಎಪಿ ಹೇಳಿಕೊಳ್ಳುತ್ತಿರುವ ‘ದೆಹಲಿ ಮಾದರಿ’ ಯಶಸ್ವಿಯಾಗಿದೆ ಎಂಬುದು ನನಗೇನೂ ಮನದಟ್ಟಾಗಿಲ್ಲ. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಎಎಪಿ ನೇತೃತ್ವದ ಸರ್ಕಾರವು ರಾಜಕೀಯ ಮುನ್ನೆಲೆಗೆ ತಂದು ನಿಲ್ಲಿಸಿದೆ. ಸರ್ಕಾರಿ ಶಾಲೆಗಳ ಮೂಲಸೌಕರ್ಯವನ್ನು ಉತ್ತಮಪಡಿಸಿದೆ. ಆದರೆ, ಗುಣಮಟ್ಟಕ್ಕೆ ಸಂಬಂಧಿಸಿ ಭಾರಿ ಸಾಧನೆಯಾಗಿದೆ ಎಂಬುದು ಚರ್ಚಾರ್ಹ. ಮೊಹಲ್ಲಾ ಕ್ಲಿನಿಕ್ ಸ್ಥಾಪನೆ ಒಳ್ಳೆಯ ಚಿಂತನೆ. ಆದರೆ, ಅನುಷ್ಠಾನವು ನಿರೀಕ್ಷಿತ ಮಟ್ಟದಲ್ಲಿ ಇರಲಿಲ್ಲ. ಉಚಿತ ವಿದ್ಯುತ್, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಯೋಜನೆಗಳು ಬಡವರ ಕಲ್ಯಾಣಕ್ಕೆ ಆದ್ಯತೆ ಕೊಟ್ಟವು. ಆದರೆ, ಇಷ್ಟೇ ಮೊತ್ತವನ್ನು ಖರ್ಚು ಮಾಡಿ ಬಡವರ ಜೀವನಮಟ್ಟ ಸುಧಾರಣೆಯ ದೀರ್ಘಾವಧಿ ಕಾರ್ಯಕ್ರಮಗಳನ್ನು ಜಾರಿ ಮಾಡಬಹುದಿತ್ತು. ಇದನ್ನು ಬಿಟ್ಟರೆ, ನಗರ ಮೂಲಸೌಕರ್ಯ, ದೆಹಲಿ ಹೊರವಲಯದ ಪರಿಸ್ಥಿತಿ, ತ್ಯಾಜ್ಯ ನಿರ್ವಹಣೆ, ಕುಡಿಯುವ ನೀರಿನ ಸಮಸ್ಯೆ ಮತ್ತು ವಾಯುಮಾಲಿನ್ಯ ಪರಿಸ್ಥಿತಿಯ ಸುಧಾರಣೆಗೆ ದೆಹಲಿ ಮಾದರಿ ಮಾಡಿದ್ದು ಬಹಳವೇನೂ ಇಲ್ಲ.

ವಿಶ್ವ ದರ್ಜೆಯ ನಗರ ಮತ್ತು ಇತರ ಕಾರ್ಯಸೂಚಿಯೊಂದಿಗೆ ಬಂದಿರುವ ಬಿಜೆಪಿ, ದೆಹಲಿಯ ನಿಜವಾದ ಬಹುಸಂಖ್ಯಾತರನ್ನು ಅಗೋಚರಗೊಳಿಸುತ್ತದೆ. ಕಪಿಲ್ ಮಿಶ್ರಾ ಮತ್ತು ರವೀಂದರ್ ನೇಗಿ ಅವರಂತಹವರ ಗೆಲುವು ಮತಾಂಧತೆಗೆ ಮನ್ನಣೆ ನೀಡುತ್ತದೆ. ರಾಜಕೀಯವಾಗಿ ಸಂಪೂರ್ಣ ಪಾರಮ್ಯ ಬೇಕು ಎಂಬ ಬಿಜೆಪಿಯ ಪ್ರಯತ್ನವನ್ನು ದೆಹಲಿಯಲ್ಲಿನ ಗೆಲುವು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಒಯ್ಯುತ್ತದೆ ಎಂಬುದು ಕೂಡ ನನ್ನ ಚಿಂತೆಗೆ ಕಾರಣವಾಗಿದೆ. ದೆಹಲಿ ಸರ್ಕಾರದ ಮೇಲೆ ಕೇಂದ್ರವು ನೇಮಿಸಿದ್ದ ಲೆಫ್ಟಿನೆಂಟ್ ಗವರ್ನರ್ ಒಂದು ದಶಕ ನಡೆಸಿದ ನ್ಯಾಯಸಮ್ಮತವಲ್ಲದ ಹಸ್ತಕ್ಷೇಪಕ್ಕೆ ಬಿಜೆಪಿಯ ಗೆಲುವು ಮಾನ್ಯತೆ ನೀಡುತ್ತದೆ. ಚುನಾವಣಾ ಆಯೋಗದ ಪಕ್ಷಪಾತಿ ಧೋರಣೆ ಮತ್ತು ಚುನಾವಣೆ ಸಂದರ್ಭದಲ್ಲಿ ಎಲ್ಲರಿಗೂ ಸಮಾನ ಅವಕಾಶಗಳ ಸನ್ನಿವೇಶ ದೊರೆಯುತ್ತಿಲ್ಲ ಎಂಬುದನ್ನೆಲ್ಲ ಬದಿಗೆ ಸರಿಸುತ್ತದೆ.

ಎಎಪಿ ಎಂಬ ಪ್ರಯೋಗದ ಸೋಲು ಮುಂದಿನ ದಿನಗಳಲ್ಲಿ ಪರ್ಯಾಯ ರಾಜಕೀಯ ಕಟ್ಟುವ ಪ್ರಯತ್ನಗಳನ್ನು ನಿರುತ್ಸಾಹಗೊಳಿಸುತ್ತದೆ ಎಂಬುದು ಚಿಂತೆಯ ಇನ್ನೊಂದು ವಿಚಾರವಾಗಿದೆ. ದೆಹಲಿಯಲ್ಲಿ ಮತ್ತು ದೇಶದಲ್ಲಿ ನಿಜವಾಗಿಯೂ ಜನಪರವಾದ ಹಾಗೂ ಧರ್ಮನಿರಪೇಕ್ಷ ರಾಜಕಾರಣವು ಸೃಷ್ಟಿಯಾಗಲು ಎಎಪಿಗೊಂದು ಪಾಠ ಕಲಿಸಬೇಕಾಗಿದ್ದ ಅಗತ್ಯ ಇತ್ತು ಎಂಬುದು ನಿಜ. ಎಎಪಿ ತನ್ನ ಸ್ಥಾನವನ್ನು ಬಿಟ್ಟುಕೊಟ್ಟರೆ, ದೆಹಲಿಯಲ್ಲಿರುವ ದೊಡ್ಡ ಪ್ರಮಾಣದ ಶೋಷಿತ ವರ್ಗವು ತನ್ನ ರಾಜಕೀಯ ಧ್ವನಿಗಾಗಿ ಪರ್ಯಾಯವನ್ನು ಹುಡುಕಾಡಬೇಕಾಗುತ್ತದೆ. ವಾಸ್ತವದಲ್ಲಿ, ಅರ್ಥಪೂರ್ಣವಾದ ಪರ್ಯಾಯವೊಂದು ಹುಟ್ಟಿಕೊಳ್ಳುತ್ತದೆ ಎಂಬುದಕ್ಕೆ ಯಾವುದೇ ಖಾತರಿ ಇಲ್ಲ. ಅಲ್ಲಿಯವರೆಗೆ, ಪ್ರಾಮಾಣಿಕ ರಾಜಕೀಯ ಮಾಡುತ್ತೇವೆ ಎಂದು ಯಾರಾದರೂ ಹೇಳಿದರೆ ಜನ ನಗುತ್ತಾರೆ. ಈ ಕಾರಣಕ್ಕಾಗಿಯೇ ನನಗೆ ಬೇಸರವಾಗಿದೆ ಮತ್ತು ನೀವು ಕೂಡ ಬೇಸರ ಮಾಡಿಕೊಳ್ಳಬೇಕಿದೆ.

ಚುರುಮುರಿ



ಫೇಸ್‌ಬುಕ್ ಸುದ್ದಿ!

• ಬಿ.ಎನ್.ಮಲ್ಲೇಶ್

‘ರೀ... ಪೇಪರ್ ಓದಿದ್ರಾ?’ ಮಡದಿ ಪ್ರಶ್ನೆ.

‘ಆಗ್ಲೇ ಓದಿದ್ನಲ್ಲ, ಯಾವುದೂ ಸೀರೆ, ಗೋಲ್ಡ್‌ದು ಸೇಲ್ ಇರ್ಲಿಲ್ಲ ಇವತ್ತು’ ಎಂದೆ.

‘ಹೌದೌದು, ಇದ್ರೂ ಏನ್ ಭಾರಿ ಕೊಡಿಸಿಬಿಡ್ತಿದ್ರಿ, ನಾ ಹೇಳಿದ್ದು ಅದಲ್ಲ’.

‘ಮತ್ತೇನು? ನಮ್ ಸಿದ್ರಾಮಣ್ಣಂದು ಮಂಡಿ ನೋವಿನ ಕತೆನಾ? ಅಥ್ವಾ ರಕ್ಷಣಾ ಸಚಿವ ರಾಜನಾಥ ಸಿಂಗ್ ಸಾಹೇಬ್ರು ಸಿದ್ರಾಮಣ್ಣರ ಕೈ ಹಿಡ್ಕಂಡು ಕಾಲೆಳೆದ ಸುದ್ದಿನಾ?’

‘ನಿಮ್ತಲೆ, ಅದೆಲ್ಲ ಅಲ್ಲ’.

‘ಓ... ಏರೋ ಶೋ ಸುದ್ದಿ ಅನ್ನು. ಚಿನ್ನ ಬೆಳ್ಳಿ ರೇಟು ಏರಿದ್ದಾ ಅಥ್ವಾ ರಾಜಕೀಯ ನಾಯಕರ ಭಿನ್ನಮತ ತಾರಕಕ್ಕೆ ಏರಿದ್ದಾ?’

‘ನೀವು ನನ್ನ ಬಿ.ಪಿ. ಏರಿಸ್ತಿದೀರ, ಅದ್ಯಾವುದೂ ಅಲ್ಲ’.

‘ಮತ್ತೆ? ಬಿಜೆಪಿ, ಕಾಂಗ್ರೆಸ್ ಮುಖಂಡರ ದೆಹಲಿ ದೌಡ್ ಸುದ್ದಿ?’

‘ಅಲ್ಲ, ನೀವೀಗ ಮೊಬೈಲ್‌ನಲ್ಲಿ ಏನ್ ನೋಡ್ತಾ ಇದೀರಿ?’

‘ಫೇಸ್‌ಬುಕ್ಕಲ್ಲಿ ಒಬ್ರು ಫ್ರೆಂಡ್ ರಿಕ್ವೆಸ್ಟ್ ಕಳಿಸಿದ್ರು, ಅವರ ಪ್ರೊಫೈಲ್ ನೋಡ್ತಾ ಇದೀನಿ’.

‘ಫ್ರೆಂಡ್ ರಿಕ್ವೆಸ್ಟ್ ಕಳ್ಸಿರೋದು ಮೇಲಾ ಫೀಮೇಲಾ?’

‘ಫೀಮೇಲು, ಯಾಕೆ?’

‘ಮ್ಯಾರೀಡಾ ಅನ್‌ಮ್ಯಾರೀಡಾ?’

‘ಸಿಂಗಲ್ ಅಂತಿದೆಯಪ್ಪ’.

‘ನಿಮ್ಗೆ ಫೇಸ್‌ಬುಕ್ಕಲ್ಲಿ ಎಷ್ಟು ಹುಡುಗೀರು ಫ್ರೆಂಡ್ಸ್ ಅದಾರೆ?’

‘ಅಲೆ ಇವ್ಳ, ಯಾಕೆ, ಏನಾಯ್ತೀಗ?’

‘ಆಗ್ಲೇ ಪೇಪರ್ ಓದಿದ್ರಾ ಅಂತ ಕೇಳಿದ್ನಲ್ಲ, ಇದ್ಕೇ. ಯಾರೋ ಒಬ್ಬ ಮಹಾನುಭಾವ ಯಾರಿಗೂ ಗೊತ್ತಾಗದಂಗೆ ಇಬ್ರನ್ನ ಮದುವೆ ಆಗಿದ್ನಂತೆ. ಆ ಹುಡುಗೀರಿಬ್ರೂ ಫೇಸ್‌ಬುಕ್ ಫ್ರೆಂಡ್ಸ್ ಆಗಿದ್ರಿಂದ ಇಬ್ರಿಗೂ ಒಬ್ಬನೇ ಗಂಡ ಅನ್ನೋದು ಗೊತ್ತಾಗಿ, ಅವನನ್ನ ಒದ್ದು ಒಳಗಾಕ್ಸಿದ್ರಂತೆ’.

‘ಅದ್ಸರಿ, ಅದನ್ನ ನಂಗ್ಯಾಕೆ ಹೇಳ್ತಿದೀಯ?’

‘ಮುಂದೆ ಅಕಸ್ಮಾತ್ ಮಳೆ ಬಂದ್ರೆ ಈಗ್ಲೇ ಪಂಚೆ ಎತ್ತಿ ಕಟ್ಕಂಡಿರ್ಲಿ ಅಂತ’.

ಇದ್ನ ಎಲ್ಲೋ ಕೇಳಿದೀನಲ್ಲ ಅನ್ಸಿದ್ರೂ ಕೇಳೋಕೆ ಧೈರ್ಯ ಸಾಲದೆ, ಯಾಕೋ ಟೈಮ್ ಸರಿ ಇಲ್ಲ ಅನ್ಕೊಂಡು ಮೊಬೈಲಿಟ್ಟು ಮೇಲಕ್ಕೆದ್ದೆ.

ದಿನದ ಟ್ವೀಟ್


ಬಸ್ ಪ್ರಯಾಣ ದರವೂ ತಗ್ಗಲಿ



‘ನಮ್ಮ ಮೆಟ್ರೊ’ಗಿಂತ ಬಸ್‌ಗಳು ಐದು ಪಟ್ಟು ಹೆಚ್ಚು ಪ್ರಯಾಣಿಕರನ್ನು ಕರೆದೊಯ್ಯುತ್ತವೆ. ಅಷ್ಟಾದರೂ ಬಸ್ ಪ್ರಯಾಣ ದರ ಏರಿಕೆಗೆ ವ್ಯಕ್ತವಾಗುವುದಕ್ಕಿಂತ ಹೆಚ್ಚು ಆಕ್ರೋಶ ಮೆಟ್ರೊ ಪ್ರಯಾಣ ದರ ಏರಿಕೆ ಬಗ್ಗೆ ಮಾತ್ರ ಏಕೆ?

ಶ್ರೀನಿವಾಸ್ ಆಲವಿಲ್ಲಿ, ಸಹ ಸಂಸ್ಥಾಪಕ, ಸಿಟಿಜನ್ಸ್ ಫಾರ್ ಬೆಂಗಳೂರು

ಕಿಡಿನುಡಿ



ಬೆಂಗಳೂರು ಮೆಟ್ರೊ ಪ್ರಯಾಣ ದರವು ಬಹುತೇಕ ಶೇ 100ರಷ್ಟು ಹೆಚ್ಚಿರುವ ಕಾರಣದಿಂದ, ಪ್ರಯಾಣಿಕರ ಸಂಖ್ಯೆ ಶೇ 35-40ರಷ್ಟು ಇಳಿಕೆಯಾಗಿರುವುದಾಗಿ ವರದಿಗಳು ತಿಳಿಸಿವೆ. ವಿಶೇಷವಾಗಿ ಬೆಂಗಳೂರಿನಂತಹ ನಗರಗಳಲ್ಲಿ ಸಾರ್ವಜನಿಕ ಸಾರಿಗೆಯು ಉಚಿತವಾಗಿ ಅಥವಾ ಅಗ್ಗವಾಗಿ ಇರಬೇಕು. ಈಗ ಮೆಟ್ರೊ ಪ್ರಯಾಣಕ್ಕೆ ವಿದಾಯ ಹೇಳಿರುವವರೆಲ್ಲಾ ಸಂಚಾರ ದಟ್ಟಣೆ, ಅಧಿಕ ಮಾಲಿನ್ಯ ಮತ್ತು ಕಡಿಮೆ ಉತ್ಪಾದಕತೆಗೆ ಕೊಡುಗೆ ನೀಡುತ್ತಿದ್ದಾರೆ ಮತ್ತು ಅದನ್ನೆಲ್ಲ ಅನುಭವಿಸುತ್ತಿದ್ದಾರೆ. ಬಿಎಂಆರ್‌ಸಿಎಲ್ ತನ್ನ ಹಿಂದಿನ ದರವನ್ನೇ ಉಳಿಸಿಕೊಳ್ಳಬೇಕು.

ವಿನಯ್ ಕುಮಾರ್ ಜಿ.ಬಿ., ಸ್ಥಾಪಕ, ಇನ್‌ಸೈಟ್ಸ್ ಐಎಎಸ್

25 ವರ್ಷಗಳ ಹಿಂದೆ

ಸೋಮವಾರ, 14-2-2000

• **ಸಂವಿಧಾನ ಪರಾಮರ್ಶೆಗೆ 11 ಸದಸ್ಯರ ಆಯೋಗ**

ನವದೆಹಲಿ, ಫೆ. 13- ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರ ನೇತೃತ್ವದಲ್ಲಿ ವಿವಾದಾತ್ಮಕ ಸಂವಿಧಾನ ಪರಾಮರ್ಶೆ ಆಯೋಗವನ್ನು ಕೇಂದ್ರ ಸರ್ಕಾರವು ಇಂದು ರಚಿಸಿ ಅಂತಿಮವಾಗಿ ಪ್ರಕಟಿಸಿದೆ.

ಆಯೋಗದಲ್ಲಿ ಇರುವ ಏಕೈಕ ರಾಜಕಾರಣಿ ಹಾಗೂ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಕಡು ವಿರೋಧಿ ಪಿ.ಎ. ಸಂಗ್ಮಾ ಅವರ ನೇಮಕಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಕಾಂಗ್ರೆಸ್ ವಕ್ತಾರ ಅನಿಲ್ ಶಾಸ್ತ್ರಿ ಅವರು, ‘ಅತ್ಯಂತ ಪೂರ್ವಗ್ರಹಪೀಡಿತ ವ್ಯಕ್ತಿಯಾದ ಸಂಗ್ಮಾ ಅವರಿಂದ ಪಕ್ಷಪಾತರಹಿತ ಅಭಿಪ್ರಾಯ ಸಾಧ್ಯವಿಲ್ಲ’ ಎಂದಿದ್ದಾರೆ.

• **ಜನರ ಬಳಿಗೆ ‘ಹೈಕೋರ್ಟ್ ಕಲಾಪ’**

ಬೆಂಗಳೂರು, ಫೆ. 13- ಹೈಕೋರ್ಟ್ ಕಲಾಪಗಳಲ್ಲಿ ಪಾಲ್ಗೊಳ್ಳಲು ಇನ್ನುಮುಂದೆ ದೂರದ ಸ್ಥಳಗಳಿಂದ ಪ್ರಯಾಣ ಮಾಡಿ ಬೆಂಗಳೂರಿಗೆ ಬರುವ ಅಗತ್ಯವಿಲ್ಲ. ರಾಜ್ಯದಲ್ಲಿ ಶೀಘ್ರದಲ್ಲೇ ಆರಂಭವಾಗಲಿರುವ ‘ಟೆಲಿ-ಕಾನ್ಫರೆನ್ಸಿಂಗ್’ ಸೌಲಭ್ಯದ ಮೂಲಕ ರಾಜ್ಯದ ಯಾವುದೇ ಜಿಲ್ಲೆಯಿಂದ ವಿವರ ಪಡೆಯಬಹುದಾಗಿದೆ.

ರಾಷ್ಟ್ರದಲ್ಲೇ ಪ್ರಥಮ ಬಾರಿಗೆ 16.5 ಕೋಟಿ ರೂಪಾಯಿಗಳ ‘ಟೆಲಿ-ಟ್ರಯಲ್’ ಯೋಜನೆಯನ್ನು ಶೀಘ್ರದಲ್ಲೇ ಆರಂಭಿಸಲಾಗುವುದು ಎಂದು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವೈ. ಭಾಸ್ಕರ್ ರಾವ್ ಇಂದು ತಿಳಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 14-2-1975

• **ನೂರು ನಿಮಿಷಗಳು: ಮಾತಿನ ಸಮರ**

ಬೆಂಗಳೂರು, ಫೆ. 13- ಬಿಜಾಪುರದಲ್ಲಿ ಮುಖ್ಯಮಂತ್ರಿ ಮಾಡಿದರೆಂದು ಹೇಳಲಾದ ಭಾಷಣಕ್ಕೆ ಸಂಬಂಧಿಸಿದಂತೆ ಇಂದು ವಿಧಾನ ಸಭೆಯಲ್ಲಿ ಸುಮಾರು ನೂರು ನಿಮಿಷಗಳ ಕಾಲ ತೀಕ್ಷ್ಣವಾದ ಸವಾಲು, ಅಷ್ಟೇ ಜವಾಬು ನಡೆಯಿತು.

ಆದರೆ ಮುಖ್ಯಮಂತ್ರಿ ಮತ್ತು ವಿರೋಧ ಪಕ್ಷದ ನಾಯಕರ ನಡುವಣ ಈ ವಾಗ್ಯುದ್ಧ ಅಷ್ಟು ಹೊತ್ತು ನಡೆದರೂ, ವಿಚಾರ ಮಾತ್ರ ತೀರ್ಮಾನವಾಗದೆ ಹಾಗೇ ಉಳಿಯಿತು.

ಬಿಜಾಪುರದಲ್ಲಿ ಮುಖ್ಯಮಂತ್ರಿಗಳು, ತಮ್ಮ ಬಗ್ಗೆ ಸ್ವಜನಪಕ್ಷಪಾತ, ಲಂಚ ಮೊದಲಾದ ಆಪಾದನೆ ಮಾಡಿದವರು ರುಜುವಾತು ಮಾಡಿದರೆ, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದರೆಂದು ವರದಿಯಾಗಿತ್ತು. ಅದನ್ನು ಸವಾಲಾಗಿ ಸ್ವೀಕರಿಸಿದ ವಿರೋಧ ಪಕ್ಷದ ನಾಯಕ ಎಚ್.ಡಿ. ದೇವೇಗೌಡ, ನ್ಯಾಯಾಂಗ ತನಿಖೆ ಏರ್ಪಡಿಸಿದರೆ ಬೇಕಾದಷ್ಟು ಮಾಹಿತಿ ತಮ್ಮಲ್ಲಿದ್ದು ಅದನ್ನು ರುಜುವಾತು ಮಾಡುವುದಾಗಿಯೂ, ಮಾಡದಿದ್ದರೆ ರಾಜಕೀಯದಿಂದ ನಿರ್ಗಮಿಸುವುದಾಗಿಯೂ ಪ್ರತಿಸವಾಲು ಹಾಕಿದ್ದರು. ಇದೇ ವಿಚಾರ ಕಳೆದ ಅಧಿವೇಶನದಲ್ಲಿ ಬಿಕ್ಕಟ್ಟಿನ ಪರಿಸ್ಥಿತಿ ಉಂಟುಮಾಡಿತ್ತು.

• **ಮುಖ್ಯಮಂತ್ರಿ ಅಳಿಯಂದಿರಿಗೆ ನಿವೇಶನ ನೀಡಿಕೆ; ವಾದ-ವಿವಾದ**

ಬೆಂಗಳೂರು, ಫೆ. 13- ಮುಖ್ಯಮಂತ್ರಿಗಳ ಅಳಿಯಂದಿರಿಗೆ ನಿವೇಶನ ನೀಡಿದ ವಿಚಾರದಲ್ಲಿ ಇಂದು ವಿಧಾನಸಭೆಯಲ್ಲಿ ವಾದ ವಿವಾದ ನಡೆಯಿತು.

ತಾವು ನಾಲ್ಕು ನಿವೇಶನಗಳನ್ನು ಪಡೆದಿರುವುದಾಗಿ ಟೀಕೆ ವ್ಯಕ್ತವಾಗಿರುವುದಕ್ಕೆ ಉತ್ತರ ನೀಡಿದ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು, ‘ನನಗೆ ಒಂದು ಸೈಟಿದೆ. ಅದು ನಾನು ಮಂತ್ರಿಯಾಗಿದ್ದಾಗ ಬಂದದ್ದಲ್ಲ. ಈ ನಿವೇಶನದ ವಿಷಯವೇ ಸುಪ್ರೀಂ ಕೋರ್ಟ್‌ನ ವರೆಗೆ ಹೋಯಿತು’ ಎಂದು ವಿವರಿಸಿದರು.

ಸಂಗತ

ಪರೀಕ್ಷೆ ಹಬ್ಬ: ಬನ್ನಿ ಸಂಭ್ರಮಿಸೋಣ

ಪರೀಕ್ಷೆಯನ್ನು ಎದುರಿಸಬಾರದು, ಹಬ್ಬದಂತೆ ಸಂಭ್ರಮಿಸಬೇಕು ಎಂಬ ಭಾವನೆ ವಿದ್ಯಾರ್ಥಿಗಳ ಸಾಧನೆಯಲ್ಲಿ ಗಮನಾರ್ಹವಾದ ಬದಲಾವಣೆ ತರಬಲ್ಲದು

• ಎಚ್.ಎಸ್.ನವೀನ ಕುಮಾರ್

ಇದು ಪರೀಕ್ಷಾ ಪರ್ವ. ಫೆಬ್ರುವರಿ, ಮಾರ್ಚ್ ತಿಂಗಳು ಬಂತೆಂದರೆ, ಎಸ್‌ಎಸ್‌ಎಲ್‌ಸಿ, ಪಿಯುಸಿಯಂತಹ ಪ್ರಮುಖ ಪರೀಕ್ಷೆಗಳನ್ನು ಬರೆಯಬೇಕಾದ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ, ಧೈರ್ಯದ ಮಾತುಗಳನ್ನು ಹೇಳುವ ಕಾರ್ಯಾಗಾರಗಳನ್ನು ಶಾಲೆಗಳಲ್ಲಿ ಆಯೋಜಿಸುವುದನ್ನು ಕಾಣುತ್ತೇವೆ. ಹಲವು ಕಡೆಗಳಲ್ಲಿ ಇದನ್ನು ಒಂದು ಸಂಪ್ರದಾಯದೋಪಾದಿಯಲ್ಲಿ ಮಾಡುತ್ತಾರೆ. ಇದರಿಂದ ವಿದ್ಯಾರ್ಥಿಗಳ ಆತಂಕ ಕಡಿಮೆಯಾಗುವುದರ ಬದಲು ಹೆಚ್ಚಾಗಿಬಿಡುತ್ತದೇನೋ ಎಂದು ಅನಿಸುವುದುಂಟು.

ಆದರೆ ಇಲ್ಲಿ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಬಿತ್ತಬೇಕಾದ ಅತ್ಯಂತ ಮುಖ್ಯವಾದ ಅಂಶವೆಂದರೆ, ‘ನೀವು ಪರೀಕ್ಷೆಯನ್ನು ಎದುರಿಸಬೇಡಿ, ಹಬ್ಬದಂತೆ ಸಂಭ್ರಮಿಸಿ’ ಎಂಬ ಸಕಾರಾತ್ಮಕ ವಿಚಾರ. ಈ ಒಂದು ಚಿಕ್ಕ ಮಾನಸಿಕ ಸಿದ್ಧತೆಯು ವಿದ್ಯಾರ್ಥಿಗಳ ಸಾಧನೆಯಲ್ಲಿ ಗಮನಾರ್ಹ ಬದಲಾವಣೆಯನ್ನು ಖಂಡಿತ ತರುತ್ತದೆ. ‘ಎದುರಿಸುವುದು’ ಎಂಬ ಶಬ್ದ ಸಾಧಾರಣವಾಗಿ ಜಗಳವಾಡುವುದು ಎನ್ನುವ ಅರ್ಥವನ್ನು ಕೊಡುತ್ತದೆ. ನಾವು ಯಾರ ಜೊತೆ ಜಗಳವಾಡುತ್ತೇವೆ? ನಮ್ಮ ಶತ್ರುಗಳ ಜೊತೆಗೆ ತಾನೆ? ಜಗಳವಾಡುವಾಗ ಸಾಧಾರಣವಾಗಿ, ಮನಸ್ಸು ಉದ್ವಿಗ್ನಗೊಳ್ಳುತ್ತದೆ, ಆತಂಕಕ್ಕೆ ಒಳಗಾಗುತ್ತದೆ. ಇಂತಹ ಸಂದರ್ಭದಲ್ಲಿ ಜಗಳಕ್ಕೆ ನಾವೆಷ್ಟೇ ತಯಾರಾಗಿದ್ದರೂ ಜಗಳದ ಭರದಲ್ಲಿ ನಾವು ಹೇಳಬೇಕೆಂದಿದ್ದ ಅಂಶಗಳನ್ನೇ ಮರೆತುಬಿಡುತ್ತೇವೆ!

ಅದೇ ಹಬ್ಬ, ಉತ್ಸವಗಳ ಸಂದರ್ಭದಲ್ಲಿ ಮನಸ್ಸು ಉಲ್ಲಸಿತವಾಗಿರುತ್ತದೆ, ಇನ್ನೊಬ್ಬರ ಜೊತೆಗೆ ಸಂತೋಷದಿಂದ ಮಾತನಾಡುವ ಮನಃಸ್ಥಿತಿ ನಮ್ಮಲ್ಲಿ ಇರುತ್ತದೆ. ಈ ಉದ್ವೇಗರಹಿತ ಸ್ಥಿತಿಯಲ್ಲಿ ನಮ್ಮ ನೆನಪಿನ ಶಕ್ತಿ ಕೂಡ ಖಂಡಿತ ಹೆಚ್ಚಾಗಿರುತ್ತದೆ. ಹೀಗಾಗಿ, ನಾವು ಪರೀಕ್ಷೆಯನ್ನು ಸಂಭ್ರಮಿಸಬೇಕೇ ವಿನಾ ಎದುರಿಸಬೇಕು ಎಂಬ ಆಲೋಚನೆಯನ್ನು ಬಿಟ್ಟುಬಿಡಬೇಕು.

‘ಪರೀಕ್ಷೆ ಎನ್ನುವುದು ನನ್ನ ಸಾಮರ್ಥ್ಯವನ್ನು ಅಳೆಯಲು ಇರುವ ಮೌಲ್ಯಮಾಪನ. ಅಂದರೆ, ನಾನು ಎಷ್ಟರಮಟ್ಟಿಗೆ ವಿಷಯವನ್ನು ಅರ್ಥ ಮಾಡಿಕೊಂಡಿದ್ದೇನೆ ಎನ್ನುವುದರ ಸೂಚ್ಯಂಕ. ಇದು ನನ್ನ ಸಾಮರ್ಥ್ಯದ ಪರೀಕ್ಷೆಯಾಗಬೇಕೇ ವಿನಾ ಅದನ್ನು ಬೇರೆಯವರ ಸಾಮರ್ಥ್ಯದೊಂದಿಗೆ ಹೋಲಿಕೆ ಮಾಡಿ ನೋಡುವುದಲ್ಲ. ನನ್ನ ಸಾಮರ್ಥ್ಯದ ಶೇಕಡ 100ರಷ್ಟು ಅಂಕವನ್ನು ಗಳಿಸುವ ಬಗ್ಗೆ ನಾನು ಆಲೋಚಿಸಬೇಕು. ಅದುಬಿಟ್ಟು ನಾನೂ ಅವರಂತೆ ನೂರಕ್ಕೆ ನೂರು ಅಂಕ ಪಡೆಯಲು ಸಾಧ್ಯವಾಗಲಿಲ್ಲವಲ್ಲ ಎಂದು ದುಃಖಿಸುವುದಲ್ಲ’ ಎಂಬುದನ್ನು ವಿದ್ಯಾರ್ಥಿಗಳು ನೆನಪಿಡಬೇಕು.

ಪರೀಕ್ಷೆ ನಮ್ಮನ್ನು ಮುಂದಿನ ತರಗತಿಗೆ ತೇರ್ಗಡೆಗೊಳಿಸುವ ವ್ಯವಸ್ಥೆ. ಅದುಬಿಟ್ಟು ನಮ್ಮ ಬದುಕನ್ನೇ ರೂಪಿಸುವ ವ್ಯವಸ್ಥೆಯಲ್ಲ. ಎಷ್ಟೋ ಬಾರಿ ಕಡಿಮೆ ಅಂಕ ಗಳಿಸಿದವರು ಬದುಕಿನ ಬೇರೆ ಬೇರೆ ಕ್ಷೇತ್ರಗಳಲ್ಲಿ ಅತ್ಯಂತ ಯಶಸ್ವಿ ವ್ಯಕ್ತಿಗಳಾಗಿರುವುದನ್ನು ನೋಡಿದ್ದೇವೆ. ಮೈಕ್ರೊಸಾಫ್ಟ್ ಸಂಸ್ಥೆಯ ಮಾಲೀಕರಾದ ಬಿಲ್ ಗೇಟ್ಸ್ ಒಂದೆಡೆ ‘ನಾನು ಎಲ್ಲ ಪರೀಕ್ಷೆಗಳಲ್ಲೂ ತೃತೀಯ ದರ್ಜೆಯಲ್ಲಿ ಪಾಸ್ ಆಗುತ್ತಿದ್ದೆ. ನನ್ನ ಸಹಪಾಠಿಗಳಲ್ಲಿ ಕೆಲವರು ಡಿಸ್ಟಿಂಕ್ಷನ್, ರ‍್ಯಾಂಕ್ ಪಡೆಯುತ್ತಿದ್ದರು. ನಾನೀಗ ಮೈಕ್ರೊಸಾಫ್ಟ್ ಕಂಪನಿಯ ಮಾಲೀಕ. ಹೆಚ್ಚಿನ ಅಂಕ ಗಳಿಸುತ್ತಿದ್ದ ನನ್ನ ಸಹಪಾಠಿಗಳು ಈಗ ನನ್ನ ಕಂಪನಿಯ ಉದ್ಯೋಗಿಗಳು’ ಎಂದಿದ್ದಾರೆ. ಅಂದ ಮಾತ್ರಕ್ಕೆ ಎಲ್ಲರೂ ತೃತೀಯ ದರ್ಜೆಯಲ್ಲಿ ಪಾಸಾಗಬೇಕು ಎಂದಲ್ಲ. ಇದರ ಅರ್ಥ ಪರೀಕ್ಷೆಯಲ್ಲಿ ಪಡೆದ ಅಂಕಗಳೇ ನಮ್ಮ ಬದುಕನ್ನು ನಿರ್ಧರಿಸುವುದಿಲ್ಲ ಎಂಬುದು.



ಸಾಮಾನ್ಯವಾಗಿ ಪರೀಕ್ಷೆಯ ಬಗ್ಗೆ ಭಯ ಹೊಂದಿರುವ ವಿದ್ಯಾರ್ಥಿಗಳ ಸಮಸ್ಯೆ ಎಂದರೆ ‘ಮರೆವು’. ಇದನ್ನು ಬಹಳಷ್ಟು ಜನ ದೈಹಿಕ ಕಾಯಿಲೆ ಎಂದು ತಿಳಿದಿದ್ದಾರೆ. ಆದರೆ ಚಿಕ್ಕ ವಯಸ್ಸಿನಲ್ಲಿ ಮರೆವಿನ ಕಾಯಿಲೆ ಖಂಡಿತವಾಗಿಯೂ ಯಾರನ್ನೂ ಕಾಡುವುದಿಲ್ಲ. ಮರೆವು ಎಂಬುದು ಪರೀಕ್ಷಾರ್ಥಿಗಳ ಮಾನಸಿಕ ಸಮಸ್ಯೆ. ಇದು ಉಂಟಾಗುವುದು ಏಕಾಗ್ರತೆಯ ಕೊರತೆಯಿಂದ. ಪರೀಕ್ಷಾ ಯಶಸ್ಸಿನ ಏಕೈಕ ಸೂತ್ರವೆಂದರೆ ಏಕಾಗ್ರತೆ. ಅಂತೆಯೇ ‘ಏಕಾಗ್ರತೆ ಎಂಬುದು ಯಶಸ್ಸಿನ ಏಕೈಕ ಕೀಲಿಕೈ’ ಎಂದಿದ್ದಾರೆ ಸ್ವಾಮಿ ವಿವೇಕಾನಂದ.

ಏಕಾಗ್ರತೆ ಶಬ್ದದ ಸಂಧಿ ಬಿಡಿಸಿದರೆ ಏಕ + ಅಗ್ರತೆ ಎಂದಾಗುತ್ತದೆ. ಇದರಲ್ಲಿನ ಅಗ್ರತೆ ಶಬ್ದದ ‘ಅ’ ಎನ್ನುವ ಅಕ್ಷರದಲ್ಲಿ ಏಕಾಗ್ರತೆಯನ್ನು ಹೆಚ್ಚಿಸುವ ಮೂರು ಅತ್ಯಂತ ಮುಖ್ಯ ಅಂಶಗಳು ಅಡಗಿವೆ. ಅವುಗಳೆಂದರೆ ಆಸಕ್ತಿ, ಅಭ್ಯಾಸ ಹಾಗೂ ಆತ್ಮವಿಶ್ವಾಸ. ಯಾವುದೇ ಪಾಠವನ್ನು ಆಸಕ್ತಿಯಿಂದ ಓದಿದರೆ, ಕೇಳಿದರೆ ಅದು ಖಂಡಿತವಾಗಿಯೂ ನಮ್ಮ ಮನಸ್ಸಿನಲ್ಲಿ ಉಳಿಯುತ್ತದೆ. ಹಾಗೆಯೇ ಅದನ್ನು ನಿರಂತರವಾಗಿ ಅಭ್ಯಾಸ ಮಾಡಿದಾಗ ನಮ್ಮಲ್ಲಿರುವ ಆತ್ಮವಿಶ್ವಾಸ ಜಾಗೃತಗೊಳ್ಳುತ್ತದೆ. ಈ ಮೂರು ಅಂಶಗಳು ನಮ್ಮಲ್ಲಿದ್ದಾಗ ಖಂಡಿತವಾಗಿಯೂ ನಾವು ಪರೀಕ್ಷೆಯನ್ನು ಸಂಭ್ರಮಿಸಬಹುದು ಹಾಗೂ ಉತ್ತಮ ಸಾಧನೆಯನ್ನು ಮಾಡಬಹುದು.

ಅಂದಹಾಗೆ ಜೀವನವೇ ದೊಡ್ಡ ಪರೀಕ್ಷೆ. ಬದುಕಿನ ಪರೀಕ್ಷೆಯಲ್ಲಿ ಪ್ರತಿನಿತ್ಯವೂ ಪಠ್ಯಕ್ರಮಕ್ಕೆ ಹೊರತಾದ ಪ್ರಶ್ನೆಗಳೇ ನಮಗೆ ಎದುರಾಗುತ್ತಿರುತ್ತವೆ. ಹೀಗಿರುವಾಗ, ಜೀವನವೆಂಬ ಪರೀಕ್ಷೆಗೆ ಸಿದ್ಧರಾಗಲು ಈ ಪರೀಕ್ಷೆಗಳೇ ಮೊದಲ ಮೆಟ್ಟಿಲು ಎಂದು ನಾವು ಅಂದುಕೊಂಡರೆ, ವಿದ್ಯಾಭ್ಯಾಸ ಹಾಗೂ ಪರೀಕ್ಷೆ ಇರುವುದು ನಮ್ಮ ಜ್ಞಾನಾರ್ಜನೆಗೆ ಎನ್ನುವ ವಿಚಾರವನ್ನು ಸರಿಯಾಗಿ ಮನದಟ್ಟು ಮಾಡಿಕೊಂಡರೆ, ಪರೀಕ್ಷೆ ಎಂದಿಗೂ ನಮ್ಮಲ್ಲಿ ಭಯ ಹುಟ್ಟಿಸುವುದಿಲ್ಲ. ಬದಲಿಗೆ ಅದು ಖಂಡಿತವಾಗಿಯೂ ಸಂಭ್ರಮಿಸಬಲ್ಲ ಹಬ್ಬವಾಗಿ ಮಾರ್ಪಾಡಾಗುತ್ತದೆ.

ಲೇಖಕ: ವ್ಯಕ್ತಿತ್ವ ವಿಕಸನ ತರಬೇತುದಾರ

ವಾಚಕರ ವಾಣಿ

ದೇಶಪ್ರೇಮಿಗಳ ಬಲಿದಾನದ ದಿನವೂ ಹೌದು

ಫೆಬ್ರುವರಿ 14, ಪ್ರೇಮಿಗಳ ದಿನ ಮಾತ್ರವಲ್ಲ ದೇಶಪ್ರೇಮಿಗಳ ಬಲಿದಾನದ ದಿನವೂ ಹೌದು. ಅಂದರೆ, ಇಡೀ ದೇಶವನ್ನೇ ಬೆಚ್ಚಿಬೀಳಿಸಿದ್ದ ಪುಲ್ವಾಮಾ ದುರಂತ ನಡೆದದ್ದು 2019ರ ಫೆಬ್ರುವರಿ 14ರಂದು. ಆ ದಿನ ಉಗ್ರಗಾಮಿಗಳು ನಮ್ಮ ಸೇನಾಪಡೆಯ ವಾಹನದ ಮೇಲೆ ದಾಳಿ ಮಾಡಿ, 40 ಸೈನಿಕರನ್ನು ಬಲಿ ತೆಗೆದುಕೊಂಡರು. ಭಾರತದ ಇತಿಹಾಸದಲ್ಲಿ ಇದು ಒಂದು ಕರಾಳ ದಿನ ಎಂದೇ ಹೇಳಬಹುದು.

ಜಮ್ಮು- ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಜಮ್ಮು- ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಅತ್ಯಂತ ಭೀಕರವಾದ ಈ ದಾಳಿ ನಡೆದಾಗ ಇಡೀ ದೇಶ ಶೋಕಸಾಗರದಲ್ಲಿ ಮುಳುಗಿತ್ತು. ಉಗ್ರಗಾಮಿಗಳು ನಡೆಸಿದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಹುತಾತ್ಮರಾದ ಆ ಯೋಧರನ್ನು ನೆನೆಯೋಣ, ನಮನ ಸಲ್ಲಿಸೋಣ.

ಭೂಮಿಕಾ ರಂಗಪ್ಪ ದಾಸರಡ್ಡಿ, ಬಿದರಿ

ಕುಕೃತ್ಯಕ್ಕೆ ಮಕ್ಕಳ ಬಳಕೆ: ಗಂಭೀರವಾಗಿ ಪರಿಗಣಿಸಬೇಕಿದೆ

ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ನಡೆಯುತ್ತಿರುವ ಅತ್ಯಾಚಾರ, ಕಲ್ಲುತೂರಾಟ, ಗುಂಪುಗಲಭೆಯಂತಹ ಪ್ರಕರಣಗಳಲ್ಲಿ 14- 15 ವರ್ಷದ ಮಕ್ಕಳು ಪಾಲ್ಗೊಳ್ಳುತ್ತಿರುವುದು ಕಂಡುಬರುತ್ತಿದೆ. ಇದು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾದ ಸಂಗತಿ. ಕೆಲವು ದೇಶವಿರೋಧಿ ಸಂಘಟನೆಗಳು ಕಾನೂನಿನ ಕುಣಿಕೆಯಿಂದ ಪಾರಾಗಲು ಮಕ್ಕಳಿಂದ ಇಂತಹ ಕೃತ್ಯಗಳನ್ನು ಮಾಡಿಸುತ್ತಿರಬಹುದಾದ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಸಮಾಜದ್ರೋಹಿ ಕೃತ್ಯಗಳಲ್ಲಿ ಪಾಲ್ಗೊಳ್ಳುವ ಈ ಮಕ್ಕಳಿಗೆ ತಮ್ಮ ಭವಿಷ್ಯದ ಬಗ್ಗೆ ಕಾಳಜಿ ಇರುವುದಿಲ್ಲ. ಆದರೆ ಇಂದಿನ ಮಕ್ಕಳು ತಂತ್ರಜ್ಞಾನದಲ್ಲಿ ಪರಿಣತರಾಗಿರುತ್ತಾರೆ ಮತ್ತು ಸಾಮಾಜಿಕ ವಿಷಯಗಳ ಬಗ್ಗೆ ಬಹಳಷ್ಟು ಅರಿವು ಹೊಂದಿರುತ್ತಾರೆ. ಭವಿಷ್ಯದ ಪ್ರಜೆಗಳಾದ ಈ ಮಕ್ಕಳು ನೈತಿಕ ಮೌಲ್ಯ ಹೊಂದುವಂತೆ ಮಾಡಿ, ಪ್ರಜ್ಞಾವಂತ ನಾಗರಿಕರನ್ನಾಗಿ ಅವರನ್ನು ರೂಪಿಸುವುದು ಸರ್ಕಾರ ಹಾಗೂ ಸಮಾಜದ ಪ್ರಧಾನ ಕರ್ತವ್ಯ.

ಸಮಾಜದ ಸ್ವಾಸ್ಥ್ಯ ಕದಡುವ ಕೃತ್ಯಗಳಲ್ಲಿ ಪಾಲ್ಗೊಳ್ಳುವವರ ವಯಸ್ಸನ್ನು ಪರಿಗಣಿಸದೆ, ಅವರು ಎಸಗುವ ಕೃತ್ಯಗಳನ್ನು ಆಧರಿಸಿ ಅವರ ವಿರುದ್ಧ ಕ್ರಮ ಜರುಗಿಸಬೇಕು. ಈ ಮೂಲಕ ಇಂತಹ ಕುಕೃತ್ಯಗಳಿಗೆ ಕಡಿವಾಣ ಹಾಕುವುದಕ್ಕೆ ಪೂರಕವಾಗಿ ಕಾನೂನಿಗೆ ತಿದ್ದುಪಡಿಯನ್ನು ಸರ್ಕಾರ ತರಬೇಕು.

ಜಿ.ನಾಗೇಂದ್ರ ಕಾವೂರು, ಸಂಡೂರು

ಉಚಿತ ಕೊಡುಗೆ: ನಡೆಯಲಿ ಆತ್ಮಾವಲೋಕನ

ಚುನಾವಣೆಗೆ ಮೊದಲು ರಾಜಕೀಯ ಪಕ್ಷಗಳು ಉಚಿತ ಕೊಡುಗೆಗಳನ್ನು ಘೋಷಿಸುವುದರಿಂದ ಪರಾವಲಂಬಿ ವರ್ಗವೊಂದನ್ನು ಸೃಷ್ಟಿಸುವ ಕೆಲಸ ಆಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿರುವುದು ಸರಿಯಾಗಿದೆ. ಇದರಿಂದ ದೇಶದ ಅಭಿವೃದ್ಧಿಗೆ ಅವರು ಕೊಡುಗೆ ನೀಡಲು ಸಾಧ್ಯವಾಗುತ್ತಿಲ್ಲ ಎಂಬ ಕೋರ್ಟ್ ಅಭಿಪ್ರಾಯ ಚಿಂತನಾರ್ಹ. ಮತದಾರರನ್ನು ಸೆಳೆಯಲು ರಾಜಕೀಯ ಪಕ್ಷಗಳು ಘೋಷಿಸುವ ಉಚಿತ ಕೊಡುಗೆಗಳಿಂದ ರಾಜ್ಯ ಹಾಗೂ ದೇಶದ ಆರ್ಥಿಕತೆ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ. ಈ ಹಿಂದೆ ಒಂದೆರಡು ರಾಜ್ಯಗಳಿಗೆ ಸೀಮಿತವಾಗಿದ್ದ ಉಚಿತ ಕೊಡುಗೆಗಳು ಈಗ ದೇಶದಾದ್ಯಂತ ಮತದಾರರನ್ನು ಸೆಳೆಯುವ ಅಸ್ತ್ರಗಳಂತೆ ಬಳಕೆಯಾಗುತ್ತಿರುವುದು ಬೇಸರದ ಸಂಗತಿ. ಯಾವುದೇ ಒಂದು ಪಕ್ಷ ಅಧಿಕಾರದ ಗದ್ದುಗೆ ಏರಲು ಸಾರ್ವಜನಿಕರ ಹಣವನ್ನು ಈ ರೀತಿ ಬೇಕಾಬಿಟ್ಟಿ ಪೋಲು ಮಾಡುವುದು ಎಷ್ಟು ಸರಿ ಎಂಬ ಬಗ್ಗೆ ಚರ್ಚೆ ಹಾಗೂ ಆತ್ಮಾವಲೋಕನ ನಡೆಯಬೇಕಾಗಿದೆ.

ಪ್ರಜ್ಞಾವಂತ ಮತದಾರರು ಈ ಕೊಡುಗೆಗಳಿಗೆ ಮಾರುಹೋಗಬಾರದು. ದುಡಿಯುವ ಕೈಗಳಿಗೆ ಕೆಲಸ ಕೊಟ್ಟು, ಭ್ರಷ್ಟಾಚಾರರಹಿತ, ಸದೃಢ ಸಮಾಜ ಕಟ್ಟುವ ವ್ಯಕ್ತಿ ಹಾಗೂ ಪಕ್ಷಗಳನ್ನು ಬೆಂಬಲಿಸಲು ಮುಂದಾಗಬೇಕು.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಮೌಢ್ಯಾಚರಣೆ: ದ್ವಂದ್ವ ನಿಲುವು ಸಲ್ಲದು

ಅವರವರ ಧಾರ್ಮಿಕ ಆಚರಣೆ ಮತ್ತು ನಂಬಿಕೆ ಅವರವರಿಗೆ ಸಂಬಂಧಿಸಿದ್ದು, ಅವುಗಳನ್ನು ನಿಂದಿಸುವುದು ಸರಿ ಅಲ್ಲ ಎನ್ನುತ್ತ ಪ್ರಜ್ಞಾವಂತರು ಸುಮ್ಮನಾದರೆ, ಜನರ ಮನಸ್ಸಿನಲ್ಲಿ ಬರೀ ಮೌಢ್ಯಗಳೇ ತುಂಬುತ್ತವೆ. ಜನ ವೈಜ್ಞಾನಿಕವಾಗಿ, ವೈಚಾರಿಕವಾಗಿ, ಮಾನವೀಯತೆಯಿಂದ ಯೋಚಿಸುವುದನ್ನೇ ಮರೆಯುತ್ತಾರೆ. ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಬಹುತೇಕರು ಈ ರೀತಿ ದ್ವಂದ್ವ ನಿಲುವುಗಳನ್ನು ಹೊಂದಿರುತ್ತಾರೆ. ಬುದ್ಧ, ಬಸವ, ಗಾಂಧಿ ಅವರಂತಹ ದಾರ್ಶನಿಕರು ಜಗತ್ತಿನ ಮೌಢ್ಯಗಳನ್ನು ಖಂಡಿಸುವುದಕ್ಕೆ ಅವರಲ್ಲಿದ್ದ ಜನಪರ, ಜೀವಪರ ನಿಲುವುಗಳು ಕಾರಣವಾಗಿದ್ದವು.

ಜನರಲ್ಲಿ ಮೌಢ್ಯವನ್ನು ಬಿತ್ತದೆ ಅರಿವನ್ನು ಉಂಟು ಮಾಡಬೇಕು, ವೈಜ್ಞಾನಿಕತೆಯನ್ನು ಬೆಳೆಸಬೇಕು ಎನ್ನುವುದು ಸಂವಿಧಾನದ ಆಶಯ. ವೈಜ್ಞಾನಿಕ ಮನೋವೃತ್ತಿಯನ್ನು ಬೆಳೆಸಿಕೊಳ್ಳುವುದು ಪ್ರತಿ ಭಾರತೀಯ ನಾಗರಿಕನ ಕರ್ತವ್ಯ ಎಂದು ಅದು ತಿಳಿಸುತ್ತದೆ. ಎಲ್ಲ ಜೀವಿಗಳನ್ನೂ ಪೊರೆವ ಏಕೈಕ ಧರ್ಮವೆಂದರೆ ಪ್ರಕೃತಿ ಧರ್ಮ. ಉಪನಿಷತ್, ವಚನಕಾರರು ಪ್ರೀತಿ, ಕರುಣೆಯಿಂದ ಬೋಧಿಸಿದ ನಿಸರ್ಗದ ಬಗೆಗಿನ ವಿವೇಕವನ್ನು ಯುವಕರು ಹಾಗೂ ಮಕ್ಕಳಲ್ಲಿ ಜಾಗೃತಗೊಳಿಸೋಣ.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

ಇನ್ನೊಂದು ವಿಮಾನ ನಿಲ್ದಾಣ: ಬಿಡದಿ ಸೂಕ್ತ

ಬೆಂಗಳೂರಿಗೆ ಇನ್ನೊಂದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಅಗತ್ಯವಿದೆ ಎಂಬ ಮಾತು ಕೇಳಿಬರುತ್ತಿದೆ. ದೇವನಹಳ್ಳಿ ಹತ್ತಿರವಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಈ ನಿಲ್ದಾಣಕ್ಕೆ ತೆರಳುವ ಮಾರ್ಗದಲ್ಲಿ ಜನದಟ್ಟಣೆ ಹಾಗೂ ವಾಹನ ದಟ್ಟಣೆಯನ್ನು ತಗ್ಗಿಸುವ ಉದ್ದೇಶದಿಂದ ಮತ್ತೊಂದು ವಿಮಾನ ನಿಲ್ದಾಣ ಸ್ಥಾಪನೆಗೆ ಒತ್ತಾಯ ಕೇಳಿಬಂದಿದೆ. ಈ ಹಿಂದೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸುವ ವಿಷಯ ಪ್ರಸ್ತಾಪವಾದಾಗ, ಬಿಡದಿ ಹತ್ತಿರ ಸ್ಥಳ ಪರಿಶೀಲನೆ ಮಾಡಲಾಗಿತ್ತು. ಕೊನೆಗೆ ದೇವನಹಳ್ಳಿ ಬಳಿ ನಿರ್ಮಿಸಲು ನಿರ್ಧರಿಸಲಾಯಿತು.

ಬಿಡದಿ ಬಳಿ ವಿಮಾನ ನಿಲ್ದಾಣವಾಗಿದ್ದರೆ ರಾಮನಗರ, ಮಂಡ್ಯ ಹಾಗೂ ಮೈಸೂರು ಭಾಗದ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗೆ ನೆರವಾಗುತ್ತಿತ್ತು ಎಂಬ ಅಭಿಪ್ರಾಯ ಆಗ ಕೇಳಿಬಂದಿತ್ತು. ಹೀಗಾಗಿ, ಈಗಲಾದರೂ ಇಂತಹದ್ದೊಂದು ಆಶಯಕ್ಕೆ ಪೂರಕವಾಗಿ, ವಿಮಾನ ನಿಲ್ದಾಣ ನಿರ್ಮಾಣಕ್ಕೆ ಬಿಡದಿಯನ್ನು ಪರಿಗಣಿಸಬೇಕಾಗಿದೆ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಅನಪೇಕ್ಷಿತ ಕರೆ, ಸಂದೇಶ 'ಟ್ರಾಯ್' ನಿಯಮ ಬಿಗಿ

ದೂರಸಂಪರ್ಕ ಜಾಲವನ್ನು ದುರ್ಬಳಕೆ ಮಾಡಿಕೊಂಡು, ಮೊಬೈಲ್ ಬಳಕೆದಾರರಿಗೆ ಕಿರಿಕಿರಿ ಉಂಟುಮಾಡುವ ಕರೆ, ಸಂದೇಶಗಳನ್ನು ನಿರ್ಬಂಧಿಸಲು 'ಟ್ರಾಯ್' ತನ್ನ ನಿಯಮಗಳನ್ನು ಇನ್ನಷ್ಟು ಬಿಗಿಗೊಳಿಸಿದೆ. 2018ರ ನಿಯಂತ್ರಣ ನಿಯಮಗಳಿಗೆ ತಿದ್ದುಪಡಿ ತಂದಿದೆ. ಗ್ರಾಹಕರಿಗೆ ದೂರು ನೀಡಲು ಅವಕಾಶ ನೀಡಲಾಗಿದ್ದು, ಅದನ್ನು ನಿಗದಿತ ಕಾಲಾವಧಿಯಲ್ಲಿ ಇತ್ಯರ್ಥ ಪಡಿಸುವುದು ಕಡ್ಡಾಯವಾಗಿದೆ. ನಿಯಮ ಮೀರಿದರೆ ದೂರಸಂಪರ್ಕ ಕಂಪನಿಗಳಿಗೆ ಶಿಕ್ಷೆ/ದಂಡ ವಿಧಿಸಲು ನಿಯಮಗಳಲ್ಲಿ ಅವಕಾಶ ನೀಡಲಾಗಿದೆ

ಪ್ರಜಾವಾಣಿ ವಾರ್ತೆ



ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಅನಪೇಕ್ಷಿತ ವಾಣಿಜ್ಯ ಕರೆಗಳನ್ನು (ಯುಸಿಸಿ) ನಿಯಂತ್ರಿಸಲು ಕೆಲವು ಕಠಿಣ ಕ್ರಮಗಳಿಗೆ ಮುಂದಾಗಿದೆ. ಟೆಲಿಕಾಂ ಕಮರ್ಷಿಯಲ್ ಕಮ್ಯುನಿಕೇಷನ್ಸ್ ಕಸ್ಟಮರ್ ಪ್ರಿಫರೆನ್ಸ್ ರೆಗ್ಯುಲೇಷನ್ಸ್ (ಟಿಸಿಸಿಸಿಪಿಆರ್)–2018ಕ್ಕೆ ಎರಡನೆಯ ತಿದ್ದುಪಡಿ ಮಾಡಿ ಹೊಸ ನಿಯಮಗಳನ್ನು ರೂಪಿಸಿದೆ. ಗೆಜೆಟ್ ಅಧಿಸೂಚನೆ ಹೊರಡಿಸಿದ ದಿನದಿಂದ ಎರಡು ಹಂತಗಳಲ್ಲಿ (30 ದಿನ ಮತ್ತು 60 ದಿನ) ಹೊಸ ನಿಯಮಗಳನ್ನು ಜಾರಿಗೊಳಿಸಲಾಗುವುದು ಎಂದು ಟ್ರಾಯ್ ತಿಳಿಸಿದೆ.

ಹೊಸ ನಿಯಮಗಳ ಪ್ರಕಾರ, ಇನ್ನು ಮುಂದೆ ಟೆಲಿ ಮಾರ್ಕೆಟಿಂಗ್ ಉದ್ದೇಶಕ್ಕೆ ಬಳಸಲಾಗುವ ಸಂಪರ್ಕಗಳಿಗೆ 10 ಅಂಕಿಗಳ ಮೊಬೈಲ್ ಸಂಖ್ಯೆ ಬಳಸುವುದನ್ನು ಟ್ರಾಯ್ ನಿರ್ಬಂಧಿಸಿದೆ. '140'ರಿಂದ ಆರಂಭವಾಗುವ ಮೊಬೈಲ್ ಸಂಖ್ಯೆಯ ಸರಣಿಯನ್ನು ಜಾಹೀರಾತುಗಳಿಗೆ ಬಳಸುವುದನ್ನು ಮುಂದುವರಿಸಲು ಅವಕಾಶ ನೀಡಲಾಗಿದೆ. ಜತೆಗೆ, ವ್ಯಾಪಾರ, ಉತ್ಪನ್ನ/ಸೇವೆಗಳ ಪ್ರಚಾರಕ್ಕೆ '1600'ರಿಂದ ಆರಂಭವಾಗುವ ಹೊಸ ಸಂಖ್ಯಾ ಸರಣಿಯನ್ನು ಬಳಸಬೇಕು ಎಂದು ಸೂಚಿಸಲಾಗಿದೆ.

ತಾವು ಯಾವ ರೀತಿಯ ಸಂವಹನ ನಡೆಸುತ್ತೇವೆ ಎನ್ನುವ ಬಗ್ಗೆ ನೋಂದಣಿ ಮಾಡಿಕೊಳ್ಳದ ನಂಬರ್‌ಗಳಿಂದ ಬರುವ ಕರೆ/ಸಂದೇಶಗಳನ್ನು (ಎಸ್‌ಎಂಎಸ್) ಕಳುಹಿಸುವವರ ವಿರುದ್ಧ ದೂರು ದಾಖಲಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ದೂರು ದಾಖಲಿಸುವ ಪ್ರಕ್ರಿಯೆಯನ್ನೂ ಸರಳೀಕರಿಸಲಾಗಿದೆ. ದೂರು ದಾಖಲಿಸಲು ಈಗ ಮೂರು ದಿನಗಳ ಕಾಲಾವಕಾಶ ಇದ್ದು, ಅದನ್ನು ಹೊಸ ನಿಯಮಗಳಲ್ಲಿ ಏಳು ದಿನಗಳಿಗೆ ವಿಸ್ತರಿಸಲಾಗಿದೆ.

ಯುಸಿಸಿ ಸಂಬಂಧದ ದೂರುಗಳ ಬಗ್ಗೆ ಕ್ರಮ ಕೈಗೊಳ್ಳಲು ದೂರಸಂಪರ್ಕ ಕಂಪನಿಗಳಿಗೆ ಇದುವರೆಗೆ 30 ದಿನಗಳವರೆಗೂ ಸಮಯ ಇತ್ತು. ಆ ಅವಧಿಯನ್ನು 5 ದಿನಕ್ಕೆ ಇಳಿಕೆ ಮಾಡಲಾಗಿದೆ. ಇದುವರೆಗೂ ನಿಯಮ ಉಲ್ಲಂಘಿಸುವ ಸಂಖ್ಯೆಗಳ ವಿರುದ್ಧ ಕ್ರಮ ಕೈಗೊಳ್ಳಲು 7 ದಿನದಲ್ಲಿ 10 ದೂರು ದಾಖಲಾಗಬೇಕಿತ್ತು. ಹೊಸ ನಿಯಮದಲ್ಲಿ 10 ದಿನದಲ್ಲಿ 5 ದೂರು ದಾಖಲಾದರೂ ದಂಡ ವಿಧಿಸಲು ಅವಕಾಶ ಇದೆ. ದೂರಸಂಪರ್ಕ ಕಂಪನಿಗಳು ದೂರುಗಳನ್ನು ದಾಖಲಿಸಲು ವ್ಯವಸ್ಥೆ ರೂಪಿಸಬೇಕು. ತಮ್ಮ ಮೊಬೈಲ್ ಆ್ಯಪ್ ಮತ್ತು ವೆಬ್‌ಸೈಟ್‌ಗಳಲ್ಲಿ ದೂರು ದಾಖಲಿಸಲು ಅವಕಾಶ ನೀಡಬೇಕು.

ತಪ್ಪಿತಸ್ಥರಿಗೆ ದಂಡ/ಶಿಕ್ಷೆ: ಮೊದಲ ಬಾರಿ ನಿಯಮ ಉಲ್ಲಂಘಿಸಿದರೆ, ಅವರ ಸಂಖ್ಯೆಗಳಿಂದ ಹೊರಹೋಗುವ ಕರೆಗಳನ್ನು 15 ದಿನ ಕಡಿತಗೊಳಿಸಲಾಗುತ್ತದೆ. ಉಲ್ಲಂಘನೆ ಮುಂದುವರಿದರೆ, ಅವರ ಸಂಪರ್ಕವನ್ನು ವರ್ಷದವರೆಗೆ ಸ್ಥಗಿತಗೊಳಿಸಲಾಗುತ್ತದೆ.

ನಿಯಮಗಳನ್ನು ಜಾರಿ ಮಾಡುವಲ್ಲಿ ವಿಫಲವಾದರೆ, ಭಾರಿ ದಂಡ ವಿಧಿಸುವುದಾಗಿಯೂ ಟ್ರಾಯ್, ಕಂಪನಿಗಳನ್ನು ಎಚ್ಚರಿಸಿದೆ.

ಯುಸಿಸಿಯ ಸಂಖ್ಯೆಗಳ ಬಗ್ಗೆ ತಪ್ಪು ಮಾಹಿತಿ ನೀಡಿದರೆ ಕಂಪನಿಗಳಿಗೆ ದಂಡ ವಿಧಿಸಲಾಗುತ್ತದೆ. ಮೊದಲ ಬಾರಿಯ ಉಲ್ಲಂಘನೆಗೆ ₹2 ಲಕ್ಷ ದಂಡ, ಎರಡನೆಯ ಬಾರಿಯ ಉಲ್ಲಂಘನೆಗೆ ₹5 ಲಕ್ಷ ದಂಡ ಮತ್ತು ನಂತರದ ಉಲ್ಲಂಘನೆಗೆ ₹10 ಲಕ್ಷ ದಂಡ ವಿಧಿಸಲು ನಿಯಮಗಳು ಅವಕಾಶ ಕಲ್ಪಿಸುತ್ತವೆ.

ದೂರಸಂಪರ್ಕ ಕಂಪನಿಗಳು ಗ್ರಾಹಕರಿಗೆ ಅನಪೇಕ್ಷಿತ ಕರೆ/ಸಂದೇಶ ನಿರಾಕರಿಸುವ ಆಯ್ಕೆ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ. ಗ್ರಾಹಕರು ಸಂದೇಶಗಳನ್ನು ಸುಲಭವಾಗಿ ವಿಂಗಡಿಸಲು/ಗ್ರಹಿಸಲು ಸಾಧ್ಯವಾಗುವಂತೆ ಕೆಲವು ನಿರ್ದಿಷ್ಟ ಪದಗಳನ್ನು ಬಳಸಬೇಕು; ವಸ್ತು/ಸೇವೆಯ ಬಳಕೆಗೆ ಉತ್ತೇಜನ ನೀಡುವ ಸಂದೇಶಗಳಿಗೆ 'ಪಿ' ಎಂದು, ಸೇವೆಗೆ 'ಎಸ್' ಎಂದು, ವ್ಯಾವಹಾರಿಕ ಸಂದೇಶಕ್ಕೆ 'ಟಿ' ಎಂದು, ಸರ್ಕಾರಿ ಸಂದೇಶಗಳಿಗೆ 'ಜಿ' ಎಂದು ಬಳಸಬೇಕು ಎಂದು ನಿಯಮಗಳು ಹೇಳುತ್ತವೆ.


ಗ್ರಾಹಕರು ಒಮ್ಮೆ ಯಾವುದೇ ಜಾಹೀರಾತು ಕರೆ/ಸಂದೇಶ ನಿರ್ಬಂಧಿಸಿದ್ದರೆ, ಮತ್ತೆ ಅವರ ಸಮ್ಮತಿ ಪಡೆಯಲು 90 ದಿನಗಳ ನಂತರವೇ ಪ್ರಯತ್ನಿಸಬೇಕು. ಅನಪೇಕ್ಷಿತ ಕರೆ ಮತ್ತು ಎಸ್‌ಎಂಎಸ್‌ಗಳ ಮಾದರಿಗಳನ್ನು ವಿಶ್ಲೇಷಣೆ ಮಾಡುವಂತೆಯೂ ಕಂಪನಿಗಳಿಗೆ ಟ್ರಾಯ್ ಸೂಚಿಸಿದೆ. ಅಸ್ವಾಭಾವಿಕವಾಗಿ ಕರೆಗಳಲ್ಲಿ ಹೆಚ್ಚಳ, ಕರೆಗಳ ಕಡಿಮೆ ಅವಧಿ, ಒಳಬರುವ ಹಾಗೂ ಹೊರಹೋಗುವ ಕರೆಗಳ ಅನುಪಾತದ ಆಧಾರದಲ್ಲಿ ಅನಪೇಕ್ಷಿತ ಕರೆಗಳನ್ನು ತಕ್ಷಣವೇ ಪತ್ತೆಹಚ್ಚಬಹುದಾಗಿದೆ ಎಂದೂ ಟ್ರಾಯ್ ಹೇಳಿದೆ.

ವಾಣಿಜ್ಯ ಕರೆಗಳನ್ನು ಮಾಡುವವರ (ನೋಂದಣಿರಹಿತ) ವಿರುದ್ಧ ದೂರು ದಾಖಲಿಸಲು ಗ್ರಾಹಕರು ಡಿಎನ್‌ಡಿ (ಡು ನಾಟ್ ಡಿಸ್ಟರ್ಬ್) ಅಡಿ ನೋಂದಣಿ ಮಾಡಿಕೊಳ್ಳುವ ಅಗತ್ಯ ಇಲ್ಲ. ಗ್ರಾಹಕರು ಬಯಸಿದರೆ, ತಮಗೆ ಸೇವೆ ಪೂರೈಸುವ ಕಂಪನಿಗಳ ಪ್ರಚಾರಕ್ಕೆ ಸಂಬಂಧಿಸಿದ ಎಸ್‌ಎಂಎಸ್‌ಗಳನ್ನು ಕೂಡ ನಿರ್ಬಂಧಿಸಲು ನಿಯಮಗಳಲ್ಲಿ ಅವಕಾಶವಿದೆ.

ಗ್ರಾಹಕರಿಗೆ ಸೇವೆ ನೀಡುವ ಪ್ರತಿಯೊಂದು ಕಂಪನಿಯೂ ನೋಂದಾಯಿತ ವಾಣಿಜ್ಯ ಸಂಪರ್ಕ ವ್ಯವಸ್ಥೆಗಳಿಗೆ ಮಾತ್ರವೇ ತನ್ನ ಜಾಲವನ್ನು ಬಳಸಿ ವಾಣಿಜ್ಯ ಕರೆ/ಸಂದೇಶ ಕಳುಹಿಸಲು ಅವಕಾಶ ನೀಡಬೇಕು. ನೋಂದಾಯಿತ ಅಲ್ಲದವರು ಕರೆ/ಸಂದೇಶ ಕಳುಹಿಸಿದರೆ, ಆ ಸಂಖ್ಯೆಯನ್ನು ಹೊಸ ನಿಯಮಗಳ ಅಡಿ ಅಮಾನತ್ತಿನಲ್ಲಿಡಬಹುದು ಇಲ್ಲವೇ ಸಂಪರ್ಕವನ್ನೇ ಕಡಿತ ಮಾಡಬಹುದು.

ಪಾರದರ್ಶಕವಾದ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾನೂನುಬದ್ಧವಾದ ವಾಣಿಜ್ಯ ಕರೆಗಳಿಗೆ ಅಡ್ಡಿ ಇರುವುದಿಲ್ಲ. ವಂಚಕ ಕರೆಗಳ ವಿರುದ್ಧ ದೂರು ನೀಡಲೂ ನಿಯಮಗಳಲ್ಲಿ ಅವಕಾಶ ನೀಡಲಾಗಿದೆ. ಆದರೆ, ಇಂಥ ಪ್ರಕರಣಗಳಲ್ಲಿ ಮೊಬೈಲ್ ಸಂಪರ್ಕವನ್ನು ಕಡಿತಗೊಳಿಸಲಷ್ಟೇ ಸಾಧ್ಯ. ಮತ್ತೊಂದು ಮುಖ್ಯ ಬದಲಾವಣೆ ಎಂದರೆ, ಸದ್ಯ ಅನಪೇಕ್ಷಿತ, ವಾಣಿಜ್ಯ ಕರೆಗಳನ್ನು ಮಾಡುವವರನ್ನು ಎರಡು ವರ್ಷ ನಿರ್ಬಂಧಿಸಲಾಗುತ್ತಿದೆ. ಆದರೆ, ಹೊಸ ನಿಯಮಗಳಲ್ಲಿ ಅದನ್ನು ಒಂದು ವರ್ಷಕ್ಕೆ ಸೀಮಿತಗೊಳಿಸಲಾಗಿದೆ.

ಆಧಾರ: ಪಿಟಿಐ, ಪಿಐಬಿ, ಟ್ರಾಯ್ ಹೊಸ ನಿಯಮಗಳು



ಬ್ಲಾಕ್ ಮಾಡುವುದು ಹೇಗೆ?

ಕಿರಿಕಿರಿ ಉಂಟುಮಾಡುವ ವಾಣಿಜ್ಯ ಕರೆಗಳು ಮತ್ತು ಸಂದೇಶಗಳನ್ನು ಬ್ಲಾಕ್ ಮಾಡುವುದಕ್ಕೆ ಅಥವಾ ಅವುಗಳನ್ನು ಬರದಂತೆ ಮಾಡುವ ಅವಕಾಶವನ್ನು ಹೊಸ ನಿಯಮಾವಳಿಯಲ್ಲಿ ನೀಡಲಾಗಿದೆ. ಗ್ರಾಹಕರು ಐವಿಆರ್‌ಎಸ್ ಕರೆ, ಸಂದೇಶ ಮತ್ತು ಯುಎಸ್‌ಎಸ್‌ಡಿ ಕೋಡ್ ಮೂಲಕ ಬ್ಲಾಕ್ ಮಾಡಬಹುದು.

ಐವಿಆರ್‌ಎಸ್ ಮೂಲಕ ಬ್ಲಾಕ್ ಮಾಡಲು ಮೊಬೈಲ್ ಬಳಕೆದಾರರು 1909 ಸಂಖ್ಯೆಯನ್ನು ಬಳಸಿ, ಯಾವ ವರ್ಗದ ವಾಣಿಜ್ಯ ಕರೆ/ಸಂದೇಶಗಳನ್ನು ಬ್ಲಾಕ್ ಮಾಡಬೇಕೋ, ಅದಕ್ಕೆ ನಿಗದಿಪಡಿಸಿದ ಸಂಖ್ಯೆಯನ್ನು (ಉದಾ: 1,2.. ಇತ್ಯಾದಿ) ಮೊಬೈಲ್ ಕೀಪ್ಯಾಡ್‌ನಲ್ಲಿ ಒತ್ತಬೇಕು. ಅದೇ ರೀತಿ ಸಂದೇಶ ಮೂಲಕ ಬ್ಲಾಕ್ ಮಾಡಲು ಬಳಕೆದಾರರು ನಿರ್ದಿಷ್ಟ ಪದಗಳನ್ನು ಟೈಪ್ ಮಾಡಿ 1909 ಸಂಖ್ಯೆಗೆ ಸಂದೇಶ ಕಳುಹಿಸಬೇಕು. ಇದೇ ಮಾದರಿಯಲ್ಲಿ ಯುಎಸ್‌ಎಸ್‌ಡಿ ಕೋಡ್ ಮೂಲಕ ಬ್ಲಾಕ್ ಮಾಡಲೂ ಪ್ರತಿ ವರ್ಗಕ್ಕೂ ನಿರ್ದಿಷ್ಟ ಯುಎಸ್‌ಎಸ್‌ಡಿ ಕೋಡ್ ಅನ್ನು ಟ್ರಾಯ್ ನಿಗದಿ ಪಡಿಸಿದೆ. ಅದರ ವಿವರವನ್ನು ಇಲ್ಲಿ ನೀಡಲಾಗಿದೆ.

ಬ್ಲಾಕ್ ಮಾಡಬೇಕಾದ ವಾಣಿಜ್ಯ ಕರೆ/ಸಂದೇಶಗಳ ವರ್ಗ	ಐವಿಆರ್‌ಎಸ್: 1909ಕ್ಕೆ ಕರೆ ಮಾಡಿ ಒತ್ತಬೇಕಾದ ಸಂಖ್ಯೆ	1909ಕ್ಕೆ ಸಂದೇಶ ಕಳುಹಿಸುವಾಗ ಟೈಪ್ ಮಾಡಬೇಕಾದ ಪದ	ಡಯಲ್ ಮಾಡಬೇಕಾದ ಯುಎಸ್‌ಎಸ್‌ಡಿ ಕೋಡ್
ವ್ಯಾವಹಾರಿಕ, ಸರ್ಕಾರದ ಸಂವಹನ ಹಾಗೂ ಅನುಮತಿ ನೀಡಿದ ಕರೆ/ಸಂದೇಶ ಬಿಟ್ಟು ಉಳಿದ ಎಲ್ಲ ವರ್ಗಗಳ ಕರೆ/ಸಂದೇಶ	0	FULLY BLOCK	*1909*0#
ವ್ಯಾವಹಾರಿಕ, ಸೇವೆಗೆ ಸಂಬಂಧಿಸಿದ ಮತ್ತು ಸರ್ಕಾರದ ಸಂವಹನ ಕರೆ/ಸಂದೇಶ ಬಿಟ್ಟು ಉಳಿದೆಲ್ಲ ವರ್ಗಗಳ ಕರೆ/ಸಂದೇಶ	50	BLOCK PROMO	*1909*50#
ಬ್ಯಾಂಕಿಂಗ್/ವಿಮೆ/ವಾಣಿಜ್ಯ ಉತ್ಪನ್ನಗಳು/ಕ್ರೆಡಿಟ್ ಕಾರ್ಡುಗಳು	1	BLOCK 1	*1909*1#
ರಿಯಲ್ ಎಸ್ಟೇಟ್	2	BLOCK 2	*1909*2#
ಶಿಕ್ಷಣ	3	BLOCK 3	*1909*3#
ಆರೋಗ್ಯ	4	BLOCK 4	*1909*4#
ಗ್ರಾಹಕ ಉತ್ಪನ್ನಗಳು ಮತ್ತು ವಾಹನಗಳು	5	BLOCK 5	*1909*5#
ಸಂವಹನ/ಪ್ರಸಾರ/ಮನೋರಂಜನೆ/ಐಟಿ	6	BLOCK 6	*1909*6#
ಪ್ರವಾಸೋದ್ಯಮ/ವಿಹಾರ	7	BLOCK 7	*1909*7#
ಆಹಾರ ಮತ್ತು ಪಾನೀಯ	8	BLOCK 8	*1909*8#

ಯಾವೆಲ್ಲ ಕರೆ/ ಸಂದೇಶಗಳಿಗೆ ಅವಕಾಶ?

- ಅನುಮತಿ ನೀಡಿದ ಮತ್ತು ಸರ್ಕಾರದಿಂದ ಬರುವ ಸಂದೇಶ/ಕರೆಗಳನ್ನು ಬಿಟ್ಟು ಉಳಿದೆಲ್ಲ ವಾಣಿಜ್ಯ ಕರೆ/ಸಂದೇಶಗಳನ್ನು ಮೊಬೈಲ್ ಬಳಕೆದಾರರು ಬ್ಲಾಕ್ ಮಾಡಬಹುದು
- ಸಾರ್ವಜನಿಕ ಹಿತಾಸಕ್ತಿಯ ಉದ್ದೇಶದಿಂದ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಕಳುಹಿಸುವ ಸಂದೇಶಗಳು/ಮಾಡುವ ಕರೆಗಳನ್ನು (ವಾಯ್ಸ್ ಕಾಲ್) ಬ್ಲಾಕ್ ಮಾಡುವುದಕ್ಕೆ ಅವಕಾಶ ಇಲ್ಲ. ಈ ಕರೆಗಳು/ಸಂದೇಶಗಳು ಬರಬೇಕೇ ಬೇಡವೇ ಎಂದು ಬಳಕೆದಾರರ ಅನುಮತಿ ಪಡೆಯುವ ಅಗತ್ಯವೂ ಇಲ್ಲ
- ಜಾಹೀರಾತು ಸಂದೇಶ ಮಾಡುವ ಸಂಸ್ಥೆ ಅಥವಾ ವ್ಯಕ್ತಿ, ಅವುಗಳು ಬರದಂತೆ ತಡೆಯುವ ಆಯ್ಕೆಯನ್ನೂ ಬಳಕೆದಾರರಿಗೆ ನೀಡಬೇಕು. ಒಂದು ವೇಳೆ ಈ ವ್ಯವಹಾರ ಅಥವಾ ಸೇವೆಗೆ ಸಂಬಂಧಿಸಿದ ವಿವರಗಳಿದ್ದರೂ ಅದನ್ನು ಜಾಹೀರಾತು/ವಾಣಿಜ್ಯ ಉದ್ದೇಶದ ಸಂದೇಶ ಎಂದೇ ಪರಿಗಣಿಸಲಾಗುತ್ತದೆ. ಬ್ಲಾಕ್ ಮಾಡದ ಬಳಕೆದಾರರಿಗೆ ಮಾತ್ರ ವಾಣಿಜ್ಯ/ಜಾಹೀರಾತು ಉದ್ದೇಶದ ಕರೆಗಳನ್ನು ಮಾಡಬಹುದು
- ಸೇವೆಗೆ ಸಂಬಂಧಿಸಿದ ಸಂದೇಶ ಅಥವಾ ಕರೆಗಳಿಗೆ ಅವಕಾಶ ಇದೆ. ಅಂದರೆ ಗ್ರಾಹಕರು ಖರೀದಿಸಿದ ಉತ್ಪನ್ನಗಳಿಗೆ ಸಂಬಂಧಿಸಿದ ಸೇವೆ, ಉತ್ಪನ್ನದ ಬಗ್ಗೆ, ವಾರಂಟಿ ಸೇರಿದಂತೆ ಇನ್ನಿತರ ಮಾಹಿತಿ ಒಳಗೊಂಡ ಸಂದೇಶ/ಕರೆಯನ್ನು ಸಂಬಂಧಿಸಿದವರು ತಮ್ಮ ಗ್ರಾಹಕರಿಗೆ ಮಾಡಬಹುದು. ಇದು ವಾಣಿಜ್ಯ/ಜಾಹೀರಾತು ಉದ್ದೇಶದ ಕರೆ/ಸಂದೇಶ ಆಗಿರುವುದಿಲ್ಲ
- ವ್ಯಾವಹಾರಿಕ ಸಂದೇಶ/ಕರೆ ಕಳುಹಿಸುವುದಕ್ಕೆ ಟ್ರಾಯ್ ಅನುವು ಮಾಡಿದೆ. ಅಂದರೆ, ತಮ್ಮ ಗ್ರಾಹಕರು ಮಾಡಿದ ವ್ಯವಹಾರಕ್ಕೆ ಸಂಬಂಧಿಸಿದಂತೆ ವ್ಯಕ್ತಿ ಅಥವಾ ಸಂಸ್ಥೆಗಳು ಗ್ರಾಹಕರಿಗೆ ಕರೆ/ಸಂದೇಶ ಕಳುಹಿಸಬಹುದು. ಉದಾಹರಣೆ ಬ್ಯಾಂಕ್‌ನಿಂದ ಬರುವ ಒಟಿಪಿ, ಖಾತೆಯಿಂದ ಹಣ ಕಡಿತದ ಬಗ್ಗೆ ಬರುವ ಸಂದೇಶ, ಇ–ಕಾಮರ್ಸ್ ಸಂಸ್ಥೆಗಳಿಂದ ಬರುವ ಸಂದೇಶ/ಕರೆ ಇತ್ಯಾದಿ

ಸಂಪರ್ಕ ಕಡಿತ

ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಟ್ರಾಯ್ ಮತ್ತು ದೂರಸಂಪರ್ಕ ಸಚಿವಾಲಯ ಒಟ್ಟಾಗಿ ಅನಪೇಕ್ಷಿತ ಕರೆಗಳನ್ನು ಮಾಡುವ, ವಂಚನೆ ಉದ್ದೇಶದ ಕರೆ ಮಾಡುವವರ ಒಂದು ಕೋಟಿ ಮೊಬೈಲ್ ಸಂಪರ್ಕಗಳನ್ನು ಕಡಿತಗೊಳಿಸಿದ್ದವು. ಸೈಬರ್‌ಅಪರಾಧ ಮತ್ತು ಹಣಕಾಸು ವಂಚನೆಯಲ್ಲಿ ತೊಡಗಿದ್ದವರ 2.27 ಲಕ್ಷ ಮೊಬೈಲ್ ಸಂಪರ್ಕಗಳನ್ನು ದೂರಸಂಪರ್ಕ ಸಚಿವಾಲಯ ಬ್ಲಾಕ್ ಮಾಡಿತ್ತು.

ಸಿನಿ ಬಿಟ್ಸ್

ಬೆಂಗಳೂರು ಚಿತ್ರೋತ್ಸವ 14 ಸಿನಿಮಾಗಳು ಸ್ಪರ್ಧೆಯಲ್ಲಿ

16ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಮಾರ್ಚ್ 1 ರಿಂದ 8ರವರೆಗೆ ನಡೆಯಲಿದ್ದು, ಕನ್ನಡ ಚಲನಚಿತ್ರ ಸ್ಪರ್ಧಾ ವಿಭಾಗದ ಅಂತಿಮ ಸುತ್ತಿಗೆ ಆಯ್ಕೆಯಾದ ಸಿನಿಮಾಗಳನ್ನು ಪ್ರಕಟಿಸಲಾಗಿದೆ.

ಏಷ್ಯನ್ ಸಿನಿಮಾ ಸ್ಪರ್ಧಾ ವಿಭಾಗದಲ್ಲಿ ಕೊಂಕಣಿ, ಕನ್ನಡ ಭಾಷೆಯಲ್ಲಿರುವ ಜಯನ್ ಚೆರಿಯನ್ ನಿರ್ದೇಶನದ 'ದಮ್ಮಮ್' ಸಿನಿಮಾವಿದೆ. ಕನ್ನಡ ಸಿನಿಮಾ ಸ್ಪರ್ಧಾ ವಿಭಾಗದಲ್ಲಿ ಒಟ್ಟು ಹದಿನಾಲ್ಕು ಸಿನಿಮಾಗಳು ಅಂತಿಮ ಸುತ್ತಿಗೆ ಆಯ್ಕೆಯಾಗಿವೆ. ಮನೋಹರ ಕೆ. ನಿರ್ದೇಶನದ 'ಮಿಕ್ಕ ಬಣ್ಣದ ಹಕ್ಕಿ', ಮಹಾದೇವ ಹಡಪದ ನಿರ್ದೇಶನದ 'ಪರಜ್ಯ', ಗುರುರಾಜ್ ಬಿ. ನಿರ್ದೇಶನದ 'ಕೆರೆಬೇಟೆ', ಸೆಬಾಸ್ಟಿನ್ ಡೇವಿಡ್ ನಿರ್ದೇಶನದ 'ಬೇಲಿ ಹೂ', ದಯಾನಂದ್ ಜಿ. ನಿರ್ದೇಶನದ 'ದಡ ಸೇರದ ದೋಣಿ', ನವೀನ್ ದೇಶಬೋಯಿನ ನಿರ್ದೇಶನದ 'ಅಂತಿಮ ಯಾತ್ರೆ', ಅನೀಶ್ ಪೂಜಾರಿ ನಿರ್ದೇಶನದ ತುಳು ಚಿತ್ರ 'ದಸ್ಕತ್', ಕೃಷ್ಣೇಗೌಡ ನಿರ್ದೇಶನದ 'ಲಚ್ಚಿ', ಪ್ರಕಾಶ್ ಕಾರ್ಯಪ್ಪ ಕೆ. ನಿರ್ದೇಶನದ ಕೊಡವ ಚಿತ್ರ 'ಕಾಂಗತ ಮೂಡ್', ಸಂತೋಷ್ ಮಾಡ ನಿರ್ದೇಶನದ ತುಳು ಚಿತ್ರ 'ಪಿದಾಯಿ', ನಾಗರಾಜ ಸೋಮಯಾಜಿ ನಿರ್ದೇಶನದ 'ಮರ್ಯಾದೆ ಪ್ರಶ್ನೆ', ಪುಷ್ಪರಾಜ್ ರೈ ಮಲಾರಬೀಡು ನಿರ್ದೇಶನದ 'ಆರಾಟ', ಸಾಗರ್ ಪುರಾಣಿಕ್ ನಿರ್ದೇಶನದ 'ವೆಂಕ್ಯ' ಹಾಗೂ ಅವಿನಾಶ್ ವಿಜಯ್‌ಕುಮಾರ್ ನಿರ್ದೇಶನದ 'ಮೈ ಹೀರೋ' ಸಿನಿಮಾಗಳು ಸ್ಪರ್ಧೆಯಲ್ಲಿವೆ.

ಚಿತ್ರಭಾರತಿ ವಿಭಾಗದಲ್ಲಿ ಸ್ಪರ್ಧೆಯಲ್ಲಿರುವ 14 ಸಿನಿಮಾಗಳ ಪೈಕಿ ಸೆಬಾಸ್ಟಿನ್ ಡೇವಿಡ್ ನಿರ್ದೇಶನದ 'ಬೇಲಿ ಹೂ' ಹಾಗೂ ಸಂತೋಷ್ ಮಾಡ ನಿರ್ದೇಶನದ ತುಳು ಚಿತ್ರ 'ಪಿದಾಯಿ' ಇವೆ.

ಸೆಟ್ಟೇರಿತು ವಿಜಯ್ 'ಸಿಟಿ ಲೈಟ್ಸ್'

ನಟ 'ದುನಿಯಾ' ವಿಜಯ್ ನಿರ್ದೇಶಿಸುತ್ತಿರುವ, ವಿನಯ್ ರಾಜ್‌ಕುಮಾರ್ ನಟನೆಯ 'ಸಿಟಿ ಲೈಟ್ಸ್' ಚಿತ್ರದ ಮುಹೂರ್ತ ಇತ್ತೀಚೆಗೆ ನಡೆಯಿತು.

ವಿಜಯ್ ಅವರು, ಈ ಚಿತ್ರದ ಮೂಲಕ ತಮ್ಮ ಕಿರಿಯ ಪುತ್ರಿ ಮೋನಿಷಾಳನ್ನು ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದಾರೆ. ಚಿತ್ರದಲ್ಲಿ ವಿನಯ್‌ಗೆ ಜೋಡಿಯಾಗಿ ಮೋನಿಷಾ ನಟಿಸಲಿದ್ದಾರೆ. ಅವರ ಹಿರಿಯ ಪುತ್ರಿ ಮೋನಿಕಾ, ವಿಜಯ್ ನಟನೆಯ 'ಲ್ಯಾಂಡ್ ಲಾರ್ಡ್' ಸಿನಿಮಾ ಮೂಲಕ ಈಗಾಗಲೇ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದಾರೆ. ನಟ ರಾಘವೇಂದ್ರ ರಾಜ್‌ಕುಮಾರ್ ದಂಪತಿ ಮಗ ವಿನಯ್ ಚಿತ್ರಕ್ಕೆ ಕ್ಲ್ಯಾಪ್ ಮಾಡುವ ಮೂಲಕ ಶುಭಕೋರಿದರು.



ಮೋನಿಷಾ, ವಿನಯ್ ರಾಜ್‌ಕುಮಾರ್

ಚಿತ್ರಕ್ಕೆ 'ಜವಾಬ್ ದಾರಿ...ದೀಪಗಳು' ಎಂಬ ಅಡಿಬರಹವಿದ್ದು, ಚಿತ್ರದ ಕಥೆ ಕುತೂಹಲ ಹುಟ್ಟಿಸಿದೆ. 'ಹಳ್ಳಿಯಿಂದ ಇಬ್ಬರು ಬೆಂಗಳೂರಿಗೆ ಬಂದು ಬಳಿಕ ಏನೆಲ್ಲ ಕಷ್ಟಗಳನ್ನು ಎದುರಿಸುತ್ತಾರೆ ಎನ್ನುವ ಕಥೆ ಚಿತ್ರದಲ್ಲಿದೆ' ಎಂದ ವಿನಯ್, 'ಪೆಪೆ' ಸಿನಿಮಾ ಪ್ರಚಾರದ ಸಂದರ್ಭದಲ್ಲಿ ವಿಜಯ್ ಅವರು ನನಗೆ ಈ ಸಿನಿಮಾದ ಒನ್‌ಲೈನ್ ಹೇಳಿದ್ದರು' ಎಂದರು.

'ಒಂದು ಹೊಸ ವಿಷಯವನ್ನು ಈ ಸಿನಿಮಾ ಮೂಲಕ ಹೇಳಲು ಹೊರಟಿದ್ದೇನೆ. ರಾಜ್‌ಕುಮಾರ್ ಅವರ ಸಿನಿಮಾಗಳನ್ನು ನೋಡಿಕೊಂಡು ಬೆಳೆದ ನನಗೆ ಇಂದು ಅವರ ಮೊಮ್ಮಗನಿಗೆ ಸಿನಿಮಾ ಮಾಡುವ ಅವಕಾಶ ಸಿಕ್ಕಿದೆ' ಎಂದರು 'ದುನಿಯಾ' ವಿಜಯ್. ಚಿತ್ರಕ್ಕೆ ಮಾಸ್ತಿ ಅವರ ಸಂಭಾಷಣೆ ಮತ್ತು ಚರಣ್ ರಾಜ್ ಸಂಗೀತವಿರಲಿದೆ. ಕಾಕ್ರೋಚ್ ಸುಧಿ ಕೂಡಾ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ವಿಜಯ್ ಹಾಗೂ ವಿಕ್ರಮ್ ಆರ್ಯ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಮನುಷ್ಯ ಪ್ರೇಮದಿಂದ ಬದುಕಬೇಕು

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

132

ದ್ವೇಷ ಹೋಗಲು ಏನು ಮಾಡಬೇಕು? ಹೃದಯದಲ್ಲಿ ದ್ವೇಷ ಇದ್ದರೆ ಅದು ಎಂದಿಗೂ ಸಮಾಧಾನ ಕೊಡೋದಿಲ್ಲ. ಬಿಪಿ, ಮಧುಮೇಹ, ಪ್ಯಾರಾಲಿಸಿಸ್ ಮುಂತಾದ ರೋಗಗಳ ತಾಯಿ ಬೇರು ಅಂದ್ರ ಅದು ದ್ವೇಷ. ಮನುಷ್ಯ ಆರಾಂ ಇರಬೇಕು ಅಂದ್ರ ಪ್ರೇಮಿಸಬೇಕು. ಎಲ್ಲರನ್ನೂ ಪ್ರೀತಿಸಬೇಕು. ಪ್ರೀತಿಸುವ ಹೃದಯ ಯಾವಾಗಲೂ ಆರೋಗ್ಯವಾಗಿರುತ್ತೈತಿ. ದ್ವೇಷಿಸುವ ಹೃದಯ ಅನಾರೋಗ್ಯದಿಂದ ಕೂಡಿರುತ್ತೈತಿ. ವೈದ್ಯರನ್ನು ಕೇಳಿ, ವಿಜ್ಞಾನಿಗಳನ್ನು ಕೇಳಿ, ಮನೋವಿಜ್ಞಾನಿಗಳನ್ನು ಕೇಳಿ. ಇದೇ ಮಾತು ಹೇಳ್ತಾರ. ದ್ವೇಷ ಹೋಗಬೇಕು ಅಂದ್ರ ಹೃದಯದಲ್ಲಿ ಪ್ರೇಮ ಬೆಳೆಸಿಕೊಳ್ಳಬೇಕು ಎಂದು ಪತಂಜಲಿ ಮಹರ್ಷಿಗಳು ಹೇಳ್ತಾರ. ಮನುಷ್ಯನಲ್ಲಿ ಪ್ರೇಮ ತುಂಬಿದರೆ ಜಗತ್ತು ಹತ್ತಿರ ಆಗತೈತಿ. ದ್ವೇಷ ತುಂಬಿದರೆ ಜಗತ್ತು ದೂರವಾಗತೈತಿ.

ಉದಾಹರಣೆಗೆ ಒಂದು ಹುಡುಗನಿಗೆ ಹುಡುಗಿ ಜೊತೆ ನಿಶ್ಚಿತಾರ್ಥ ಆಗತೈತಿ. ಹುಡುಗ 200–300 ಕಿಮೀ ದೂರದಲ್ಲಿದ್ದಾನೆ. ಆದರೂ ಹುಡುಗಿ ಜೊತೆ ಮೊಬೈಲ್‌ನಲ್ಲಿ ಮಾತಾಡ್ತಾನ. ದೂರದಲ್ಲಿದ್ದರೂ ಈ ಇಬ್ಬರು ಪ್ರೇಮಿಗಳು ಮೊಬೈಲ್‌ನಲ್ಲಿ ಮೆಲ್ಲಗೆ ಮಾತಾಡ್ತಾರ. ಆದರೆ ಜಗಳ ಆಡೋರನ್ನು ನೋಡಿ. ಹತ್ತಿರ ಇದ್ದರೂ ಒದರಾಡ್ತಾರ. ಅಂದ್ರ ಪ್ರೇಮ ಇದ್ರ ಮೆಲ್ಲನೆ ಮಾತಾಡ್ತಾರ, ದ್ವೇಷ ಇದ್ರ ಕೂಗಾಡ್ತಾರ. ಎಲ್ಲರೂ ಅದನ್ನೇ ಹೇಳಿದರು. ಸರ್ವಜ್ಞ ಹೇಳಿದ್ದೂ ಅದನ್ನೆ. 'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು' ಎಂದರು. ಎಲ್ಲರೂ ನನ್ನವರು ಅಂತ ತಿಳಕೋಬೇಕು. ತನ್ನಂಗ ತನ್ನ ಮಗಳಂಗೆ ನೋಡಿದರೆ ಕೈಲಾಸ ಅಂತಾರ.

ಈ ಭೂಮಿ ಯಾಕೆ ನರಕ ಆಗೈತಿ ಅಂದ್ರ ನಮಗೆ ಭೇದ ಬುದ್ಧಿ ಬಂದಿದೆ. ಮಹಾಭಾರತದಲ್ಲಿಯೂ ಧರ್ಮಕ್ಷೇತ್ರ ಕುರುಕ್ಷೇತ್ರ ಯಾಕಾತು? ಪಾಂಡವರ ಮಕ್ಕಳು ಬೇರೆ, ತನ್ನ ಮಕ್ಕಳು ಬೇರೆ ಎಂದುಕೊಂಡಿದ್ದಕ್ಕೆ. ಅಣ್ಣನ ಮಕ್ಕಳು ಬೇರೆ ತನ್ನ ಮಕ್ಕಳು ಬೇರೆ ಎಂದುಕೊಂಡಿದ್ದಕ್ಕೆ ಕುರುಕ್ಷೇತ್ರ ಆತು. ಅವರೂ ತನ್ನ ಮಕ್ಕಳಂಗೆ ಅಂತ ತಿಳಕೊಂಡಿದ್ದರೆ ಮಹಾಭಾರತನೇ ಆಗುತ್ತಿರಲಿಲ್ಲ. ಈಗಲೂ ಹಾಗೆಯೇ. ಸೊಸೆ ಬೇರೆ, ಮಗಳು ಬೇರೆ ಅಂದುಕೊಂಡಿದ್ದಕ್ಕೆ ಮನೆಗಳು ಒಡೆದಿವೆ. ಎರಡೂ ಒಂದೇ ಅಂದುಕೊಂಡಿದ್ದರೆ ಮನೆ ಯಾಕೆ ಒಡೆಯುತ್ತಿತ್ತು? ತನ್ನಂಗ ತನ್ನ ಮಗಳಂಗೆ ನೋಡಿದರೆ ಭಿನ್ನ ಇಲ್ಲ ಅಂತ ತಿಳಕೋಬೇಕು. ಪ್ರೇಮ ಇದ್ರ ಎಲ್ಲ ಮನೆಗಳೂ ಕೂಡುತ್ತವೆ. ದ್ವೇಷ ಇದ್ರ ಎಲ್ಲ ಮನೆಗಳೂ ಒಡೆಯುತ್ತವೆ.

ಮನುಷ್ಯ ಪ್ರೇಮದಿಂದ ಬದುಕಬೇಕು. ನಾವೂ ಪ್ರೇಮ ಮಾಡ್ತೀವಿ ಖರೆ, ಆದರೆ ನಾವು ನಿರೀಕ್ಷೆ ಇಟ್ಟುಕೊಂಡು ಪ್ರೇಮ ಮಾಡ್ತೇವೆ. ನಿಸರ್ಗದಲ್ಲಿ ಎಲ್ಲ ಪ್ರಾಣಿ ಪಕ್ಷಿಗಳು ಒಂದಾಗಿವೆ. ನಮ್ಮ ಕೊಟ್ಟಿಗೆಯಲ್ಲಿ ಎಮ್ಮೆ, ಆಕಳ ಎಲ್ಲಾ ಒಂದೇ ಕಡೆ ಕಟ್ಟುತ್ತೇವೆ. ಅವು ಎಂದಾದರೂ ಗುದ್ದಾಡಿ ಕೋರ್ಟ್ ಕಚೇರಿಗೆ ಹೋಗಿದ್ದಾವೇನು? ಒಂದೇ ಕೊಟ್ಟಿಗೆಯಲ್ಲಿ ಕಟ್ಟಿದ ಆಕಳ ಎಮ್ಮೆ ಬೇರೆಯಾಗಿಲ್ಲ, ಆದರೆ ಅವುಗಳನ್ನು ಕಟ್ಟಿದ ಅಣ್ಣ ತಮ್ಮಂದಿರು ಬೇರೆಯಾಗ್ತಾರ. ಮನುಷ್ಯ ಸಂಬಂಧಗಳೇ ಕೆಡುತ್ತವೆ. ನಿಸರ್ಗ ಸಂಬಂಧಗಳು ಕೆಡೋದಿಲ್ಲ. ಮನುಷ್ಯ ಸಂಬಂಧಗಳು ಯಾಕೆ ಕೆಡುತ್ತವೆ ಅಂದ್ರ ನಾವು ಅನುಕೂಲ ಇದ್ದರೆ ಮಾತ್ರ ಪ್ರೀತಿ ಮಾಡ್ತೀವಿ. ಅನುಕೂಲ ತಪ್ಪಿದರೆ ನಮ್ಮ ಪ್ರೀತಿಯೂ ಕೆಡತೈತಿ. ನಾವು ಪ್ರೀತಿ ಮಾಡುವ ಹಾಗೆ ನಟನೆ ಮಾಡ್ತೀವಿ ಅಷ್ಟೆ. ಮುಗ್ಧ ಪ್ರೀತಿ ಇರಬೇಕು. ನಿರೀಕ್ಷೆ ಇರಬಾರದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಫೆಬ್ರುವರಿ 14, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ದ್ವಿತೀಯ ಗಂ. 21-53 ನಕ್ಷತ್ರ: ಪೂರ್ವಫಲ್ಗುನಿ ಗಂ. 23-10 ಯೋಗ: ಅತಿಗಂಡ ಗಂ. 07-20 ಕರಣ: ತೈತಿಲ ಗಂ. 09-04, ಕುಂಭ ಮಾಸದ 02 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 3.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-57 ಸೂರ್ಯಾಸ್ತ : 06-32
ಮುಸ್ಲಿಂ ದಿನಾಂಕ : 15 ಶಬನ್
ಅದೃಷ್ಟ ಸಂಖ್ಯೆ : 3, 1

ಮೇಷ: ನಾಳೆಯ ಕೆಲಸಗಳ ಬಗ್ಗೆ ಇಂದಿನ ದಿನವೇ ತಯಾರಿ ನಡೆಸುವುದು ಒಳ್ಳೆಯದು. ಭಾರಿ ಕೆಲಸಕ್ಕೆ ಕೈಹಾಕಿದ ಪರಿಣಾಮದಿಂದಾಗಿ ಪ್ರತಿಭೆ ಬೆಳಕಿಗೆ ಬರಲಿದೆ.

ವೃಷಭ: ಉನ್ನತ ಅಧಿಕಾರಿಗಳ ದಿಢೀರ್ ಭೇಟಿಯಿಂದ ಕೆಲಸಗಳಲ್ಲಿ ಏರು-ಪೇರಾಗಬಹುದು. ಹರಿತವಾದ ಆಯುಧಗಳ ಬಳಕೆಯ ವಿಷಯದಲ್ಲಿ ಜಾಗ್ರತೆ ವಹಿಸಿ. ರಾಸಾಯನಿಕ ವಸ್ತುಗಳ ವ್ಯಾಪಾರದಲ್ಲಿ ಲಾಭ ಸಿಗಲಿದೆ.

ಮಿಥುನ: ಕೆಲಸದ ಒತ್ತಡ ಸಂಜೆಯ ವೇಳೆಗೆ ಕಡಿಮೆಯಾಗುವುದಲ್ಲದೆ ಲಾಭ ಸಿಗಲಿದೆ. ಸಕಾಲಿಕ ನೆರವು ನೀಡಿದ್ದಕ್ಕೆ ಆಪ್ತರು ಧನ್ಯವಾದ ತಿಳಿಸುವರು. ಹೂಡಿಕೆ ವಿಚಾರದಲ್ಲಿ ಮುಂಜಾಗ್ರತೆ ಇರಲಿ.

ಕರ್ಕಾಟಕ: ಅರ್ಹತೆ ಹೊಂದಿದವರಿಗೆ ಹೆಸರಾಂತ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಪನ ವೃತ್ತಿ ಸಿಗಲಿದೆ. ರಾಜಕೀಯ ವ್ಯಕ್ತಿಗಳಿಗೆ ಪ್ರಚಾರದ ನಿಮಿತ್ತ ದೂರ ಪ್ರಯಾಣವನ್ನು ಕೈಗೊಳ್ಳಬೇಕಾಗಲಿದೆ.

ಸಿಂಹ: ಮನುಷ್ಯ ಪ್ರಯತ್ನದ ಜತೆ ಮಹಾಗಣಪತಿಯ ಮೊರೆ ಹೋಗುವುದರಿಂದ ಕಾರ್ಯ ಸಿದ್ಧಿಯಾಗಲಿದೆ. ದಿನಚರಿಯಲ್ಲಿ ಬದಲಾವಣೆ ಇರುವುದಿಲ್ಲ. ಆರ್ಥಿಕತೆಗಿಂತ ಸಂಬಂಧ ಮುಖ್ಯವೆಂಬುವುದನ್ನು ಮರೆಯದಿರಿ.

ಕನ್ಯಾ: ಉದಾರ ಮನೋಭಾವದಿಂದ ಇತರರಿಗೆ ಸಹಾಯ ಮಾಡಿದ ಫಲ ಅನುಭವಕ್ಕೆ ಬರಲಿದೆ. ಮನೋಭಿಲಾಷೆಗಳನ್ನು ವ್ಯಕ್ತ ಪಡಿಸಲು ಹಿಂಜರಿಯಬೇಡಿ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಸಾಧನೆಗೆ ಸುಸಮಯ.

ತುಲಾ: ಸ್ವಂತ ಉದ್ಯಮದಲ್ಲಿರುವವರು ತಮ್ಮ ಕಾರ್ಯ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದರಲ್ಲಿ ಉತ್ಸಾಹ ತೋರಿ ಸಫಲತೆಯನ್ನು ಹೊಂದಬಹುದು. ಕೆಲಸದಲ್ಲಿ ಧನಾತ್ಮಕ ಬದಲಾವಣೆಯಿಂದಾಗಿ ಸಂತಸ.

ವೃಶ್ಚಿಕ: ಸಲಹೆ ಸೂಚನೆಗಳನ್ನು ಒಪ್ಪುವಂತೆ ವ್ಯಕ್ತಿಯ ಮನಃಪರಿವರ್ತನೆ ಮಾಡುವಲ್ಲಿ ಸಫಲರಾಗುತ್ತೀರಿ. ನೆರೆಹೊರೆಯವರ ವೈಷಮ್ಯಗಳು ಅನುಭವಕ್ಕೆ ಬರಲಿವೆ. ವಿವೇಕರಹಿತ ಕೆಲಸದಲ್ಲಿ ತೊಡಗಿಸಿಕೊಳ್ಳದಿರಿ.

ಧನು: ಕಾರ್ಖಾನೆಯೊಂದನ್ನು ಗುತ್ತಿಗೆ ಆಧಾರದಲ್ಲಿ ನಡೆಸುವ ಅವಕಾಶಗಳು ಸ್ನೇಹಿತನ ಸಹಾಯದಿಂದ ಸಿಗಬಹುದು. ಹಿಂದಿನಿಂದ ಬಾಕಿ ಇದ್ದ ಆಫೀಸಿನ ಕೆಲಸಗಳನ್ನು ಪೂರ್ತಿಗೊಳಿಸುವ ಪ್ರಯತ್ನ ಮಾಡಿ.

ಮಕರ: ಕುಟುಂಬ ನಿರ್ವಹಣೆಯಲ್ಲಿ ವಿಪರೀತ ಖರ್ಚು ಕಾಣಿಸಲಿದೆ. ಆದಾಯಕ್ಕೆ ಕೊರತೆ ಇರದು. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಯತ್ನಬಲ ಹೆಚ್ಚಿಸಿದರೆ ಉತ್ತಮ. ಕೆಲಸದಲ್ಲಿ ಬಡ್ತಿ ಅಥವಾ ಬದಲಾವಣೆ ಸಿಗಲಿದೆ.

ಕುಂಭ: ಚಿಲ್ಲರೆ ಮಾರಾಟಗಾರರಿಗೆ ಮತ್ತು ಹೂವು, ಹಣ್ಣು ಬೆಳೆಗಾರರಿಗೆ ಶುಭ ದಿನ. ಜೀವನವನ್ನು ತಿರುಗಿ ನೋಡಿದರೆ ಸಾಧನೆಗಳ ಬಗ್ಗೆ ಹೆಮ್ಮೆ ಎನಿಸುವುದು. ದಾಂಪತ್ಯದಲ್ಲಿ ಹೊಂದಾಣಿಕೆ ಅಗತ್ಯ ಅನಿಸಲಿದೆ.

ಮೀನ: ಪತ್ರಿಕಾ ವರದಿಗಾರರಿಗೆ ಜೀವನದಲ್ಲಿ ಸದಾಕಾಲ ನೆನಪಿರುವಂತೆ ಈ ದಿನ ಸಾಗಲಿದೆ. ವೃತ್ತಿಪರವಾಗಿದ್ದರೆ ಬಹುನಿರೀಕ್ಷಿತವಾದ ಬೆಳವಣಿಗೆಗಳು ಕಂಡುಬರುತ್ತವೆ.

ಪದಬಂಧ 5953


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಚಿನ್ನ ಬೆಳ್ಳಿ ಕೆಲಸ ಮಾಡುವವನು (4)
3.ಉತ್ತಮ ಕುಲದಲ್ಲಿ ಹುಟ್ಟಿದವನು (4)
6.ಮೊಸರು ಮಾರುವವಳ ನಾಮ (3)
8.ಹಾಡಿನ ಪುನರಾವರ್ತನೆಗೊಳ್ಳುವ ಸಾಲು (3)
10.ಕರುವಿಗೆ ತೋರಿದ ದಯೆ (3)
11.ಜಗತ್ತಿನ ಒಳಿತಿದು (5)
12.ಮಲಗುವಾಗ ಸೇವಕ ಕಾಣಿಸಿಹನಲ್ಲಾ! (3)
13.ಇನ್ನೂ ಕರು ಹಾಕದ ಹಸು (3)
15.ದೀಪವನ್ನು ಹಚ್ಚಿಡುವ ಮಣ್ಣಿನ ಬಟ್ಟಲು (3)
18.ತೋರಿಕೆಗೆ ಸ್ನೇಹಿತನಂತಿದ್ದು ಮರೆಯಲ್ಲಿ ಹಗೆ ಸಾಧಿಸುವವನು (4)
19.ಒಪ್ಪವಾಗಿ ಬಳಿಯುವುದು (4)

ಮೇಲಿಂದ ಕೆಳಕ್ಕೆ

1.ಸಾಮಾನ್ಯವಾಗಿ ದೊರಕದೆ ವಿರಳವಾಗಿರುವಂಥದ್ದು (4)
2.ಗಂಧವನ್ನು ತೇಯುವ ಕಲ್ಲು (2)
4.ಬಿಡುಗಡೆಯಾಗುವಾಗ ತೋರಿದ ದಾಕ್ಷಿಣ್ಯ! (2)
5.ಶಿರ ಮೇಲೆತ್ತಿರುವ ಧೂರ್ತ! (4)
7.ಎರಡುರಾಶಿಗಳು ಸಮವೆಂದು ದೃಢೀಕರಿಸುವುದು (5)
9.ವಿರುದ್ಧವಾದುದನ್ನು ಹೀಗೆನ್ನಿ (3)
10.ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
12.ಒಳ್ಳೆಯದನ್ನ ಗ್ರಹಿಸುವವನು (4)
14.ಚಾರನಿಗೆ ಕಾಣುತ್ತಿರುವ ಕಾಮನಬಿಲ್ಲು (4)
16.ಪಾಶವೀವೃತ್ತಿಯವನು ಹಿಡಿದಿರುವ ಹಗ್ಗ (2)
17.ಬೆನ್ನು ಬಾಗಿರುವಿಕೆ (2)



5952ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸುಲಭ 3.ಯಮಯಾತನೆ
5.ಕಲ್ಯಾಣಿ 6.ನಾಡಿ
7.ಸಮಾಧಿ 9.ಸರೋವರ
10.ಮಾವಟಿಗ 12.ಸರಕು
14.ವಿಘ್ನ 15.ಸದರ
16.ರಕ್ತಸಂಚಾರ 17.ನಸುಕು

ಮೇಲಿಂದ ಕೆಳಕ್ಕೆ:
2.ಭರಣಿ 3.ಯವೀನಮಾ
4.ನೆಗಡಿ 5.ಕಳಸ
7.ಸರಸ 8.ಧಿಮಾಕು
11.ಗಟಾರ 13.ರವಿವಾರ
14.ವಿಧುರ 15.ಸನ್ಮಾನ

ಸುಡೊಕು 6338

8		2		4		1		5
			8		9			
9		6			7	2		4
			1	6				
					3	8		6
				8				
	4			9	2			
1		5	7				4	
2		3		5	1	9		8


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6337 ಸುಡೊಕು

2	8	3	5	7	9	1	4	6
5	1	4	6	2	8	7	3	9
7	6	9	4	1	3	8	5	2
3	2	8	1	9	4	6	7	5
6	5	1	7	3	2	9	8	4
4	9	7	8	5	6	3	2	1
9	4	2	3	6	7	5	1	8
1	3	6	2	8	5	4	9	7
8	7	5	9	4	1	2	6	3


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,045
ಇಂದಿನ ಅಂತ್ಯ	23,031
▼	13
ದಿನದ ಕನಿಷ್ಠ	22,992

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹495
12 ಕ್ಕೆ	₹66
ಮೈಸೂರು	
100ಕ್ಕೆ	₹497

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹29000
ಎಸಿ	₹15680
ಆರ್‌ಪಿ	₹24500
ಆರ್‌ಸಿ	₹13260

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್–4	₹186.50
ಆರ್‌ಎಸ್‌ಎಸ್–5	₹181.50
ಗುಡ್ ಲಾಟ್	₹176.50

ಸದನ ಸಮಿತಿಯಿಂದ ಪರಾಮರ್ಶೆ: ಮಾರ್ಚ್ 10ರೊಳಗೆ ವರದಿ ಸಲ್ಲಿಸಲು ಸೂಚನೆ

ಆದಾಯ ತೆರಿಗೆ ಮಸೂದೆ ಮಂಡನೆ

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಆದಾಯ ತೆರಿಗೆ ಮಸೂದೆ–2025 ಅನ್ನು ಗುರುವಾರ ಮಂಡಿಸಿದರು. ಈ ಮಸೂದೆಯನ್ನು ಸದನ ಪರಿಶೀಲನಾ ಸಮಿತಿಗೆ ವಹಿಸಬೇಕು ಎಂದು ಸ್ಪೀಕರ್ ಓಂ ಬಿರ್ಲಾ ಅವರಲ್ಲಿ ಮನವಿ ಮಾಡಿದರು.

ಮಸೂದೆ ಮಂಡನೆಯ ಸಂದರ್ಭದಲ್ಲಿ ವಿರೋಧ ಪಕ್ಷಗಳ ಸದಸ್ಯರಿಂದ ವಿರೋಧ ವ್ಯಕ್ತವಾಯಿತು. ಆದರೆ, ಮಸೂದೆ ಮಂಡನೆಗೆ ಸದನವು ಧ್ವನಿಮತದ ಮೂಲಕ ಒಪ್ಪಿಗೆ ನೀಡಿತು. ಮಾರ್ಚ್ 10ರೊಳಗೆ ವರದಿ ಸಲ್ಲಿಸಲು ಸಮಿತಿಗೆ ಸೂಚಿಸಲಾಗಿದೆ.

ಹೊಸ ಮಸೂದೆಯಲ್ಲಿ ಕೆಲವು ಕಠಿಣ ಪಾರಿಭಾಷಿಕ ಪದಗಳ ಬದಲಿಗೆ ಸರಳವಾದ ಪದಗಳನ್ನು ಬಳಕೆ ಮಾಡಲಾಗಿದೆ.

ಈಗ ಇರುವ ಕಾನೂನಿನಲ್ಲಿನ ಸೆಕ್ಷನ್‌ಗಳಿಗಿಂತ ಹೆಚ್ಚು ಸೆಕ್ಷನ್‌ಗಳು ಹೊಸ ಮಸೂದೆಯಲ್ಲಿವೆ ಎಂದು ವಿರೋಧ ಪಕ್ಷದ ಕೆಲವು ಸದಸ್ಯರು ವ್ಯಕ್ತಪಡಿಸಿದ ಆಕ್ಷೇಪಕ್ಕೆ ಉತ್ತರಿಸಿದ ನಿರ್ಮಲಾ ಅವರು, ಮಸೂದೆಯಲ್ಲಿ 536 ಸೆಕ್ಷನ್‌ಗಳು ಮಾತ್ರ ಇರುತ್ತವೆ ಎಂದರು. 1961ರಲ್ಲಿ ಈ ಕಾನೂನಿನಲ್ಲಿ ಕೆಲವೇ ಸೆಕ್ಷನ್‌ಗಳಿದ್ದವು. ಆದರೆ, ನಂತರದಲ್ಲಿ ನಡೆದ ಬದಲಾವಣೆಗಳ ಕಾರಣದಿಂದಾಗಿ ಒಟ್ಟು ಸೆಕ್ಷನ್‌ಗಳ ಸಂಖ್ಯೆಯು 819ಕ್ಕೆ ಏರಿಕೆ ಆಗಿದೆ ಎಂದು ಹೇಳಿದರು.

ಅಧಿವೇಶನ ಮುಂದಕ್ಕೆ: ಅಧಿವೇಶನವನ್ನು ಮಾರ್ಚ್ 10ರವರೆಗೆ ಮುಂದೂಡಲಾಗಿದೆ. ಅಧಿವೇಶನದ ಮುಂದಿನ ಭಾಗವು ಮಾರ್ಚ್ 10ರಿಂದ ಏಪ್ರಿಲ್ 4ರವರೆಗೆ ನಡೆಯಲಿದೆ.

ಐ.ಟಿ ಅಧಿಕಾರಿಗಳಿಗೆ ಆನೆ ಬಲ

ತೆರಿಗೆ ವಂಚನೆ ಆರೋಪ ಕುರಿತಂತೆ ನಡೆಯುವ ದಾಳಿ ವೇಳೆ ಇ–ಮೇಲ್, ಷೇರು ವ್ಯವಹಾರ, ಸಾಮಾಜಿಕ ಜಾಲತಾಣದ ಖಾತೆ, ಆನ್‌ಲೈನ್ ಹೂಡಿಕೆ, ಬ್ಯಾಂಕ್ ಖಾತೆ, ಡಿಜಿಟಲ್ ಅಪ್ಲಿಕೇಷನ್ ಸೇರಿ ನೇರ ತೆರಿಗೆದಾರರಿಗೆ ಸಂಬಂಧಿಸಿದ ಎಲ್ಲಾ ಖಾತೆಗಳನ್ನು ನೇರವಾಗಿ ಪರಿಶೀಲನೆ ನಡೆಸುವ ಅಧಿಕಾರವನ್ನು ಹೊಸ ಮಸೂದೆಯಲ್ಲಿ ತೆರಿಗೆ ಅಧಿಕಾರಿಗಳಿಗೆ ನೀಡಲಾಗಿದೆ.

ಹಳೆಯ ಕಾಯ್ದೆಯಡಿ ಅಧಿಕಾರಿಗಳಿಗೆ ಇದಕ್ಕೆ ಅವಕಾಶ ಇರಲಿಲ್ಲ. ಲ್ಯಾಪ್‌ಟಾಪ್, ಹಾರ್ಡ್‌ಡಿಸ್ಕ್, ಇ–ಮೇಲ್ ಬಗ್ಗೆ ಮಾಹಿತಿ ನೀಡುವಂತೆ ಅಧಿಕಾರಿಗಳು ತೆರಿಗೆದಾರರಿಗೆ ಒತ್ತಾಯ ಮಾಡಬೇಕಿತ್ತು. ಮಸೂದೆಯಲ್ಲಿ ಎಲೆಕ್ಟ್ರಾನಿಕ್ ದಾಖಲೆಗಳ ಕೂಲಂಕಷ ಪರಿಶೀಲನೆ ಅವಕಾಶ ಕಲ್ಪಿಸಲಾಗಿದೆ.

2.6 ಲಕ್ಷ ಪದಗಳು

ಆದಾಯ ತೆರಿಗೆ ದಾವೆಗಳ ಸಂಖ್ಯೆ ತಗ್ಗಿಸುವುದೇ ಹೊಸ ಮಸೂದೆಯ ಉದ್ದೇಶವಾಗಿದೆ. ಹೊಸ ಆರ್ಥಿಕ ವಿವರಣೆ ಸಹಿತ ಜನಸಾಮಾನ್ಯರಿಗೆ ತೆರಿಗೆ ಬಗ್ಗೆ ಸರಳವಾಗಿ ವಿವರಿಸಲಾಗಿದೆ. 1961ರ ಆದಾಯ ತೆರಿಗೆ ಕಾಯ್ದೆಯಲ್ಲಿ 5.12 ಲಕ್ಷ ಪದಗಳಿವೆ. ಹೊಸ ಮಸೂದೆಯಲ್ಲಿ ಇವುಗಳನ್ನು 2.6 ಲಕ್ಷಕ್ಕೆ ಇಳಿಸಲಾಗಿದೆ.



ಕೋಷ್ಟಕ ರೂಪ

ಟಿಡಿಎಸ್/ಟಿಸಿಎಸ್ ರಿಯಾಯಿತಿಗೆ ಸಂಬಂಧಿಸಿದಂತೆ ಹಾಲಿ ಇರುವ ನಿಬಂಧನೆಗಳನ್ನು ಸರಳವಾಗಿ ಕೋಷ್ಟಕ ರೂಪದಲ್ಲಿ ವಿವರಿಸಲಾಗಿದೆ. ಲಾಭದ ಉದ್ದೇಶ 'ಇಲ್ಲದ ಸಂಸ್ಥೆಗಳ ಬಗೆಗಿನ ಅಧ್ಯಾಯವನ್ನು ಸರಳ ಭಾಷೆಯಲ್ಲಿ ವಿವರಿಸಲಾಗಿದೆ. ಈ ಅಧ್ಯಾಯದ ಪದಪ್ರಯೋಗದಲ್ಲಿ 34,547 ಪದಗಳು ಕಡಿಮೆಯಾಗಿವೆ.

ಒಟ್ಟು 23 ಅಧ್ಯಾಯ

ಹಳೆ ಕಾಯ್ದೆಯಲ್ಲಿ ಒಟ್ಟು 47 ಅಧ್ಯಾಯಗಳಿವೆ. ಇವುಗಳನ್ನು 23ಕ್ಕೆ ಇಳಿಸಲಾಗಿದೆ. ಟೇಬಲ್‌ಗಳ ಸಂಖ್ಯೆಯನ್ನು 18ರಿಂದ 57ಕ್ಕೆ ಹೆಚ್ಚಿಸಲಾಗಿದೆ. 1,200 ನಿಬಂಧನೆಗಳು ಮತ್ತು 900 ವಿವರಣೆಗಳನ್ನು ಕೈಬಿಡಲಾಗಿದೆ. ಮಸೂದೆಯಲ್ಲಿ ಗಣನೀಯ ಬದಲಾವಣೆ ಮಾಡಲಾಗಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಹೊಸ ನೀತಿ ಇಲ್ಲ

ಹೊಸ ಮಸೂದೆಯಲ್ಲಿ ಸರ್ಕಾರದ ನೀತಿ ಅಥವಾ ತೆರಿಗೆ ದರಕ್ಕೆ ಸಂಬಂಧಿಸಿದಂತೆ ಯಾವುದೇ ಬದಲಾವಣೆ ಮಾಡಿಲ್ಲ. ವಿದೇಶಿ ತೆರಿಗೆಗೆ ಸಂಬಂಧಿಸಿದ ಸೆಕ್ಷನ್‌ಗಳ ಬಗ್ಗೆ ಬಹು ವ್ಯಾಖ್ಯಾನ ಗಳಿದ್ದವು. ಇವುಗಳನ್ನು ಕಡಿಮೆ ಮಾಡಲಾಗಿದೆ.


ನಿರ್ಮಲಾ ಸೀತಾರಾಮನ್

4 ಸಾವಿರ ತಿದ್ದುಪಡಿ

ಹಳೆಯ ಕಾಯ್ದೆಯು 1962ರ ಏಪ್ರಿಲ್ 1ರಿಂದ ದೇಶದಲ್ಲಿ ಅಧಿಕೃತವಾಗಿ ಜಾರಿಗೆ ಬಂದಿತು. 4 ಸಾವಿರಕ್ಕೂ ಹೆಚ್ಚು ತಿದ್ದುಪಡಿ ಮಾಡಲಾಗಿದೆ. ಹೊಸ ಮಸೂದೆ ಬಗ್ಗೆ ವಿವಿಧ ಸಂಘ ಸಂಸ್ಥೆಗಳು, ಕಂಪನಿಗಳು ಮತ್ತು ನಾಗರಿಕರಿಂದ ಅಭಿಪ್ರಾಯ ಆಹ್ವಾನಿಸಲಾಗಿತ್ತು. ಆನ್‌ಲೈನ್ ಮೂಲಕ ಒಟ್ಟು 20,976 ಸಲಹೆ ಸ್ವೀಕರಿಸಲಾಗಿದೆ.

ಸಿಡ್ಬಿಗೆ ₹870 ಕೋಟಿ ಆರ್ಥಿಕ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್ (ಸಿಡ್ಬಿ) ಹಾಗೂ ಫ್ರಾನ್ಸ್‌ನ ಏಜೆನ್ಸಿ ಫ್ರಾಂಚೈಸ್ ಡಿ ಡೆವಲಪ್‌ಮೆಂಟ್ (ಎಎಫ್‌ಡಿ) ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ವಲಯದಲ್ಲಿ (ಎಂಎಸ್‌ಎಂಇ) ಹಸಿರು ಹೂಡಿಕೆಗೆ ಉತ್ತೇಜಿಸಲು ₹870 ಕೋಟಿ ಸಾಲ ಒಪ್ಪಂದಕ್ಕೆ ಸಹಿ ಹಾಕಿವೆ.

ಈ ಒಪ್ಪಂದದ ಅಡಿ ಸಿಡ್ಬಿಗೆ ಸಾಲ ಸೌಲಭ್ಯ ಸಿಗಲಿದೆ. ಇದರಿಂದ ಇಂಧನ, ತಂತ್ರಜ್ಞಾನ, ನವೀಕರಿಸಬಹುದಾದ ಇಂಧನ ಹಾಗೂ ಹವಾಮಾನ ಸ್ನೇಹಿ ವ್ಯವಹಾರ ಮಾದರಿ ರೂಪಿಸಲು ಅನುಕೂಲವಾಗಲಿದೆ. ಅಲ್ಲದೆ, ಎಂಎಸ್‌ಎಂಇ ವಲಯದಲ್ಲಿ ಹೂಡಿಕೆಗೆ ಉತ್ತೇಜನ ಸಿಗಲಿದೆ ಎಂದು ಹೇಳಿಕೆಯಲ್ಲಿ ತಿಳಿಸಿವೆ.

'ಈ ಸಹಯೋಗವು ಇಂಗಾಲದ ಹೊರಸೂಸುವಿಕೆಯಲ್ಲಿ ಶೂನ್ಯತೆ ಸಾಧಿಸುವ ಭಾರತದ ಗುರಿಯ ಸಾಕಾರಕ್ಕೆ ನೆರವಾಗಲಿದೆ' ಎಂದು ಎಎಫ್‌ಡಿಯ ಭಾರತದ ನಿರ್ದೇಶಕ ಲೀಸ್ ಬ್ರುಯಿಲ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಉದ್ಯೋಗ ಸೃಷ್ಟಿಗೆ ಕೈಗಾರಿಕಾ ನೀತಿ ಮಾರ್ಗಸೂಚಿ'


ಎಂ.ಜಿ. ರಾಜಗೋಪಾಲ್

ಬೆಂಗಳೂರು: ರಾಜ್ಯದಲ್ಲಿ ಕೈಗಾರಿಕಾ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಗೆ ಸರ್ಕಾರ ಪ್ರಕಟಿಸಿರುವ ಹೊಸ ಕೈಗಾರಿಕಾ ನೀತಿ 2025-30 ಮಾರ್ಗಸೂಚಿಯಾಗಿದೆ ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ ಎಂ.ಜಿ. ರಾಜಗೋಪಾಲ್ ಹೇಳಿದ್ದಾರೆ.

ಮುಂದಿನ ಐದು ವರ್ಷಗಳಲ್ಲಿ 20 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿ ಹೊಂದಲಾಗಿದೆ. ₹7.50 ಲಕ್ಷ ಕೋಟಿ ಹೂಡಿಕೆ ಆಕರ್ಷಿಸಲು ನಿರ್ಧರಿಸಲಾಗಿದೆ. ಈ ನೀತಿಯು ಕರ್ನಾಟಕದ ಸುಸ್ಥಿರ ಮತ್ತು ಸಮಗ್ರ ಅಭಿವೃದ್ಧಿಗೆ ಭದ್ರ ಅಡಿಪಾಯ ಹಾಕಲಿದೆ ಎಂದು ಹೇಳಿದ್ದಾರೆ.

ಚಿನ್ನ, ಬೆಳ್ಳಿ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹140 ಹೆಚ್ಚಳವಾಗಿ, ₹88,100 ಆಗಿದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಹೆಚ್ಚಳವಾಗಿ ₹87,700 ಆಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹800 ಹೆಚ್ಚಳವಾಗಿ, ₹98 ಸಾವಿರ ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'92 ಕೋಟಿ ಜನರಿಗೆ ಸಾಮಾಜಿಕ ಭದ್ರತೆ'

ನವದೆಹಲಿ (ಪಿಟಿಐ): 'ದೇಶದ 92 ಕೋಟಿ ಜನರಿಗೆ ಸಾಮಾಜಿಕ ಭದ್ರತೆ ಯೋಜನೆಯಡಿ ಸೌಲಭ್ಯ ಕಲ್ಪಿಸಲಾಗಿದೆ' ಎಂದು ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ಅವರು, ಗುರುವಾರ ರಾಜ್ಯಸಭೆಗೆ ತಿಳಿಸಿದ್ದಾರೆ.

ದಶಕದ ಹಿಂದೆ ಶೇ 18ರಷ್ಟು ಜನರಿಗಷ್ಟೇ ಸಾಮಾಜಿಕ ಭದ್ರತೆ ಇತ್ತು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಶೇ 48ರಷ್ಟು ಜನರಿಗೆ ಭದ್ರತೆ ಒದಗಿಸಿದೆ. ಸಾಮಾಜಿಕ ಭದ್ರತೆ ಪಡೆಯುವವರ ಪ್ರಮಾಣ ಶೇ 65ಕ್ಕೂ ಹೆಚ್ಚಿದೆ ಎಂದರು.

ದೇಶದ 80 ಕೋಟಿ ಜನರಿಗೆ ಆಹಾರ ಭದ್ರತೆ ಒದಗಿಸಲಾಗಿದೆ. ಆಯುಷ್ಮಾನ್ ಭಾರತ್ ಯೋಜನೆಯಡಿ 60 ಕೋಟಿ ಜನರಿಗೆ ₹5 ಲಕ್ಷ ಮೊತ್ತದ ಆರೋಗ್ಯ ವಿಮಾ ಸೌಲಭ್ಯ ಒದಗಿಸಲಾಗಿದೆ. 70 ವರ್ಷಕ್ಕೂ ಮೇಲ್ಪಟ್ಟ ಹಿರಿಯ ನಾಗರಿಕರು ಮತ್ತು ಗಿಗ್ ಕಾರ್ಮಿಕರನ್ನು ಈ ಯೋಜನೆ ವ್ಯಾಪ್ತಿಗೆ ತರಲಾಗಿದೆ ಎಂದು ತಿಳಿಸಿದರು.

ಕಳೆದ ವರ್ಷ 67 ಲಕ್ಷ ಟನ್ ಆಮದು: ಇಳುವರಿ ಹೆಚ್ಚಳಕ್ಕೆ ಒತ್ತಾಯ

ಬೇಳೆಕಾಳು ಉತ್ಪಾದನೆ ಏರಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಬೇಳೆಕಾಳು ಉತ್ಪಾದನೆ ಹೆಚ್ಚಳವಾಗಿದೆ. ಹಾಗಾಗಿ, 2025–26ನೇ ಆರ್ಥಿಕ ವರ್ಷದಲ್ಲಿ ಬೇಳೆಕಾಳು ಆಮದು ಪ್ರಮಾಣವು 55 ಲಕ್ಷ ಟನ್‌ಗೆ ತಗ್ಗಲಿದೆ ಎಂದು ಭಾರತದ ಬೇಳೆಕಾಳುಗಳು ಮತ್ತು ಧಾನ್ಯಗಳ ಸಂಘ (ಐಪಿಜಿಎ) ತಿಳಿಸಿದೆ.



ಕಳೆದ ವರ್ಷ ಭಾರತವು 67 ಲಕ್ಷ ಟನ್‌ನಷ್ಟು ಬೇಳೆಕಾಳುಗಳನ್ನು ಆಮದು ಮಾಡಿಕೊಂಡಿದೆ. ಈ ಪೈಕಿ 30 ಲಕ್ಷ ಟನ್ ಹಳದಿ ಬಟಾಣಿ ಇದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಬಿಮಲ್ ಕೊಠಾರಿ, 'ದೇಶದ ರೈತರ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರವು ಹಳದಿ ಬಟಾಣಿಗಳ ಆಮದು ಮೇಲೆ ನಿರ್ಬಂಧ ಹೇರುವ ಸಾಧ್ಯತೆಯಿದೆ' ಎಂದರು.

ಕಳೆದ ವರ್ಷ ಬೇಳೆಕಾಳುಗಳ ಉತ್ಪಾದನೆಯು ಇಳಿಕೆಯಾಗಿತ್ತು. ಇದರಿಂದ ಬೆಲೆ ಕೂಡ ಏರಿಕೆಯಾಗಿತ್ತು. ಹಾಗಾಗಿ, ಸರ್ಕಾರವು ಆಮದು ಮಾಡಿಕೊಂಡಿತ್ತು. ಹಿಂದಿನ ವರ್ಷಕ್ಕಿಂತ ಕಡಿಮೆ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ಸಾಧ್ಯತೆಯಿದೆ ಎಂದು ಹೇಳಿದರು.

ಹಳದಿ ಬಟಾಣಿ ಮೇಲೆ ಸರ್ಕಾರವು ಶೇ 15ರಿಂದ ಶೇ 20ರಷ್ಟು ಆಮದು ಸುಂಕ ವಿಧಿಸುವ ಸಾಧ್ಯತೆಯಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಕಡಿಮೆ ಬೆಲೆಯಲ್ಲಿ ಹಳದಿ ಬಟಾಣಿಯನ್ನು ಆಮದು ಮಾಡಿಕೊಳ್ಳಲಾಗಿದೆ. ಇದರಿಂದ ದರವು ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಯಾಗಿದೆ ಎಂದು ಕೊಠಾರಿ ಹೇಳಿದರು.

ಬೇಳೆಕಾಳು ಆಮದಿಗೆ ಸಂಬಂಧಿಸಿದಂತೆ ಸರ್ಕಾರವು ಸಮತೋಲಿತವಾದ ನೀತಿ ಅನುಸರಿಸಬೇಕಿದೆ. ಆಮದು ಮಾಡಿಕೊಳ್ಳುವ ಬೇಳೆಗಳ ದರವು ಮಾರುಕಟ್ಟೆಯಲ್ಲಿನ ಎಂಎಸ್‌ಪಿಗಿಂತ ಕಡಿಮೆ ಇರದಂತೆ ಎಚ್ಚರಿಕೆ ವಹಿಸಬೇಕು ಎಂದರು.

ದೇಶದಲ್ಲಿ ಬೇಳೆಕಾಳುಗಳ ಇಳುವರಿಯು ಜಾಗತಿಕ ಸರಾಸರಿಗಿಂತ ಕಡಿಮೆ ಇದೆ. ಇಳುವರಿ ಹೆಚ್ಚಳಕ್ಕೆ ಒತ್ತು ನೀಡಬೇಕು. ಆಗಷ್ಟೇ ಭಾರತವು ರಫ್ತು ಮಾಡಲು ಸಾಧ್ಯ ಎಂದು ಹೇಳಿದರು.

'ಬಟಾಣಿಗೆ ಸುಂಕ ರಿಯಾಯಿತಿ ಮುಂದುವರಿಸಲ್ಲ'

ಹಳದಿ ಬಟಾಣಿ ಮೇಲಿನ ಆಮದು ಸುಂಕ ರಿಯಾಯಿತಿಯು ಈ ತಿಂಗಳ ಅಂತ್ಯದವರೆಗೆ ಇದೆ. ಆ ಬಳಿಕ ಇದನ್ನು ವಿಸ್ತರಿಸುವುದಿಲ್ಲ ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಸ್ಪಷ್ಟಪಡಿಸಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದೇಶೀಯ ಬೇಡಿಕೆ ಮತ್ತು ಬೆಲೆ ನಿಯಂತ್ರಿಸುವ ದೃಷ್ಟಿಯಿಂದ 2023ರ ಡಿಸೆಂಬರ್‌ನಲ್ಲಿ ಸರ್ಕಾರವು ಬಟಾಣಿ ಮೇಲಿನ ಆಮದು ಸುಂಕಕ್ಕೆ ವಿನಾಯಿತಿ ನೀಡಿತ್ತು. ಬಳಿಕ ಇದನ್ನು ಇದೇ 28ರವರೆಗೆ ವಿಸ್ತರಿಸಿತ್ತು ಎಂದರು.

ಸುಂಕ ರಿಯಾಯಿತಿ ಹಿಂಪಡೆಯುವ ಬಗ್ಗೆ ಕೇಂದ್ರ ಸಚಿವ ಅಮಿತ್ ಶಾ ಅವರ ಅಧ್ಯಕ್ಷತೆಯಲ್ಲಿ ನಡೆದ ಸಚಿವರ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದೆ ಎಂದರು.

ದೇಶೀಯ ಮಟ್ಟದಲ್ಲಿ ಬೇಳೆಕಾಳುಗಳ ಉತ್ಪಾದನೆಯ ಆಧಾರದ ಮೇಲೆ ತೊಗರಿ, ಉದ್ದು ಮತ್ತು ಮಸೂರ್ ಬೇಳೆಯ ಆಮದು ಸುಂಕದ ರಿಯಾಯಿತಿ ಬಗ್ಗೆ ಪರಾಮರ್ಶೆ ನಡೆಸಲಾಗುವುದು ಎಂದರು.

ಅಡಿಕೆ ಧಾರಣೆ (₹ಗಳಲ್ಲಿ)

ಸಾಗರ	
ಬಿಳಿಗೋಟು	7549-18555
ಚಾಲಿ	19511-33919
ಕೋಕ	6699-20029
ಕೆಂಪುಗೋಟು	10199-27099
ರಾಶಿ	22899-51700
ಸಿಪ್ಪೆಗೋಟು	6547-16755
ಶಿವಮೊಗ್ಗ	
ಬೆಟ್ಟೆ	45179-56200
ಗೊರಬಲು	17400-28869
ರಾಶಿ	30199-52199
ಸರಕು	46159-92596

ಸಿದ್ದಾಪುರ	
ಬಿಳಿಗೋಟು	18699-23899
ಚಾಲಿ	32869-37699
ಕೋಕ	10089-19608
ಹೊಸಚಾಲಿ	26729-32219
ಕೆಂಪುಗೋಟು	18012-21100
ರಾಶಿ	41699-48699
ತಟ್ಟಿಬೆಟ್ಟೆ	29699-41899
ಶಿರಸಿ	
ಬೆಟ್ಟೆ	27299-40500
ಬಿಳಿಗೋಟು	14299-31000
ಚಾಲಿ	31423-39211
ಕೆಂಪುಗೋಟು	14900-25699
ರಾಶಿ	40088-47898

ಯಲ್ಲಾಪುರ	
ಅಪಿ	62000-68879
ಬಿಳಿಗೋಟು	11899-27299
ಚಾಲಿ	27709-38099
ಕೋಕ	4609-16899
ಕೆಂಪುಗೋಟು	14899-24100
ರಾಶಿ	39209-59299
ತಟ್ಟಿಬೆಟ್ಟೆ	26899-38499

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹322-672
ದ್ವಿತಳಿ (ಬಿ.ವಿ)	₹276-933

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹14200-14200
ತಿಪಟೂರು	₹13800-14700

ಮ್ಯಾನ್ಮಾರ್: ಭಾರತೀಯರ ರಕ್ಷಣೆ

ಬ್ಯಾಂಕಾಕ್(ಎಪಿ): ಮಾನವ ಕಳ್ಳಸಾಗಣೆಗೆ ಒಳಗಾಗಿ, ಮ್ಯಾನ್ಮಾರ್‌ನಲ್ಲಿ ಆನ್‌ಲೈನ್ ಮೂಲಕ ವಂಚನೆಯಲ್ಲಿ ನಿರತ ಕೇಂದ್ರಗಳಲ್ಲಿ ಕೆಲಸಕ್ಕೆ ಸೇರಿ ಸಿಲುಕಿದ್ದ ಭಾರತೀಯರನ್ನು ರಕ್ಷಿಸಿ, ಮರಳಿ ತಾಯ್ನಾಡಿಗೆ ಕಳುಹಿಸಲಾಗಿದೆ ಎಂದು ಥಾಯ್ಲೆಂಡ್ ಸೇನೆ ಗುರುವಾರ ಹೇಳಿದೆ.

ಭಾರತೀಯರು ಸೇರಿದಂತೆ 260 ಜನರನ್ನು ರಕ್ಷಿಸಲಾಗಿದೆ. ಇವರನ್ನು ಮ್ಯಾನ್ಮಾರ್‌ನಲ್ಲಿ ರಕ್ಷಿಸಿ, ಥಾಯ್ಲೆಂಡ್‌ಗೆ ಕಳುಹಿಸಲಾಗಿತ್ತು.

45 ಸಾವಿರದಷ್ಟು ಚೀನಿ ಪ್ರಜೆಗಳು ಇಂತಹ ವಂಚನೆ ಜಾಲಗಳನ್ನು ನಡೆಸುತ್ತಿದ್ದರು ಎಂದು ಶಂಕಿಸಲಾಗಿದ್ದು, ಇವರನ್ನು ಸಹ ಚೀನಾಕ್ಕೆ ಮರಳಿ ಕಳುಹಿಸಲಾಗಿದೆ ಎಂದು ಸೇನೆ ತಿಳಿಸಿದೆ.

ಅಮೆರಿಕ: ಕಪೂರ್ ನೇಮಕ

ವಾಷಿಂಗ್ಟನ್ (ಪಿಟಿಐ): ಭಾರತ ಮೂಲದ ಪೌಲ್ ಕಪೂರ್ ಅವರನ್ನು ವಿದೇಶಾಂಗ ಇಲಾಖೆಯ ದಕ್ಷಿಣ ಏಷ್ಯಾ ವ್ಯವಹಾರಗಳ ಸಹಾಯಕ ಕಾರ್ಯದರ್ಶಿಯಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಾಮ ನಿರ್ದೇಶನ ಮಾಡಿದ್ದಾರೆ.

ತನಿಖೆಗೆ ಹಾಜರಾಗುವಂತೆ ರಣವೀರ್‌ಗೆ ಸೂಚನೆ

ಮುಂಬೈ (ಪಿಟಿಐ): 'ಇಂಡಿಯಾಸ್ ಗಾಟ್ ಲ್ಯಾಟೆಂಟ್' ಕಾರ್ಯಕ್ರಮದಲ್ಲಿ ಆಡಿದ ಅಶ್ಲೀಲ ಮಾತುಗಳ ಸಂಬಂಧ ತನಿಖೆಗೆ ಹಾಜರಾಗುವಂತೆ ಪಾಡ್‌ಕಾಸ್ಟರ್ ರಣವೀರ್ ಅಲಹಾಬಾದಿಯಾ ಅವರಿಗೆ ಮುಂಬೈ ಪೊಲೀಸರು ಸಮನ್ಸ್ ನೀಡಿದ್ದರು. ಆದರೆ, 'ಮಾಧ್ಯಮಗಳ ಬಗ್ಗೆ ಭಯವಾಗುತ್ತದೆ' ಎಂಬ ಕಾರಣ ನೀಡಿ ರಣವೀರ್ ಅವರು ತನಿಖೆಗೆ ಗುರುವಾರ ಹಾಜರಾಗಲಿಲ್ಲ.



'ನೀವು ತನಿಖೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಶುಕ್ರವಾರ ತನಿಖೆಗೆ ಹಾಜರಾಗಿ' ಎಂದು ಪೊಲೀಸರು ರಣವೀರ್ ಅವರಿಗೆ ತಿಳಿಸಿದ್ದಾರೆ. ಅಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಉಳಿದ ಏಳು ಮಂದಿಯ ಹೇಳಿಕೆಯನ್ನು ಮುಂಬೈ ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಫೆ. 18ಕ್ಕೆ ತನಿಖೆಗೆ ಹಾಜರಾಗುವಂತೆ ಮುಂಬೈ ಪೊಲೀಸರು ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದ ಸಮಯ್ ರೈನಾ ಅವರಿಗೆ ಸೂಚಿಸಿದ್ದಾರೆ. ಇನ್ನು ಫೆ.18ಕ್ಕೆ ಹಾಜರಾಗಿ ಎಂದು ಮಹಾರಾಷ್ಟ್ರ ಸೈಬರ್ ವಿಭಾಗದವರೂ ಸಮಯ್‌ಗೆ ಸಮನ್ಸ್ ನೀಡಿದ್ದಾರೆ. ಸಮಯ್ ಅವರು ಸದ್ಯ ಅಮೆರಿಕದಲ್ಲಿದ್ದಾರೆ. ಅಸ್ಸಾಂನಲ್ಲಿಯೂ ಕಾರ್ಯಕ್ರಮದ ಬಗ್ಗೆ ಪ್ರಕರಣ ದಾಖಲಾಗಿದ್ದು, ಈ ಸಂಬಂಧ ಮಹಾರಾಷ್ಟ್ರ ಸೈಬರ್ ವಿಭಾಗದ ಅಧಿಕಾರಿಗಳನ್ನು ಅಸ್ಸಾಂ ಪೊಲೀಸರು ಗುರುವಾರ ಭೇಟಿಯಾಗಿದ್ದಾರೆ.

ರಣವೀರ್ ಅವರ ಅಶ್ಲೀಲ ಹೇಳಿಕೆ ಹಿನ್ನೆಲೆಯಲ್ಲಿ ಜಾಲತಾಣ ವೇದಿಕೆಗಳಲ್ಲಿನ ವಿವಾದಾತ್ಮಕ ಕಂಟೆಂಟ್‌ಗಳನ್ನು ತಡೆಯಲು ಈಗಾಗಲೇ ಇರುವ ಕಾನೂನುಗಳಿಗೆ ತಿದ್ದುಪಡಿಗಳು ಬೇಕಾಗಿವೆಯೇ ಎಂಬುದನ್ನು ಪರಿಶೀಲಿಸಿ ಫೆ.17ರ ಒಳಗೆ ವರದಿ ನೀಡುವಂತೆ ಸಂವಹನ ಮತ್ತು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಂಸದೀಯ ಸಮಿತಿಯು ಮಾಹಿತಿ ಮತ್ತು ಪ್ರಸಾರ ಸಚಿವಾಲಯಕ್ಕೆ ಗುರುವಾರ ಸೂಚಿಸಿದೆ.

ಹಸೀನಾ ಹಸ್ತಾಂತರಕ್ಕೆ ಒತ್ತಾಯ



ಢಾಕಾ (ಪಿಟಿಐ): ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರನ್ನು ಭಾರತ ಹಸ್ತಾಂತರಿಸುವ ನಿರೀಕ್ಷೆ ಹೊಂದಿದ್ದೇವೆ ಎಂದು ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಗುರುವಾರ ಹೇಳಿದೆ.

ಕಳೆದ ವರ್ಷ ಬಾಂಗ್ಲಾದೇಶದಲ್ಲಿ ನಡೆದ ಗಲಭೆ ಹಾಗೂ ಅಲ್ಪಸಂಖ್ಯಾತರ ಗುರಿಯಾಗಿಸಿ ನಡೆದ ದಾಳಿಗಳ ಹಿಂದೆ ಶೇಖ್ ಹಸೀನಾ ಅವರ ಪಾತ್ರವಿದೆ ಎಂದು ವಿಶ್ವಸಂಸ್ಥೆಯ ಸತ್ಯಶೋಧನಾ ವರದಿಯಲ್ಲಿ ಹೇಳಿರುವ ಬೆನ್ನಲ್ಲೇ, ಬಿಎನ್‌ಪಿ ಈ ಮಾತು ಹೇಳಿದೆ.

'ವಿಶ್ವಸಂಸ್ಥೆಯ ವರದಿಯಲ್ಲಿ ಶೇಖ್ ಹಸೀನಾ ವಿರುದ್ಧ ಆರೋಪಗಳಿವೆ. ಅಧಿಕಾರದಲ್ಲಿ ಮುಂದುವರಿಸುವ ಉದ್ದೇಶದಿಂದ ಅವರು ದಾಳಿಗಳು ಹಾಗೂ ತಮ್ಮ ವಿರುದ್ಧ ಪ್ರತಿಭಟನೆ ನಡೆಸಿದವರ ಹತ್ಯೆಗೆ ಸಂಚು ರೂಪಿಸಿದ್ದರು ಎಂಬುದಾಗಿ ವರದಿಯಲ್ಲಿ ಹೇಳಲಾಗಿದೆ. ಹೀಗಾಗಿ, ಇಲ್ಲಿ ವಿಚಾರಣೆ ಎದುರಿಸುವುದಕ್ಕಾಗಿ ಅವರನ್ನು ಹಸ್ತಾಂತರಿಸಬೇಕು' ಎಂದು ಬಿಎನ್‌ಪಿ ಪ್ರಧಾನ ಕಾರ್ಯದರ್ಶಿ ಮಿರ್ಜಾ ಫಖ್ರುಲ್ ಇಸ್ಲಾಂ ಆಲಂಗೀರ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

'ಶೇಖ್ ಹಸೀನಾ ಅವರ ಆದೇಶದಂತೆ ಮಾನವ ಹಕ್ಕುಗಳ ಉಲ್ಲಂಘನೆ ನಡೆದಿದ್ದು, ಪ್ರಜಾಪ್ರಭುತ್ವದ ಕೊಲೆ ಮಾಡಲಾಗಿದೆ ಎಂಬುದಾಗಿ ವಿಶ್ವಸಂಸ್ಥೆಯ ವರದಿಯಲ್ಲಿ ಹೇಳಲಾಗಿದೆ' ಎಂದಿದ್ದಾರೆ.

ನಮಗಾದ ಗತಿಯೇ ನಿತೀಶ್, ಚಂದ್ರಬಾಬು ನಾಯ್ಡುಗೆ ಕಾದಿದೆ: ಆದಿತ್ಯ ಠಾಕ್ರೆ

'ಪ್ರಜಾಪ್ರಭುತ್ವ ರಕ್ಷಣೆಗೆ 'ಇಂಡಿಯಾ' ಅಗತ್ಯ'

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಂಬೈ/ ನವದೆಹಲಿ: ಪ್ರಜಾಪ್ರಭುತ್ವವನ್ನು ಪಣಕ್ಕಿಟ್ಟಂತೆ ಇರುವ ಈ ಪರಿಸ್ಥಿತಿಯಲ್ಲಿ ಪ್ರತಿಪಕ್ಷಗಳು ಒಗ್ಗಟ್ಟಿನಿಂದ ಇರಬೇಕಿದೆ ಎಂದು ಶಿವಸೇನಾ (ಯುಬಿಟಿ) ಮುಖಂಡ ಆದಿತ್ಯ ಠಾಕ್ರೆ ಪ್ರತಿಪಾದಿಸಿದರು.

ಪ್ರತಿಪಕ್ಷಗಳ ಒಕ್ಕೂಟ 'ಇಂಡಿಯಾ' ಮೈತ್ರಿಯನ್ನು ಬಿಕ್ಕಟ್ಟಿನಿಂದ ಹೊರತರುವ ಭಾಗವಾಗಿ ಆದಿತ್ಯ ಠಾಕ್ರೆ ಅವರು, ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರನ್ನು ಭೇಟಿ ಮಾಡಿ, ರಾಜಕೀಯ ಬೆಳವಣಿಗೆಗಳ ಬಗ್ಗೆ ಚರ್ಚೆ ನಡೆಸಿದರು.

ಮಹಾರಾಷ್ಟ್ರದಲ್ಲಿನ ಪ್ರತಿಪಕ್ಷಗಳ ಕೂಟ ಮಹಾ ವಿಕಾಸ್ ಅಘಾಡಿ (ಎಂವಿಎ) ಭಾಗವಾಗಿರುವ ಎನ್‌ಸಿಪಿ (ಶರದ್ ಪವಾರ್ ಬಣ) ಮುಖ್ಯಸ್ಥ ಶರದ್ ಪವಾರ್ ಅವರು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಅವರನ್ನು ಸನ್ಮಾನ ಮಾಡಿದ ಬೆನ್ನಲ್ಲೇ, ರಾಹುಲ್ ಮತ್ತು ಕೇಜ್ರಿವಾಲ್ ಅವರನ್ನು ಜೂನಿಯರ್ ಠಾಕ್ರೆ ಭೇಟಿ ಮಾಡಿರುವುದು ಮಹತ್ವದ ರಾಜಕೀಯ ಬೆಳವಣಿಗೆಯಾಗಿದೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಆದಿತ್ಯ ಠಾಕ್ರೆ, 'ಮಹಾರಾಷ್ಟ್ರದಲ್ಲಿ ಶಿವಸೇನಾ ಪಕ್ಷಕ್ಕೆ ಆಗಿರುವ ಗತಿಯೇ ಮುಂಬರುವ ದಿನಗಳಲ್ಲಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರಿಗೂ ಎದುರಾಗಲಿದೆ ಎಂದು ಎಚ್ಚರಿಕೆ ನೀಡಿದರು.

'ಇಂದು ದೇಶದ ಭವಿಷ್ಯವು ಅನುಮಾನಕ್ಕೀಡಾಗಿದೆ. ದೇಶದಲ್ಲಿ ಮತ ವಂಚನೆ ಮತ್ತು ಇವಿಎಂ ವಂಚನೆಗಳಿಂದಾಗಿ ನಮ್ಮ ಮತಗಳು ಎಲ್ಲಿಗೆ ಹೋಗುತ್ತಿವೆ ಎಂಬುದೇ ತಿಳಿಯುತ್ತಿಲ್ಲ. ದೇಶದಲ್ಲಿ ಇಂದು ಚುನಾವಣೆಗಳು ಮುಕ್ತ ಮತ್ತು ನ್ಯಾಯ ಸಮ್ಮತವಾಗಿ ನಡೆಯುತ್ತಿಲ್ಲ' ಎಂದು ಹೇಳಿದರು.

ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಅವರನ್ನು ಯಾಕೆ ಭೇಟಿಯಾಗಿಲ್ಲ ಎಂಬ ಪ್ರಶ್ನೆಗೆ, 'ಮುಂಬೈನಲ್ಲಿ ನಾವು ಆಗಾಗ ಭೇಟಿಯಾಗುತ್ತಿರುತ್ತೇವೆ. ಕೆಲವು ದಿನಗಳ ಹಿಂದಷ್ಟೇ ನಾವು ಪರಸ್ಪರ ಭೇಟಿಯಾಗಿದ್ದೆವು' ಎಂದು ಉತ್ತರಿಸಿದರು.

ಈ ಭೇಟಿ ಸಂದರ್ಭದಲ್ಲಿ ಶಿವಸೇನಾ (ಯುಬಿಟಿ) ಮುಖಂಡರಾದ ಸಂಜಯ್ ರಾವುತ್, ಪ್ರಿಯಾಂಕಾ ಚತುರ್ವೇದಿ ಸೇರಿದಂತೆ ಇತರರು ಹಾಜರಿದ್ದರು. ಇತ್ತೀಚೆಗಷ್ಟೇ ಫಲಿತಾಂಶ ಕಂಡ ದೆಹಲಿ ವಿಧಾನಸಭೆ ಚುನಾವಣೆ ಮತ್ತು 'ಇಂಡಿಯಾ' ಒಕ್ಕೂಟದ ಸ್ಥಿತಿ–ಗತಿಯ ಚರ್ಚೆ ನಡೆದಿದೆ ಎಂದು ಗೊತ್ತಾಗಿದೆ.

ಆರ್‌ಸಿಬಿಗೆ ಪಾಟೀದಾರ್ ಸರದಾರ

ಬೆಂಗಳೂರು ತಂಡಕ್ಕೆ ಮಧ್ಯಪ್ರದೇಶ ಆಟಗಾರ ಸಾರಥ್ಯ • ರಜತ್ ಬೆನ್ನುತಟ್ಟಿದ ವಿರಾಟ್ ಕೊಹ್ಲಿ

ಐಪಿಎಲ್ ಪದಾರ್ಪಣೆ	2021
ವಯಸ್ಸು	31 ವರ್ಷ
ಜನ್ಮಸ್ಥಳ	ಇಂದೋರ್, ಮಧ್ಯಪ್ರದೇಶ
ಆಟದ ಶೈಲಿ	ಬಲಗೈ ಬ್ಯಾಟರ್, ಆಫ್‌ಬ್ರೇಕ್ ಬೌಲರ್



ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಮತ್ತು ಬೇರೆ ಬೇರೆ ದೇಶಗಳ ದಿಗ್ಗಜ ಆಟಗಾರರು ನಾಯಕತ್ವ ವಹಿಸಿದ ಇತಿಹಾಸವಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಈಗ ಯುವನಾಯಕ ಲಭಿಸಿದ್ದಾರೆ. ಮಧ್ಯಪ್ರದೇಶದ ಇಂದೋರಿನ ರಜತ್ ಪಾಟೀದಾರ್ ಈ ಸಲದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆರ್‌ಸಿಬಿ ತಂಡವನ್ನು ಮುನ್ನಡೆಸುವರು.

ಗುರುವಾರ ಕೆಎಸ್‌ಸಿಎ ಸಭಾಭವನದಲ್ಲಿ ನಡೆದ ಮಾಧ್ಯಮ ಸಂವಾದದಲ್ಲಿ ತಂಡದ ಅನುಭವಿ ಆಟಗಾರ ವಿರಾಟ್ ಕೊಹ್ಲಿ ಅವರು ವಿಡಿಯೊ ಸಂದೇಶದ ಮೂಲಕ ರಜತ್ ಪಾಟೀದಾರ್ ನಾಯಕತ್ವವನ್ನು ಘೋಷಿಸಿದರು.

‘ನಾನು ಮತ್ತು ತಂಡದ ಎಲ್ಲ ಸದಸ್ಯರೂ ನಿಮ್ಮ ಬೆಂಬಲಕ್ಕೆ ಇದ್ದೇವೆ ರಜತ್. ಈ ಫ್ರ್ಯಾಂಚೈಸಿಯಲ್ಲಿ ತಾವು ಬೆಳೆದ ರೀತಿಯು ಎಲ್ಲರ ಮನಗೆದ್ದಿದೆ. ನೀವು ಆರ್‌ಸಿಬಿ ಅಭಿಮಾನಿಗಳ ಹೃದಯಗಳಲ್ಲಿ ಇದ್ದೀರಿ. ಈ ಸ್ಥಾನಕ್ಕೆ ನೀವು ಅರ್ಹರು’ ಎಂದು ವಿರಾಟ್ ಅವರು ಕಳುಹಿಸಿರುವ ವಿಡಿಯೊ ಸಂದೇಶದಲ್ಲಿ ಹೇಳಿದರು.

ಆರ್‌ಸಿಬಿಯನ್ನು 143 ಪಂದ್ಯಗಳಲ್ಲಿ ಮುನ್ನಡೆಸಿದ್ದ ವಿರಾಟ್ ಕೊಹ್ಲಿ ಅವರೇ ಮತ್ತೊಮ್ಮೆ ನಾಯಕರಾಗುವ ಕುರಿತ ಮಾತುಗಳೂ ಕೇಳಿಬಂದಿದ್ದವು. ಆದರೆ ಕೊಹ್ಲಿ ಒಪ್ಪದೇ ರಜತ್ ಅವರನ್ನು ಬೆಂಬಲಿಸಿದ್ದಾರೆ.

31 ವರ್ಷ ವಯಸ್ಸಿನ ರಜತ್, 2021ರಲ್ಲಿ ಆರ್‌ಸಿಬಿ ಮೂಲಕವೇ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಗೆ ಪದಾರ್ಪಣೆ ಮಾಡಿದ್ದರು. ಮಧ್ಯಮ ಕ್ರಮಾಂಕದಲ್ಲಿ ಭರವಸೆಯ ಆಟಗಾರನಾಗಿದ್ದಾರೆ. ಈ ವರ್ಷದ ಟೂರ್ನಿಗಾಗಿ ತಂಡದಲ್ಲಿ ರಿಟೇನ್ ಆದ ಮೂವರು ಆಟಗಾರರಲ್ಲಿ ರಜತ್ ಕೂಡ ಒಬ್ಬರು. ಅವರಿಗೆ ತಂಡವು ₹11 ಕೋಟಿ ನೀಡಿ ಉಳಿಸಿಕೊಂಡಿತ್ತು. ಅವರಲ್ಲದೇ ವಿರಾಟ್ ಕೊಹ್ಲಿ (₹ 21 ಕೋಟಿ) ಮತ್ತು ಬೌಲರ್ ಯಶ್ ದಯಾಳ್ (₹ 5 ಕೋಟಿ) ಅವರನ್ನೂ ಫ್ರ್ಯಾಂಚೈಸಿಯು ರಿಟೇನ್ ಮಾಡಿಕೊಂಡಿತ್ತು. ನಾಯಕ ಫಫ್ ಡುಪ್ಲೆಸಿ, ವೇಗಿ ಮೊಹಮ್ಮದ್ ಸಿರಾಜ್ ಸೇರಿದಂತೆ ಉಳಿದೆಲ್ಲರನ್ನೂ ಬಿಡುಗಡೆ ಮಾಡಿತ್ತು.

ಆದರೆ 2025ರ ಟೂರ್ನಿಗಾಗಿ ನಡೆದಿದ್ದ ಮೆಗಾ ಹರಾಜಿನಲ್ಲಿ ನಾಯಕತ್ವದ ಅನುಭವ ಹೊಂದಿರುವ ರಿಷಭ್ ಪಂತ್, ಕೆ.ಎಲ್. ರಾಹುಲ್ ಅಥವಾ ಶ್ರೇಯಸ್ ಅಯ್ಯರ್ ಅವರಂತಹ ಆಟಗಾರರನ್ನು ಖರೀದಿಸುವಲ್ಲಿ ವಿಫಲವಾಗಿತ್ತು. ಆದ್ದರಿಂದ ಈಗ ನಾಯಕತ್ವದ ಹೊಣೆಯು ರಜತ್ ಹೆಗಲೇರಿದೆ. ತಂಡವು ಐಪಿಎಲ್‌ನಲ್ಲಿ 3 ಸಲ ರನ್ನರ್ಸ್ ಅಪ್ ಆಗಿದೆ. 2016ರಲ್ಲಿ ಕೊಹ್ಲಿ ನಾಯಕತ್ವದಲ್ಲಿ ಫೈನಲ್ ತಲುಪಿತ್ತು. ಅದರ ನಂತರ ಈ ಪ್ರಶಸ್ತಿ ಸುತ್ತು ಪ್ರವೇಶಿಸಲು ತಂಡಕ್ಕೆ ಸಾಧ್ಯವಾಗಿಲ್ಲ.

ಸುದ್ದಿಗೋಷ್ಠಿಯಲ್ಲಿ ಹಾಜರಿದ್ದ ತಂಡದ ಮುಖ್ಯ ಕೋಚ್ ಆ್ಯಂಡಿ ಫ್ಲವರ್, ‘ಸರಳ ವ್ಯಕ್ತಿತ್ವದ ರಜತ್ ತಮ್ಮೊಂದಿಗೆ ಇರುವವರ ಬಗ್ಗೆ ಅಪಾರ ಕಾಳಜಿ ವಹಿಸುತ್ತಾರೆ. ಮಧ್ಯಪ್ರದೇಶ ತಂಡವನ್ನು ಅವರು ಮುನ್ನಡೆಸಿದ ರೀತಿಯನ್ನು ಬಹಳ ಸೂಕ್ಷ್ಮವಾಗಿ ಗಮನಿಸಿದ್ದೇವೆ. ಅವರ ರೀತಿ, ನೀತಿಗಳು ನಮಗೆ ಇಷ್ಟವಾದವು. ಆದ್ದರಿಂದ ಅವರನ್ನು ನಾಯಕನ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ’ ಎಂದರು.

ರಜತ್ ಕಳೆದ ದೇಶಿ ಋತುವಿನಲ್ಲಿ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಮಧ್ಯಪ್ರದೇಶ ತಂಡವನ್ನು ಮುನ್ನಡೆಸಿದ್ದರು. ತಂಡವು ರನ್ನರ್ಸ್ ಅಪ್ ಆಗಿತ್ತು. ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್‌ನಲ್ಲಿಯೂ ಅವರು ನಾಯಕತ್ವ ವಹಿಸಿದ್ದರು.

‘ವಿರಾಟ್ ಅವರೊಂದಿಗೆ ಕಳೆದ ಕೆಲವು ವರ್ಷಗಳಿಂದ ಆಡುತ್ತಿದ್ದೇನೆ. ಅವರು ಒಳ್ಳೆಯ ಮಾರ್ಗದರ್ಶಕರು. ಅವರ ಅನುಭವ ಮತ್ತು ಬೆಂಬಲವು ನನ್ನ ಹೊಣೆ ನಿಭಾಯಿಸಲು ನೆರವಾಗಲಿದೆ. ಎಲ್ಲ ಆಟಗಾರರೊಂದಿಗೂ ಸಮನ್ವಯ ಸಾಧಿಸಿ ತಂಡವನ್ನು ಮುನ್ನಡೆಸುವುದು ನನ್ನ ಗುರಿ’ ಎಂದು ರಜತ್ ಹೇಳಿದರು.

‘ಪಂದ್ಯಗಳಲ್ಲಿ ಅನುಕ್ಷಣವೂ ಆಳವಾಗಿ ತೊಡಗಿಕೊಂಡು ಪರಿಸ್ಥಿತಿಯನ್ನು ಚೆನ್ನಾಗಿ ಅರಿತು ಕ್ರಮ ವಹಿಸುವ ಸಾಮರ್ಥ್ಯ ಇದೆ. ನನ್ನ ತಂಡದ ಆಟಗಾರರಿಗೆ ಬೆಂಬಲವಾಗಿ ನಿಲ್ಲಬೇಕು. ಎಲ್ಲ ಸಂದರ್ಭಗಳಲ್ಲಿಯೂ ಅವರೊಂದಿಗಿರುತ್ತೇನೆ. ಅವರು ಆತ್ಮವಿಶ್ವಾಸ ಮತ್ತು ಒತ್ತಡರಹಿತವಾಗಿರುವಂತಹ ವಾತಾವರಣ ನಿರ್ಮಿಸುವೆ’ ಎಂದರು.

ಫ್ರ್ಯಾಂಚೈಸಿಯ ಸಿಒಒ ರಾಜೇಶ್ ಮೆನನ್, ರಜತ್ ಅವರಿಗೆ ಕ್ಯಾಪ್ ಪ್ರದಾನ ಮಾಡಿದರು. ತಂಡದ ನಿರ್ದೇಶಕ ಮೊ ಬೊಬಾಟ್ ಹಾಜರಿದ್ದರು.

ರಜತ್ ಮುಂದಿರುವ ಪ್ರಮುಖ ಸವಾಲುಗಳು

- 17 ವರ್ಷಗಳಿಂದ ಯಾವುದೇ ನಾಯಕನಿಗೂ ತಂಡವನ್ನು ಚಾಂಪಿಯನ್ ಮಾಡಲು ಸಾಧ್ಯವಾಗಿಲ್ಲ. ಟ್ರೋಫಿ ಗೆಲುವಿನತ್ತ ತಂಡವನ್ನು ಮುನ್ನಡೆಸುವುದು.
- ತಂಡದ ಮಾಜಿ ನಾಯಕ ಮತ್ತು ಪ್ರಮುಖ ಆಟಗಾರ ವಿರಾಟ್ ಕೊಹ್ಲಿ ಅವರೊಂದಿಗೆ ಉತ್ತಮ ಸಮನ್ವಯತೆ ಸಾಧಿಸುವುದು.
- ತಮಗಿಂತಲೂ ಹೆಚ್ಚು ಅನುಭವ ಮತ್ತು ವಯಸ್ಸಿನಲ್ಲಿ ಹಿರಿಯ ಆಟಗಾರರೊಂದಿಗೆ ಹೊಂದಾಣಿಕೆ ಮಾಡಿಕೊಂಡು ತಂಡವನ್ನು ಮುನ್ನಡೆಸಬೇಕು.
- ಐಪಿಎಲ್‌ನಲ್ಲಿ ಅತ್ಯಂತ ದೊಡ್ಡ ಅಭಿಮಾನಿಗಳ ಬಳಗ ಹೊಂದಿರುವ ತಂಡದ ಬ್ರ್ಯಾಂಡ್ ಮೌಲ್ಯ ಕುಸಿಯದಂತೆ ನೋಡಿಕೊಳ್ಳುವ ಒತ್ತಡವನ್ನು ಮೀರಿ ನಿಲ್ಲಬೇಕು. ಅದಕ್ಕಾಗಿ ತಂಡ ಸಂಯೋಜನೆ ಮತ್ತು ಪ್ರತಿಭಾ ಸಂಪನ್ಮೂಲವನ್ನು ಸಮಯೋಚಿತವಾಗಿ ಬಳಸಿಕೊಳ್ಳಬೇಕು.
- ನಾಯಕತ್ವದ ಹೊಣೆಯ ಒತ್ತಡದಲ್ಲಿ ತಮ್ಮ ಬ್ಯಾಟಿಂಗ್ ಲಯ ಕುಸಿಯದಂತೆ ನೋಡಿಕೊಳ್ಳಬೇಕು.

ರಜತ್ ಪಾಟೀದಾರ್ ಸಾಧನೆ (ಆರ್‌ಸಿಬಿ)

ಪಂದ್ಯ	ರನ್	ಶ್ರೇಷ್ಠ	ಸ್ಟ್ರೈಕ್‌ರೇಟ್	ಶತಕ	ಅರ್ಧಶತಕ	4	6
27	799	112*	158.85	1	7	51	54

ಚಾಂಪಿಯನ್ಸ್ ಟ್ರೋಫಿ: ಕುಟುಂಬಕ್ಕಿಲ್ಲ ಅವಕಾಶ

ನವದೆಹಲಿ (ಪಿಟಿಐ): ದುಬೈನಲ್ಲಿ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡದ ಆಟಗಾರರು ತಮ್ಮೊಂದಿಗೆ ಕುಟುಂಬದ ಸದಸ್ಯರನ್ನು ಕರೆದೊಯ್ಯುವಂತಿಲ್ಲ. ಇದೇ 15ರಂದು ತಂಡವು ಪ್ರಯಾಣಿಸಲಿದೆ.

ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಭಾರತ ತಂಡವು ಹೀನಾಯವಾಗಿ ಸೋತಿತ್ತು. ಆದ್ದರಿಂದ ಪ್ರಯಾಣದ ನಿಯಮಾವಳಿಯನ್ನು ಬಿಸಿಸಿಐ ಪರಿಷ್ಕರಿಸಿತ್ತು. ಅದರ ನಂತರ ಭಾರತ ತಂಡವು ಹೊರದೇಶಕ್ಕೆ ಪ್ರಯಾಣ ಮಾಡುತ್ತಿರುವ ಮೊದಲ ಟೂರ್ನಿ ಇದಾಗಿದೆ.

ಫೆಬ್ರುವರಿ 20ರಂದು ಭಾರತ ತಂಡವು ತನ್ನ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಎದುರಿಸಲಿದೆ. 23ರಂದು ಬದ್ಧ ಎದುರಾಳಿ ಪಾಕಿಸ್ತಾನ ತಂಡದ ವಿರುದ್ಧ ಆಡಲಿದೆ. ಮಾರ್ಚ್ 2ರಂದು ನ್ಯೂಜಿಲೆಂಡ್ ತಂಡವನ್ನು ಭಾರತ ಎದುರಿಸುವುದು. ಫೈನಲ್ ಪಂದ್ಯವೂ ಸೇರಿದಂತೆ ಒಟ್ಟು 3 ವಾರಗಳ ಅವಧಿಯ ಪ್ರವಾಸ ಇದಾಗಿದೆ.

ಮಂಡಳಿಯು ರೂಪಿಸಿರುವ ಹೊಸ ನಿಯಮದ ಪ್ರಕಾರ; 45 ದಿನಗಳಿಗಿಂತ ಹೆಚ್ಚಿನ ಅವಧಿಯ ಪ್ರವಾಸವಿದ್ದಾಗ ಆಟಗಾರರು ತಮ್ಮ ಕುಟುಂಬದವರನ್ನು ಗರಿಷ್ಠ ಎರಡು ವಾರಗಳ ಅವಧಿಗೆ ಕರೆದೊಯ್ಯಲು ಅವಕಾಶವಿದೆ.

ಪಂದ್ಯಗಳ ಸಂದರ್ಭದಲ್ಲಿ ಯಾವುದೇ ಆಟಗಾರರೂ ವೈಯಕ್ತಿಕ ವಾಹನಗಳಲ್ಲಿ ಪ್ರಯಾಣಿಸುವಂತಿಲ್ಲ. ತಂಡದ ಬಸ್‌ನಲ್ಲಿ ಪ್ರಯಾಣ ಮಾಡುವುದು ಕಡ್ಡಾಯ.

ಸಂಕ್ಷಿಪ್ತ ಸುದ್ದಿ

ಐಎಂಎಲ್: ವಿಶ್ವನಾಥ್ ಮ್ಯಾಚ್ ರೆಫರಿ



ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ತಾರೆ ಜಿ.ಆರ್. ವಿಶ್ವನಾಥ್ ಅವರು ಇದೇ ತಿಂಗಳ 22ರಂದು ಆರಂಭವಾಗುವ ಮೊದಲ ಇಂಟರ್‌ನ್ಯಾಷನಲ್ ಮಾಸ್ಟರ್ಸ್ ಟಿ20 ಲೀಗ್ (ಐಎಂಎಲ್)ನ ಮ್ಯಾಚ್ ರೆಫರಿ ಆಗಿ ಕಾರ್ಯನಿರ್ವಹಿಸಲಿದ್ದಾರೆ.

ಆರು ತಂಡಗಳು ಭಾಗವಹಿಸಲಿವೆ. ಅಂತರರಾಷ್ಟ್ರೀಯ ನಿವೃತ್ತ ಕ್ರಿಕೆಟಿಗರು ಆಡಲಿರುವ ಈ ಲೀಗ್ ಮಾರ್ಚ್ 16ರವರೆಗೆ ನಡೆಯಲಿದೆ. ಪಂದ್ಯಗಳು ನವಿ ಮುಂಬೈ, ವಡೋದರ ಮತ್ತು ರಾಯಪುರದಲ್ಲಿ ನಡೆಯಲಿವೆ.

ದಕ್ಷಿಣ ಕೊರಿಯಾಕ್ಕೆ ಮಣಿದ ಭಾರತ

ಕ್ವಿಂಗ್‌ದಾವೊ (ಚೀನಾ), (ಪಿಟಿಐ): ಭಾರತ ತಂಡ, ಬ್ಯಾಡ್ಮಿಂಟನ್ ಏಷ್ಯಾ ಮಿಶ್ರ ತಂಡ ಚಾಂಪಿಯನ್‌ಷಿಪ್‌ನ ಡಿ ಗುಂಪಿನ ಪಂದ್ಯದಲ್ಲಿ ಗುರುವಾರ 3–2 ಅಂತರದಲ್ಲಿ ದಕ್ಷಿಣ ಕೊರಿಯಾ ಎದುರು ಸೋಲನುಭವಿಸಿತು. ಈಗಾಗಲೇ ಕ್ವಾರ್ಟರ್‌ಫೈನಲ್ ಪ್ರವೇಶ ಖಚಿತಪಡಿಸಿಕೊಂಡಿದ್ದ ಭಾರತ ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯಿತು.

ಬುಧವಾರ ಭಾರತ ತಂಡವು 5–0 ಅಂತರದಿಂದ ಮಕಾವು ತಂಡವನ್ನು ಮಣಿಸಿತ್ತು.

ಫುಟಬಾಲ್ ಅಕಾಡೆಮಿಗೆ ಆಯ್ಕೆ ಟ್ರಯಲ್ಸ್ ನಾಳೆ

ಬೆಂಗಳೂರು: ಸೌತ್ ಯುನೈಟೆಡ್ ಫುಟ್‌ಬಾಲ್ ಕ್ಲಬ್ ಹಲಸೂರಿನಲ್ಲಿ ನೂತನ ರೆಸಿಡೆನ್ಶಿಯಲ್ ಅಕಾಡೆಮಿ ಆರಂಭಿಸುತ್ತಿದ್ದು, ಪ್ರತಿಭಾವಂತ ಆಟಗಾರರ ಆಯ್ಕೆಗೆ ಟ್ರಯಲ್ಸ್ ನಡೆಸುತ್ತಿದೆ. ಫೆ. 15ರಂದು ಹಲಸೂರಿನ ಅಕಾಡೆಮಿಯಲ್ಲಿ ಪ್ರಥಮ ಓಪನ್ ಟ್ರಯಲ್ಸ್ ನಡೆಯಲಿದೆ.

11 ರಿಂದ 18 ವರ್ಷ ವಯಸ್ಸಿನ ಎಲ್ಲ ಆಟಗಾರರು ಇದರಲ್ಲಿ ಭಾಗವಹಿಸಬಹುದು. ಮಾಹಿತಿಗೆ 82962 81556 ಸಂಪರ್ಕಿಸಬಹುದು.

ಸೆಮಿಗೆ ಪಂಜಾಬ್

ಬೆಂಗಳೂರು: ಕರ್ನಾಟಕ ತಂಡವು ಮುಲ್ಲನಪುರದಲ್ಲಿ ಗುರುವಾರ ಮುಕ್ತಾಯಗೊಂಡ ಬಿಸಿಸಿಐ 23 ವರ್ಷದೊಳಗಿನವರ ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಪಂಜಾಬ್ ವಿರುದ್ಧ ಡ್ರಾ ಸಾಧಿಸಿದೆ. ಆದರೆ, ಮೊದಲ ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಪಂಜಾಬ್ ಸೆಮಿಫೈನಲ್‌ಗೆ ಪ್ರವೇಶಿಸಿದ್ದು, ಕರ್ನಾಟಕ ಟೂರ್ನಿಯಿಂದ ಹೊರಬಿದ್ದಿದೆ.

ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಇಂದಿನಿಂದ

ಆರ್‌ಸಿಬಿಗೆ ಜೈಂಟ್ಸ್ ಸವಾಲು

ವಡೋದರಾ (ಪಿಟಿಐ): ಭಾರತದ ವನಿತೆಯರ ಕ್ರಿಕೆಟ್ ಕ್ಷೇತ್ರದ ಮಹತ್ವಾಕಾಂಕ್ಷೆಯ ಟೂರ್ನಿಯಾಗಿರುವ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) 3ನೇ ಆವೃತ್ತಿಯು ಶುಕ್ರವಾರ ಆರಂಭವಾಗಲಿದೆ. ಭಾರತ ಮತ್ತು ವಿದೇಶಗಳ ಖ್ಯಾತನಾಮ ಆಟಗಾರ್ತಿಯರು ಕಣಕ್ಕಿಳಿಯಲಿದ್ದಾರೆ.

ಕೋತಂಬಿ ಕ್ರೀಡಾಂಗಣದಲ್ಲಿನಡೆಯಲಿರುವ ಉದ್ಘಾಟನೆ ಪಂದ್ಯದಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಜೈಂಟ್ಸ್ ಮುಖಾಮುಖಿಯಾಗಲಿವೆ. ಸ್ಮೃತಿ ಮಂದಾನ ನಾಯಕತ್ವದ ಆರ್‌ಸಿಬಿ ತಂಡವು ಪ್ರಶಸ್ತಿ ಉಳಿಸಿಕೊಳ್ಳುವ ಛಲದಲ್ಲಿದೆ.

ಡಬ್ಲ್ಯುಪಿಎಲ್ ಆರಂಭವಾದಾಗಿನಿಂದ ದೇಶಿ ಕ್ರಿಕೆಟ್‌ನಲ್ಲಿ ಹೆಚ್ಚು ಪ್ರತಿಭೆಗಳು ಪ್ರವರ್ಧಮಾನಕ್ಕೆ ಬರುತ್ತಿರುವುದು ಆಶಾದಾಯಕ ಬೆಳವಣಿಗೆ. ಮೊದಲೆರಡು ಆವೃತ್ತಿ ಗಳಲ್ಲಿ ಬೆಂಗಳೂರಿನ ಶ್ರೇಯಾಂಕಾ ಪಾಟೀಲ ಮತ್ತು ಸೈಕಾ ಇಷಾಕ್ ಅವರು ಗಮನ ಸೆಳೆದರು. ಅಲ್ಲದೇ ರಾಷ್ಟ್ರೀಯ ತಂಡದಲ್ಲಿ ಪದಾರ್ಪಣೆ ಕೂಡ ಮಾಡಿದರು. ಈ ಬಾರಿಯೂ ಹಲವು ಪ್ರತಿಭಾನ್ವಿತ ಆಟಗಾರರಿಗೆ ಡಬ್ಲ್ಯುಪಿಎಲ್ ವೇದಿಕೆಯಾಗುವ ನಿರೀಕ್ಷೆ ಇದೆ.

ಆದರೆ, ಬೇರೆ ದೇಶಗಳ ಖ್ಯಾತನಾಮ ಆಟಗಾರ್ತಿಯರಾದ ಅಲಿಸಾ ಹೀಲಿ, ಸೋಫಿ ಮಾಲಿನೆ ಮತ್ತು ಕೇಟ್ ಕ್ರಾಸ್ ಅವರು ಗಾಯದಿಂದಾಗಿ ಈ ಟೂರ್ನಿಯಲ್ಲಿ ಆಡುತ್ತಿಲ್ಲ. ಇದರಿಂದಾಗಿ ಅವರ ಸ್ಥಾನದಲ್ಲಿ ಯುವ ಆಟಗಾರ್ತಿಯರಿಗೆ ಅವಕಾಶ ಸಿಗಲಿದೆ.

ಆರ್‌ಸಿಬಿಗೆ ಕಠಿಣ ಸವಾಲು: ಮೊದಲ ಪಂದ್ಯದಲ್ಲಿ ಆರ್‌ಸಿಬಿಗೆ ಕಠಿಣ ಸವಾಲು ಎದುರಾಗಿದೆ. ಕಳೆದ ಆವೃತ್ತಿಯಲ್ಲಿ ಮಿಂಚಿದ್ದ ಸೋಫಿ ಮಾಲಿನೆ, ಸೋಫಿ ಡಿವೈನ್ ಹಾಗೂ ಕೇಟ್ ಕ್ರಾಸ್ ಅವರಿಲ್ಲದೇ ತಂಡವು ಕಣಕ್ಕಿಳಿಯಲಿದೆ. ಆದರೆ ಎಲಿಸ್ ಪೆರಿ, ಶ್ರೇಯಾಂಕಾ ಮತ್ತು ಆಶಾ ಶೋಭನಾ ಅವರು ಗಾಯದಿಂದ ಚೇತರಿಸಿಕೊಳ್ಳುತ್ತಿದ್ದಾರೆ. ಅವರು ಸಂಪೂರ್ಣ ಫಿಟ್ ಆಗಿ ಮರಳಿ, ತಂಡಕ್ಕೆ ಆಸರೆಯಾಗುವರೇ ಎಂದು ಕಾದು ನೋಡಬೇಕಿದೆ.



ಸ್ಮೃತಿ ಮಂದಾನ



ಆ್ಯಷ್ಲೆ ಗಾರ್ಡನರ್

‘ಕಳೆದ ಆವೃತ್ತಿಯಲ್ಲಿ ಆಡಿದ್ದವರಲ್ಲಿ ಬಹುತೇಕರು ಈ ಬಾರಿ ಲಭ್ಯವಿಲ್ಲ. ಶ್ರೇಷ್ಠ ಆಲ್‌ರೌಂಡರ್ ಸೋಫಿ (ಡಿವೈನ್) ಅವರು ಕೂಡ ಆಡುತ್ತಿಲ್ಲ. ಇನ್ನು ಕೆಲವರು ಗಾಯದ ಸಮಸ್ಯೆ ಎದುರಿಸುತ್ತಿದ್ದಾರೆ. ಆದರೆ ಮಾನಸಿಕವಾಗಿ ನಾವು ಸಮರ್ಥರಾಗಿದ್ದೇವೆ. ಚೆನ್ನಾಗಿ ಆಡುತ್ತೇವೆ’ ಎಂದು ಆರ್‌ಸಿಬಿ ನಾಯಕಿ ಸ್ಮೃತಿ ಮಂದಾನ ಹೇಳಿದರು.

ಬೆತ್ ಮೂನಿ ನಾಯಕತ್ವದ ಗುಜರಾತ್ ತಂಡವು ಈ ಬಾರಿ ಉತ್ತಮ ಆಟಗಾರ್ತಿಯರ ಪಡೆಯನ್ನು ಕಣಕ್ಕಿಳಿಸುತ್ತಿದೆ. ಆ್ಯಷ್ಲೆ ಗಾರ್ಡನರ್, ಹರ್ಲೀನ್ ಡಿಯೋಲ್, ದಿಯಾಂದ್ರ ಡಾಟಿನ್ ಅವರಂತಹ ಆಟಗಾರ್ತಿಯರು ತಂಡದಲ್ಲಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ದಕ್ಷಿಣ ವಲಯ ಆರ್ಚರಿ ನಾಳೆಯಿಂದ

ಬೆಂಗಳೂರು: ಖೇಲೊ ಇಂಡಿಯಾ ಎನ್‌ಟಿಪಿಸಿ ದಕ್ಷಿಣ ವಲಯ ಆರ್ಚರಿ ಟೂರ್ನಿ ನಗರದ ಕಂಠೀರವ ಕ್ರೀಡಾಂಗಣದಲ್ಲಿ ಇದೇ 15 ಮತ್ತು 16ರಂದು ನಡೆಯಲಿದೆ.

ಭಾರತ ಆರ್ಚರಿ ಸಂಸ್ಥೆ ಮತ್ತು ಕರ್ನಾಟಕ ಅಮೆಚೂರ್ ಆರ್ಚರಿ ಸಂಸ್ಥೆಗಳ ಆಶ್ರಯದಲ್ಲಿ ನಡೆಯುವ ಟೂರ್ನಿಯಲ್ಲಿ ಆತಿಥೇಯ ಕರ್ನಾಟಕ ಸೇರಿದಂತೆ ಎಂಟು ರಾಜ್ಯಗಳ ಆರ್ಚರಿಪಟುಗಳು ಭಾಗವಹಿಸುವರು.

15ರಂದು ಪುರುಷರ ಮತ್ತು ಮಹಿಳೆಯರ ರಿಕರ್ವ್ ಸ್ಪರ್ಧೆ, 16ರಂದು ಪುರುಷರ ಮತ್ತು ಮಹಿಳೆಯರ ಕಾಂಪೌಂಡ್ ಸ್ಪರ್ಧೆಗಳು ನಡೆಯಲಿವೆ.

ಕರ್ನಾಟಕ ಪುರುಷರ ತಂಡಕ್ಕೆ ಚಿನ್ನ

ರಾಷ್ಟ್ರೀಯ ಕ್ರೀಡೆ: ಹರಿಯಾಣ ವನಿತೆಯರಿಗೆ ಹಾಕಿ ಸ್ವರ್ಣ

ಹರಿದ್ವಾರ (ಪಿಟಿಐ): ಟೂರ್ನಿಯುದ್ದಕ್ಕೂ ಸ್ಫೂರ್ತಿಯುತ ಪ್ರದರ್ಶನ ನೀಡಿದ ಕರ್ನಾಟಕ ತಂಡವು ಗುರುವಾರ ನಡೆದ 38ನೇ ರಾಷ್ಟ್ರೀಯ ಕ್ರೀಡಾಕೂಟದ ಪುರುಷರ ಹಾಕಿ ಫೈನಲ್‌ನಲ್ಲಿ 3–2 ಗೋಲುಗಳಿಂದ ಉತ್ತರ ಪ್ರದೇಶ ತಂಡವನ್ನು ಮಣಿಸಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಹರಿಯಾಣದ ವನಿತೆಯರು 4–1ರಿಂದ ಮಧ್ಯಪ್ರದೇಶ ತಂಡವನ್ನು ಮಣಿಸಿ ಚಿನ್ನದ ಪದಕವನ್ನು ಗೆದ್ದುಕೊಂಡರು.

ವಂದನಾ ಕಟಾರಿಯಾ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪುರುಷರ ಫೈನಲ್‌ನ ಮೊದಲ ನಿಮಿಷದಲ್ಲೇ ಫರಾಜ್ ಖಾನ್ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸಿ ಉತ್ತರ ಪ್ರದೇಶ ತಂಡಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು. ಕರ್ನಾಟಕದ ಸಮರ್ಥ್ ಸಿ. ಅವರು 8ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿದ್ದರಿಂದ ತಂಡಗಳ ಸ್ಕೋರ್ 1–1 ಸಮನಾಯಿತು.

ನಂತರದಲ್ಲಿ ಕರ್ನಾಟಕದ ಪರ ಭರತ್ ಮಹಾಲಿಂಗಪ್ಪ ಕುರ್ತಕೋಟಿ (18ನೇ ನಿ) ಮತ್ತು ಆಭರಣ್ ಸುದೇವ್ (39ನೇ ನಿ) ಅವರು ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸಿ, ತಂಡಕ್ಕೆ 3–1 ಮುನ್ನಡೆ ಒದಗಿಸಿದರು. ಮೂರನೇ ಕ್ವಾರ್ಟರ್‌ನ ಅಂತ್ಯದಲ್ಲಿ ಶಾರದಾನಂದ ತಿವಾರಿ (45ನೇ) ಗೋಲು ಗಳಿಸಿ ಉತ್ತರಪ್ರದೇಶದ ಹಿನ್ನಡೆಯನ್ನು ಕೊಂಚ ತಗ್ಗಿಸಿದರು.

ಮಹಿಳೆಯರ ಫೈನಲ್‌ನ ಐದನೇ ನಿಮಿಷದಲ್ಲಿ ಚಾವನ್ ಐಶ್ವರ್ಯಾ ಚೆಂಡನ್ನು ಗುರಿ ಸೇರಿಸಿ ಮಧ್ಯಪ್ರದೇಶಕ್ಕೆ ಆರಂಭದಲ್ಲಿ ಮುನ್ನಡೆ ಒದಗಿಸಿದ್ದರು. ನಂತರದಲ್ಲಿ ಮಹಿಮಾ ಚೌಧರಿ (37ನೇ ನಿ), ಇಶಿಕಾ (45ನೇ ಮತ್ತು 50ನೇ ನಿ) ಮತ್ತು ಮೋನಿಕಾ (55ನೇ ನಿ) ಹರಿಯಾಣ ಪರ ಗೋಲು ಗಳಿಸಿದರು.

ಗೋವಾದಲ್ಲಿ ನಡೆದಿದ್ದ ಕಳೆದ ಆವೃತ್ತಿಯ ಫೈನಲ್‌ನಲ್ಲಿ ಮಧ್ಯಪ್ರದೇಶ ಪೆನಾಲ್ಟಿ ಶೂಟೌಟ್‌ನಲ್ಲಿ 3–0ಯಿಂದ ಹರಿಯಾಣ ತಂಡವನ್ನು ಮಣಿಸಿ ಚಿನ್ನ ಗೆದ್ದಿತ್ತು. ಆ ಸೋಲಿನ ಮುಯ್ಯಿ ಅನ್ನು ಹರಿಯಾಣ ಈ ಬಾರಿ ತೀರಿಸಿಕೊಂಡಿತು.

ಕುಸ್ತಿಯಲ್ಲಿ 3 ಕಂಚು: ಕುಸ್ತಿ ಸ್ಪರ್ಧೆಯಲ್ಲಿ ಕರ್ನಾಟಕ ಮೂರು ಪೈಲ್ವಾನರು ಕಂಚಿನ ಪದಕಗಳ ಸಾಧನೆ ಮಾಡಿದರು.

ಫ್ರೀಸ್ಟೈಲ್ 74 ಕೆ.ಜಿ ಸ್ಪರ್ಧೆಯಲ್ಲಿ ಹಳಿಯಾಳದ ರೋಹನ್ ನಾರಾಯಣ್ ಗೆವಾಡೆ, ಗ್ರೀಕೊ ರೋಮನ್ 87 ಕೆ.ಜಿ ಸ್ಪರ್ಧೆಯಲ್ಲಿ ಬೆಳಗಾವಿಯ ಆದಿತ್ಯ ಮತ್ತು ಮಹಿಳೆಯರ 50 ಕೆ.ಜಿ ವಿಭಾಗದಲ್ಲಿ ಶ್ವೇತಾ ಅಣ್ಣಿಕೇರಿ ಕಂಚಿನ ಪದಕ ಗೆದ್ದರು.

ಸರ್ವಿಸಸ್‌ಗೆ ಅಗ್ರಸ್ಥಾನ: ಗುರುವಾರ ಸ್ಪರ್ಧೆಯ ಕೊನೆಯ ದಿನವಾಗಿದ್ದು, ಸರ್ವಿಸಸ್ 68 ಚಿನ್ನದ ಪದಕಗಳೊಂದಿಗೆ ಒಟ್ಟು 121 ಪದಕಗಳೊಂದಿಗೆ ಅಗ್ರಸ್ಥಾನ ಪಡೆಯಿತು. ಕರ್ನಾಟಕ ನಾಲ್ಕನೇ ಸ್ಥಾನ ಗಳಿಸಿತು. ಶುಕ್ರವಾರ ಕ್ರೀಡಾಕೂಟಕ್ಕೆ ತೆರೆ ಬೀಳಲಿದೆ.

ಪದಕ ಪಟ್ಟಿ

ತಂಡ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಸರ್ವೀಸಸ್	68	26	27	121
ಮಹಾರಾಷ್ಟ್ರ	54	71	73	198
ಹರಿಯಾಣ	48	47	58	153
ಕರ್ನಾಟಕ	34	18	28	80
ಮಧ್ಯಪ್ರದೇಶ	33	26	23	82
ತಮಿಳುನಾಡು	27	30	34	91
ಉತ್ತರಾಖಂಡ	24	35	43	102



ಕೆಎಸ್‌ಸಿಎ 14 ವರ್ಷದೊಳಗಿನವರ ಶಾಲಾ ದ್ವಿತೀಯ ಡಿವಿಷನ್ ಕ್ರಿಕೆಟ್ ಟೂರ್ನಿಯಲ್ಲಿ ಬಿ.ಟಿ. ರಾಮಯ್ಯ ಶೀಲ್ಡ್ ಪ್ರಶಸ್ತಿ ಗೆದ್ದ ಪೂರ್ಣವಿಕಾಸ ವಿದ್ಯಾಲಯ ತಂಡ; ಎಡದಿಂದ ಬಲಕ್ಕೆ (ನಿಂತವರು): ಸಾಯಿ ವಿಕ್ರಾಂತ್, ಎಚ್.ಎಸ್. ಸಿದ್ಧಾರ್ಥ್, ಸತ್ಯಜೀತ್, ಪವನದೀಪ್, ಐಮನ್, ಎಸ್‌ಪಿ. ಚಿರಂಜಿತ್, ಉಜ್ವಲ್, ವಿ. ಸಿದ್ಧಾಂತ್, ಆಗ್ನೇಯ, ಎಚ್. ಚೇತಾಸ್, ಸ್ಕಂದ, ಕುಳಿತವರು: ನಾರಾಯಣ, ಸೈಯದ್ (ಕೋಚ್), ಗೌತಮ್ (ಕೋಚ್), ವಿನೀತ್ (ಸಿಇಒ), ಮಿಥುನ್ (ಕೋಚ್), ಕುಮಾರ (ಮ್ಯಾನೇಜರ್), ಲಿಕಿತ್ ರೆಡ್ಡಿ. ಮಂಡಿಯೂರಿದವರು: ಗಗನ್, ಹೇಮಂತ್, ಕೆ. ಅಥರ್ವ, ಸಚಿತ್ ಶೆಟ್ಟಿ, ತೇಜಸ್ ಭಟ್, ಸೋಹು ಜೋಶಿ, ದೀಕ್ಷಿತ್.

ಬೆಂಗಳೂರು ರೇಸ್

ವಿವಾಲ್ಡೊ ಗೆಲ್ಲುವ ನಿರೀಕ್ಷೆ

ಹೋಯ್ಸಳ ಸಲ್ವಾರ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ವಿವಾಲ್ಡೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:15ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಟರ್ಕೋಮ್ಯಾನ್ 4, ಮಲ್ಟಿಸೈಡೆಡ್ 3, ಬರ್ನಿಂಗ್ ಆರೋ 7
2ನೇ ರೇಸ್: ಎಕ್ಸ್‌ಟ್ರಾಆರ್ಡಿನರಿ 1, ದಿವಿಸ್ಪರ್‌ಕ್ವೈಯೆಟ್ಲಿ 2, ಬ್ರೂಸ್ ಆಲ್‌ಮೈಟಿ 3
3ನೇ ರೇಸ್: ರಾಕ್ ಬ್ಯಾಂಕ್ 2, ಟೊರೊಬ್ರಾವೊ 3 , ಇಸಬೆಲ್ 1
4ನೇ ರೇಸ್: ವಿವಾಲ್ಡೊ 4, ಫಾರ್ಸೆಟಿ 3, ಇಂಪೀರಿಯಲ್ ಬ್ಲೂ 1
5ನೇ ರೇಸ್: ರಾವಿಷಿಂಗ್ ಬ್ಯೂಟಿ 9, ಕ್ವಾಂಥೆ 10, ನೈಟ್ ರೈಡರ್ 1
6ನೇ ರೇಸ್: ಕ್ರಿಸ್ಟಲಾಸ್ 1, ಕ್ಯಾಸ್ಕಾಯಿಸ್ 2, ಶೀ ರೂಲ್ಸ್ 7
7ನೇ ರೇಸ್: ಪ್ರೈಮ್ ಅಬ್ಬೆಸ್ 1, ಆಕ್ಸಿಟಾಸಿನ್ 6, ಕ್ಲಾಸಿಕ್ ಚಾರ್ಮ್ 4

ಉತ್ತಮ ಬೆಟ್: ರಾಕ್ ಬ್ಯಾಂಕ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7